ವಿಶ್ವವಾಣಿ
ವಿಶ್ವಾಸವೇ ವಿಶ್ವ

ಹಸೆಮಣೆ ಏರಲು ಸಜ್ಜಾದ ಸಿಂಧು

ಭಾರತದ ಖ್ಯಾತ ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ.ಸಿಂಧು ಅವರು ಹಸೆಮಣೆ ಏರಲು ಸಿದ್ಧರಾಗಿದ್ದಾರೆ. ಡಿ.22ಕ್ಕೆ ಉದಯಪುರದಲ್ಲಿ ಉದ್ಯಮಿ ಹೈದರಾಬಾದ್ ಮೂಲದ ಉದ್ಯಮಿ ವೆಂಕಟದತ್ತ ಸಾಯಿ ಜತೆ ವಿವಾಹವಾಗಲಿದ್ದಾರೆ. ಮಗಳು ವಿವಾಹವಾಗುತ್ತಿರುವ ವಿಷಯವನ್ನು ತಂದೆ ಪಿ.ವಿ.ರಮಣ ಹೇಳಿದ್ದಾರೆ.

ಪುಟ ತೆರೆದಂತೆ...

ಬಡಾವಣೆ ನಿರ್ಮಿಸಲು ಹೊರಟವರು ಭವ್ಯನಗರ ಕಟ್ಟಿದರು!
ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
ಸಂ.ಪುಟ | 6

ಸಾಮರಸ್ಯ-ಸಹಿಷ್ಣುತೆ ಇಂದಿನ ಅನಿವಾರ್ಯತೆ
ವಿದ್ಯಮಾನ
ವಿನಾಯಕ ವೆಂ.ಭಟ್ಟ ಅಂಬ್ಲಿಹೊಂಡ
ಸಂ.ಗಮ | 7

ಮಾತಂದ್ರೆ ಮಾತು

1975ರಲ್ಲಿ ತುರ್ತು ಪರಿಸ್ಥಿತಿ ಹೇರುವ ಮೂಲಕ ಸಂವಿಧಾನವನ್ನು ಜಾರಿಯಲ್ಲಿಲ್ಲದಂತೆ ಮಾಡಿದ್ದೇ ಕಾಂಗ್ರೆಸ್. ಅಂತಹ ತುರ್ತುಪರಿಸ್ಥಿತಿಯನ್ನು ಕೊನೆಗೊಳಿಸಿದ್ದು ಇದೇ ಸಂವಿಧಾನ.

ಅನುರಾಗ್ ಠಾಕೂರ್
ಬಿಜೆಪಿ ಸಂಸದ

ದಾರಿದೀಪೋಕ್ತಿ

ನಿಮ್ಮ ಕನಸುಗಳು ಅದೆಷ್ಟೇ ದೊಡ್ಡದಾಗಿರಲಿ, ಕೆಲವೊಮ್ಮೆ ನನಸಾಗಿಸಲು ಸಾಧ್ಯವಾ ಎಂದು ನಿಮಗೆ ಅನಿಸುವಷ್ಟು ದೊಡ್ಡದಾಗಿರಲಿ, ಅದನ್ನು ನಂಬಬೇಕು ಮತ್ತು ಆ ದಿಸೆಯಲ್ಲಿ ಕಾರ್ಯತತ್ಪರವಾಗಬೇಕು. ಯಾರೂ ತಮ್ಮ ಕಲ್ಪನೆಗಿಂತ ಮಿಗಿಲಾದ ಕನಸನ್ನು ಕಾಣುವುದಿಲ್ಲ. ನಿಮ್ಮ ಕನಸನ್ನು ನೀವೇ ಉಪೇಕ್ಷೆ ಮಾಡಬೇಡಿ.

ವಕ್ರತುಂಡೋಕ್ತಿ

ನಾವು ಮಕ್ಕಳಿದ್ದಾಗ ನಮ್ಮ ಮನೆ ಮೆನುನಲ್ಲಿ ಎರಡೇ ಆಹಾರಗಳಿದ್ದವು. ಒಂದು, ಬೇಕಾದ್ರೆ ತಿನ್ನು ಮತ್ತು ಎರಡು, ಇಲ್ಲಾಂದ್ರೆ ಬಿಡು.

ಎಲ್.ಕೆ.ಅಡ್ವಾಣಿ ಆಸ್ಪತ್ರೆಗೆ ದಾಖಲು

ದೆಹಲಿ: ಮಾಜಿ ಉಪ ಪ್ರಧಾನಿ ಲಾಲ್ ಕೃಷ್ಣ ಅಡ್ವಾಣಿ ಅವರ ಆರೋಗ್ಯದಲ್ಲಿ ವ್ಯತ್ಯಯವಾಗಿದ್ದರಿಂದ ಶನಿವಾರ ಬೆಳಗ್ಗೆ ಅವರನ್ನು ದೆಹಲಿಯ ಅಪೋಲೋ ಆಸ್ಪತ್ರೆಗೆ ದಾಖಲಿಸಲಾಗಿದೆ. 97 ವರ್ಷಗಳನ್ನು ಸವೆಸಿರುವ ಅಡ್ವಾಣಿ ಅವರು ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಅವರ ಆರೋಗ್ಯದತ್ತ ತಜ್ಞ ವೈದ್ಯರು ನಿಗಾ ಇರಿಸಿದ್ದಾರೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ.

579 ಪಾಸ್‌ಪೋರ್ಟ್ ಮುಟ್ಟುಗೋಲು

ದೆಹಲಿ: ಯೆಮೆನ್ ಪ್ರಯಾಣಕ್ಕೆ ವಿಧಿಸಿರುವ ನಿಷೇಧದ ಹೊರತಾಗಿಯೂ ಆ ದೇಶಕ್ಕೆ ಪ್ರಯಾಣಿಸಿದ್ದ 579 ಭಾರತೀಯ ಪ್ರಜೆಗಳ ಪಾಸ್‌ಪೋರ್ಟ್‌ಗಳನ್ನು ಈವರೆಗೆ ಮುಟ್ಟುಗೋಲು ಹಾಕಿಕೊಳ್ಳಲಾಗಿದ್ದು, ಭಾರತದಾದ್ಯಂತ ಇರುವ ಪಾಸ್‌ಪೋರ್ಟ್ ಕಚೇರಿಗಳು ಅವನ್ನು ಸ್ವೀಕರಿಸಿವೆ. ಈ ಪೈಕಿ 269 ಪಾಸ್‌ಪೋರ್ಟ್‌ಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ವಕ್ತಾರ ಕೀರ್ತಿ ವರ್ಧನ್ ಸಿಂಗ್ ಲೋಕಸಭೆಗೆ ಮಾಹಿತಿ ನೀಡಿದರು.

ಫನ್‌ತರಂಗ
- ರಘುಪತಿ ಶೃಂಗೇರಿ -

ಡಿಸೆಂಬರ್ 22ರಂದು ಹಸೆಮಣೆ ಏರಲಿರುವ ಬ್ಯಾಡ್ಮಿಂಟನ್ ತಾರೆ ಪಿ ವಿ ಸಿಂಧು



ವಕ್ಫ್ ಆಸ್ತಿ ಕಬಳಿಕೆ ಬಗ್ಗೆ ಮೌನವಾಗಿರಲು ಅನ್ವರ್ ಮಾಣಿಪ್ಪಾಡಿಗೆ 150 ಕೋಟಿ ರು. ಆಮಿಷವೊಡ್ಡಿದ ಆರೋಪ | ಸಿಬಿಐ ತನಿಖೆ ಕೋರಿ ಪಿಎಂಗೆ ಸಿದ್ದರಾಮಯ್ಯ ಆಗ್ರಹ

ವಿಜಯೇಂದ್ರ ಸುತ್ತ ವಕ್ಫ್ ಭೂಮಿ ಸುಳಿ

ಬೆಂಗಳೂರು: ರಾಜ್ಯ ಕಾಂಗ್ರೆಸ್ ಸರಕಾರದ ವಿರುದ್ಧ ವಕ್ಫ್ ಅಸ್ತ್ರ ಪ್ರಯೋಗಿಸಿದ್ದ ಬಿಜೆಪಿ ನಾಯಕರಿಗೆ ಇದೀಗ ವಕ್ಫ್ ತಿರುಗುಬಾಣವಾಗುವ ಸಾಧ್ಯತೆ ದಟ್ಟವಾಗಿದೆ. ಈ ಸಂಬಂಧ 'ಕರ್ನಾಟಕ ಬಿಜೆಪಿಯು ಎಟಿಎಂ ಆಗಿದೆಯೇ?' ಎಂದು ನೇರವಾಗಿ ಪ್ರಧಾನಿ ನರೇಂದ್ರ ಮೋದಿ ಅವರನ್ನೇ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಶುಕ್ರವಾರ ಸದನದಲ್ಲಿ ಸಚಿವ ಜಮೀರ್ ಅಹ್ಮದ್ ಸೇರಿದಂತೆ ಹಲವು ಕಾಂಗ್ರೆಸಿಗರು ಪ್ರಸ್ತಾಪಿಸಿರುವ ಅನ್ವರ್ ಮಾಣಿಪ್ಪಾಡಿ ವರದಿಯಲ್ಲಿರುವ ಅಂಶವನ್ನು ಮುಂದಿಟ್ಟುಕೊಂಡು ಪ್ರಧಾನಿ ಮೋದಿ ಅವರನ್ನು ಪ್ರಶ್ನಿಸಿರುವ ಸಿದ್ದರಾಮಯ್ಯ, ಕೂಡಲೇ ಪ್ರಕರಣವನ್ನು ಸಿಬಿಐಗೆ ವಹಿಸುವಂತೆ ಆಗ್ರಹಿಸಿದ್ದಾರೆ.

ಪ್ರಮುಖವಾಗಿ ವಕ್ಫ್ ಆಸ್ತಿ ಕಬಳಿಕೆ ವಿಷಯದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ತಮಗೆ 150 ಕೋಟಿ ರುಪಾಯಿ ಆಮಿಷವೊಡ್ಡಿದ್ದರು ಎಂದು ಬಿಜೆಪಿ ಸರಕಾರದಲ್ಲಿ ಅಲ್ಪಸಂಖ್ಯಾತ ಆಯೋಗದ ಅಧ್ಯಕ್ಷರಾಗಿದ್ದ ಅನ್ವರ್ ಮಾಣಿಪ್ಪಾಡಿ ಅವರು ಪ್ರಧಾನಿ ನರೇಂದ್ರ ಮೋದಿಯವರಿಗೆ ನೇರವಾಗಿ ಪತ್ರ ಬರೆದಿರುವುದು ಬಯಲಾಗಿದೆ. ಆದ್ದರಿಂದ ಪ್ರಧಾನಿ ನರೇಂದ್ರ ಮೋದಿ ಅವರು ಕೂಡಲೇ ಈ ಆರೋಪವನ್ನು ಗಂಭೀರವಾಗಿ ಪರಿಗಣಿಸಿ, ಸಿಬಿಐ ತನಿಖೆಗೆ ಆದೇಶಿಸಬೇಕೆಂದು ಆಗ್ರಹಿಸುತ್ತೇನೆ ಎಂದಿದ್ದಾರೆ. ಈ ಮೂಲಕ ಪ್ರಕರಣ ದಲ್ಲಿ ಬಿಜೆಪಿ ನಾಯಕರು ಇಕ್ಕಟ್ಟಿಗೆ ಸಿಲುಕುವಂತೆ ಸಿದ್ದರಾಮಯ್ಯ ಮಾಡಿದ್ದಾರೆ.

ಬಿಜೆಪಿಗೆ ಕರ್ನಾಟಕ ಎಟಿಎಂ?: ಉಪಚುನಾವಣೆ ಸಮಯದಲ್ಲಿ ಪ್ರಧಾನಿ ಮೋದಿ ಅವರು ಕರ್ನಾಟಕ ಕಾಂಗ್ರೆಸ್ ಸರಕಾರದ ಬಗ್ಗೆ ಮಾಡಿದ್ದ ಎಟಿಎಂ ಸರಕಾರ ಎನ್ನುವ ಆರೋಪ ವನ್ನು ಪ್ರತ್ಯಾಸ್ತ್ರವಾಗಿ ಬಳಸಿಕೊಂಡಿರುವ ಸಿದ್ದರಾಮಯ್ಯ ಅವರು, ಒಂದೆಡೆ 150 ಕೋಟಿ ರು. ಆರೋಪ ಹೊತ್ತಿರುವ ವಿಜಯೇಂದ್ರ ಅವರು ಬಿಜೆಪಿಯ ರಾಜ್ಯಾಧ್ಯಕ್ಷರಾಗುತ್ತಾರೆ, ಇನ್ನೊಂದೆಡೆ ಪಕ್ಷದ ಹೈಕಮಾಂಡ್‌ಗೆ ಎರಡು ಸಾವಿರ ಕೋಟಿ ರುಪಾಯಿ ಸಂದಾಯ ಮಾಡಿ ವಿಜಯೇಂದ್ರ ತಮ್ಮ ತಂದೆ ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಮಾಡಿದ್ದಾರೆ ಎಂದು ಬಿಜೆಪಿ ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ಆರೋಪಿಸುತ್ತಾರೆ. ಈ ಎಲ್ಲ ಬೆಳವಣಿಗೆಗಳನ್ನು ಒಂದು ಕ್ರಮದಲ್ಲಿ ಜೋಡಿಸಿ ನೋಡಿದರೆ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ, ಕರ್ನಾಟಕವನ್ನು ಎಟಿಎಂ ಮಾಡಿತ್ತು ಎಂದು ಆರೋಪಿಸಬೇಕಾಗುತ್ತದೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ.

- ವಕ್ಫ್ ಆಸ್ತಿ ಬಗ್ಗೆ ಮೌನವಾಗಿರಲು ಅನ್ವರ್ ಮಾಣಿಪ್ಪಾಡಿಗೆ 150 ಕೋಟಿ ರು. ಆಫರ್
- ಯಡಿಯೂರಪ್ಪರನ್ನು ಮುಖ್ಯಮಂತ್ರಿ ಮಾಡಲು 2 ಸಾವಿರ ಕೋಟಿ ಕೇಂದ್ರ ಬಿಜೆಪಿಗೆ ಸಂದಾಯ
- ಈ ಎರಡೂ ಆರೋಪಗಳನ್ನು ಬಿಜೆಪಿ ನಾಯಕರೇ ಮಾಡಿರುವುದರಿಂದ ಸಿಬಿಐನಿಂದ ತನಿಖೆಯಾಗಲಿ
- ವಿಜಯೇಂದ್ರ ಅವರನ್ನು ವಕ್ಫ್ ವಿಷಯದಲ್ಲಿ ತಣ್ಣಗಾಗಿಸಲು ಹೊಸ ಅಸ್ತ್ರ ಪ್ರಯೋಗಿಸಿದ ಸಿಎಂ

ಸೋಮವಾರದ ಸದನದಲ್ಲಿಯೂ ಇದೇ ಚರ್ಚೆ?

ವಿಜಯೇಂದ್ರ ವಿರುದ್ಧವಿರುವ ಈ ಎರಡು ಪ್ರಮುಖ ಆರೋಪಗಳಿಗೆ ಸಂಬಂಧಿಸಿದಂತೆ ಸಿಬಿಐ ತನಿಖೆ ನಡೆಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ. ಇನ್ನೊಂದೆಡೆ ಸೋಮವಾರ ವಕ್ಫ್ ವಿಷಯದಲ್ಲಿ ಸರಕಾರ ಸದನದಲ್ಲಿ ಉತ್ತರ ನೀಡಲಿದೆ. ಆದ್ದರಿಂದ ಉತ್ತರ ನೀಡುವ ಸಮಯದಲ್ಲಿ ವಿಜಯೇಂದ್ರ ವಿರುದ್ಧ ಈ ಆರೋಪಗಳನ್ನು ಮತ್ತೊಮ್ಮೆ ದಾಖಲೆಗಳನ್ನು ತರುವ ಪ್ರಯತ್ನವನ್ನು ಕಾಂಗ್ರೆಸ್ಸಿಗರು ಮಾಡುವ ಸಾಧ್ಯತೆಯಿದೆ. ಒಂದು ವೇಳೆ ಅದಕ್ಕೆ ಸರಕಾರ ಮುಂದಾದರೆ, ಬಿಜೆಪಿಯಿಂದ ತೀವ್ರ ವಿರೋಧ ವ್ಯಕ್ತವಾಗುವುದು ಬಹುತೇಕ ನಿಶ್ಚಿತವಾಗಿದ್ದು, ಸದನದಲ್ಲಿ ಇದೇ ವಿಷಯವಾಗಿ ಕೋಲಾಹಲ ಉಂಟಾಗುವ ಸಾಧ್ಯತೆಯಿದೆ ಎನ್ನಲಾಗಿದೆ.

ಅನ್ವರ್ ಮಾಣಿಪ್ಪಾಡಿ ಆರೋಪವೇನು?

ಯಡಿಯೂರಪ್ಪ ಸಿಎಂ ಆಗಿದ್ದ ಕಾಲದಲ್ಲಿಯೇ ವಿಜಯೇಂದ್ರ ನಮ್ಮ ಮನೆಗೆ ಬಂದು ವಕ್ಫ್ ಆಸ್ತಿ ಕಬಳಿಕೆಯ ತನಿಖೆ ನಡೆಸಿ ನೀಡಿರುವ ವರದಿ ಬಗ್ಗೆ ಮೌನವಹಿಸುವಂತೆ ಕೇಳಿಕೊಂಡಿದ್ದು ಮಾತ್ರವಲ್ಲ, ಇದಕ್ಕಾಗಿ 150 ಕೋಟಿ ರು. ಆಮಿಷವೊಡ್ಡಿದ್ದರು. ನಾನು ಅವರಿಗೆ ಗದರಿಸಿ ಓಡಿಸಿದ್ದೆ. ನಂತರ ಈ ಎಲ್ಲ ಘಟನೆಗಳನ್ನು ಉಲ್ಲೇಖಿಸಿ ಪ್ರಧಾನಿ ನರೇಂದ್ರ ಮೋದಿ ಮತ್ತು ಪಕ್ಷದ ರಾಷ್ಟ್ರೀಯ ಅಧ್ಯಕ್ಷರಿಗೆ ಪತ್ರ ಬರೆದಿದ್ದೆ ಎಂದು ಅನ್ವರ್ ಮಾಣಿಪ್ಪಾಡಿ ಮಾಧ್ಯಮದ ಮುಂದೆ ಹೇಳಿದ್ದರು. 'ನಾ ಖಾವೂಂಗಾ, ನಾ ಖಾನೆ ದೂಂಗಾ' ಎಂದು ಊರೆಲ್ಲ ಡಂಗೂರ ಹೊಡ್ಕೊಂಡು ತಿರುಗಾಡುವ ನರೇಂದ್ರ ಮೋದಿಯವರು ಈ ಆರೋಪದ ಬಗ್ಗೆ ಮೌನವಾಗಿರುವುದು ಸಂಶಯ ಮಾತ್ರವಲ್ಲ, ಅನೇಕ ಪ್ರಶ್ನೆಗಳನ್ನು ಹುಟ್ಟುಹಾಕಿದೆ? ಎಂದು ಮೋದಿ ಅವರನ್ನು ಸಿಎಂ ಕೆಣಕಿದ್ದಾರೆ.

ವಕ್ಫ್ ಆಸ್ತಿ ವಿಚಾರದಲ್ಲಿ ವಿಜಯೇಂದ್ರ ಅವರು ವಹಿಸುತ್ತಿರುವ ಆಸಕ್ತಿ ನೋಡಿದರೆ ಅವರು ಮತ್ತು ಅವರ ಕುಟುಂಬ ವರ್ಗ ವಕ್ಫ್ ಆಸ್ತಿ ಕಬಳಿಕೆಯಲ್ಲಿ ನೇರವಾಗಿ ಶಾಮೀಲಾಗಿರುವಂತೆ ಕಾಣುತ್ತಿದೆ. ಅವರೊಂದಿಗೆ ಪಕ್ಷದ ಮಹಾಮಹಿಮರೆಲ್ಲರೂ ಶಾಮೀಲಾಗಿರುವ ಸಂಶಯ ಇದೆ. ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿ ಅವರು ಸಿಎಂ ಆಗಿದ್ದ ಕಾಲದಲ್ಲಿಯೇ ವಕ್ಫ್ ಆಸ್ತಿಗೆ ಸಂಬಂಧಿಸಿದಂತೆ ರಾಜ್ಯ ಸರಕಾರ ಗರಿಷ್ಠ ಸಂಖ್ಯೆಯಲ್ಲಿ ನೋಟಿಸ್ ನೀಡಿರುವುದಕ್ಕೆ ಈಗಾಗಲೇ ದಾಖಲೆ ಬಿಡುಗಡೆಯಾಗಿದೆ. ಇದೀಗ ಮಾಣಿಪ್ಪಾಡಿ ಬಾಯಿ ಮುಚ್ಚಿಸುವ ಷಡ್ಯಂತ್ರವೂ ಬಯಲಾಗಿದೆ ಎಂದು ಸಿಎಂ ಹೇಳಿದರು.

ಪ್ರಧಾನಿ ಮೋದಿ ಅವರೇ, ಕೋವಿಡ್ ಸಲಕರಣೆಗಳ ಖರೀದಿ ಭ್ರಷ್ಟಾಚಾರದಿಂದ ಹಿಡಿದು ವಕ್ಫ್ ಆಸ್ತಿ ಕಬಳಿಕೆಯಲ್ಲಿನ ಲೂಟಿವರೆಗೆ ರಾಜ್ಯ ಬಿಜೆಪಿಯ ಕಪಾಟಿನಿಂದ ಒಂದೊಂದೇ ಅಸ್ಥಿಪಂಜರಗಳು ಉರುಳಿಬೀಳುತ್ತಲೇ ಇವೆ. ಈ ಹಗರಣಗಳಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದಲೇ ರಾಜ್ಯದ ಬಿಜೆಪಿ ನಾಯಕರು ನಮ್ಮ ಪಕ್ಷ ಮತ್ತು ನಾಯಕರ ವಿರುದ್ಧ ಸುಳ್ಳು ಆರೋಪಗಳನ್ನು ಮಾಡಿ ಜನರ ಗಮನ ಬೇರೆ ಕಡೆ ಸೆಳೆಯುವ ಪ್ರಯತ್ನ ಮಾಡುತ್ತಿದ್ದಾರೆ.
- **ಸಿದ್ದರಾಮಯ್ಯ**, ಸಿಎಂ

ಕೋವಿಡ್ ಅಕ್ರಮ ಬಿಜೆಪಿಗರಿಗೆ ಕಂಟಕ

ಜನಪ್ರತಿನಿಧಿಗಳು, ಅಧಿಕಾರಿಗಳು, ಖಾಸಗಿ ವ್ಯಕ್ತಿಗಳ ವಿರುದ್ಧ ವಿಧಾನಸೌಧ ಠಾಣೆಯಲ್ಲಿ ಎಫ್‌ಐಆರ್

ಬೆಂಗಳೂರು: ಕೋವಿಡ್ ಕಾಲದಲ್ಲಿ ನಡೆದ ಹಗರಣ ಆರೋಪ ಸಂಬಂಧ ಎಫ್‌ಐಆರ್ ದಾಖಲಾಗಿರುವುದು ಪ್ರತಿಪಕ್ಷ ಅದರಲ್ಲೂ ಬಿಜೆಪಿ ಪ್ರಭಾವಿಗಳಿಗೆ ಕಂಟಕ ಎದುರಾಗಿದೆ. ಕೋವಿಡ್ ಹಗರಣ ಗಂಭೀರವಾಗಿ ಪರಿಗಣಿಸಿರುವ ಸರಕಾರ ಎಸ್‌ಐಟಿ ರಚನೆಗೆ ಮುಂದಾಗಿದ್ದು, ಇಷ್ಟರಲ್ಲೇ ಆದೇಶ ಹೊರಬೀಳುವ ಸಾಧ್ಯತೆ ಇದೆ.

ಆಡಳಿತ ಮತ್ತು ಪ್ರತಿಪಕ್ಷ ನಡುವಿನ ಹಗ್ಗಜಗ್ಗಾಟದಲ್ಲಿ ಕೋವಿಡ್ ಸಂದರ್ಭದಲ್ಲಿ ಪ್ರಾಣ ಒತ್ತೆ ಇಟ್ಟು ಕೆಲಸ ಮಾಡಿದ ಹಲವು ವೈದ್ಯರಿಗೆ ಈಗ ಸಂಕಷ್ಟ ತಂದಿಟ್ಟಿದೆ. ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ಮುಖ್ಯ ಲೆಕ್ಕಾಧಿಕಾರಿ ಹಾಗೂ ಆರ್ಥಿಕ ಸಲಹೆಗಾರರಾಗಿರುವ ಡಾ.ಎಂ.ವಿಷ್ಣುವರ್ಧನ ಎಂಬುವವರು ನೀಡಿರುವ ದೂರು ಆಧರಿಸಿ ವಿಧಾನಸೌಧ ಪೊಲೀಸರು ಶುಕ್ರವಾರ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಈ ಪ್ರಕರಣ ಬಹುತೇಕ ಎಸ್‌ಐಟಿ ತನಿಖೆಗೆ ಒಳಪಡುವ ಸಾಧ್ಯತೆ ಇದೆ.

ಎಫ್‌ಐಆರ್‌ನಲ್ಲಿ ವೈದ್ಯರಾದ ಡಾ.ಪಿ.ಜಿ.ಗಿರೀಶ್, ಸರಕಾರದ ಹಿರಿಯ ಅಧಿಕಾರಿಗಳಾದ ಜಿ.ಪಿ.ರಘು, ಎನ್.ಮಂಜುನಾಥ್, ಪಿಪಿಇ ಕಿಟ್ ಹಾಗೂ ಮಾಸ್ಕ್‌ಗಳನ್ನು ಪೂರೈಸಿದ ಲಾಜ್ ಎಕ್ಸ್‌ಪೋರ್ಟ್, ಎಂ.ಎಸ್.ಪ್ರೂಡೆಂಟ್ ಮ್ಯಾನೇಜ್‌ಮೆಂಟ್ ಸಲ್ಯೂಷನ್ ಹಾಗೂ ಕರ್ನಾಟಕದ ಜನಪ್ರತಿನಿಧಿಗಳು, ಸರಕಾರದ ಅಧಿಕಾರಿಗಳು ಮತ್ತು ಇತರರು ಎಂದು ಉಲ್ಲೇಖಿಸಲಾಗಿದೆ. ಮೇಲ್ನೋಟಕ್ಕೆ ಅಧಿಕಾರಿಗಳ ಮೇಲೆ ಎಫ್‌ಐಆರ್ ಆದಂತೆ ಕಂಡುಬಂದರೂ ಕೆಲವರನ್ನು 'ಜನಪ್ರತಿನಿಧಿಗಳು' ಎಂದು ಹೆಸರಿಸಿರುವುದರಿಂದ ಆಗಿನ ಸಂಧರ್ಭದಲ್ಲಿ ಆಡಳಿತ ನಡೆಸಿದ ಪ್ರಮುಖರತ್ತ ಬಾಣದ ಗುರಿ ನೆಟ್ಟಿರುವುದು ಸ್ಪಷ್ಟವಾಗಿದೆ. ಪ್ರಥಮ ಪ್ರಕರಣವಾಗಿ ಮೊದಲ ಹಂತದಲ್ಲಿ ಪಿಪಿಇ ಕಿಟ್ ಹಾಗೂ ಎನ್ 95 ಮಾಸ್ಕ್‌ಗಳಿಗೆ ಸಂಬಂಧಪಟ್ಟಂತೆ ಮಾತ್ರ ಪ್ರಕ ರಣ ದಾಖಲಾಗಿದ್ದು, ಚಿಕಿತ್ಸೆ, ಪ್ರಯೋಗಾಲಯ, ವೈದ್ಯಕೀಯ ಸೌಲಭ್ಯಗಳು, ಬೆಡ್ ಹಾಗೂ ಇತರ ವಿಚಾರಗಳಿಗೆ ಹಂತಹಂತವಾಗಿ ಪ್ರಕರಣ ದಾಖಲಿಸಿ ತನಿಖೆ ನಡೆಸುವ ಸಾಧ್ಯತೆ ಇದೆ.

700 ಕೋಟಿ ರು.ಅಕ್ರಮ?: ಕೋವಿಡ್ ಕಾಲದಲ್ಲಿ ಅಕ್ರಮ ಎಸಗಲಾಗಿದೆ ಎಂದು ಆರೋಪಿಸಿ ಇದರ ನೈಜತೆ ತಿಳಿಯಲು ನ್ಯಾ.ಮೈಕಲ್ ಡಿ. ಕುನ್ಹಾ ಅವರ ನೇತೃತ್ವದಲ್ಲಿ ಸಮಿತಿ ರಚಿಸಲಾಗಿತ್ತು. ಈ ಸಮಿತಿ ಮಧ್ಯಂತರ ವರದಿ ನೀಡಿದ್ದು, ಇದರಲ್ಲಿ ಸುಮಾರು 700 ಕೋಟಿ ರು. ಅವ್ಯವಹಾರವಾಗಿದೆ. ಇದರಲ್ಲಿ ಸುಮಾರು 500 ಕೋಟಿ ರು.ಗಳನ್ನು ಸಂಬಂಧಿತರಿಂದ ವಸೂಲಿ ಮಾಡಬೇಕು ಎಂದು ಹೇಳಿದ್ದಲ್ಲದೆ, ಈ ಅವಧಿಯಲ್ಲಿ ಮುಖ್ಯಮಂತ್ರಿ ಆಗಿದ್ದ ಬಿ.ಎಸ್.ಯಡಿಯೂರಪ್ಪ ಹಾಗೂ ಸಚಿವರಾಗಿದ್ದ ಡಾ.ಸುಧಾಕರ್ ಹಾಗೂ ಶ್ರೀರಾಮುಲು ಅವರ ಹೆಸರನ್ನು ಪ್ರಸ್ತಾಪಿಸಿದೆ.

ಈ ವರದಿ ಸಂಬಂಧ ಸಂಪುಟ ಉಪಸಮಿತಿ ರಚಿಸಿ ಡಿಸಿಎಂ ಶಿವಕುಮಾರ್, ಸಚಿವರಾದ ಡಾ.ಜಿ. ಪರಮೇಶ್ವರ್, ಪ್ರಿಯಾಂಕ್ ಖರ್ಗೆ, ದಿನೇಶ್ ಗುಂಡೂರಾವ್ ಸೇರಿದಂತೆ ಹಲವರು ಸಭೆ ಸೇರಿ ವರದಿಯ ಪರಾಮರ್ಶೆ ನಡೆಸಿತ್ತಲ್ಲದೆ, ಕೋವಿಡ್ ಕಾಲದಲ್ಲಿ ಆಗದ ಅಕ್ರಮಕ್ಕೆ ಸಂಬಂಧಿಸಿದಂತೆ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ನಿರ್ಣಯ ಕೈಗೊಳ್ಳಲಾಗಿತ್ತು. ಅದರಂತೆ ಈ ವಿಚಾರ ಸಂಬಂಧ ಸಚಿವ ಸಂಪುಟ ಸಭೆಯಲ್ಲಿ ಕೋವಿಡ್ ಹಗರಣ ಸಂಬಂಧ ಎಸ್‌ಐಟಿ ರಚಿಸಬೇಕೆಂದು ಚರ್ಚೆ ಮಾಡಲಾಗಿತ್ತು.

→ 8



ಬಿಜೆಪಿ ವಾದವೇನು?

ಕೋವಿಡ್ ಸಾಂಕ್ರಾಮಿಕ ಎಂಬುದು ಮಾರಣಾಂತಿಕ ತುರ್ತು ಪರಿಸ್ಥಿತಿಯಾಗಿತ್ತು. ಹೀಗಾಗಿ ಸಂದರ್ಭಾನುಸಾರವಾಗಿ ಸೂಕ್ತ ಕ್ರಮ ಕೈಗೊಳ್ಳಲಾಗಿದೆ. ಜೀವ ಉಳಿಸುವುದು ಪ್ರಮುಖ ಆದ್ಯತೆಯಾಗಿತ್ತೇ ಹೊರತು ಕಾನೂನು ಪಾಲನೆ ಎಂದು ಕೈಕಟ್ಟಿ ಕುಳಿತಿದ್ದರೆ ಅಪಾರ ಪ್ರಮಾಣದ ಹಾನಿಯಾಗುತ್ತಿತ್ತು. ಜೀವ ಉಳಿಸಲು ಕೆಲಸ ಮಾಡಿದ್ದಕ್ಕಾಗಿ ಕೇಸು ದಾಖಲಿಸುವುದು, ತನಿಖೆ ನಡೆಸುವುದು ಮಹಾ ಪರಾಧ ಎಂದು ಬಿಜೆಪಿ ನಾಯಕರು ವಾದಿಸುತ್ತಿದ್ದಾರೆ.

ಸರಕಾರದ ವಾದವೇನು?

ಕೋವಿಡ್ ಎಂಬ ಮಾರಣಾಂತಿಕ ಸಂದರ್ಭವನ್ನು ಭ್ರಷ್ಟಾಚಾರ ಮಾಡಲು, ಸ್ವಂತಕ್ಕೆ ಲಾಭ ಮಾಡಿಕೊಳ್ಳಲು ಬಳಸಿಕೊಂಡಿರುವುದು ಅಪರಾಧ. ನೂರಾರು ಕೋಟಿ ರು. ಲೂಟಿಯಾಗಿದೆ, ಇದನ್ನು ಹೀಗೆ ಬಿಡಲು ಸಾಧ್ಯವಿಲ್ಲ ಎಂಬುದು ಸರಕಾರದ ಪ್ರತಿವಾದವಾಗಿದೆ.

ಒಂದೊಂದು ಪ್ರಕರಣವೂ ಪ್ರತ್ಯೇಕವಾಗಿವೆ. ಕೆಲವು ಪ್ರಕರಣಗಳಲ್ಲಿ ನೇರವಾಗಿ ಭ್ರಷ್ಟಾಚಾರ ಕಂಡುಬರುತ್ತಿದೆ. ಅಂತಹವುಗಳಿಗೆ ಎಫ್‌ಐಆರ್ ದಾಖಲಿಸುತ್ತಿದ್ದೇವೆ. ಇನ್ನೂ ಕೆಲವುಗಳಲ್ಲಿ ಮತ್ತಷ್ಟು ತನಿಖೆ ಅಗತ್ಯವಿದೆ ಎಂದು ಮನಗಂಡಿರುವುದರಿಂದ ವಿಚಾರಣೆ ಮುಂದುವರಿಯುತ್ತಿದೆ.
- **ದಿನೇಶ್ ಗುಂಡೂರಾವ್** ಆರೋಗ್ಯ ಸಚಿವ

ಮುಡಾ ಹಾಗೂ ಮಹರ್ಷಿ ವಾಲ್ಮೀಕಿ ಹಗರಣಗಳನ್ನು ಮುಚ್ಚಿಹಾಕಲು ಕೋವಿಡ್ ಕಾಲದ ಹಗರಣಗಳನ್ನು ಮುನ್ನೆಲೆಗೆ ತರುವ ಮೂಲಕ ರಾಜ್ಯ ಸರಕಾರ ಬಿಜೆಪಿ ವಿರುದ್ಧ ದ್ವೇಷದ ರಾಜಕಾರಣ ಮಾಡುತ್ತಿದೆ. ಜಸ್ಟಿಸ್ ಮೈಕಲ್ ಡಿ. ಕುನ್ಹಾ ಅವರು ಇನ್ನೂ ಸಂಪೂರ್ಣ ಪ್ರಮಾಣದ ವರದಿ ನೀಡಿಲ್ಲ. ಕೇವಲ ಮಧ್ಯಂತರ ವರದಿ ಆಧಾರವಾಗಿಟ್ಟುಕೊಂಡು ಎಫ್‌ಐಆರ್ ದಾಖಲಿಸಿರುವುದು ಹಾಸ್ಯಾಸ್ಪದ.
- **ಜಗದೀಶ್ ಶೆಟ್ಟರ್** ಸಂಸದ

ಡೆತ್‌ನೋಟ್ ಬರೆದು ಮುಖ್ಯ ಪೊಲೀಸ್ ಪೇದೆ ಆತ್ಮಹತ್ಯೆ

ಪತ್ನಿ ಕಿರುಕುಳದ ಮತ್ತೊಂದು ಪ್ರಕರಣ

ಬೆಂಗಳೂರು: ಉತ್ತರ ಪ್ರದೇಶ ಮೂಲದ ಟೆಕ್ಕಿ ಅತುಲ್ ಸುಭಾಷ್ ತನ್ನ ಹೆಂಡತಿಯ ಕಿರುಕುಳಕ್ಕೆ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿದ್ದ ಘಟನೆ ಇಡೀ ದೇಶದಲ್ಲಿ ಸದ್ದು ಮಾಡಿರುವ ಬೆನ್ನಿಗೆ ಇದೀಗ ಅಂತಹದ್ದೇ ಘಟನೆಯೊಂದು ರಾಜ್ಯದಲ್ಲಿ ಬೆಳಕಿಗೆ ಬಂದಿದೆ.

ಹುಳಿಮಾವು ಪೊಲೀಸ್ ಠಾಣೆಯಲ್ಲಿ ಹೆಡ್ ಕಾನ್‌ಸ್ಟೇಬಲ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಎಚ್.ಸಿ.ತಿಪ್ಪಣ್ಣ (33) ರೈಲಿಗೆ ತಲೆಕೊಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ತಿಪ್ಪಣ್ಣ ಮೂಲತಃ ವಿಜಯಪುರದವರಾಗಿದ್ದು, ನಗರದ ನಾಗನಾಥಪುರದ ಕೃಷ್ಣಪ್ಪ ಗಾರ್ಡನ್‌ನಲ್ಲಿ ವಾಸವಾಗಿದ್ದರು. ತನಗೆ ಹೆಂಡತಿ ಕಿರುಕುಳ ನೀಡುತ್ತಿದ್ದಾಳೆ ಹಾಗೂ ಮಾವನೂ (ಪತ್ನಿಯ ತಂದೆ) ಕರೆ ಮಾಡಿ ಬೆದರಿಕೆ ಹಾಕುತ್ತಿದ್ದಾರೆ ಎಂದು ಆರೋಪಿಸಿ ಡೆತ್ ನೋಟ್ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಬೈಯ್ಯಪ್ಪನಹಳ್ಳಿ ರೈಲ್ವೇ ಠಾಣೆ ಪೊಲೀಸರು ತಿಳಿಸಿದ್ದಾರೆ.

- ಅತುಲ್ ಸುಭಾಷ್ ಪ್ರಕರಣ ಮಾಸುವ ಮುನ್ನವೇ ಮತ್ತೊಂದು ಘಟನೆ
- ಹೆಂಡತಿ, ಮಾವ ಕಿರುಕುಳ ನೀಡುತ್ತಿರುವುದಾಗಿ ತಿಪ್ಪಣ್ಣ ಆರೋಪ

ಟೆಕ್ಕಿ ಅತುಲ್ ಪತ್ನಿ ಜಾಮೀನಿಗೆ ಅರ್ಜಿ

ಅಲಹಾಬಾದ್: ಬೆಂಗಳೂರಿನಲ್ಲಿ ಆತ್ಮಹತ್ಯೆಗೆ ಶರಣಾದ ಟೆಕ್ಕಿ ಅತುಲ್ ಸುಭಾಷ್‌ಗೆ ಕಿರುಕುಳ ನೀಡಿದ ಆರೋಪ ಎದುರಿಸುತ್ತಿರುವ ಅವರ ಪತ್ನಿ ಮತ್ತು ಅವರ ಕುಟುಂಬ ಸದಸ್ಯರು ಶನಿವಾರ ನಿರೀಕ್ಷಣಾ ಜಾಮೀನು ಕೋರಿ ಅಲಹಾಬಾದ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಬೆಂಗಳೂರು ಪೊಲೀಸರು ಶುಕ್ರವಾರ ನಿಕಿತಾ ಸಿಂಘಾನಿಯಾ ಅವರ ಮನೆಗೆ ತೆರಳಿ ನೋಟಿಸ್ ನೀಡಿ, ಮೂರು ದಿನಗಳೊಳಗೆ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದ ನಂತರ ಆರೋಪಿಗಳು ನಿರೀಕ್ಷಣಾ ಜಾಮೀನು ಮೊರೆ ಹೋಗಿದ್ದಾರೆ.

ಮೃತ ಮಹಿಳೆಯ ಕುಟುಂಬದವರ ಕ್ಷಮೆ ಕೇಳಿದ ಪುಷ್ಪ

ಜೈಲಿನಿಂದ ಅಲ್ಲು ಅರ್ಜುನ್ ಬಿಡುಗಡೆ

ಹೈದರಾಬಾದ್: ಪುಷ್ಪ-2 ಚಿತ್ರದ ಪ್ರದರ್ಶನದ ವೇಳೆ ಉಂಟಾದ ಕಾಲ್ತುಳಿತ ಪ್ರಕರಣ ಸಂಬಂಧ ಬಂಧನಕ್ಕೊಳಗಾಗಿದ್ದ ನಟ ಅಲ್ಲು ಅರ್ಜುನ್ ಶನಿವಾರ ಬೆಳಗ್ಗೆ ಚಂಚಲಗುಡ ಸೆಂಟ್ರಲ್ ಜೈಲಿನಿಂದ ಬಿಡುಗಡೆಗೊಂಡರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನಗೆ ಬೆಂಬಲ ನೀಡಿದ ಎಲ್ಲರಿಗೂ, ನನ್ನ ಎಲ್ಲ ಅಭಿಮಾನಿಗಳಿಗೆ ನಾನು ಧನ್ಯವಾದ ಸಮರ್ಪಿಸುವೆ. ಯಾವುದೇ ಚಿಂತೆ ಮಾಡುವ ಅಗತ್ಯವಿಲ್ಲ. ನಾನು ಕ್ಷೇಮವಾಗಿದ್ದೇನೆ ಎಂದರು. ನಾನು ಕಾನೂನು ಪಾಲಿಸುವ ನಾಗರಿಕ. ಎಲ್ಲದಕ್ಕೂ ನಾನು ಸಹಕರಿಸುವೆ. ಘಟನೆಯಲ್ಲಿ ಮೃತಪಟ್ಟವರ ಕುಟುಂಬದವರಿಗೆ ನಾನು ಮತ್ತೊಮ್ಮೆ ಸಂತಾಪ ವ್ಯಕ್ತಪಡಿಸುವೆ. ಅದೊಂದು ದುರದೃಷ್ಟಕರ ಘಟನೆ. ಅದಕ್ಕೆ ನಾವು ಕ್ಷಮೆ ಕೇಳುತ್ತೇವೆ. ಅವರ ಕುಟುಂಬಕ್ಕೆ ಸಹಾಯ ಮಾಡಲು ಸಿದ್ಧವಾಗಿದ್ದೇನೆ ಎಂದರು.

- ಅಲ್ಲು ಅರ್ಜುನ್ ಬಂಧನ ಅಕ್ರಮವೆಂದ ವಕೀಲ ಅಶೋಕ್ ರೆಡ್ಡಿ
- ಬಿಡುಗಡೆ ಪ್ರಕ್ರಿಯೆ ವಿಳಂಬ ಮಾಡಿದ ಅಧಿಕಾರಿಗಳ ವಿರುದ್ಧ ಹೋರಾಟ

ಎಐ ಸಂಶೋಧಕ ಸುಚಿರ್ ಆತ್ಮಹತ್ಯೆ

ನ್ಯೂಯಾರ್ಕ್: ಕೃತಕ ಬುದ್ಧಿಮತ್ತೆಯ ಉದ್ಯಮ ಓಪನ್ ಎಐನ ಮಾಜಿ ಉದ್ಯೋಗಿ, ಭಾರತೀಯ ಮೂಲದ ಸುಚಿರ್ ಬಾಲಾಜಿ (26) ಆತ್ಮಹತ್ಯೆ ಮಾಡಿಕೊಂಡಿದ್ದು, ನ.26ರಂದು ಸ್ಯಾನ್ ಫ್ರಾನ್ಸಿಸ್ಕೊದ ಬ್ಯುಕನನ್ ರಸ್ತೆಯ ಅಪಾರ್ಟ್‌ಮೆಂಟ್‌ನಲ್ಲಿ ಶವ ಪತ್ತೆಯಾಗಿದೆ.



ಸುಚಿರ್ ಅವರದು ಆತ್ಮಹತ್ಯೆ ಎಂಬುದು ವೈದ್ಯಕೀಯ ಪರೀಕ್ಷೆಯಲ್ಲಿ ಗೊತ್ತಾಗಿದೆ. ಸಾವಿನ ಹಿಂದೆ ದುಷ್ಕೃತ್ಯ ಇರುವ ಕುರಿತು ಸದ್ಯಕ್ಕೆ ಯಾವುದೇ ಸಾಕ್ಷ್ಯ ಇಲ್ಲ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಘಟನೆಯಲ್ಲಿ 17 ಪ್ರತಿಭಟನಾಕಾರರು ಅಸ್ವಸ್ಥ, ತಾತ್ಕಾಲಿಕವಾಗಿ ಹೋರಾಟ ಸ್ಥಗಿತ

ರೈತರ ಮೇಲೆ ಅಶ್ರುವಾಯು, ಜಲಫಿರಂಗಿ ಪ್ರಯೋಗ

ಚಂಡೀಗಢ: ವಿವಿಧ ಬೇಡಿಕೆಗಳ ಈಡೇರಿಕೆಗಾಗಿ 101 ರೈತರ ಗುಂಪು ಪಂಜಾಬ್-ಹರಿಯಾಣದ ಶಂಭು ಗಡಿಯಿಂದ ದೆಹಲಿಯತ್ತ ಶನಿವಾರ ಪುನಃ ಪಾದಯಾತ್ರೆಯನ್ನು ಆರಂಭಿಸಿತ್ತು. ಆದರೆ ರೈತರು ಕೆಲವೇ ಮೀಟರ್ ದೂರ ಸಾಗಿದ ನಂತರ ಪೊಲೀಸರು ಬ್ಯಾರಿಕೇಡ್‌ಗಳನ್ನು ಹಾಕಿ ರೈತರನ್ನು ತಡೆದಿದ್ದಾರೆ. ಬ್ಯಾರಿಕೇಡ್‌ಗಳತ್ತ ಧಾವಿಸುತ್ತಿದ್ದ ಪ್ರತಿಭಟನಕಾರರನ್ನು ಚದುರಿಸಲು ಪೊಲೀಸರು ಅಶ್ರುವಾಯು ಶೆಲ್ ಮತ್ತು ಜಲಫಿರಂಗಿ ಪ್ರಯೋಗಿಸಿದ್ದಾರೆ.

ಘಟನೆಯಲ್ಲಿ 17 ರೈತರು ಅಸ್ವಸ್ಥರಾಗಿದ್ದು, ಅವರನ್ನು ಆಸ್ಪತ್ರೆಗಳಿಗೆ ಕರೆದೊಯ್ಯಲಾಗಿದೆ. ದೆಹಲಿಗೆ ಮೆರವಣಿಗೆಯಲ್ಲಿ ತೆರಳಲು ರೈತರಿಗೆ ಅನುಮತಿ ಇರಲಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆಗೆ ಕಾನೂನಿನ ಖಾತರಿ ಒದಗಿಸಬೇಕು ಎಂಬುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಕೇಂದ್ರ ಸರಕಾರ ಈಡೇರಿಸಬೇಕು ಎಂದು ಒತ್ತಡ ಹೇರುತ್ತಿರುವ ಪ್ರತಿಭಟನಾನಿರತ ರೈತರು, ರಾಜಧಾನಿ ಪ್ರವೇಶಿಸಲು 3ನೇ ಬಾರಿಗೆ ಪ್ರಯತ್ನಿಸಿದರು. ಇದಕ್ಕೂ ಮುನ್ನ ಡಿಸೆಂಬರ್ 6 ಮತ್ತು 8ರಂದು ಪೊಲೀಸರು ತಡೆದಿದ್ದರು.

ಪಂಜಾಬ್-ಹರಿಯಾಣದ ಶಂಭು ಗಡಿಯಿಂದ ದೆಹಲಿಯತ್ತ ಶನಿವಾರ ಪಾದಯಾತ್ರೆ ಹೊರಟಿದ್ದ ರೈತರನ್ನು ಚದುರಿಸಲು ಪೊಲೀಸರು ಅಶ್ರುವಾಯು ಶೆಲ್ ಮತ್ತು ಜಲಫಿರಂಗಿ ಪ್ರಯೋಗಿಸಿದ್ದಾರೆ.

- ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಕೇಂದ್ರ ಸರಕಾರ ಒತ್ತಡ ಹೇರುತ್ತಿರುವ ರೈತರು
- ದೆಹಲಿ ಪ್ರವೇಶಿಸಲು 3ನೇ ಬಾರಿಗೆ ಯತ್ನಿಸಿದ ರೈತರನ್ನು ಶಂಭು ಗಡಿಯಲ್ಲಿ ತಡೆದ ಪೊಲೀಸರು
- ಇದಕ್ಕೂ ಮೊದಲು ಡಿ.6, 8ರಂದು ದೆಹಲಿಯತ್ತ ಹೊರಟಿದ್ದ ರೈತರನ್ನು ತಡೆದಿದ್ದ ಪೊಲೀಸರು

ಶನಿವಾರ ಮಧ್ಯಾಹ್ನ 12 ಗಂಟೆಗೆ ಹೋರಾಟ ಪುನಾರಂಭವಾದಾಗ ಹರಿಯಾಣ ಪೊಲೀಸರು ಭಾರಿ ಪ್ರಮಾಣದಲ್ಲಿ ಅಶ್ರುವಾಯು, ಜಲಫಿರಂಗಿ ಬಳಸಿ ನಾವು ಮುಂದೆ ಸಾಗದಂತೆ ಮಾಡಿದರು. ಹಾಗಾಗಿ, ಹೋರಾಟ ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದ್ದೇವೆ. ಸಭೆ ನಡೆಸಿ ಮುಂದಿನ ನಡೆ ನಿರ್ಧರಿಸುತ್ತೇವೆ.
- **ತೇಜ್ವೀರ್ ಸಿಂಗ್** ರೈತ ಮುಖಂಡ

ಇಂಟರ್ನೆಟ್ ಸ್ಥಗಿತ

101 ರೈತರ ಗುಂಪು ಶಂಭು ಗಡಿಯಿಂದ ದೆಹಲಿಗೆ ಪಾದಯಾತ್ರೆ ಪುನಾರಂಭ ಕಾರ್ಯಕ್ರಮ ಹಮ್ಮಿಕೊಂಡಿದ್ದರಿಂದ ಹರಿಯಾಣ ಸರಕಾರ ಅಂಬಾಲಾ ಜಿಲ್ಲೆಯ 12 ಹಳ್ಳಿಗಳಲ್ಲಿ ಇಂಟರ್ನೆಟ್ ಮತ್ತು ಮೊಬೈಲ್ ಸಂದೇಶ ಸೇವೆ ಸ್ಥಗಿತಗೊಳಿಸಿದೆ. ಶಾಂತಿ ಕಾಪಾಡುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸುಮಿತಾ ಮಿಶ್ರಾ ತಿಳಿಸಿದ್ದಾರೆ.

ಮಹತ್ವದ ವಿಧೇಯಕಕ್ಕೆ ಕೇಂದ್ರ ಸಂಪುಟದಿಂದ ಅನುಮೋದನೆ

ಒಂದು ದೇಶ ಒಂದು ಚುನಾವಣೆ ನಾಳೆ ವಿಧೇಯಕ ಮಂಡಿಸಲು ಸಿದ್ಧತೆ

ದೆಹಲಿ: 'ಒಂದು ರಾಷ್ಟ್ರ, ಒಂದು ಚುನಾವಣೆ' ವಿಧೇಯಕವನ್ನು 'ಎನ್‌ಡಿಎ' ಮೈತ್ರಿಕೂಟ ಸರಕಾರ ಸಂಸತ್‌ನಲ್ಲಿ ಸೋಮವಾರ ಮಂಡನೆ ಮಾಡಲಿದೆ. ಈ ವಿಚಾರ ಸಂಸತ್‌ನ ಸೋಮವಾರದ ಕಲಾಪದ ಪಟ್ಟಿಯನ್ನೂ ಸೇರಿದೆ.

ಕೇಂದ್ರದ ಕಾನೂನು-ನ್ಯಾಯಾಂಗ ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರು 'ಸಂವಿಧಾನ 129ನೇ ತಿದ್ದುಪಡಿ ವಿಧೇಯಕ' ಮತ್ತು 'ಕೇಂದ್ರಾಡಳಿತ ಪ್ರದೇಶಗಳ ಕಾನೂನು(ತಿದ್ದುಪಡಿ) ವಿಧೇಯಕ'ವನ್ನು ಲೋಕಸಭೆಯಲ್ಲಿ ಮಂಡಿಸಲಿದ್ದಾರೆ.

ಸಂವಿಧಾನ ತಿದ್ದುಪಡಿ ಮಸೂದೆಯಲ್ಲಿ ಲೋಕಸಭೆಗೆ ಮತ್ತು ರಾಜ್ಯಗಳ ವಿಧಾನಸಭೆಗಳಿಗೆ ಏಕಕಾಲದಲ್ಲೇ ಚುನಾವಣೆ ನಡೆಸುವುದಕ್ಕೆ ಸಂಬಂಧಿಸಿದ ಪ್ರಸ್ತಾಪವಿದೆ. ಮಹತ್ವದ ಈ ತಿದ್ದುಪಡಿಯ ಕರಡು ಮಸೂದೆಯನ್ನು ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರ ನೇತೃತ್ವದ ಉನ್ನತ ಮಟ್ಟದ ಸಮಿತಿ ಹಲವು ತಿಂಗಳ ಕಾಲ ಅಧ್ಯಯನ ನಡೆಸಿ, ಎಲ್ಲ ರಾಜಕೀಯ ಪಕ್ಷಗಳ ಅಭಿಪ್ರಾಯ ಸಂಗ್ರಹಿಸಿ ಕೇಂದ್ರ ಸರಕಾರಕ್ಕೆ ವರದಿಯನ್ನೂ ಸಲ್ಲಿಸಿದೆ. ಮಹತ್ವದ ಈ ವಿಧೇಯಕಕ್ಕೆ ಕೇಂದ್ರ ಸಚಿವ ಸಂಪುಟವೂ ಗುರುವಾರ ಅನುಮೋದನೆ ನೀಡಿದ್ದು, ಸೋಮವಾರ ಮಂಡಿಸಲು ಸಿದ್ಧತೆ ನಡೆಸಿದೆ.

32 ಪಕ್ಷಗಳ ಬೆಂಬಲ



ಒಂದು ರಾಷ್ಟ್ರ-ಒಂದು ಚುನಾವಣೆ ಪರಿಕಲ್ಪನೆಗೆ 32 ರಾಜಕೀಯ ಪಕ್ಷಗಳು ಬೆಂಬಲ ವ್ಯಕ್ತಪಡಿಸಿವೆ. ಆದರೆ, 15 ಪಕ್ಷಗಳು ಭಿನ್ನ ನಿಲುವು ಹೊಂದಿವೆ ಎಂದು ಉನ್ನತ ಸಮಿತಿಯ ನೇತೃತ್ವ ವಹಿಸಿದ್ದ ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಮಾಧ್ಯಮ ಸಂದರ್ಶನವೊಂದರಲ್ಲಿ ಶನಿವಾರ ಹೇಳಿದ್ದಾರೆ.

ಸಮಾಚಾರ ಸಣ್ಣದಲ್ಲ

ರತ್ನಾ ಕುಮಾರಿಗೆ ಪಿಎಚ್.ಡಿ

ಬೆಂಗಳೂರು: ನಗರದ ವಿಜಯನಗರ ಪ್ರಥಮ ದರ್ಜೆ ಕಾಲೇಜಿನ ಸಸ್ಯಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕಿ ರತ್ನಾ ಕುಮಾರಿ ಬಿ.ಎಂ ಅವರು ಬೆಂಗಳೂರು ವಿವಿ ಸಸ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಮನತ್ತು ಅಧ್ಯಕ್ಷ ಪ್ರೊ.ಎಚ್.ಆರ್ ರವೀಶ ಮಾರ್ಗದರ್ಶನದಲ್ಲಿ ಮಂಡಿಸಿದ 'ಬಯೋಸಿಂಥೆಸಿಸ್ ಆ್ಯಂಡ್ ಕ್ಯಾರೆಕ್ಟರೈಸೇಷನ್ ಆಫ್ ನ್ಯಾನೋ ಪಾರ್ಟಿಕಲ್ಸ್ ಫ್ರಂ ಆ್ಯಂಡ್ರೋಗ್ರಾಫಿಸ್ ಸ್ಪೀಸಿಸ್ ಆ್ಯಂಡ್ ದೇರ್ ಬಯಾಲಾಜಿಕಲ್ ಆ್ಯಕ್ಟಿವಿಟಿಸ್' ವಿಷಯಕ್ಕೆ ಬೆಂಗಳೂರು ವಿವಿಯು ಪಿಎಚ್.ಡಿ ಪ್ರದಾನ ಮಾಡಿದೆ.

ಚಂಡಮಾರುತ: ವಾಹನ ವಿಮಾ ಕ್ಲೇಮ್ ಹೆಚ್ಚು

ಬೆಂಗಳೂರು: ಚಂಡಮಾರುತದ ಹಾನಿಯಿಂದಾಗಿ ಕರ್ನಾಟಕ, ತಮಿಳುನಾಡು ಮತ್ತು ಆಂಧ್ರಪ್ರದೇಶಗಳಿಂದ ಹೆಚ್ಚಿನ ಸಂಖ್ಯೆಯ ಮತ್ತು ದೊಡ್ಡ ಗಾತ್ರದ ವಾಹನ ನಷ್ಟ ಕ್ಲೇಮ್‌ಗಳು ಬರುತ್ತಿವೆ. ಅಂತೆಯೇ ದೆಹಲಿ ಎನ್‌ಸಿಆರ್, ಮಹಾರಾಷ್ಟ್ರದಂಥ ರಾಜ್ಯಗಳಿಂದ ಅಪಘಾತ ಕ್ಲೇಮ್‌ಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿವೆ ಎನ್ನುವುದು ಪಾಲಿಸಿ ಬಜಾರ್ ಅಧ್ಯಯನದ ಅಂಕಿ ಅಂಶಗಳಿಂದ ತಿಳಿದು ಬಂದಿದೆ. ಪ್ರಾಥಮಿಕವಾಗಿ ಅಪಘಾತಗಳು, ಕಳ್ಳತನ ಮತ್ತು ನೈಸರ್ಗಿಕ ಘಟನೆಗಳಿಂದ ಆಗಿರುವ ಹಾನಿ ಮೋಟಾರು ವಿಮಾ ಕ್ಲೇಮ್‌ಗಳ ಪ್ರಮುಖ ಕಾರಣಗಳು.

ಮೆಟ್ರೋ ಫೀಡರ್ ಬಸ್‌ಗಳ ಸಂಖ್ಯೆ ಹೆಚ್ಚಿಸಲು ಬಿಎಂಟಿಸಿ ನಿರ್ಧಾರ

ಮಿನಿ ಬಸ್‌ಗಳ ಖರೀದಿ ಪ್ರಯತ್ನ ವಿಫಲ, ವಿದ್ಯುತ್ ಬಸ್ ಸಂಚಾರ

ಬೆಂಗಳೂರು: ಮೆಟ್ರೋ ಪ್ರಯಾಣಿಕರ ಅನುಕೂಲಕ್ಕಾಗಿ ಬಿಎಂಟಿಸಿಯು ಮೆಟ್ರೋ ಸಂಪರ್ಕ ಬಸ್‌ಗಳ ಸಂಚಾರ ನಡೆಸುತ್ತಿದ್ದು, ಈ ನಿಟ್ಟಿನಲ್ಲಿ ಮಿನಿ ಬಸ್‌ಗಳನ್ನು ಖರೀದಿಸಲು ನಡೆಸಿದ ಪ್ರಯತ್ನ ವಿಫಲವಾಗಿದೆ.

ಈ ಹಿನ್ನೆಲೆ ಬಿಎಂಟಿಸಿಯು ಎಲೆಕ್ಟ್ರಿಕ್ ಬಸ್‌ಗಳನ್ನು ಗುತ್ತಿಗೆಗೆ ಪಡೆದು ಮೆಟ್ರೋ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸಲು ಸಂಚಾರ ನಡೆಸಲು ತೀರ್ಮಾನಿಸಲಾಗಿದೆ. ಸದ್ಯ 151 ಮೆಟ್ರೋ ಫೀಡರ್ ಬಸ್‌ಗಳು ಸಂಚಾರ ನಡೆಸುತ್ತಿದ್ದು, ಮೆಟ್ರೋ ಪ್ರಯಾಣಿಕರ ಸಂಖ್ಯೆ ಹೆಚ್ಚಳವಾದ ಹಿನ್ನೆಲೆ ಹೆಚ್ಚುವರಿ ಮೆಟ್ರೋ ಫೀಡರ್ ಬಸ್‌ಗಳನ್ನು ಓಡಿಸಲು ಬಿಎಂಟಿಸಿ ಮುಂದಾಗಿದೆ.

ಬಿಎಂಟಿಸಿ ಮಾಹಿತಿ ಪ್ರಕಾರ, ಮೆಟ್ರೋ ಫೀಡರ್ ಬಸ್‌ಗಳ ಸಂಖ್ಯೆಯನ್ನು 300ಕ್ಕೆ ಹೆಚ್ಚಿಸಲು ಮುಂದಾಗಿದ್ದು, 2023ರ ಡಿಸೆಂಬರ್‌ನಲ್ಲಿ ಮೆಟ್ರೋ ಫೀಡರ್ ಸೇವೆಗೆ ಮಿನಿ ಬಸ್‌ಗಳನ್ನು ಖರೀದಿಸಲು ಟೆಂಡರ್ ಕರೆದಿದೆ. 2024ರ ಮಾರ್ಚ್‌ನಲ್ಲಿ ಪುನಃ ಟೆಂಡರ್ ಕರೆಯಲಾಗಿತ್ತಾದರೂ ಅಧಿಕ ಬಿಡ್‌ಗಳ ಹಿನ್ನೆಲೆ ಬಸ್ ಖರೀದಿಯ ಒಪ್ಪಂದವನ್ನೇ ಬಿಎಂಟಿಸಿ ಕೈಬಿಟ್ಟಿದೆ.

ಎಲೆಕ್ಟ್ರಿಕ್ ಬಸ್ ಸಂಚಾರ: 120 ಮಿನಿ ಬಸ್ ಖರೀದಿ ಪ್ರಕ್ರಿಯೆ ದುಬಾರಿಯಾದ ಕಾರಣ ಟಾಟಾ ಮೋಟಾರ್ಸ್ ಮೂಲಕ ಬಿಎಂಟಿಸಿ 148 ಉದ್ದದ ಎಲೆಕ್ಟ್ರಿಕ್ ಬಸ್‌ಗಳನ್ನು ಲೀಸ್ ಮೇಲೆ ಪಡೆಯಲಿದ್ದು, ಇದನ್ನು ಮೆಟ್ರೋ ಫೀಡರ್ ಬಸ್‌ಗಳನ್ನಾಗಿ ಬಳಸಿಕೊಳ್ಳಲಿದೆ. ಬಿಎಂಟಿಸಿ ಟೆಂಡರ್‌ನಲ್ಲಿ ಟೆಂಡರ್‌ನಲ್ಲಿ ಪ್ರತಿದಿನ 180 ಕಿ.ಮೀ ಸಂಚಾರ ನಡೆಸಬೇಕು. ವಾರ್ಷಿಕ 350 ದಿನ ಅಥವಾ 63,000 ಕಿ.ಮೀ ಸಂಚಾರ ನಡೆಸಬೇಕು ಎಂದು ಷರತ್ತು ವಿಧಿಸಿತ್ತು. ಜತೆಗೆ ಬಸ್‌ಗಳನ್ನು ನೀಡುವ ಕಂಪನಿಯೇ ಚಾಲಕರನ್ನು ಒದಗಿಸಬೇಕು ಎಂದು ಹೇಳಿತ್ತು. ಆದರೆ ಈ ಟೆಂಡರ್‌ಗೆ ಯಾರೂ ಒಪ್ಪಿಕೊಳ್ಳಲಿಲ್ಲ. 2ನೇ ಬಾರಿಗೆ ಟೆಂಡರ್‌ನಲ್ಲಿ ಅಶೋಕ್ ಲೇಲ್ಯಾಂಡ್‌ನ ಅಧೀನ ಕಂಪನಿ ಸ್ವಿಚ್ ಮೊಬಿಲಿಟಿ ಒಂದೇ ಪಾಲ್ಗೊಂಡಿತ್ತು. ಅದು ಕಿ. ಮೀ. ಗೆ 88 ರು. ನೀಡಬೇಕು ಎಂದು ಬಿಡ್ ಮಾಡಿತು. ಆದರೆ ಮಾತುಕತೆಗಳ ಬಳಿಕ 86 ರು.ಗಳಿಗೆ ಒಪ್ಪಿಗೆ ಸೂಚಿಸಲಾಗಿತ್ತು. ಇದು ಸಹ ಅಧಿಕ ದರ ಎಂಬ ಕಾರಣಕ್ಕೆ ಬಸ್ ಖರೀದಿಯನ್ನೇ ಬಿಎಂಟಿಸಿ ಕೈಬಿಟ್ಟಿದೆ.

ನಾನ್ ಎಸಿ ಬಸ್ ಸಂಚಾರ: ಟಾಟಾ ಮೋಟಾರ್ಸ್ ಸಬ್ಸಿಡರಿ ಕಂಪನಿ ಟಿಎಂಎಲ್ ಸ್ಮಾರ್ಟ್ ಸಿಟಿ ಮೊಬಿಲಿಟಿ ಸಲ್ಯೂಷನ್ಸ್ ಈಗಾಗಲೇ ಬಿಎಂಟಿಸಿಗೆ 40.01 ಕಿ. ಮೀ. ದರಕ್ಕೆ ನಾನ್-ಎಸಿ ಇ-ಬಸ್‌ಗಳನ್ನು ಗುತ್ತಿಗೆ ನೀಡಿದ್ದು, ಅಶೋಕ್ ಲೇಲ್ಯಾಂಡ್‌ನ ಒಎಚ್‌ಎಂ ಮೊಬಿಲಿಟಿ 320 ಎಸಿ ಬಸ್‌ಗಳನ್ನು ಕಿ. ಮೀ.ಗೆ 65.8 ದರದಲ್ಲಿ ನೀಡಿದೆ. ಆದ್ದರಿಂದ ಹೊಸ ಮಿನಿ ಬಸ್ ಖರೀದಿ ಮಾಡುವ ಬದಲು 148 ಹೊಸ ಇಲೆಕ್ಟ್ರಿಕ್ ಬಸ್ ಲೀಸ್ ಮೇಲೆ ಪಡೆದು ಓಡಿಸಲು ಬಿಎಂಟಿಸಿ ಮುಂದಾಗಿದೆ. ಸರಕಾರದ ಒಪ್ಪಿಗೆಯನ್ನು ಪಡೆದು ಮುಂದಿನ ಪ್ರಕ್ರಿಯೆ ಕೈಗೊಳ್ಳಲು ಬಿಎಂಟಿಸಿ ಮುಂದಾಗಿದೆ. ಬಿಎಂಟಿಸ್ ಬಸ್ ಲೀಸ್ ಅವಧಿ 12 ವರ್ಷಗಳಾಗಿದ್ದು, ಇದರಿಂದಾಗಿ ಸಂಸ್ಥೆ, ಕಂಪನಿ ಎರಡಕ್ಕೂ ಅನುಕೂಲವಾಗಲಿದೆ ಎಂಬುದು ಅಂದಾಜಿಸಲಾಗಿದೆ.

ಈಗಾಗಲೇ ಟಾಟಾ ಜತೆ 921 ಬಸ್ ಪೂರೈಕೆಗೆ ಬಿಎಂಟಿಸಿ ಒಪ್ಪಂದ ಮಾಡಿಕೊಂಡಿದೆ. ಇದರಲ್ಲಿ 841 ಇ-ಬಸ್‌ಗಳು ಈಗಾಗಲೇ ಪೂರೈಕೆಯಾಗಿವೆ. 80 ಬಸ್‌ಗಳು 2025ರ ಮಾರ್ಚ್ ನಲ್ಲಿ ಆಗಮಿಸಲಿವೆ. ಮುಂದಿನ ವರ್ಷ ಮೆಟ್ರೋ ಪ್ರಯಾಣಿಕರ ಸಂಖ್ಯೆಯೂ ಅಧಿಕವಾಗುವ ಕಾರಣ ಹೊಸ ಫೀಡರ್ ಬಸ್‌ಗಳನ್ನು ಬಿಎಂಟಿಸಿ ಓಡಿಸಲಿದೆ.

ಹೈಕೋರ್ಟ್‌ನಿಂದ ಪತಿಗೆ 25 ಸಾವಿರ ರು. ದಂಡ

3ನೇ ಪತ್ನಿಗೂ ವಿಚ್ಛೇದನ ಕೋರಿ ಅರ್ಜಿ

ಬೆಂಗಳೂರು: ಪದೇ ಪದೇ ಮದುವೆಯಾಗಿ ವಿಚ್ಛೇದನ ನೀಡುವುದನ್ನೇ ಅಭ್ಯಾಸ ಮಾಡಿಕೊಂಡಿದ್ದಲ್ಲದೇ ಇಬ್ಬರು ಪತ್ನಿಯರಿಗೆ ವಿಚ್ಛೇದನ ನೀಡಿದ ಅಂಶ ಮುಚ್ಚಿಟ್ಟು ಮೂರನೇ ಮದುವೆಯಾಗಿ ಆಕೆಗೂ ವಿಚ್ಛೇದನ ಕೋರಿ ಅರ್ಜಿ ಸಲ್ಲಿಸಿದ್ದ ಗಂಡನಿಗೆ ಹೈಕೋರ್ಟ್ 25 ಸಾವಿರ ರು. ದಂಡ ವಿಧಿಸಿದೆ. ಅಲ್ಲದೆ, ವಿನಾಕಾರಣ ಕೋರ್ಟ್ ಮೆಟ್ಟಿಲೇರುವಂತೆ ಮಾಡಿದ್ದಕ್ಕೆ ದಂಡದ ಮೊತ್ತವನ್ನು ಮೂರನೇ ಪತ್ನಿಗೆ ಪರಿಹಾರವಾಗಿ ನೀಡಲು ಸೂಚನೆ ನೀಡಿ ಕೋರ್ಟ್ ಆದೇಶಿಸಿದೆ.

ಹೈಕೋರ್ಟ್ ಸುದ್ದಿ

ಮೂರನೇ ಪತ್ನಿಗೆ ವಿಚ್ಛೇದನ ಕೋರಿ ಶಿವಮೊಗ್ಗ ನಗರದ ವ್ಯಕ್ತಿಯೊಬ್ಬರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾ. ಅನು ಶಿವರಾಮನ್ ಮತ್ತು ನ್ಯಾ. ಉಮೇಶ್ ಅಡಿಗ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ. ಅಲ್ಲದೆ, ಅಸ್ಪಷ್ಟವಾದ ಆಧಾರಗಳ ಮೇಲೆ ಪವಿತ್ರವಾದ ವಿವಾಹ ಬಂಧವನ್ನು ಬೇರ್ಪಡಿಸಲಾಗದು ಎಂದು ತಿಳಿಸಿದೆ.

ಪ್ರಕರಣದಲ್ಲಿ ಅರ್ಜಿದಾರರು ಈಗಾಗಲೇ ಇಬ್ಬರು ಮಹಿಳೆಯರನ್ನು ವಿವಾಹವಾಗಿ ವಿಚ್ಛೇದನ ಪಡೆದಿದ್ದಾರೆ. ಮೂರನೇ ಮದುವೆಯಾಗಿ ಮೂರರಿಂದ ನಾಲ್ಕು ತಿಂಗಳು ಒಟ್ಟಿಗೆ ಜೀವನ ನಡೆಸಿದ್ದಾರೆ. ಆದರೆ, ಎಷ್ಟು ದಿನಗಳ ಕಾಲ ದಂಪತಿ ಒಟ್ಟಿಗೆ ನೆಲೆಸಿದ್ದರು ಎಂಬುದಕ್ಕೆ ಸಂಬಂಧಿಸಿದಂತೆ ತಪ್ಪು ಮಾಹಿತಿ ನೀಡಿದ್ದಾರೆ. ಅಲ್ಲದೆ, ಪತ್ನಿ ತನ್ನನ್ನು ಕ್ರೂರವಾಗಿ ನಡೆಸಿಕೊಂಡಿದ್ದಾರೆ ಎಂಬುದಾಗಿ ಆರೋಪಿಸಿದ್ದಾರೆ.

ಅದಕ್ಕೆ ಯಾವುದೇ ಸಾಕ್ಷ್ಯಾಧಾರಗಳನ್ನು ಒದಗಿಸಿಲ್ಲ. ಹೀಗಾಗಿ ದಂಪತಿಯ ಪವಿತ್ರ ಸಂಬಂಧವನ್ನು ಅಸ್ಪಷ್ಟ ಮತ್ತು ಅಸಹಜವಾದ ಆಧಾರದಿಂದ ಬೇರ್ಪಡಿಸಲಾಗುವುದಿಲ್ಲ ಎಂದು ಪೀಠ ತನ್ನ ಆದೇಶದಲ್ಲಿ ತಿಳಿಸಿದೆ.

ಪ್ರಕರಣದ ಹಿನ್ನೆಲೆ

ಅರ್ಜಿದಾರ ಅರವಿಂದ್ ಮತ್ತು ಶ್ಯಾಮಲಾ (ಹೆಸರು ಬದಲಿಸಲಾಗಿದೆ) 2019ರ ಡಿಸೆಂಬರ್ 13ರಂದು ವಿವಾಹವಾಗಿದ್ದರು. 2020ರ ಫೆಬ್ರವರಿ 10ರಂದು ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ವಿವಾಹ ನೋಂದಣಿ ಮಾಡಿಸಿಕೊಂಡಿದ್ದರು. ದಂಪತಿ ಶಿವಮೊಗ್ಗದಲ್ಲಿ ನೆಲೆಸಿದ್ದರು. ಬಳಿಕ ಶ್ಯಾಮಲಾ ಅವರು ಅರವಿಂದ್ ಅವರಿಗೆ ಕಿರುಕುಳ ನೀಡಿ ಕ್ರೂರವಾಗಿ ನಡೆಸಿಕೊಳ್ಳುತ್ತಿದ್ದರು. ಬಳಿಕ ಶ್ಯಾಮಲಾ ತಮ್ಮ ತಾಯಿ ಮನೆಗೆ ತೆರಳಿ ನೆಲೆಸಿದ್ದರು. ಮನೆಗೆ ಹಿಂದಿರುಗುವಂತೆ ಅರ್ಜಿದಾರ ಪದೇ ಪದೇ ಮನವಿ ಮಾಡಿದರೂ ಹಿಂದಿರುಗಿರಲಿಲ್ಲ. ಇದೇ ಕಾರಣದಿಂದ ವೈವಾಹಿಕ ಜೀವನ ನಡೆಸಲಾಗದೆ ವಿಚ್ಛೇದನಕ್ಕೆ ಮುಂದಾಗಿರುವುದಾಗಿ ಅರ್ಜಿಯಲ್ಲಿ ತಿಳಿಸಿದ್ದರು. ವಿಚಾರಣೆ ವೇಳೆ ಪತ್ನಿ ಪರ ವಕೀಲರು, ಅರ್ಜಿದಾರರು ವರದಕ್ಷಿಣೆ ತರುವಂತೆ ಒತ್ತಾಯಿಸುತ್ತಿದ್ದರು. ಮತ್ತು ಕೆಟ್ಟದಾಗಿ ನಡೆಸಿಕೊಳ್ಳುತ್ತಿದ್ದರು. ಈ ಸಂಬಂಧ ಶ್ಯಾಮಲಾ ಪೋಷಕರು ಸಮಸ್ಯೆ ಪರಿಹರಿಸಲು ಮುಂದಾಗಿದ್ದರೂ ಯಾವುದೇ ಪ್ರಯೋಜನವಾಗಿರಲಿಲ್ಲ. ಅಲ್ಲದೆ, ಹಿಂದಿನ ಎರಡೂ ಮದುವೆಗಳನ್ನು ಮುಚ್ಚಿಟ್ಟು ಮೂರನೇ ಮದುವೆಯಾಗಿ ಅವರಿಗೂ ವಿಚ್ಛೇದನ ನೀಡುವ ಉದ್ದೇಶದಿಂದಲೇ ವರದಕ್ಷಿಣೆ ಕಿರುಕುಳ ನೀಡಿ ಮನೆಯಿಂದ ಹೊರಹಾಕಿದ್ದಾರೆ ಎಂದು ಪೀಠಕ್ಕೆ ತಿಳಿಸಿದ್ದರು.

PUBLIC NOTICE

I, **D. RAMESH KUMAR** S/o Devappa, R/at No. 21, 4th Cross, Parvathi Nagar, Princeton Public School, Medahalli, Virgonagar, Bangalore – 560 049 is the absolute owner of the **Residential building bearing New Municipal No. 19/1, PID No. 75-58-19/1,** situated at Nandanavanam 'D' Street, Ulsoor, Bangalore, measuring on the East side 15 Feet 04 Inches + 10 Feet; on the West side 25 Feet 04 Inches; on the North side 20 Feet 08 Inches + 04 Feet 01 Inch and on the South side 24 Feet 09 Inches, totally measuring 586 Sq. Ft., (approx.) and bounded on: **East by:** D.M. Beerappa's property bearing Mun. No. 19; **West by:** Road (Nandanavanam 'D' Street); **North by:** Passage of 04 Feet 01 Inch in width belongs to D.M. Beerappa and thereafter property belongs to Venkataramanaiah and **South by :** Private Property belongs to Kandappa Maistry and he has misplaced/lost the Original Sale Deed dated 03.01.1974 executed by Smt. Sakamma in favour of Sri P. Channappa, Document No. 3376/1973-74, Book I, Volume 1779, at pages 222 to 224, registered in the office of the Sub-Registrar, Shivajinagar, Bangalore, registered on 24.01.1974 is not traceable. In this regard the said **Sri D. Ramesh Kumar has lodged a Police Complaint on 04.12.2024 before Police Sub-Inspector, Bangalore City**. If the said Original Sale Deed is found by any person/s, they are hereby requested to hand over the same to the below mentioned address.

D. RAMESH KUMAR, R/at No. 21, 4th Cross, Parvathi Nagar, Princeton Public School, Medahalli, Virgonagar, Bangalore – 560049, Ph: 98450 58680 (M)

PUBLIC NOTICE

This Notice is issued on behalf of my client **N. Srinivas S/o Nadupanna.B.V** to bring to the notice of the General Public that the Original Sale Deed bearing document No. 1935/1991-92, executed by one **V. Nagendra** in favour of my client N. Srinivas S/o Nadupanna .B.V. dtd. 19-09-1991 in the office of Sub-Registrar, Basavanagudi, Bengaluru is lost on 01-01-2024 and e-lost complaint lodged in Cottonpet Police Station, Bengaluru. If any person/s, find the above said lost document, It is requested to handover the same to the undersigned within **07 days** to the undersigned. In case if it is found that any person/s trying to misuse the said document, legal action will be taken against them.

SCHEDULE : All the piece and parcel of residential property situated at **No. 70/1, old Municipal No. 59/62, 4th Main Road, Chamarajpet, Bengaluru – 560 018**, having PID No. 46-6-70/1, measuring East to West : 11-06 feet and North to South : 38 feet and bounded on :

East by : House Property No. 69, belonging to Sri L. Gudri West by : House Property No. 71, belonging to Smt.Suguna Murthy, North by : Property belonging to Smt.Lakshmamma, South by : Conservancy Road

M.S. SATISH Advocate
No. 5/1, 2nd Floor, SLN Mahal, 3rd Cross, Malleshwaram, Bangalore-560003
Mobile : 9448306826

ಮೆಟ್ರೋದಲ್ಲಿ ವಿಶೇಷಚೇತನ ವ್ಯಕ್ತಿಯಿಂದ ಭಿಕ್ಷಾಟನೆ

ಬೆಂಗಳೂರು: ನಮ್ಮ ಮೆಟ್ರೋದ ಚಲ್ಲಘಟ್ಟದಿಂದ ವೈಟ್ ಫೀಲ್ಡ್ ಮೆಟ್ರೋ ಸಂಚಾರದ ವೇಳೆ ಪ್ರಯಾಣಿಕರಂತೆ ಪ್ರವೇಶಿಸಿದ ವ್ಯಕ್ತಿಯೊಬ್ಬರು ದಿಢೀರನೇ ಭಿಕ್ಷಾಟನೆಗೆ ಇಳಿದ ಘಟನೆ ವರದಿಯಾಗಿದೆ.

ಸಾಮಾಜಿಕ ಜಾಲತಾಣದಲ್ಲಿ ವಿಡಿಯೊ ವೈರಲ್

ನಮ್ಮ ಮೆಟ್ರೋದಲ್ಲಿ ಭಿಕ್ಷಾಟನೆಗೆ ಅವಕಾಶವಿಲ್ಲದಿದ್ದರೂ ವ್ಯಕ್ತಿಯು ಭಿಕ್ಷಾಟನೆ ಮಾಡಿರುವುದು ಪ್ರಯಾಣಿಕರಲ್ಲಿ ಆಶ್ಚರ್ಯವನ್ನುಂಟು ಮಾಡಿದ್ದು, ಈ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ವಿಡಿಯೋದಲ್ಲಿರುವುದು ವಿಶೇಷ ಚೇತನ ವ್ಯಕ್ತಿ ಎಂದು ಹೇಳಲಾಗುತ್ತಿದ್ದು, ಪ್ರಯಾಣಿಕರಂತೆಯೇ ಪ್ರವೇಶಿಸಿ ದಿಢೀರನೇ ಭಿಕ್ಷಾಟನೆಗೆ ಇಳಿದಿದ್ದಾರೆ. ಮೊದಲಿಗೆ ಯಾರೋ ಫ್ರಾಂಕ್ ಮಾಡುತ್ತಿದ್ದಾರೆ ಎಂದು ಭಾವಿಸಿದ್ದು, ಆ ವ್ಯಕ್ತಿ ಎಲ್ಲರ ಬಳಿ ಭಿಕ್ಷೆ ಕೇಳುತ್ತಾ ಸಾಗಿದಾಗ ಕೆಲ ಪ್ರಯಾಣಿಕರು ಮುಜುಗರಕ್ಕೂ ಒಳಗಾಗಿದ್ದಾರೆ ಎನ್ನಲಾಗಿದೆ.

ಚಲ್ಲಘಟ್ಟದಿಂದ ವೈಟ್ ಫೀಲ್ಡ್ ಮಾರ್ಗದಲ್ಲಿ ಈ ಘಟನೆ ನಡೆದಿದ್ದು, ವಿಶೇಷ ಚೇತನ ವ್ಯಕ್ತಿ ತಮ್ಮ ದೈಹಿಕ ಸ್ಥಿತಿಯನ್ನು ಎಲ್ಲರಿಗೂ ತೋರಿಸಿ ಭಿಕ್ಷೆ ಕೇಳಿದ್ದಾರೆ. ಮೆಟ್ರೋದಲ್ಲೂ ಭಿಕ್ಷಾಟನೆ ಕಂಡು ಪ್ರಯಾಣಿಕರು ಗಾಬರಿಯಾಗಿದ್ದು, ಆ ವ್ಯಕ್ತಿ ಮೊದಲಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಮೆಟ್ರೋ ಟಿಕೆಟ್ ಪಡೆದುಕೊಂಡು ಬಳಿಕ ಭಿಕ್ಷಾಟನೆ ಮಾಡಿರುವುದು ಪ್ರಯಾಣಿಕರಲ್ಲಿ ಗೊಂದಲವನ್ನುಂಟು ಮಾಡಿದೆ. ಅಲ್ಲದೆ ಬೆಂಗಳೂರಿನ ರಸ್ತೆಗಳಲ್ಲಿ ಭಿಕ್ಷುಕರ ಸಂಖ್ಯೆ ಹೆಚ್ಚಾಗಿದ್ದು, ಬೆನ್ನು ಬಿದ್ದಂತೆ ಸಾರ್ವಜನಿಕರ ಬಳಿ ಭಿಕ್ಷಾಟನೆ ಮಾಡುತ್ತಿದ್ದರು. ಮೆಟ್ರೋದಲ್ಲಿ ಈವರೆಗೆ ಭಿಕ್ಷುಕರ ಹಾವಳಿ ಇರಲಿಲ್ಲ. ಈಗ ಇಲ್ಲಿಯೂ ಭಿಕ್ಷಾಟನೆ ಮಾಡುವುದು ಎಷ್ಟರಮಟ್ಟಿಗೆ ಸರಿ ಎಂಬ ಪ್ರಶ್ನೆ ಮುಂದಿಟ್ಟಿದ್ದಾರೆ. ಅಲ್ಲದೆ, ಮೆಟ್ರೋದವರು ಯಾವಾಗಿನಿಂದ ಭಿಕ್ಷಾಟನೆಗೆ ಅನುಮತಿ ನೀಡಿದ್ದಾರೆ? ಎಂದೂ ಹಲವರು ಕೇಳುತ್ತಿದ್ದಾರೆ.

ಪ್ರಯಾಣಿಕರಿಗೆ ಕಿರಿಕಿರಿ

ಮೆಟ್ರೋದಲ್ಲಿ ಪ್ರಯಾಣಿಸುವವರಿಗೆ ಭಿಕ್ಷುಕರಿಂದ ಕಿರಿಕಿರಿ ಜತೆಗೆ ಮುಜುಗರವೂ ಆಗುತ್ತಿದ್ದು, ಇಂತಹ ಘಟನೆಗಳು ಮತ್ತೆ ಮರುಕಳಿಸದಂತೆ ನಮ್ಮ ಮೆಟ್ರೋ ಕೂಡಲೇ ಕ್ರಮ ಕೈಗೊಳ್ಳಬೇಕು. ಇದಕ್ಕೆ ಕಡಿವಾಣ ಹಾಕದಿದ್ದರೆ, ಬಸ್-ರೈಲ್ವೆ ನಿಲ್ದಾಣಕ್ಕೂ ಮೆಟ್ರೋಗೂ ಯಾವುದೇ ವ್ಯತ್ಯಾಸ ಇರುವುದಿಲ್ಲ ಎಂದು ಪ್ರಯಾಣಿಕರು ಆಗ್ರಹಿಸಿದ್ದಾರೆ. ವ್ಯಕ್ತಿ ಭಿಕ್ಷಾಟನೆ ಮಾಡಿರುವ ಬಗ್ಗೆ ಮೆಟ್ರೋದವರು ಈವರೆಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಝಿಂಕಾ ಲಾಜಿಸ್ಟಿಕ್ಸ್ ಸೊಲ್ಯೂಷನ್ಸ್ ಲಿಮಿಟೆಡ್

BLACKBUCK

(ಹಿಂದೆ ಝಿಂಕಾ ಲಾಜಿಸ್ಟಿಕ್ಸ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
ನೋಂದಾಯಿತ ಕಚೇರಿ : ವಸ್ವಾನಿ ಪ್ರೆಸಿಡಿಯೋ ಸಂಖ್ಯೆ 84/2, ಎರಡನೇ ಮಹಡಿ, ಪನತ್ತೂರು ಮುಖ್ಯ ರಸ್ತೆ ಕಾಡುಬೀಸನಹಳ್ಳಿ ಆಫ್ ಔಟರ್ ರಿಂಗ್ ರಸ್ತೆ, ಬೆಂಗಳೂರು – 560103, ಕರ್ನಾಟಕ. **ದೂರವಾಣಿ ಸಂಖ್ಯೆ:** + 91 80461 22800
ವೆಬ್‌ಸೈಟ್: www.blackbuck.com **ಕಾರ್ಪೊರೇಟ್ ಗುರುತಿನ ಸಂಖ್ಯೆ : U63030KA2015PLC079894**

ಸೆಪ್ಟೆಂಬರ್ 30, 2024 ಕ್ಕೆ ಕೊನೆಗೊಂಡ 2 ನೇ ತ್ರೈಮಾಸಿಕ ಮತ್ತು ಅರ್ಧ ವರ್ಷದ ಅವಧಿಯ ಏಕೀಕೃತ ಅಪರಿಶೋಧಿತ ಹಣಕಾಸು ಫಲಿತಾಂಶಗಳ ಸಾರಾಂಶ

(₹ ಮಿಲಿಯನ್ಸ್‌ಗಳಲ್ಲಿ, ಇಪಿಎಸ್ ಹೊರತುಪಡಿಸಿ)

ಕ್ರ ಸಂ.	ವಿವರಗಳು	ತ್ರೈಮಾಸಿಕಕ್ಕೆ ಕೊನೆಗೊಂಡ			ಅರ್ಧವರ್ಷಕ್ಕೆ ಕೊನೆಗೊಂಡ		ವರ್ಷಕ್ಕೆ ಕೊನೆಗೊಂಡ
		30 ಸೆಪ್ಟೆಂಬರ್ 2024	30 ಜೂನ್ 2024	30 ಸೆಪ್ಟೆಂಬರ್ 2023	30 ಸೆಪ್ಟೆಂಬರ್ 2024	30 ಸೆಪ್ಟೆಂಬರ್ 2023	31 ಮಾರ್ಚ್ 2024
		ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಪರಿಶೋಧಿತ
1	ನಿರ್ವಹಣೆಯಿಂದ ಬಂದ ಒಟ್ಟು ವರಮಾನ	1,042.66	983.30	676.84	2,025.96	1,320.43	3,165.14
2	ನಿವ್ವಳ ಲಾಭ / (ನಷ್ಟ) ಅವಧಿಗೆ (ತೆರಿಗೆಯ ಮುಂಚೆ, ವಿನಾಯಿತಿ ಪಡೆದ ಮತ್ತು ವಿಶೇಷ ವಸ್ತುಗಳು)	124.90	68.09	(396.96)	192.99	(729.90)	(1,669.10)
3	ನಿವ್ವಳ ಲಾಭ / (ನಷ್ಟ) ಅವಧಿಗೆ ತೆರಿಗೆಯ ಮುಂಚೆ, (ವಿನಾಯಿತಿ ಪಡೆದ ನಂತರ ಮತ್ತು ವಿಶೇಷ ವಸ್ತುಗಳು)	(3,082.50)	324.32	(396.96)	(2,758.18)	(729.90)	(1,669.10)
4	ನಿವ್ವಳ ಲಾಭ / (ನಷ್ಟ) ಅವಧಿಗೆ ತೆರಿಗೆಯ ನಂತರ,(ವಿನಾಯಿತಿ ಪಡೆದ ನಂತರ ಮತ್ತು ವಿಶೇಷ ವಸ್ತುಗಳು)	(3,083.81)	323.78	(396.96)	(2,760.03)	(730.14)	(1,669.86)
5	ಸಂಪೂರ್ಣ ಸಮಗ್ರ ಅವಧಿಯ ಆದಾಯ [ಒಳಗೊಂಡಿರುವ ಲಾಭ / (ನಷ್ಟ) (ತೆರಿಗೆಯ ನಂತರ) ಅವಧಿಗೆ ಹಾಗೂ ಇತರೆ ಸಮಗ್ರ ಆದಾಯ (ತೆರಿಗೆಯ ನಂತರ)]	(3,078.79)	323.25	(394.24)	(2,755.54)	(727.21)	(1,667.47)
6	ಸಂಪೂರ್ಣ ಸಮಗ್ರ ಅವಧಿಯ ಆದಾಯ [ಒಳಗೊಂಡಿರುವ ಲಾಭ / (ನಷ್ಟ) (ತೆರಿಗೆಯ ನಂತರ) ಅವಧಿಗೆ ಹಾಗೂ ಇತರೆ ಸಮಗ್ರ ಆದಾಯ (ತೆರಿಗೆಯ ನಂತರ)] (ಮುಂದುವರಿಯುವ ಮತ್ತು ಸ್ಥಗಿತಗೊಂಡ ಕಾರ್ಯಾಚರಣೆಗಳು)	(2,689.63)	286.19	(473.94)	(2,403.44)	(833.12)	(1,937.10)
7	ಈಕ್ವಿಟಿ ಷೇರು ಬಂಡವಾಳ	56.57	56.57	0.10	56.57	0.10	0.10
8	ಮಾರ್ಚ್ 31, 2024 ರಂತೆ ಇತರೆ ಇಕ್ವಿಟಿ						3,110.26
9	ಪ್ರತಿ ಷೇರಿನ ಗಳಿಕೆ (ಪ್ರತಿ ₹. 1 ಕ್ಕೆ) ಕಾರ್ಯಾಚರಣೆಗಳನ್ನು ಮುಂದುವರಿಸುವದಕ್ಕಾಗಿ ಹಾಗೂ ಸ್ಥಗಿತಗೊಳಸುವುದಕ್ಕಾಗಿ						
	1. ಮೂಲಭೂತ (₹.)	(17.18)	1.56	(2.58)	(15.62)	(4.54)	(10.52)
	2. ಡೈಲ್ಯೂಟೆಡ್ (₹.)	(17.18)	1.54	(2.58)	(15.64)	(4.54)	(10.52)

ಸೂಚನೆ :
1. ಮೇಲಿನ ಫಲಿತಾಂಶಗಳನ್ನು ಲೆಕ್ಕಪರಿಶೋಧನಾ ಸಮಿತಿಯು ಪರಿಶೀಲಿಸಿದೆ ಮತ್ತು ಡಿಸೆಂಬರ್ 13, 2024 ರಂದು ನಡೆದ ಆಯಾ ಸಭೆಯಲ್ಲಿ ನಿರ್ದೇಶಕರ ಮಂಡಳಿಯಿಂದ ಅನುಮೋದಿಸಲಾಗಿದೆ.
2. ಮೇಲಿನವು ಎರಡನೇ ತ್ರೈಮಾಸಿಕ ಮತ್ತು ಸೆಪ್ಟೆಂಬರ್ 30, 2024 ಕ್ಕೆ ಅಂತ್ಯಗೊಂಡ ಅರ್ಧ ವರ್ಷದ ತ್ರೈಮಾಸಿಕ ಹಣಕಾಸು ಫಲಿತಾಂಶಗಳ ವಿವರವಾದ ರೂಪದ ಸಾರವಾಗಿದ್ದು, SEBI (ಪಟ್ಟಿ ಮತ್ತು ಇತರ ಬಹಿರಂಗಪಡಿಸುವಿಕೆ ಅಗತ್ಯತೆಗಳು) ನಿಯಮಗಳು 2015 ರ ನಿಯಮಾವಳಿ 33 ರ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ಗಳಿಗೆ ಸಲ್ಲಿಸಲಾಗಿದೆ. ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಲ್ಲಿ ಮತ್ತು ಕಂಪನಿಯ ವೆಬ್‌ಸೈಟ್, www.blackbuck.com ರಲ್ಲಿ ತ್ರೈಮಾಸಿಕ / ಅರ್ಧವಾರ್ಷಿಕ ಹಣಕಾಸು ಫಲಿತಾಂಶಗಳ ಪೂರ್ಣ ರೂಪ ಲಭ್ಯವಿದೆ.
3. ಪ್ರತ್ಯೇಕವಾದ ಹಣಕಾಸಿನ ಮಾಹಿತಿ:

(₹. ಮಿಲಿಯನ್ಸ್‌ಗಳಲ್ಲಿ)

ಕ್ರ ಸಂ.	ವಿವರಗಳು	ತ್ರೈಮಾಸಿಕಕ್ಕೆ ಕೊನೆಗೊಂಡ			ಅರ್ಧವರ್ಷಕ್ಕೆ ಕೊನೆಗೊಂಡ		ವರ್ಷಕ್ಕೆ ಕೊನೆಗೊಂಡ
		30 ಸೆಪ್ಟೆಂಬರ್ 2024	30 ಜೂನ್ 2024	30 ಸೆಪ್ಟೆಂಬರ್ 2023	30 ಸೆಪ್ಟೆಂಬರ್ 2024	30 ಸೆಪ್ಟೆಂಬರ್ 2023	31 ಮಾರ್ಚ್ 2024
		ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ	ಪರಿಶೋಧಿತ
1	ನಿರ್ವಹಣೆಯಿಂದ ಬಂದ ಒಟ್ಟು ವರಮಾನ	1,030.01	974.93	676.98	2,004.94	1,320.57	3,154.03
2	ನಿವ್ವಳ ಲಾಭ / (ನಷ್ಟ) ಅವಧಿಗೆ (ತೆರಿಗೆಯ ಮುಂಚೆ, ವಿನಾಯಿತಿ ಪಡೆದ ಮತ್ತು ವಿಶೇಷ ವಸ್ತುಗಳು)	120.45	63.85	(397.36)	184.30	(733.73)	(1,675.34)
3	ನಿವ್ವಳ ಲಾಭ / (ನಷ್ಟ) ಅವಧಿಗೆ ತೆರಿಗೆಯ ಮುಂಚೆ, (ವಿನಾಯಿತಿ ಪಡೆದ ನಂತರ ಮತ್ತು ವಿಶೇಷ ವಸ್ತುಗಳು)	(3,086.95)	320.08	(397.36)	(2,766.87)	(733.73)	(1,675.34)
4	ನಿವ್ವಳ ಲಾಭ / (ನಷ್ಟ) ಅವಧಿಗೆ ತೆರಿಗೆಯ ನಂತರ, (ವಿನಾಯಿತಿ ಪಡೆದ ನಂತರ ಮತ್ತು ವಿಶೇಷ ವಸ್ತುಗಳು)	(3,086.95)	320.08	(397.36)	(2,766.87)	(733.73)	(1,675.34)
5	ಸಂಪೂರ್ಣ ಸಮಗ್ರ ಅವಧಿಯ ಆದಾಯ [ಒಳಗೊಂಡಿರುವ ಲಾಭ / (ನಷ್ಟ) (ತೆರಿಗೆಯ ನಂತರ) ಅವಧಿಗೆ ಹಾಗೂ ಇತರೆ ಸಮಗ್ರ ಆದಾಯ (ತೆರಿಗೆಯ ನಂತರ)]	(3,081.93)	319.55	(394.64)	(2,762.38)	(730.80)	(1,672.95)
6	ಸಂಪೂರ್ಣ ಸಮಗ್ರ ಅವಧಿಯ ಆದಾಯ [ಒಳಗೊಂಡಿರುವ ಲಾಭ / (ನಷ್ಟ) (ತೆರಿಗೆಯ ನಂತರ) ಅವಧಿಗೆ ಹಾಗೂ ಇತರೆ ಸಮಗ್ರ ಆದಾಯ (ತೆರಿಗೆಯ ನಂತರ)] (ಮುಂದುವರಿಯುವ ಮತ್ತು ಸ್ಥಗಿತಗೊಂಡ ಕಾರ್ಯಾಚರಣೆಗಳು)	(2,692.77)	282.49	(474.34)	(2,410.28)	(836.71)	(1,942.58)

ಝಿಂಕಾ ಲಾಜಿಸ್ಟಿಕ್ಸ್ ಸೊಲ್ಯೂಷನ್ಸ್ ಲಿಮಿಟೆಡ್‌ಗಾಗಿ
ರಾಜೇಶ್ ಕುಮಾರ್ ನಾಯ್ಡು ಯಾಬಾಜಿ
ಸಿಎಂಡಿ ಮತ್ತು ಸಿಇಓ
ಡಿ.ಐ.ಎನ್ : 07096048

ಸ್ಥಳ : ಬೆಂಗಳೂರು
ದಿನಾಂಕ : ಡಿಸೆಂಬರ್ 13, 2024

ಸಿಎಂ ಮಾಧ್ಯಮ ಸಲಹೆಗಾರ ಪ್ರಭಾಕರ್‌ಗೆ ಅಭಿನಂದನೆ

ಬೆಂಗಳೂರು: ಪತ್ರಿಕಾ ವಿತರಕರಿಗಾಗಿ ರೂಪಿಸಲಾಗಿರುವ ಯೋಜನೆಯ ವಯಸ್ಸಿನ ಮಿತಿಯನ್ನು ಹೆಚ್ಚಳ ಮಾಡಿದ್ದಕ್ಕಾಗಿ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅವರನ್ನು ಸಿಎಂ ಗೃಹ ಕಚೇರಿ ಕೃಷ್ಣಾದಲ್ಲಿ ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮತ್ತು ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ಅಧ್ಯಕ್ಷ ಕೆ.ಶಂಭುಲಿಂಗ ಅವರು ಅಭಿನಂದಿಸಿದರು.

ಅಸಂಘಟಿತ ವಲಯದಲ್ಲಿರುವ ಪತ್ರಿಕಾ ವಿತರಕ ಕಾರ್ಮಿಕರಿಗಾಗಿ ಕಾರ್ಮಿಕ ಇಲಾಖೆಯು ರೂಪಿಸಿರುವ ಯೋಜನೆಯ ವಯಸ್ಸಿನ ಮಿತಿಯನ್ನು ಈ ಮೊದಲು 16 ವರ್ಷದಿಂದ 60 ವರ್ಷಕ್ಕೆ ಮಾತ್ರ ಸೀಮಿತ ಮಾಡಲಾಗಿತ್ತು. ಇದರಿಂದ ಸಾವಿರಾರು ಪತ್ರಿಕಾ ವಿತರಕರು ಯೋಜನೆ ಪ್ರಯೋಜನೆ ಪಡೆಯಲಾಗದೆ ಸಮಸ್ಯೆಯಲ್ಲಿರುವುದನ್ನು ಗಮನಕ್ಕೆ ತಂದು ಸರಕಾರಕ್ಕೆ ಮನವಿ ಸಲ್ಲಿಸಲಾಗಿತ್ತು. ಅಪಘಾತ ಪರಿಹಾರ ಮತ್ತು ವೈದ್ಯಕೀಯ ಸೌಲಭ್ಯ ಯೋಜನೆಯ ವಯಸ್ಸಿನ ಮಿತಿ 70 ವರ್ಷಕ್ಕೆ ವಿಸ್ತರಿಸಿ ಸರಕಾರ ಆದೇಶ ಹೊರಡಿಸಿದ್ದು ಸ್ವಾಗತಾರ್ಹ ಎಂದು ಶಿವಾನಂದ ತಗಡೂರು ಅವರು ತಿಳಿಸಿದರು.

ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅವರನ್ನು ಶಿವಾನಂದ ತಗಡೂರು ಮತ್ತು ಕೆ.ಶಂಭುಲಿಂಗ ಅವರು ಅಭಿನಂದಿಸಿದರು. ಪ್ರೆಸ್‌ಕ್ಲಬ್ ಮಾಜಿ ಅಧ್ಯಕ್ಷ ಸದಾಶಿವ ಶೆಣೈ ಉಪಸ್ಥಿತರಿದ್ದರು.

ಪತ್ರಿಕಾ ವಿತರಕರ ಬಗ್ಗೆ ಮುಖ್ಯಮಂತ್ರಿಗಳಿಗೆ ಕಾಳಜಿ ಇದ್ದು, ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲು ಕಾರಣಕರ್ತರಾಗಿದ್ದಾರೆ. ಯೋಜನೆಯಲ್ಲಿ ವಯಸ್ಸಿನ ಮಿತಿ ಸಮಸ್ಯೆ ಆಗುತ್ತಿರುವ ಬಗ್ಗೆ ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘ ಮತ್ತು ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ ತಮಗೆ ಪತ್ರ ಬರೆದು ಗಮನ ಸೆಳೆದಿದ್ದರಿಂದ ಸೂಕ್ತ ಕ್ರಮ ಕೈಗೊಳ್ಳಲಾಗಿದೆ. ಎಲ್ಲಾ ಪತ್ರಿಕಾ ವಿತರಕರಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಸರಕಾರ ಆದೇಶ ಹೊರಡಿಸಿದೆ.
-ಕೆ.ವಿ.ಪ್ರಭಾಕರ್ ಸಿಎಂ ಸಲಹೆಗಾರ

ಪತಿ ಜತೆಯಲ್ಲಿದ್ದೇ 2ನೇ ಮದುವೆಗೆ ಪತ್ನಿ ಯತ್ನ

ವಿವಾಹ ವಿಚ್ಛೇದನಕ್ಕೆ ಹೈಕೋರ್ಟ್ ಅಸ್ತು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮದುವೆಯಾದ ಬಳಿಕ ಗಂಡನ ಮನೆಯಲ್ಲಿದ್ದೇ, ಪದೇ ಪದೇ ನಿಂದಿಸುತ್ತಾ ಎರಡನೇ ಮದುವೆಗೆ ವರನನ್ನು ಹುಡುಕಿಕೊಳ್ಳುತ್ತಿರುವುದಾಗಿ ಸಂದೇಶ ರವಾನಿಸಿ ಗಂಡನೊಂದಿಗೆ ವೈವಾಹಿಕ ಸಂಬಂಧ ಬೆಳೆಸಲು ಮುಂದಾಗದ ಮಹಿಳೆಗೆ ಹೈಕೋರ್ಟ್ ವಿಚ್ಛೇದನಕ್ಕೆ ಅಸ್ತು ಎಂದಿದೆ.

ವಿವಾಹದ ಬಳಿಕ ಆಕಸ್ಮಿಕವಾಗಿ ನಡೆದ ಅಪಘಾತದಲ್ಲಿ ಪತ್ನಿಯ ತಂದೆ ಸಾವನ್ನಪ್ಪಿದ ಪರಿಣಾಮ, ನಿನ್ನನ್ನು ಮದುವೆಯಾದ ಕಾರಣದಿಂದಲೇ ನಮ್ಮ ಕುಟುಂಬಕ್ಕೆ ದುರದೃಷ್ಟ ಎದುರಾಗಿದೆ. ಆದ ಕಾರಣ ನಮ್ಮ ತಂದೆ ಸಾವನ್ನಪ್ಪಿದ್ದಾರೆ ಎಂದು ಆರೋಪಿಸಿ ಅನುಮಾನಪಡುತ್ತಿದ್ದ ಅಂಶಗಳನ್ನು ಪರಿಗಣಿಸಿ ಕೌಟುಂಬಿಕ ನ್ಯಾಯಾಲಯ ಮಂಜೂರು ಮಾಡಿದ್ದ ವಿಚ್ಛೇದನದ ಆದೇಶದಲ್ಲಿ ಮಧ್ಯಪ್ರವೇಶಕ್ಕೆ ಹೈಕೋರ್ಟ್ ನಿರಾಕರಿಸಿದೆ.

ಕೌಟುಂಬಿಕ ನ್ಯಾಯಾಲಯ ಮಂಜೂರು ಮಾಡಿದ್ದ ವಿಚ್ಛೇದನ ಪ್ರಶ್ನಿಸಿ ಬೆಂಗಳೂರಿನ ವಿಜಯನಗರದ ಮಹಿಳೆ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅನು ಶಿವರಾಮನ್ ಮತ್ತು ನ್ಯಾಯಮೂರ್ತಿ ಉಮೇಶ್ ಅಡಿಗ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ.

ಆದೇಶದ ವಿವರ: ಈ ಪ್ರಕರಣದಲ್ಲಿ 2018ರ ಜುಲೈನಿಂದ 2019ರ ನವೆಂಬರ್‌ವರೆಗೆ ಪತ್ನಿ ಕಳುಹಿಸಿರುವ ವಾಟ್ಸ್ ಆ್ಯಪ್ ಸಂದೇಶಗಳನ್ನು ಪತಿ ಹೈಕೋರ್ಟ್‌ಗೆ ಸಲ್ಲಿಸಿದ್ದಾರೆ. ಸಂದೇಶಗಳು ಬರೋಬ್ಬರಿ 127 ಪುಟಗಳಷ್ಟಿದೆ. ಪತಿಯೊಂದಿಗೆ ಜೀವನ ನಡೆಸಲು ಪತ್ನಿಗೆ ಇಚ್ಛೆಯಿಲ್ಲ ಎಂಬುದು ಆಕೆಯ ಸಂದೇಶಗಳಿಂದ ಸ್ಪಷ್ಟವಾಗುತ್ತದೆ. ಒಂದಲ್ಲಾ ಒಂದು ಕಾರಣಕ್ಕೆ ಪತಿ, ಆತನ ಪೋಷಕರು ಮತ್ತು ಹತ್ತಿರದ ಸಂಬಂಧಿಕರನ್ನು ಪತ್ನಿ ದೂರುತ್ತಿದ್ದರು. ಜತೆಗೆ, ತನ್ನ ಕನಸುಗಳನ್ನು ಪತಿ ಕೊಂದಿದ್ದಾರೆ. ವಿಚ್ಛೇದನ ನೀಡಿದರೆ ಇಬ್ಬರು ಸಂತೋಷದಿಂದ ಪ್ರತ್ಯೇಕವಾಗಿ ಜೀವಿಸಬಹುದು ಎಂದು ಪತ್ನಿ ಹೇಳಿದ್ದಾರೆ ಎಂದು ಪೀಠ ತನ್ನ ಆದೇಶದಲ್ಲಿ ವಿವರಿಸಿದೆ.

ಅಲ್ಲದೆ, ತನ್ನ ಅಂತಸ್ತಿಗೆ ತಕ್ಕಂತೆ ಆರತಕ್ಷತೆ ಮಾಡಿಕೊಟ್ಟಿಲ್ಲ ಎಂದು ಮುನಿಸಿಕೊಂಡು ಮದುವೆಯಾಗಿ 7 ವರ್ಷ ಕಳೆದರೂ ವೈವಾಹಿಕ ಜೀವನಕ್ಕೆ ಒಪ್ಪದೇ ದೈಹಿಕ ಹಲ್ಲೆಮಾಡಿ, ಮಾನಸಿಕ ಹಿಂಸೆ ನೀಡಿದ್ದರು. ವಿನಾಃಕಾರಣ ದೂಷಿಸುತ್ತಾ ಬೆಡ್‌ರೂಂನಲ್ಲಿ ಪತಿಯ ಮೇಲೆ ಹಲ್ಲೆ ನಡೆಸಿದ್ದಲ್ಲದೆ, ಬೇರೊಬ್ಬನನ್ನು ವಿವಾಹವಾಗಲು ವಿಚ್ಛೇದನ ನೀಡುವುದು ಸೇರಿದಂತೆ ವಿವಿಧ ರೀತಿಯಲ್ಲಿ 127 ಪುಟಗಳಾಗುವಷ್ಟು ವಾಟ್ಸ್ ಆ್ಯಪ್ ಸಂದೇಶ ಕಳುಹಿಸಿ ಕಿರುಕುಳ ನೀಡಿದ್ದರು. ಅಂತಿಮವಾಗಿ ಪತ್ನಿಯ ಈ ಎಲ್ಲ ಸಂದೇಶಗಳನ್ನು ನೋಡಿದರೆ, ವೈವಾಹಿಕ ಜೀವನ ನಡೆಸಲು ಆಕೆಗೆ ಆಸಕ್ತಿ ಇಲ್ಲ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಅಲ್ಲದೆ, 2017ರಲ್ಲಿ ವೈವಾಹಿಕ ಜೀವನ ನಡೆಸಲು ಪತ್ನಿ ಅವಕಾಶವೇ ನೀಡಿಲ್ಲ. ಇದರಿಂದ ಪತ್ನಿಯಿಂದ ಪತಿ ಕಿರುಕುಳ ಅನುಭವಿಸಿದ್ದಾರೆ. ಇದೀಗ, ಪತಿಗೆ ಕಿರುಕುಳ ನೀಡಲೆಂದೇ ಕೌಟುಂಬಿಕ ನ್ಯಾಯಾಲಯದ ಆದೇಶ ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ ಎಂಬುದು ತಿಳಿಯುತ್ತಿದೆ. ಆದ್ದರಿಂದ ಕೌಟುಂಬಿಕ ನ್ಯಾಯಾಲಯ ವಿವಾಹ ವಿಚ್ಛೇದನ ಮಂಜೂರು ಮಾಡಿರುವ ಆದೇಶದಲ್ಲಿ ಮಧ್ಯಪ್ರವೇಶಿಸಲಾಗುವುದಿಲ್ಲ ಎಂದು ಪೀಠ ಹೇಳಿದೆ.

ಪ್ರಕರಣದ ಹಿನ್ನೆಲೆ

ದಂಪತಿಯ ಪೋಷಕರ ನಿಶ್ಚಯದಂತೆ ಗೀತಾ ಮತ್ತು ಸಂಜು (ಹೆಸರು ಬದಲಿಸಲಾಗಿದೆ) 2017ರ ಸೆ.27ರಂದು ವಿವಾಹವಾಗಿದ್ದರು. ಆದರೆ, 2019ರಲ್ಲಿ ವಿವಾಹ ಅನೂರ್ಜಿತಗೊಳಿಸಿ ವಿಚ್ಛೇದನ ಮಂಜೂರು ಮಾಡುವಂತೆ ಕೋರಿ ಕೌಟುಂಬಿಕ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದ ರಾಮಕೃಷ್ಣ, ಮದುವೆ ನಂತರ ಪತ್ನಿ, ತನ್ನ ಅಂತಸ್ತು ಹಾಗೂ ಕನಸಿಗೆ ತಕ್ಕಂತೆ ಅದ್ದೂರಿಯಾಗಿ ಆರಕ್ಷತೆ ಮಾಡಿಲ್ಲ ಎಂದು ಆಕ್ಷೇಪಿಸಿ ಮೊದಲ ರಾತ್ರಿಗೆ ಒಪ್ಪಿರಲಿಲ್ಲ. ನಂತರ ಒಂದಲ್ಲ ಒಂದು ಕಾರಣ ನೀಡಿ ಅದನ್ನು ಮುಂದೂಡುತ್ತಲೇ ಬಂದರು. ಹಲವು ಕಾರಣ ನೀಡಿ ನನ್ನನ್ನು ನಿಂದಿಸುತ್ತಿದ್ದರು. ಕೆಲ ಸಂದರ್ಭದಲ್ಲಂತೂ ಬೆಡ್‌ರೂಂನಲ್ಲಿ ನನ್ನ ಮೇಲೆ ಹಲ್ಲೆ ಸಹ ಮಾಡಿದ್ದಾರೆ ಎಂದು ಆರೋಪಿಸಿದ್ದರು.

ಸಮಾಚಾರ ಸಣ್ಣದಲ್ಲ

ಕು.ಹಂಸಿನಿ ಕಾರಂತ್ ಭರತನಾಟ್ಯ ರಂಗಪ್ರವೇಶ

ಬೆಂಗಳೂರು: ವೈಟ್ ಫೀಲ್ಡ್‌ನ ಎಂ.ಎಲ್.ಆರ್.ಕನ್ವೆನ್ಷನ್ ಸೆಂಟರ್‌ನಲ್ಲಿ ಡಿ.22ರಂದು ಸಂಜೆ 5.30ಕ್ಕೆ ಕು.ಹಂಸಿನಿ ಕಾರಂತ್‌ರ ಭರತನಾಟ್ಯ ರಂಗಪ್ರವೇಶ ಕಾರ್ಯಕ್ರಮ ನಡೆಯಲಿದೆ. ಮಮತಾ ಕಾರಂತರ ಪುತ್ರಿ ಹಾಗೂ ಶಿಷ್ಯೆಯಾಗಿರುವ ಕು.ಹಂಸಿನಿ ಆಳ್ವಾಸ್ ನುಡಿ ಸಿರಿ, ತಮಿಳು ನಾಡಿನ ಚಿದಂಬ ರಂನಲ್ಲಿ ನಡೆಯುವ 'ನಾಟ್ಯಾಂಜಲಿ' ನೃತ್ಯೋತ್ಸವ, ಗುಜರಾತಿನಲ್ಲಿ ನಡೆಯುವ ಸ್ಪಂದನ ನೃತ್ಯ ಕಾರ್ಯಕ್ರಮದಲ್ಲಿ ಪ್ರದರ್ಶನ ನೀಡಿದ್ದಾರೆ. ಅಲ್ಲದೆ, ಗುರುವಾಯೂರು, ಉಡುಪಿ, ವೆಲ್ಲೋರ್ ಗೋಲ್ಡನ್ ಟೆಂಪಲ್‌ನಲ್ಲೂ ಸಹ ತಮ್ಮ ಪ್ರತಿಭೆ ಪ್ರದರ್ಶಿಸಿದ್ದು, ಶ್ರೀಲಂಕಾ, ನೇಪಾಳದಲ್ಲೂ ನೃತ್ಯಾಸಕ್ತರನ್ನು ರಂಜಿಸಿದ್ದಾರೆ.

ಸರ್ವರ್ ಸಮಸ್ಯೆ: ಜನರ ಪರದಾಟ

ಬೆಂಗಳೂರು: ನಗರದಲ್ಲಿ ಆಸ್ತಿ ಮಾರಾಟ, ಖರೀದಿ ಸೇರಿದಂತೆ ಇತರೆ ಕೆಲಸಗಳಿಗೆ ಇ-ಖಾತಾ ಕಡ್ಡಾಯವಾಗಿದ್ದು, ಹಲವು ಕಡೆಗಳಲ್ಲಿ ಅವಕಾಶ ನೀಡಲಾಗಿದ್ದರೂ ಕೂಡಾ ಇ-ಖಾತಾ ಮಾಡಲಾಗದೆ ಜನರು ಸಮಸ್ಯೆ ಅನುಭವಿಸುವಂತಾಗಿದೆ. ಇ-ಖಾತಾ ಪಡೆಯಲು ಪ್ರತಿ ವಾರ್ಡ್‌ನ ಪಾಲಿಕೆಗಳ ಕಚೇರಿಗಳಲ್ಲಿ, ಬೆಂಗಳೂರು ಒನ್ ಕೇಂದ್ರಗಳಲ್ಲಿ ಇ-ಖಾತಾ ಪಡೆಯಲು ಅವಕಾಶ ನೀಡಿದ್ದರೂ ಜನರಿಗೆ ಮಾತ್ರ ಸಮಸ್ಯೆ ತಪ್ಪದಂತಾಗಿದೆ. ದಾಖಲೆಗಳು ಸರಿಯಿದ್ದರೆ ಸರ್ವರ್ ಸಮಸ್ಯೆ, ಸರ್ವರ್ ಸರಿಯಿದ್ದರೆ ದಾಖಲೆ ಲ್ಲ ಎನ್ನುವ ಸಂದಿಗ್ಧ ಪರಿಸ್ಥಿತಿಗೆ ಜನರು ಇ-ಖಾತಾ ಪಡೆಯಲು ಪರದಾಡುವಂತಾಗಿದೆ. ಕೃಷಿ ಭೂಮಿಯಿಂದ ಪರಿವರ್ತನೆಯಾದ ಜಾಗಗಳು, ಬಿಡಿಎ ಸ್ವಾಧೀನ ಬಳಿಕ ಕೈಬಿಟ್ಟ ಜಾಗಗಳು, ಎ ಖಾತಾ, ಬಿ ಖಾತಾ ಪಡೆಯುವಾಗ ಮ್ಯಾನುವಲ್ ಇದ್ದಿದ್ದರಿಂದ ಕೆಲ ದಾಖಲೆಗಳು ಇಲ್ಲದಿದ್ದರೂ ಖಾತಾ ಲಭ್ಯವಾಗಿದೆ. ಆದರೆ, ಇದೀಗ ಇ-ಖಾತಾ ಮಾಡಿಸಲು ಕೆಲ ದಾಖಲೆಗಳು ಸೂಕ್ತ ರೀತಿಯಲ್ಲಿ ಒದಗಿಸಲು ಆಗದಿರುವುದರಿಂದ ಜನರಿಗೆ ಸಂಕಷ್ಟವಾಗಿದೆ. ಕಟ್ಟಡ ಮಂಜೂರು ನಕ್ಷೆಯೂ ಕೂಡ ಹಲವು ಮಾಲೀಕರ ಬಳಿ ಇಲ್ಲದಿರುವುದು ಕೂಡ ಸಮಸ್ಯೆಗೆ ಕಾರಣವಾಗಿದೆ. ಇ-ಖಾತಾ ಪಡೆಯಲು ಇನ್ನೂ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಇ-ಖಾತಾ ಪಡೆಯಲು ಹೋದರೆ ಅಧಿಕಾರಿಗಳು ನಿರ್ಲಕ್ಷ್ಯ ತೋರುತ್ತಿದ್ದಾರೆ ಎಂಬ ಆರೋಪ ಕೂಡ ಕೇಳಿಬರುತ್ತಿದೆ.

ಆದಾಯಕ್ಕಿಂತ, ವೆಚ್ಚವೇ ಹೆಚ್ಚಾಗಿದೆ ಎನ್ನುವ ಅಂಶ ಬಹಿರಂಗ | ಬಿಎಂಟಿಸಿಗೆ ಬೇಕಿದೆ ಸರಕಾರದ ಬೃಹತ್ ಬಂಡವಾಳ ಹೂಡಿಕೆ

ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ ಬಿಎಂಟಿಸಿ ಹೊರೆ

ಅಪರ್ಣಾ ಎ.ಎಸ್. ಬೆಂಗಳೂರು

ವಿಶ್ವವಾಣಿ ವಿಶೇಷ

ಬೆಂಗಳೂರಿಗರ ಸಾರಿಗೆಯ ಜೀವನಾಡಿಯಾದ ಬಿಎಂಟಿಸಿಯ ಆರ್ಥಿಕ ಸ್ಥಿತಿಯು ದಿನದಿಂದ ದಿನಕ್ಕೆ ಕುಂಠಿತವಾಗುತ್ತಿದೆ. ಈ ಬೆಳವಣಿಗೆಯು ಅಪಾಯಕಾರಿಯಾಗಿದ್ದು ರಾಜ್ಯ ಸರಕಾರ ಈ ಕುರಿತು ಗಂಭೀರವಾಗಿ ಪರಿಗಣಿಸುವ ಅಗತ್ಯವಿದೆ ಎಂದು ಸಿಎಜಿ ವರದಿಯು ಎಚ್ಚರಿಕೆ ನೀಡಿದೆ.

ಅಧಿವೇಶನದಲ್ಲಿ ಮಂಡನೆಯಾದ 2017ರಿಂದ 2022ರವರೆಗೆ ಬಿಎಂಟಿಸಿ ಕಾರ್ಯನಿರ್ವಹಣೆ ಹಾಗೂ ಕಾರ್ಯಕ್ಷಮತೆಯ ಲೆಕ್ಕ ಪರಿಶೋಧನೆಯಲ್ಲಿ, ವರ್ಷದಿಂದ ವರ್ಷಕ್ಕೆ ಬಿಎಂಟಿಸಿಯ ವೆಚ್ಚ ಹಾಗೂ ಆದಾಯದಲ್ಲಿ ಅಂತರ ಹೆಚ್ಚಾಗುತ್ತಿದ್ದು, ಇದನ್ನು ಸರಕಾರವು ಗಂಭೀರವಾಗಿ ಪರಿಗಣಿಸಬೇಕು ಎಂದು ವರದಿ ಹೇಳಿದ್ದು, ಒಂದು ಕಡೆಯಲ್ಲಿ ಬಿಎಂಟಿಸಿ ನಿಗಮದ ವೆಚ್ಚ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದ್ದರೆ, ಇನ್ನೊಂದುನ ಕಡೆಯಲ್ಲಿ ಆದಾಯದಲ್ಲಿಯೂ ಭಾರೀ ಪ್ರಮಾಣದ ಬದಲಾವಣೆಯೂ ಕಂಡು ಬರುತ್ತಿಲ್ಲ. ಆದರಲ್ಲೂ ಕರೋನಾದ ಸಂದರ್ಭದಲ್ಲಿ ಡಿಪೋದಿಂದ ಹೊರಗೆ ಬಾರದ ಬಸ್‌ಗಳಿಂದಲೂ ಭಾರೀ ಪ್ರಮಾಣದಲ್ಲಿ ನಷ್ಟವುಂಟಾಗಿದೆ ಎನ್ನುವ ಅಂಶವೂ ಈ ವೇಳೆ ಬಹಿರಂಗವಾಗಿದೆ.

ಈ ವರದಿಯನ್ನು 2021-2022ರ ಆರ್ಥಿಕ ವರ್ಷದವರೆಗೆ ಮಾಡಲಾಗಿದೆ. ಆದರೆ 2022-23 ಹಾಗೂ 2023-24ರ ಆರ್ಥಿಕ ವರ್ಷದಲ್ಲಿ ಆದಾಯ ಪ್ರಮಾಣ ಬಹುದೊಡ್ಡ ಪ್ರಮಾಣದಲ್ಲಿ ವೃದ್ಧಿಯಾಗಿದೆ. ಇದರೊಂದಿಗೆ ರಾಜ್ಯ ಸರಕಾರದ ಶಕ್ತಿ ಯೋಜನೆಯಿಂದ ಬಿಎಂಟಿಸಿಗೆ ಸರಕಾರದಿಂದ ಬರಬೇಕಿರುವ ಅನುದಾನ ಹೆಚ್ಚಳವಾಗಿದೆ. ಆದರೂ ಕೂಡಾ ಆದಾಯ-ವೆಚ್ಚ ಸರಿದೂಗಿಸಲು ಮಾತ್ರ ಬಿಎಂಟಿಸಿಗೆ ಸಾಧ್ಯವಾಗುತ್ತಿಲ್ಲ ಎನ್ನುವುದು ಅಧಿಕಾರಿಗಳ ಮಾತಾಗಿದೆ. ಆದ್ದರಿಂದ ಸಿಎಜಿ ವರದಿಯಲ್ಲಿರುವ ಶಿಫಾರಸ್ಸಿನಂತೆ ಸರಕಾರವೇ ನಿಗಮದ ಮಂಡಳಿಯ ನೆರವಿಗೆ ಬರುವುದು ಅನಿರ್ವಾಯವಾಗಿದೆ.

ಕರೋನಾದಿಂದ ತೀವ್ರ ಸಂಕಷ್ಟಕ್ಕೆ: ಸಿಎಜಿ ವರದಿಯಲ್ಲಿರುವ ಅಂಕಿ-ಅಂಶದ ಪ್ರಕಾರ ಕರೋನಾ ಕಾಲಿಡುವ ಮೊದಲು ಆದಾಯ ಹಾಗೂ ವೆಚ್ಚದ ಅನುಪಾತ ಶೇ.130ರಿಂದ 142ರ ಆಸುಪಾಸಿನಲ್ಲಿತ್ತು. ಆದರೆ ಕರೋನಾದಿಂದಾಗಿ ಸುಮಾರು ಎರಡು ವರ್ಷಗಳ ಕಾಲ ಬಿಎಂಟಿಸಿ ಸಂಪೂರ್ಣ ಸ್ಥಗಿತಗೊಂಡಿದ್ದರಿಂದ ಆದಾಯ ಹಾಗೂ ವೆಚ್ಚದ ನಡುವಿನ ಅನುಪಾನ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ ಎನ್ನುವುದು ಸ್ಪಷ್ಟವಾಗಿದೆ. ಕರೋನಾ ಸಮಯದಲ್ಲಿ ಬಿಎಂಟಿಸಿ ಬಸ್‌ಗಳು ಸಂಚಾರ ನಡೆಸದಿದ್ದರೂ, ನೌಕರರಿಗೆ ಪೂರ್ಣ ವೇತನ ನೀಡಲಾಗಿದೆ.

ಆದರೆ ಬಿಎಂಟಿಸಿ ಆದಾಯದ ಮೂಲವಾಗಿರುವ ಟಿಕೆಟ್ ಸಂಗ್ರಹಣೆ ಸಂಪೂರ್ಣ ಕುಸಿದು ಹೋಗಿತ್ತು. ಇದರಿಂದಾಗಿ ಆದಾಯ ಹಾಗೂ ವೆಚ್ಚದ ಅನುದಾನ 230ರ ಗಡಿ ದಾಟಿದೆ ಎನ್ನಲಾಗಿದೆ.

ಬಿಎಂಟಿಸಿಗೆ ಟಿಕೆಟ್ ಮಾರಾಟದಿಂದ ಶೇ.64ರಷ್ಟು ಅನುದಾನ ಬಂದರೆ, ಕರ್ನಾಟಕ ಸರಕಾರದ ವಿವಿಧ ಯೋಜನೆಗಳ ಹಣ ಪಾವತಿ ಸೇರಿದಂತೆ ವಿವಿಧ ಕಾರಣಗಳಿಗೆ ಶೇ.21ರಷ್ಟು ಆದಾಯ ಬರಲಿದೆ. ಇನ್ನುಳಿದಂತೆ ಪಾಸ್, ಬಾಡಿಗೆ, ಜಾಹೀರಾತು ಸೇರಿದಂತೆ ವಿವಿಧ ಮೂಲಗಳಿಂದ ಶೇ.15ರಷ್ಟು ಅನುದಾನ ಮಾತ್ರ ಬರಲಿದೆ. ಆದರೆ ಕರೋನಾ ಸಮಯದಲ್ಲಿ ಟಿಕೆಟ್‌ನಿಂದ ಬರಬೇಕಿರುವ ಆದಾಯ ಶೂನ್ಯಕ್ಕೆ ಇಳಿದಿದ್ದರೆ, ಸರಕಾರದಿಂದ ವೇತನ ನೀಡಲು ಮಾತ್ರ ಅನುದಾನ ನೀಡುವ ಸ್ಥಿತಿಯುಂಟಾಗಿತ್ತು. ಹೀಗಾಗಿ ಬಿಎಂಟಿಸಿ ಇಂದು ಈ ಪರಿಸ್ಥಿತಿ ತಲುಪಿದೆ. ಈ ನಷ್ಟದ ಹೊರೆಯಿಂದ ಹೊರಬರಲು ಸರಕಾರದ ಸಹಾಯ ಬಹುದೊಡ್ಡ ಮಟ್ಟದಲ್ಲಿಯೇ ಬಿಎಂಟಿಸಿಗಿದೆ ಎಂದು ಸಿಎಜಿ ವರದಿಯಲ್ಲಿ ಉಲ್ಲೇಖಿಸಿದೆ.

- ಬಿಎಂಟಿಸಿ ಸಾರ್ವಜನಿಕ ಸಾರಿಗೆಯಾಗಿರುವುದರಿಂದ, ಸರಕಾರದಿಂದ ಆರ್ಥಿಕ ಸಹಾಯ ಅಗತ್ಯ
- ಆರ್ಥಿಕ ಸುಸ್ಥಿರತೆ ಕಾಪಾಡಿಕೊಳ್ಳಲು, ನಿಯಮಿತ ಅನುದಾನ ಹಾಗೂ ಹೂಡಿಕೆ ಮಾಡುವುದು ಅನಿರ್ವಾಯ
- ರಿಯಾಯಿತಿ ಬಸ್ ಪಾಸ್‌ಗಳ ಬಾಕಿ ಹಣವನ್ನು ಕೂಡಲೇ ಬಿಡುಗಡೆಗೊಳಿಸಬೇಕು
- ಮುಂದಿನ ದಿನದಲ್ಲಿ ರಿಯಾಯಿತಿ ಬಸ್ ಪಾಸ್ ಸೇರಿದಂತೆ ಸರಕಾರದಿಂದ ಬರಬೇಕಿರುವ ಅನುದಾನವನ್ನು ಕಾಲಕಾಲಕ್ಕೆ ನೀಡಬೇಕು.

ವೆಚ್ಚ ಹೆಚ್ಚಲು ಕಾರಣವೇನು?

ಬಿಎಂಟಿಸಿಯಲ್ಲಿನ ಆದಾಯ ಸರಿಸುಮಾರು ಒಂದೇ ರೀತಿಯಲ್ಲಿದ್ದರೂ, ವೆಚ್ಚ ಮಾತ್ರ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಇದಕ್ಕೆ ತೈಲ ದರ ಏರಿಕೆ, ಯಂತ್ರೋಪಕರಣಗಳ ದರ ಏರಿಕೆ ಕಾರಣದಿಂದ ವೆಚ್ಚ ಹೆಚ್ಚಳವಾದರೂ, ಪ್ರಯಾಣಿಕರ ಸಂಖ್ಯೆಯಲ್ಲಿ ಬಹುದೊಡ್ಡ ಪ್ರಮಾಣದ ಬದಲಾವಣೆಯಾಗಿಲ್ಲ ಹಾಗೂ ವಿವಿಧ ಕಾರಣಕ್ಕೆದರ ಏರಿಕೆಗೂ ಹೆಚ್ಚಿನ ಅವಕಾಶವಿಲ್ಲದಿರುವುದು ಈ ಸಮಸ್ಯೆಗೆ ಕಾರಣವಾಗಿದೆ. ಇದರೊಂದಿಗೆ ಸಿಬ್ಬಂದಿಗಳ ವೇತನ ಪರಿಷ್ಕರಣೆ, ನಿವೃತ್ತಿಯಾದ ಸಿಬ್ಬಂದಿಗಳಿಗೆ ನೀಡಬೇಕಿರುವ ಮೊತ್ತವೆಲ್ಲ ಹೆಚ್ಚಳವಾಗಿದೆ ಎನ್ನಲಾಗಿದೆ.

ವರ್ಷವಾರು ಲೆಕ್ಕಾಚಾರ (ಕೋಟಿಗಳಲ್ಲಿ)

ಆರ್ಥಿಕ ವರ್ಷ	ಕಾರ್ಯಾಚರಣೆಯ ಆದಾಯ	ಕಾರ್ಯಾಚರಣೆ ವೆಚ್ಚ	ಅನುಪಾತ
2017-18	1764.70	2357.55	133.59
2018-19	1838.85	2583.22	140.48
2019-20	1807	2580.87	142.83
2020-21	699.79	1916	273.93
2021-22	922.49	2053	222.62

ಯಾವುದಕ್ಕೆ ಎಷ್ಟು ವೆಚ್ಚ?

ವೆಚ್ಚ	ಶೇ. ಅನುದಾನ
ಸಿಬ್ಬಂದಿ ನಿರ್ವಹಣೆ	ಶೇ.60
ಇಂಧನ, ಲೂಬ್ರಿಕೆಂಟ್	ಶೇ.27
ಸವಕಳಿ	ಶೇ.4
ದುರಸ್ಥಿ ಹಾಗೂ ನಿರ್ವಹಣೆ ಶೇ.4	
ಇತರೆ ವೆಚ್ಚ	ಶೇ.5

ಜಾಗತಿಕ ಯೋಗ ಶೃಂಗಸಭೆಗೆ ಚಾಲನೆ

ಬೆಂಗಳೂರು: ಎರಡು ದಿನಗಳ ಜಾಗತಿಕ ಯೋಗ ಶೃಂಗಸಭೆಗೆ ಕೃಷಿ ವಿಶ್ವವಿದ್ಯಾಲಯ(ಜಿಕೆವಿಕೆ)ದಲ್ಲಿ ಶನಿವಾರ ಚಾಲನೆ ನೀಡಲಾಯಿತು

ರೋಟರಿ ಬೆಂಗಳೂರು ಗ್ಲೋಬಲ್ ಯೋಗ ಕ್ಲಬ್, ಸ್ವಾಮಿ ವಿವೇಕಾನಂದ ಯೋಗ ರಿಸರ್ಚ್ ಅಂಡ್ ಹೋಲಿಸ್ಟಿಕ್ ಹೆಲ್ತ್ ಟ್ರಸ್ಟ್ ಹಾಗೂ ಅಮೆರಿಕದ ಯೋಗ ವಿಶ್ವವಿದ್ಯಾಲಯ, ಮಿಯಾಮಿ, ಫ್ಲೋರಿಡಾ ಸಹಯೋಗದಲ್ಲಿ ನಡೆದ ಉದ್ಘಾಟನಾ ಸಮಾರಂಭದಲ್ಲಿ ಮೇಘಾಲಯದ ರಾಜ್ಯಪಾಲ ಸಿ.ಎಚ್.ವಿಜಯಶಂಕರ್, ಯುವ ಇಂಟರ್‌ನ್ಯಾಷನಲ್ ಸ್ಕಾಲರ್ ಕುಲಪತಿ ಡಾ. ಅರಳುಮಲ್ಲಿಗೆ ಪಾರ್ಥಸಾರಥಿ, ಆರ್‌ಬಿಜಿವೈ ಚಾರ್ಟರ್ ಅಧ್ಯಕ್ಷ ಮತ್ತು ಜಿವೈಎಸ್ ಅಧ್ಯಕ್ಷ ಡಾ. ಯೋಗಿ ದೇವರಾಜ್ ಸೇರಿದಂತೆ ಹಲವಾರು ಗಣ್ಯರು ಭಾಗವಹಿಸಿದ್ದರು.

ಅನುಭವ ಹಂಚಿಕೆಗೆ ವೇದಿಕೆ: ಎರಡು ದಿನಗಳ ಶೃಂಗಸಭೆಯು ಯೋಗ ಆಕಾಂಕ್ಷಿಗಳು ಮತ್ತು ಆಯುಷ್ ತಜ್ಞರಿಗೆ ಸಮಾಜದ ಸುಧಾರಣೆಗಾಗಿ ತಮ್ಮ ಅಭಿಪ್ರಾಯಗಳು ಮತ್ತು ಅನುಭವಗಳನ್ನು ಹಂಚಿಕೊಳ್ಳಲು ಜಾಗತಿಕ ವೇದಿಕೆಯನ್ನು ಒದಗಿಸುತ್ತದೆ. ಈ ವರ್ಷ ಜಾಗತಿಕ ಯೋಗ ಶೃಂಗಸಭೆಯಲ್ಲಿ 50 ದೇಶಗಳ 60 ಕ್ಕೂ ಹೆಚ್ಚು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವೈದ್ಯರು, ವಿಶ್ವದಾದ್ಯಂತದ ಯೋಗ ಗುರುಗಳು, ವೈದಿಕ ತಜ್ಞರು, ಶಿಕ್ಷಣ ತಜ್ಞರು ಮತ್ತು ಯೋಗ ಉತ್ಸಾಹಿಗಳು ಭಾಗವಹಿಸಿದ್ದರು.ಈ ಕಾರ್ಯಕ್ರಮವನ್ನು ಭಾರತ ಸರಕಾರದ ಆಯುಷ್ ಸಚಿವಾಲಯ ಬೆಂಬಲಿಸಿದ್ದು ಇದು ಸಂಪ್ರದಾಯ ಮತ್ತು ನಾವೀನ್ಯತೆಯ ಮಿಶ್ರಣ ಖಚಿತಪಡಿಸುತ್ತದೆ.

ಜಿಕೆವಿಕೆಯಲ್ಲಿ ಶನಿವಾರ ಆರಂಭಗೊಂಡ ಜಾಗತಿಕ ಯೋಗಶೃಂಗಸಭೆಯಲ್ಲಿ ತಂಬಿಹಳ್ಳಿ ಮಠದ ಹಿರಿಯ ಶ್ರೀಗಳಾದ ವಿದ್ಯಾಸಾಗರ ಮಾಧವ ತೀರ್ಥರಿಗೆ ಡಾಕ್ಟರೇಟ್ ಪ್ರದಾನ ಮಾಡಲಾಯಿತು. ಮಠದ ಉತ್ತರಾಧಿಕಾರಿಗಳಾದ ವಿದ್ಯಾವಲ್ಲಭ ಮಾಧವ ತೀರ್ಥರು, ಹೆಸರಾಂತ ಚಿಂತಕ ಅರಳುಮಲ್ಲಿಗೆ ಪಾರ್ಥಸಾರಥಿ, ಯೋಗಿ ದೇವರಾಜ್ ಮೊದಲಾದವರು ಇದ್ದರು.

ಅಂತಾರಾಷ್ಟ್ರೀಯ ಪೂರ್ಣ ಅಧಿವೇಶನ

ಉದ್ಘಾಟನಾ ಅಧಿವೇಶನದ ನಂತರ ತ್ರಿಯೋಗ ಸಂಸ್ಥಾಪಕಿ ಯೋಗಿನಿ ಕಾಳಿ ಅವರ ನೇತೃತ್ವದಲ್ಲಿ ನಡೆದ ಅಂತರಾಷ್ಟ್ರೀಯ ಪೂರ್ಣ ಅಧಿವೇಶನದಲ್ಲಿ ಫ್ರಾನ್ಸ್, ಇಂಗ್ಲೆಂಡ್, ಬಹ್ರೇನ್, ಆಸ್ಟ್ರೇಲಿಯಾ, ಡೆನ್ಮಾರ್ಕ್, ಬೆಲ್ಜಿಯಂ, ಹಾಂಗ್‌ಕಾಂಗ್, ರಷ್ಯಾ, ಮಲೇಷ್ಯಾ, ಇಂಡೋನೇಷ್ಯಾ, ನೇಪಾಳ ಮತ್ತು ಇತರ ದೇಶಗಳ ಯೋಗ ಸಂಶೋಧಕರು ಮತ್ತು ವಿದ್ವಾಂಸರು ಭಾಗವಹಿಸಿದ್ದರು.

ಜಾಗತಿಕ ಯೋಗ ಶೃಂಗಸಭೆ 2024 ವೈದಿಕ ಪಠಣದೊಂದಿಗೆ ಪ್ರಾರಂಭವಾಯಿತು, ನಂತರ ಸಾಮೂಹಿಕ ಅಗ್ನಿಹೋತ್ರ ನಡೆಯಿತು. ಶೃಂಗಸಭೆಯ ಮೊದಲ ದಿನ ಯೋಗ ಮತ್ತು ಸಮಗ್ರ ಆರೋಗ್ಯದ ಬಗ್ಗೆ ಅನೇಕ ಆಸಕ್ತಿದಾಯಕ ತಾಂತ್ರಿಕ ಮತ್ತು ಪ್ರಾಯೋಗಿಕ ಅಧಿವೇಶನಗಳು ನಡೆದವು. ಅನೇಕ ಅಂತರರಾಷ್ಟ್ರೀಯ ಯೋಗ ಸಂಶೋಧಕರು ಮತ್ತು ವಿದ್ವಾಂಸರು ತಮ್ಮ ಸಂಶೋಧನಾ ಸಂಶೋಧನೆಗಳನ್ನು ನೆರೆದವರ ಮುಂದೆ ಪ್ರಸ್ತುತಪಡಿಸಿದರು.

ಪರಿವರ್ತನಾತ್ಮಕ ಆಂದೋಲನ

ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಜಿವೈಎಸ್ 2024 ರ ಅಧ್ಯಕ್ಷ ಡಾ.ಯೋಗಿ ದೇವರಾಜ್, ಇದು ಶೃಂಗಸಭೆಗಿಂತ ಹೆಚ್ಚಿನದು. ಇದು ಪರಿವರ್ತನಾತ್ಮಕ ಆಂದೋಲನವಾಗಿದೆ. ಜಾಗತಿಕ ಯೋಗ ಶೃಂಗಸಭೆಯು ಯೋಗಾಭ್ಯಾಸಿಗಳು, ಸಂಶೋಧಕರು ಮತ್ತು ವೃತ್ತಿಪರರಿಗೆ ಒಗ್ಗೂಡಲು ಮತ್ತು ಆವಿಷ್ಕಾರ ಮಾಡಲು ಕ್ರಿಯಾತ್ಮಕ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ. ಇಂದಿನ ವೇಗದ, ಆಧುನಿಕ ಜಗತ್ತಿನಲ್ಲಿ ಯೋಗವನ್ನು ಹೆಚ್ಚು ಪ್ರವೇಶಿಸಬಹುದಾದ, ಸುಸ್ಥಿರ ಮತ್ತು ಪರಿಣಾಮಕಾರಿಯನ್ನಾಗಿ ಮಾಡುವುದು ನಮ್ಮ ಧ್ಯೇಯವಾಗಿದೆ. ಜಾಗೃತಿಯನ್ನು ಬೆಳೆಸುವ ಮೂಲಕ, ಯೋಗವು ಮಾನಸಿಕ ಯೋಗಕ್ಷೇಮ ಹೇಗೆ ಕ್ರಾಂತಿಕಾರಿಗೊಳಿಸುತ್ತದೆ, ಪ್ರಜ್ಞಾಪೂರ್ವಕ ಜೀವನಶೈಲಿ ಉತ್ತೇಜಿಸುತ್ತದೆ ಮತ್ತು ಅರ್ಥಪೂರ್ಣ ವೃತ್ತಿ ಅವಕಾಶಗಳಿಗೆ ಬಾಗಿಲು ತೆರೆಯುತ್ತದೆ ಎಂಬುದನ್ನು ತೋರಿಸುವ ಗುರಿಯನ್ನು ನಾವು ಹೊಂದಿದ್ದೇವೆ ಎಂದರು.

ಹೃದಯಾಘಾತದಿಂದ ಕಬಡ್ಡಿ ಆಟಗಾರ ಸಾವು

ಹೆಬ್ರಿ: ರಾಜ್ಯಮಟ್ಟದ ಕಬಡ್ಡಿ ಆಟಗಾರ ಹೆಬ್ರಿ ತಾಲ್ಲೂಕಿನ ಮುನಿಯಾಲು ಮುಟ್ಲುಪಾಡಿ ನಡುಮನೆಯ ಪ್ರೀತಂ ಶೆಟ್ಟಿ(26) ಅವರು

ಶುಕ್ರವಾರ ರಾತ್ರಿ ಹೃದಯಾಘಾತದಿಂದ ಮೃತಪಟ್ಟಿದ್ದಾರೆ. ಮಂಡ್ಯದ ನಾಗಮಂಗಲ ಡಿದಲ್ಲಿ ಶುಕ್ರವಾರ ನಡೆದ ಕಬಡ್ಡಿ ಪಂದ್ಯಾವಳಿಯಲ್ಲಿ ಶೆಟ್ಟಿ ಭಾಗವಹಿಸಿದ್ದರು. ಆಟ ಆರಂಭಿಸಿದ ಕೆಲ ಕ್ಷಣಗಳಲ್ಲಿ ಎದೆನೋವು ಕಾಣಿಸಿಕೊಂಡು ಅವರು ಅಲ್ಲೇ ಕುಸಿದು ಬಿದ್ದಿದ್ದರು. ಸಹ ಆಟಗಾರರು ಆಸ್ಪತ್ರೆಗೆ ಕರೆದೊಯ್ಯುವಷ್ಟರಲ್ಲಿ ಮೃತಪಟ್ಟಿದ್ದಾರೆ. ಉದ್ಯೋಗಕ್ಕಾಗಿ ಕೆಲವೇ ದಿನಗಳಲ್ಲಿ ವಿದೇಶಕ್ಕೆ ತೆರಳಲು ಪ್ರೀತಂ ಶೆಟ್ಟಿ ಸಿದ್ಧತೆ ನಡೆಸಿದ್ದರು. ಅವರಿಗೆ ತಾಯಿ ಮತ್ತು ಸಹೋದರ ಇದ್ದಾರೆ.

ಬಾಲಕನಿಂದ ಅಪಘಾತ: ತಂದೆಗೆ ದಂಡ

ಹಾವೇರಿ: ಅಪಘಾತ ಪ್ರಕರಣದಲ್ಲಿ ಅಪ್ರಾಪ್ತ ವಯಸ್ಸಿನ ಮಗನಿಗೆ ಬೈಕ್ ನೀಡಿದ್ದಕ್ಕಾಗಿ ರಾಣೆಬೆನ್ನೂರು ಜೆಎಮ್‌ಎಫ್‌ಸಿ ನ್ಯಾಯಾಲಯ ತಂದೆಗೆ 27 ಸಾವಿರ ರು. ದಂಡ ವಿಧಿಸಿದೆ. ಕಳೆದ ಜುಲೈ 30ರಂದು ರಾಣೆಬೆನ್ನೂರಿನ ಹಲಗೇರಿ ಕ್ರಾಸ್ ಬಳಿ ಬೈಕ್ ಅಪಘಾತ ವಾಗಿತ್ತು. ಜಾಕಿರ್ ಜಮಾಲುದ್ದೀನ್ ಕಮದೋಡ ಎಂಬ ವ್ಯಕ್ತಿ

ಗಾಯಗೊಂಡಿದ್ದು, ಪ್ರಕರಣ ದಾಖಲಾಗಿತ್ತು. ರಾಣೆಬೆನ್ನೂರಿನ ದಿಳ್ಳೆಪ್ಪ ಕಾಟೆ ತನ್ನ ಅಪ್ರಾಪ್ತ ವಯಸ್ಸಿನ ಮಗನಿಗೆ ಬೈಕ್ ನೀಡಿದ್ದು ಅಪಘಾತಕ್ಕೆ ಕಾರಣವಾಗಿತ್ತು.ಹೀಗಾಗಿ ಬಾಲಕನಿಗೆ ಬೈಕ್ ನೀಡಿದ ತಂದೆಗೆ ರಾಣೆಬೆನ್ನೂರು ಸ್ಥಳೀಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಮ್‌ಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶರು 27,000 ರು. ದಂಡ ವಿಧಿಸಿದ್ದಾರೆ. ಘಟನೆಯ ಕುರಿತು ರಾಣೆಬೆನ್ನೂರು ಸಂಚಾರಿ ಪೊಲೀಸ್ ಠಾಣೆಯಲ್ಲಿ ದಿಳ್ಳೆಪ್ಪ ಕಾಟೆ ವಿರುದ್ಧ ದೂರು ದಾಖಲಾಗಿತ್ತು. ಪ್ರಕರಣದ ವಿಚಾರಣೆ ನಡೆಸಿದ ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಮ್‌ಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶರು ಬೈಕ್ ಮಾಲೀಕ ತಪ್ಪಿತಸ್ಥ ಎಂದು ತೀರ್ಪು ಪ್ರಕಟಿಸಿದ್ದಾರೆ.

ಬಾಣಂತಿಯರ ಸಾವು ನಾಳೆ ಬಿಜೆಪಿ ಪ್ರತಿಭಟನೆ

ಬೆಳಗಾವಿ : ಬಳ್ಳಾರಿ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ಬಾಣಂತಿಯರು ಹಾಗೂ ನವಜಾತ ಶಿಶುಗಳು ಮರಣ ಖಂಡಿಸಿ ಡಿ. 16 ರಂದು ಬೆಳಗಾವಿಯ ಮಾಲಿನಿ ಸಿಟಿಯಲ್ಲಿ ಬೃಹತ್ ಪ್ರತಿಭಟನಾ ಸಮಾವೇಶವನ್ನು ಬಿಜೆಪಿ ಆಯೋಜಿಸಿದೆ. ಈ ಸಮಾವೇಶದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ. ವೈ ವಿಜಯೇಂದ್ರ, ವಿರೋಧ ಪಕ್ಷದ ನಾಯಕ ಆರ್. ಅಶೋಕ, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಚಲವಾದಿ ನಾರಾಯಣಸ್ವಾಮಿ ಮೊದಲಾದ ನಾಯಕರು ಭಾಗವಹಿಸಲಿದ್ದಾರೆ. ಸಮಾವೇಶದ ನಂತರ ಸುವರ್ಣಸೌಧ ಮುತ್ತಿಗೆ ಹಾಕಲಾಗುವುದು ಎಂದು ಸಂಘಟಕರು ಮಾಹಿತಿ ನೀಡಿದ್ದಾರೆ.

ಇ-ಖಾತಾ ವಿರುದ್ಧ ಹೈಕೋರ್ಟ್‌ಗೆ ಅರ್ಜಿ

ಬೆಂಗಳೂರು: ಎಲ್ಲ ಬಗೆಯ ಆಸ್ತಿಗಳ ನೋಂದಣಿಗೆ ಇ-ಖಾತಾ ಕಡ್ಡಾಯಗೊಳಿಸುವುದನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ವಿವರಣೆ ನೀಡುವಂತೆ ಹೈಕೋರ್ಟ್ ಸರಕಾರಕ್ಕೆ ಸೂಚನೆ ನೀಡಿದೆ. ಬೆಂಗಳೂರು ನಿವಾಸಿ ಎಸ್.ಗೌರಿಶಂಕರ್ ಎಂಬುವರು ಸಲ್ಲಿಸಿರುವ ಪಿಐಎಲ್ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೆ.ವಿ.ಅರವಿಂದ್ ಅವರಿದ್ದ ವಿಭಾಗೀಯ ನ್ಯಾಯಪೀಠ, ಅರ್ಜಿಯ ಕುರಿತು ವಿವರಣೆ ನೀಡುವಂತೆ ಸರಕಾರದ ಪರ ವಕೀಲರಿಗೆ ಸೂಚಿಸಿ ವಿಚಾರಣೆ ಫೆಬ್ರವರಿ 3ಕ್ಕೆ ಮುಂದೂಡಿತು. ವಿಚಾರಣೆ ವೇಳೆ ಅರ್ಜಿದಾರರೇ ಖುದ್ದು ವಾದ ಮಂಡಿಸಿ, ಎಲ್ಲ ಬಗೆಯ ಆಸ್ತಿಗಳ ನೋಂದಣಿಗೆ ಸರಕಾರ ಇ-ಖಾತೆ ಕಡ್ಡಾಯಗೊಳಿಸಿದೆ. ಆದರೆ, ಬಿಬಿಎಂಪಿ ಈ ನಿಟ್ಟಿನಲ್ಲಿ ಸನ್ನದ್ಧವಾಗಿಲ್ಲ. ಪಾಲಿಕೆ ವ್ಯಾಪ್ತಿಯ ಎಲ್ಲಾ ಆಸ್ತಿಗಳಿಗೆ ಇನ್ನೂ ಇ-ಖಾತಾ ಆಗಿಲ್ಲ, ಇದರಿಂದ ಆಸ್ತಿಗಳ ನೋಂದಣಿಯಲ್ಲಿ ಶೇ.60ರಷ್ಟು ಕುಸಿತವಾಗಿದೆ. ಅಲ್ಲದೇ ಆಸ್ತಿಗಳ ಕ್ರಯ-ವಿಕ್ರಯಕ್ಕೆ ಸಮಸ್ಯೆ ಆಗುತ್ತಿದೆ. ಬ್ಯಾಂಕುಗಳು ಸಾಲ ನೀಡುತ್ತಿಲ್ಲ. ಈ ವಿಚಾರವನ್ನು ನ್ಯಾಯಾಲಯ ಗಂಭೀರವಾಗಿ ಪರಿಗಣಿಸಬೇಕು ಎಂದು ಮನವಿ ಮಾಡಿದರು. ಅಲ್ಲದೇ, ಎಲ್ಲ ಆಸ್ತಿಗಳಿಗೆ ಬಿಬಿಎಂಪಿ ಇ-ಖಾತಾ ಪೂರೈಸುವ ತನಕ ಆಸ್ತಿಗಳ ನೋಂದಣಿಗೆ ಇ-ಖಾತಾ ಕಡ್ಡಾಯಗೊಳಿಸದಂತೆ ಸರಕಾರ ಮತ್ತು ಬಿಬಿಎಂಪಿಗೆ ನಿರ್ದೇಶನ ನೀಡಬೇಕು ಮನವಿ ಮಾಡಿದರು.

ತಾರ್ಕಿಕ ಅಂತ್ಯಕ್ಕೆ ಕೋವಿಡ್ ಹಗರಣ

ಬಿಜೆಪಿ ವಿರುದ್ಧ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಕಿಡಿ

ಕಲಬುರಗಿ: ಬಿಜೆಪಿ ಸರಕಾರದ ಅವಧಿಯಲ್ಲಿ ನಡೆದ ಭಾರಿ ಪ್ರಮಾಣದ ಕೋವಿಡ್ ಹಗರಣದ ತನಿಖೆಯನ್ನು ತಾರ್ಕಿಕ ಅಂತ್ಯಕ್ಕೆ ತಲುಪಿಸುವವರೆಗೆ ಸರಕಾರ ವಿರಮಿಸುವುದಿಲ್ಲ ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ್ ಪಾಟೀಲ್ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾವು ಜನರಿಗೆ ಮಾತು ಕೊಟ್ಟಂತೆ ಕೋವಿಡ್ ಹಗರಣವನ್ನು ತಾರ್ಕಿಕ ಅಂತ್ಯಕ್ಕೆ . ಕೋವಿಡ್ ಅವಧಿಯ ಬಹಳಷ್ಟು ಹಗರಣದ ಕುರಿತು ತನಿಖೆ ನಡೆಸಲಾಗುತ್ತಿದೆ. ಈಗ ಒಂದೊಂದಾಗಿ ಎಫ್‌ಐಆರ್

- ಯಾರು ಎಷ್ಟೇ ಪ್ರಭಾವಿಯಾಗಿದ್ದರೂ ತಪ್ಪಿತಸ್ಥರನ್ನು ಬಿಡುವ ಪ್ರಶ್ನೆಯೇ ಇಲ್ಲ
- ಹಗರಣದ ತನಿಖೆಯಲ್ಲಿ ಪೊಲೀಸರಿಗೆ ಪೂರ್ಣ ಸ್ವಾತಂತ್ರ್ಯ
- ಪ್ರತಿಯೊಂದು ಅಕ್ರಮದ ಆಧಾರದ ಮೇಲೆ ಎಫ್‌ಐಆರ್ ದಾಖಲು
- ತಪ್ಪು ಮಾಡಿದವರು ಸಹಜವಾಗಿಯೇ ಶಿಕ್ಷೆ ಅನುಭವಿಸುತ್ತಾರೆ

ದಾಖಲಿಸಲಾಗುತ್ತಿದೆ. ಕೋವಿಡ್ ಹಗರಣದ ತನಿಖೆ ಕುರಿತು ಎಸ್‌ಐಟಿ ರಚನೆ ಮಾಡುವ ಕುರಿತು ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳು ನಿರ್ಧರಿಸುತ್ತಾರೆ. ಯಾರು ಎಷ್ಟೇ ಪ್ರಭಾವಿಯಾಗಿದ್ದರೂ ಸರಿ ತಪ್ಪಿತಸ್ಥರನ್ನು ಬಿಡುವ ಪ್ರಶ್ನೆಯೇ ಇಲ್ಲ ಎಂದು ಎಚ್ಚರಿಕೆ ನೀಡಿದರು.

ಹಗರಣದ ತನಿಖೆಯಲ್ಲಿ ಪೊಲೀಸರಿಗೆ ಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ. ಹೀಗಾಗಿ, ತನಿಖೆ ಪ್ರಗತಿಯಲ್ಲಿರುವಾಗ ಕೆಲವರ ಹೆಸರು ಹೇಳೋದು ತಪ್ಪಾಗುತ್ತದೆ ಎಂದು ಸುದ್ದಿಗಾರರ ಪ್ರಶ್ನೆಗೆ ಚುಟುಕಾಗಿ ಪ್ರತಿಕ್ರಿಯಿಸಿದರು.

ಸಾಮಗ್ರಿ ಖರೀದಿಯಲ್ಲಿ ಅಕ್ರಮ: ನ್ಯಾಯಮೂರ್ತಿ ಕುನ್ಹಾ ವರದಿಯಲ್ಲಿ 30 ಪ್ರಕ್ಯೂರ್‌ಮೆಂಟ್‌ಗಳಲ್ಲಿ ಅವ್ಯವಹಾರ ನಡೆದಿದೆ ಎಂಬ ಮಾತಿದೆ. ಇಷ್ಟೇ ಅಲ್ಲ ಇನ್ನೂ ಬಹಳಷ್ಟು ಅಕ್ರಮಗಳು ನಡೆದಿವೆ. ಪ್ರತಿಯೊಂದು ಅಕ್ರಮದ ಆಧಾರದ ಮೇಲೆ ಎಫ್ .ಐ.ಆರ್ ದಾಖಲಾಗಲಿದೆ .ತನಿಖೆಯ ಬಗ್ಗೆ ಬಿಜೆಪಿ ನಾಯಕರು ಏಕೆ ಭಯ ಪಡಬೇಕು ಎಂದು ಪ್ರಶ್ನಿಸಿದ ಅವರು, ತಪ್ಪು ಮಾಡಿದವರು ಸಹಜವಾಗಿಯೇ ಶಿಕ್ಷೆ ಅನುಭವಿಸುತ್ತಾರೆ ಎಂದು ಸರಕಾರದ ತನಿಖೆಯನ್ನು ಸಮರ್ಥಿಸಿಕೊಂಡರು.

ಬಾಣಂತಿಯರ ಸರಣಿ ಸಾವು; ವರದಿ ಪರಿಶೀಲಿಸಿ ಕ್ರಮ

ರಾಯಚೂರಿನಲ್ಲಿ ನಡೆದ ಬಾಣಂತಿಯರ ಸರಣಿ ಸಾವು ಕುರಿತಂತೆ ಪಶ್ಚಿಮ ಬಂಗಾಳದ ಔಷಧ ಕಂಪನಿಯ ರಿಂಗರ್ ಲ್ಯಾಕ್ಟೇಟ್ ಇಂಟ್ರಾವೇನಸ್ ಫ್ಲ್ಯುಡ್ ಸಾಚಾತನದ ಕುರಿತು ವರದಿ ನಿರೀಕ್ಷಿಸಲಾಗುತ್ತಿದೆ. ವರದಿ ಬಂದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಸಿಂಧನೂರಿನಲ್ಲಿ ನಾಲ್ವರು ಬಾಣಂತಿಯರ ಸಾವಿನ ಹಿನ್ನೆಲೆಯಲ್ಲಿ ತಕ್ಷಣ ಭೇಟಿ ನೀಡಿ ಪರಿಶೀಲಿಸಿದ ಬಳಿಕ ರಿಂಗರ್ ಐವಿ ಸ್ಯಾಂಪಲ್ ಟೆಸ್ಟಿಗೆ ಕಳುಹಿಸಲಾಗಿದೆ. ಮಾದರಿಗಳ ಪರೀಕ್ಷಾ ವರದಿ ಬಂದ ಬಳಿಕ ಆರೋಗ್ಯ ಸಚಿವರು ಉತ್ತರ ನೀಡಲಿದ್ದಾರೆ. ಬಾಣಂತಿಯರ ಸಾವು ಪ್ರಕರಣ ಆರೋಗ್ಯ ಇಲಾಖೆಯ ವ್ಯಾಪ್ತಿಗೆ ಬರುತ್ತದೆ. ಹಾಗಾಗಿ, ಸೋಮವಾರ ಸದನದಲ್ಲಿ ಆರೋಗ್ಯ ಸಚಿವರು ಹೇಳಿಕೆ ನೀಡಲಿದ್ದಾರೆ ಎಂದು ಶರಣಪ್ರಕಾಶ್ ಪಾಟೀಲ್ ಸಮಜಾಯಿಷಿ ನೀಡಿದರು.

ನಾವು ಯಾರನ್ನೋ ಭಯಪಡಿಸಲು ತನಿಖೆ ನಡೆಸುತ್ತಿಲ್ಲ. ಕೋವಿಡ್ ಅವಧಿಯಲ್ಲಿ ಆಕ್ಸಿಜನ್ ಇಲ್ಲದೆ ಜನರು ಬೀದಿಯಲ್ಲಿ ಹೆಣವಾಗಿದ್ದಾರೆ. ಬಿಜೆಪಿಯವರು ಹಣ ಹೊಡೆಯೋಕೆ ದೊಡ್ಡ ಹಗರಣ ಮಾಡಿದ್ದಾರೆ. ನಾವು ಯಾರ ವಿರುದ್ಧವೂ ಸೇಡಿನ ರಾಜಕಾರಣ ಮಾಡುತ್ತಿಲ್ಲ. ಹಗರಣ ನಡೆದಾಗ ಬಿಜೆಪಿ ಸರಕಾರವಿತ್ತು. ಹೀಗಾಗಿ, ಸಹಜವಾಗಿಯೇ ಅವರು ಇದನ್ನು ಸೇಡಿನ ರಾಜಕಾರಣ ಎಂದು ವ್ಯಾಖ್ಯಾನಿಸುತ್ತಾರೆ. ಹಾಗೆಂದು ಅನಗತ್ಯವಾಗಿ ಯಾರನ್ನೂ ಬಲಿಪಶು ಮಾಡುವುದಿಲ್ಲ. ಜನತೆಗೆ ಮಾತುಕೊಟ್ಟಂತೆ ತನಿಖೆ ಮಾಡಿಸುತ್ತೇವೆ.

– **ಶರಣ ಪ್ರಕಾಶ್ ಪಾಟೀಲ್** ಸಚಿವ

ಕೊಡಗಿನ ಗಾಳಿಬೀಡು ಗ್ರಾಪಂಗೆ ರಾಷ್ಟ್ರ ಪ್ರಶಸ್ತಿ

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಪ್ರಶಸ್ತಿ ಪ್ರದಾನ

ಮಡಿಕೇರಿ: ತಾಲೂಕಿನ ಗಾಳಿಬೀಡು ಗ್ರಾಮ ಪಂಚಾಯಿತಿಗೆ ಪ್ರತಿಷ್ಠಿತ ದೀನದಯಾಳ್ ಉಪಾಧ್ಯಾಯ ಪಂಚಾಯತ್‌ರಾಜ್ ವಿಕಾಸ್ ಪುರಸ್ಕಾರ್ ಪ್ರಶಸ್ತಿ ಲಭಿಸಿದೆ. ಈ ಮೂಲಕ ದೇಶದ ಪ್ರಮುಖ ಮೂರು ಪಂಚಾಯಿತಿಗಳಲ್ಲಿ ಗಾಳಿಬೀಡು ಒಂದೆಂಬ ಕೀರ್ತಿಗೆ ಪಾತ್ರವಾಗಿದೆ.

ನವದೆಹಲಿಯ ವಿಜ್ಞಾನ ಭವನದಲ್ಲಿ ನಡೆದ ರಾಷ್ಟ್ರೀಯ ಪಂಚಾಯತ್ ಪುರಸ್ಕಾರ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಗಾಳಿಬೀಡು ಪಂಚಾಯಿತಿ ಅಧ್ಯಕ್ಷೆ ಉಷಾ ಬಿ.ಜಿ. ಮತ್ತು ಪಿಡಿಒ ಕೆ.ಎ. ಶಶಿಕಿರಣ್ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಿದರು.

ಅಭಿವೃದ್ಧಿ ಕಾರ್ಯಗಳಿಗೆ ಸಂದ ಗೌರವ

ಹಲವು ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನದ ಹಿನ್ನೆಲೆಯಲ್ಲಿ ಗಾಳಿಬೀಡು ಪಂಚಾಯಿತಿಗೆ ಈ ಪ್ರತಿಷ್ಠಿತ ಪ್ರಶಸ್ತಿ ಲಭಿಸಿದೆ. ಪಂಚಾಯಿತಿಯನ್ನು ಮತ್ತಷ್ಟು ಅಭಿವೃದ್ಧಿ ಪಡಿಸಲಾಗುವುದು ಎಂದು ಪಿಡಿಒ ಶಶಿಕಿರಣ ಹೇಳಿದ್ದಾರೆ.

ತನ್ನ ವ್ಯಾಪ್ತಿಯಲ್ಲಿ ಹತ್ತು ಗ್ರಾಮಗಳನ್ನು ಹೊಂದಿರುವ ಗಾಳಿಬೀಡು ಪಂಚಾಯಿತಿ, ಸರಕಾರದ ವಿವಿಧ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದೆ. ಬಡತನ ನಿರ್ಮೂಲನೆ ಮತ್ತು ಸುಧಾರಿತ ಜೀವನೋಪಾಯ ಪಂಚಾಯಿತಿ ವಿಭಾಗದಲ್ಲಿ ಈ ಪ್ರಶಸ್ತಿ ಬಂದಿದ್ದು, ಇದು 1 ಕೋಟಿ ರು. ನಗದು ಬಹುಮಾನ ಒಳಗೊಂಡಿದೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ದೆಹಲಿಯಲ್ಲಿ ಗಾಳಿಬೀಡು ಗ್ರಾ.ಪಂ. ಅಧ್ಯಕ್ಷೆ ಉಷಾ ಬಿಜಿ ಮತ್ತು ಪಿಡಿಒ ಕೆ.ಎ. ಶಶಿಕಿರಣ್ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಿದರು.

ವಿವಿಧ ಯೋಜನೆಗಳ ಯಶಸ್ವಿ ಅನುಷ್ಠಾನ

ಸರ್ಕಾರಿ ಶಾಲೆಗಳಲ್ಲಿ ಉದ್ಯಾನವನ ಸ್ಥಾಪನೆ, ಪಂಚಾಯಿತಿ ವ್ಯಾಪ್ತಿಯಲ್ಲಿ ಶೌಚಾಲಯ ವ್ಯವಸ್ಥೆ, ಬಡತನ ನಿರ್ಮೂಲನೆ, ನೀರಾವರಿ ಕೆರೆಗಳ ನಿರ್ಮಾಣ, ಪೌಷ್ಠಿಕ ಆಹಾರ ಪೂರೈಕೆಯೊಂದಿಗೆ ಅಂಗನವಾಡಿಗಳ ಅಭಿವೃದ್ಧಿ, ಪಿಂಚಣಿ ಯೋಜನೆಗಳ ಅನುಷ್ಠಾನ ಸೇರಿದಂತೆ ವಿವಿಧ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿದೆ.

ಕೋವಿಡ್ ಅಕ್ರಮ ಬಿಜೆಪಿಗರಿಗೆ ಕಂಟಕ

← ಮೊದಲಪುಟದಿಂದ

ಎಸ್‌ಐಟಿ ರಚನೆ ಅಗತ್ಯ: ದಿನೇಶ್ ಗುಂಡೂರಾವ್: ಕೋವಿಡ್ ಕಾಲದ ಹಗರಣದಲ್ಲಿನ ತನಿಖೆಗೆ ಎಸ್‌ಐಟಿ ರಚಿಸುವ ಅಗತ್ಯವಿದೆ. ಈಗಾಗಲೇ ಈ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಕೋವಿಡ್ ಹಗರಣ ಕುರಿತಂತೆ ಪ್ರಕರಣಗಳು ಒಂದೊಂದಾಗಿ ದಾಖಲಾಗುತ್ತಿವೆ. ಎಲ್ಲವನ್ನೂ ಸೇರಿಸಿ ಎಸ್‌ಐಟಿ ರಚಿಸುವ ಅಗತ್ಯವಿದೆ ಎಂಬುದು ಸರಕಾರಕ್ಕೆ ಮನವರಿಕೆಯಾಗಿದೆ. ಸಂಪುಟದಲ್ಲಿ ತೀರ್ಮಾನವಾಗಿದ್ದರೂ ಇಲ್ಲಿ ಎಸ್‌ಐಟಿ ರಚನೆಯಾಗಿಲ್ಲ. ಮುಂದಿನ ದಿನಗಳಲ್ಲಿ ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು. ಜಸ್ಟಿಸ್ ಮೈಕಲ್ ಡಿ. ಕುನ್ಹಾ ಅವರ ವರದಿಯ ಆಧಾರದ ಮೇಲೆ ಬಹಳಷ್ಟು ಕ್ರಮ ತೆಗೆದುಕೊಳ್ಳುವುದು ಅನಿವಾರ್ಯವಾಗಿದೆ. ಅನಾವಶ್ಯಕವಾಗಿ ಹೆಚ್ಚಿನ ಬೆಲೆ ಕೊಟ್ಟು ಖರೀದಿಗಳಾಗಿವೆ. ಇನ್ನೂ ಕೆಲವು ಕಡೆ ಬೋಗಸ್ ಕಂಪನಿಗಳಿಗೆ ಖರೀದಿ ಆದೇಶಗಳನ್ನು ನೀಡಿರುವುದು ಸೇರಿದಂತೆ ಹಲವಾರು ರೀತಿಯ ಪ್ರಕ್ರಿಯೆಗಳ ಲೋಪವಾಗಿದೆ. ಭ್ರಷ್ಟಾಚಾರ ನಡೆದು ಕೋಟ್ಯಂತರ ರು. ಸರಕಾರದ ಬೊಕ್ಕಸಕ್ಕೆ ನಷ್ಟವಾಗಿದೆ ಎಂದು ವಿವರಿಸಿದರು.

ತಾಕತ್ತಿದ್ದರೆ ಶಾಸಕರ ಅಮಾನತು ಮಾಡಿ

ಸರಕಾರಕ್ಕೆ ಕೂಡಲಸಂಗಮ ಶ್ರೀ ಸವಾಲು | ಸರಕಾರದ ನಡೆ ಖಂಡಿಸಿ ನಾಳೆ ಪ್ರತಿಭಟನೆ

ಬೆಳಗಾವಿ: ಪಂಚಮಸಾಲಿ ಹೋರಾಟವನ್ನೇ ಸಿಎಂ ಸಿದ್ದರಾಮಯ್ಯ ಸಂವಿಧಾನ ವಿರೋಧ ಎಂದು ಹೇಳಿಕೆ ನೀಡಿದ್ದು ಖಂಡನೀಯ. ಒಂದು ವೇಳೆ ಹೋರಾಟ ಸಂವಿಧಾನ ವಿರೋಧಿಯಾಗಿದ್ದರೆ ನಮಗೆ ಬೆಂಬಲಿಸಿದ ಶಾಸಕರನ್ನು ತಾಕತ್ತಿದ್ದರೆ ಅಮಾನತುಗೊಳಿಸಿ ಎಂದು ಪಂಚಮಸಾಲಿ ಪೀಠದ ಕೂಡಲಸಂಗಮ ಬಸವ ಜಯಮೃತ್ಯುಂಜಯ ಶ್ರೀಗಳು ಸರಕಾರಕ್ಕೆ ಸವಾಲು ಹಾಕಿದ್ದಾರೆ.

ಬೆಳಗಾವಿಯಲ್ಲಿ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಶ್ರೀಗಳು, ಪಂಚಮಸಾಲಿ ಸಮುದಾಯದ 2 ಎ ಮೀಸಲು ಹೋರಾಟವನ್ನು ಸಂವಿಧಾನ ವಿರೋಧಿ ಎನ್ನುವ ಮೂಲಕ ಸಿಎಂ ಸಿದ್ದರಾಮಯ್ಯ ಲಿಂಗಾಯತರಿಗೆ ಅವಮಾನ ಮಾಡಿದ್ದಾರೆ ಎಂದು ಟೀಕಿಸಿದರು.

ನಮ್ಮ ಹೋರಾಟಕ್ಕೆ ಕಾಂಗ್ರೆಸ್ ಪಕ್ಷದ ಶಾಸಕರು ಹಾಗೂ ಸಚಿವರೂ ಬೆಂಬಲಿಸಿದ್ದಾರೆ. ಸರಕಾರಕ್ಕೆ ತಾಕತ್ತು ಇದ್ದರೆ ಅವರನ್ನು ಶಾಸಕ ಸ್ಥಾನದಿಂದ ಅಮಾನತು ಮಾಡಲಿ ಎಂದು ಸ್ವಾಮೀಜಿ ಎಚ್ಚರಿಕೆ ಕೊಟ್ಟರು.

ಹೋರಾಟ ಹತ್ತಿಕ್ಕುವ ಕಾರ್ಯ: ಅಂಬೇಡ್ಕರ್ ಸಂವಿಧಾನ ಅಡಿಯಲ್ಲಿ ನಾವು ಬದುಕಿದ್ದೇವೆ. ಆದರೆ ನಮ್ಮ ಹೋರಾಟವನ್ನೇ ಸರಕಾರ ಹತ್ತಿಕ್ಕುವ ಪ್ರಯತ್ನ ಮಾಡುತ್ತಿದೆ. ನಿಮಗೆ ಮೀಸಲು ನೀಡಲು ಸಾಧ್ಯವಿಲ್ಲ ಎಂದರೆ ಬಹಿರಂಗವಾಗಿ ಹೇಳಿಕೆ ನೀಡಿ. ನಾವು ಜನತಾ ನ್ಯಾಯಾಲಯಕ್ಕೆ ಹೋಗಿ ಮೀಸಲು ಪಡೆಯುವ ಪ್ರಯತ್ನ ಮಾಡುತ್ತೇವೆ. ಕೂಡಲೇ ಸಿಎಂ ಸಿದ್ದರಾಮಯ್ಯ ಅವರು ಹೋರಾಟ ಸಂವಿಧಾನ ವಿರೋಧಿ ಹೇಳಿಕೆ ವಾಪಸ್ ಪಡೆದು ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದರು.

ಅಮಾನವೀಯ ಹಲ್ಲೆ: ಕಳೆದ ನಾಲ್ಕು ವರ್ಷಗಳಿಂದ ನಾವು ಶಾಂತಿಯುತ ಹೋರಾಟ ಮಾಡುತ್ತಾ ಬಂದಿದ್ದೇವೆ. ಡಿ.10 ರಂದು ಟ್ರ್ಯಾಕ್ಟರ್ ರ‍್ಯಾಲಿಯನ್ನು ಸರಕಾರ ತಡೆಯಿತು. ಶಾಂತಿಯುತ ಪ್ರತಿಭಟನೆ ನಡೆಸಿದವರ ಮೇಲೆ ಅಮಾನವೀಯವಾಗಿ ಹಲ್ಲೆ ನಡೆಸಿದ್ದಾರೆ. ಇದರಿಂದ ನಮ್ಮ ಲಿಂಗಾಯತ ಸಮುದಾಯಕ್ಕೆ ನೋವಾಗಿದೆ ಎಂದು ಕೂಡಲ ಸಂಗಮ ಶ್ರೀ ಅಸಮಾಧಾನ ವ್ಯಕ್ತಪಡಿಸಿದರು.

ಪರಂ ಹೇಳಿಕೆಗೆ ಗರಂ: 10 ಸಾವಿರ ಜನರು ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಬಂದರೆ ಮುತ್ತು ಕೊಡಲು ಆಗುತ್ತಾ ಎಂದು ಗೃಹ ಸಚಿವರು ಹೇಳುತ್ತಾರೆ.

ನೀವು ನಮ್ಮನ್ನು ಪ್ರೀತಿ ಮಾಡುವ ವ್ಯಕ್ತಿ. ನೀವು ಓದಿದ್ದು ತುಮಕೂರು ಸಿದ್ದಗಂಗಾ ಮಠದಲ್ಲಿ. ಆ ಮಠಕ್ಕೆ ನೀವು ಅಪಮಾನ ಮಾಡಿದಂತೆ ಆಗುತ್ತದೆ. ತುತ್ತು ಅನ್ನ ಕೊಟ್ಟ ಸಮಾಜಕ್ಕೆ ನೀವು ಅವೈಜ್ಞಾನಿಕ ಹೇಳಿಕೆ ಕೊಟ್ಟು ನೋವು ಮಾಡಿದ್ದು, ಕೊರಟಗೆರೆ ಕ್ಷೇತ್ರದ ಲಿಂಗಾಯತ ಸಮುದಾಯದವರು ಸಚಿವರ ವಿರುದ್ಧ ಹೋರಾಟ ನಡೆಸಿ ಎಂದು ಜಯ ಮೃತ್ಯುಂಜಯ ಸ್ವಾಮೀಜಿ ಆಗ್ರಹಿಸಿದರು.

ಪಂಚಮಸಾಲಿ ಸಮುದಾಯದ ಮೀಸಲು ಹೋರಾಟ ಸಂವಿಧಾನಕ್ಕೆ ವಿರೋಧ ಎಂಬ ಸಿಎಂ ಸಿದ್ದರಾಮಯ್ಯ ಹೇಳಿಕೆ ಖಂಡನೀಯ. ಮೀಸಲಾತಿ ಹೋರಾಟದಿಂದ ಪಂಚಮಸಾಲಿ ಸಮುದಾಯ ಹಿಂದೆ ಸರಿಯುವುದಿಲ್ಲ. ಡಿ. 16 ರಂದು ಬೆಳಗಾವಿ ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ನಡೆಸುತ್ತೇವೆ. ಸಿಎಂ ಸಿದ್ದರಾಮಯ್ಯ ತಮ್ಮ ಹೇಳಿಕೆ ವಾಪಸ್ ಪಡೆದು ಸಮಾಜದ ಕ್ಷಮೆ ಕೇಳಬೇಕು.

– **ಬಸವ ಜಯಮೃತ್ಯುಂಜಯ ಸ್ವಾಮೀಜಿ** ಕೂಡಲಸಂಗಮ ಪೀಠ

ನಕ್ಸಲ್ ಪೀಡಿತ ಪ್ರದೇಶಕ್ಕೆ ಪೇಜಾವರ ಶ್ರೀಗಳ ಭೇಟಿ

ಚಿಕ್ಕಮಗಳೂರಿನ ಕಾಡಿನಲ್ಲಿ ಜನಜಾಗೃತಿ ಕಾರ್ಯಕ್ರಮ

ಚಿಕ್ಕಮಗಳೂರು: ನಕ್ಸಲ್‌ಪೀಡಿತ ಪ್ರದೇಶವೆಂದು ಗುರುತಿಸಲಾಗಿರುವ ಮುಂಡುಗಾರು ಮತ್ತು ಆಸುಪಾಸಿನ ದುರ್ಗಮ ಹಳ್ಳಿಗಳಿಗೆ ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಶ್ರೀಪಾದರು ಶನಿವಾರ ಭೇಟಿನೀಡಿ ಗಿರಿಜನ ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಪೇಜಾವರ ಸ್ವಾಮೀಜಿಯವರು ಮುಂಡುಗಾರಿಗೆ ಭೇಟಿ ನೀಡಿದಾಗ ಗ್ರಾಮಸ್ಥರು ಶ್ರದ್ಧಾಭಕ್ತಿಗಳಿಂದ ಬರಮಾಡಿಕೊಂಡರು. ನೂರಾರು ಮಹಿಳೆಯರು-ಪುರುಷರು ರಾಮಮಂತ್ರ ಜಯಘೋಷ ಮತ್ತು ಭಜನೆಗಳೊಂದಿಗೆ ಪೂರ್ಣಕುಂಭ ಸಹಿತ ಶ್ರೀಗಳನ್ನು ಕಾಲ್ನಡಿಗೆ ಮೂಲಕ ಮೆರವಣಿಗೆಯಲ್ಲಿ ಸಮಾರಂಭದ ಸ್ಥಳಕ್ಕೆ ಕರೆದೊಯ್ದರು.

ಬಳಿಕ ನಡೆದ ಗಿರಿಜನ ಜಾಗೃತಿ ಕಾರ್ಯಕ್ರಮದಲ್ಲಿ ಸಂಘಟನೆಗಳು ಹಾಗೂ ಗ್ರಾಮಸ್ಥರೊಂದಿಗೆ ಆಪ್ತ ಸಮಾಲೋಚನೆ ನಡೆಸಿದ ವಿಶ್ವಪ್ರಸನ್ನ ತೀರ್ಥರು, ಕುಂದು-ಕೊರತೆಗಳ ಆಲಿಸಿದರು. ಗ್ರಾಮಸ್ಥರು ಅಹವಾಲು ಸ್ವೀಕರಿಸಿದ ಶ್ರೀಗಳು ಶ್ರೀಮಠದಿಂದ ಮತ್ತು ಭಕ್ತರ ನೆರವಿನೊಂದಿಗೆ ಸಹಕರಿಸುವುದರೊಂದಿಗೆ ಕೆಲ ವಿಚಾರಗಳನ್ನು ಸರಕಾರದ ಗಮನಕ್ಕೆ ತರುವುದಾಗಿ ಭರವಸೆ ನೀಡಿದರು.

ಶ್ರೀಮಠದ ನೆರವಿಗೆ ಗ್ರಾಮಸ್ಥರ ಕೃತಜ್ಞತೆ: ಹತ್ತು ವರ್ಷಗಳ ಹಿಂದೆಯೂ ಪೇಜಾವರ ಮಠದ ಹಿರಿಯ ಶ್ರೀಗಳಾದ ವಿಶ್ವೇಶತೀರ್ಥ ಶ್ರೀಪಾದರು ಕಾಡಿನಲ್ಲೇ ಪಟ್ಟದದೇವರ ಪೂಜೆ ನೆರವೇರಿಸಿ ಮಠದಿಂದ ವಿವಿಧ ಸೌಲಭ್ಯಗಳನ್ನು ಒದಗಿಸಿರುವುದನ್ನು ಗ್ರಾಮದ ಹಿರಿಯರು ಈ ಸಂದರ್ಭದಲ್ಲಿ ಸ್ಮರಿಸಿಕೊಂಡರು. ಮುಂದಿನ ದಿನಗಳಲ್ಲೂ ಶ್ರೀಮಠ ಗಿರಿಜನ ಬಂಧುಗಳ ನೆಮ್ಮದಿಯ ಬದುಕಿಗೆ ಸದಾ ಸ್ಪಂದಿಸಲಿದೆ. ಮಕ್ಕಳಿಗೆ ಸಾಧ್ಯವಾದಷ್ಟು ಉತ್ತಮ ಶಿಕ್ಷಣ, ಸಂಸ್ಕಾರಗಳನ್ನು ನೀಡಿ ಬೆಳೆಸುವಂತೆಯೂ ಶ್ರೀಗಳು ಕಿವಿಮಾತು ಹೇಳಿ ಫಲಮಂತ್ರಾಕ್ಷತೆ ನೀಡಿ ಆಶೀರ್ವದಿಸಿದರು.

ಕಾಡಿನ ಉತ್ಪನ್ನಗಳ ಅರ್ಪಣೆ: ಗಿರಿಜನ ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿಧಾನ ಪರಿಷತ್ ಸದಸ್ಯ ಶಾಂತಾರಾಮ ಸಿದ್ದಿ ಮಾತನಾಡಿ, ಕಾಡಿನ ವಾಸಿಗಳು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಪೇಜಾವರ ಶ್ರೀಗಳ ಗಮನಸೆಳೆದರು. ಈ ಸಂದರ್ಭದಲ್ಲಿ ಶ್ರೀಗಳಿಗೆ ಪಾದಪೂಜೆ ನೆರವೇರಿಸಿದ ಗ್ರಾಮಸ್ಥರು, ಕಾಡಿನಲ್ಲಿ ಬೆಳೆದ ಫಲವಸ್ತು, ಜೇನುತುಪ್ಪ ಇತ್ಯಾದಿಗಳ ತಾವೇ ತಯಾರಿಸಿದ ಬೆತ್ತದ ಬುಟ್ಟಿಯಲ್ಲಿಟ್ಟು ಸಮರ್ಪಿಸಿದರು. ಮುಂಡುಗಾರು ಸುತ್ತಮುತ್ತ ಕೆಲ ನಕ್ಸಲರು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಕೆಲ ಸಂಘಟನೆಗಳು ಮತ್ತು ಗ್ರಾಮಸ್ಥರ ಮನವಿ ಮೇರೆಗೆ ಪೇಜಾವರ ಶ್ರೀಗಳು ಕಾಡಿನ ಹಳ್ಳಿಗಳಿಗೆ ಶನಿವಾರ ಭೇಟಿ ನೀಡಿದ್ದರು.

ಚಿಕ್ಕಮಗಳೂರು ಜಿಲ್ಲೆಯ ಕಾಡಿನಲ್ಲಿರುವ ಮುಂಡುಗಾರಿನಲ್ಲಿ ಗಿರಿಜನ ಜಾಗೃತಿಯಲ್ಲಿ ಪಾಲ್ಗೊಂಡ ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥರು ಗ್ರಾಮಸ್ಥರಿಗೆ ಫಲಮಂತ್ರಾಕ್ಷತೆ ವಿತರಿಸಿ ಆಶೀರ್ವದಿಸಿದರು. ವಿಧಾನ ಪರಿಷತ್ ಸದಸ್ಯ ಶಾಂತಾರಾಮ ಸಿದ್ಧಿ ಇದ್ದರು.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಾಮರಾಜನಗರ

ಸಂಖ್ಯೆ : 24/2024-25 ದಿನಾಂಕ: 10-12-2024

ಇ-ಪ್ರೊಕ್ಯೂರ್ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು ಲೆಕ್ಕ ಶೀರ್ಷಿಕೆ: 2021-22ನೇ ಸಾಲಿನ 5054 ವಿಶೇಷ ಅನುದಾನದ ಯೋಜನೆಯಡಿ ಕರೆದಿರುವ ಕಾಮಗಾರಿಗಳನ್ನು KW-4 (Stanard Tender Document) ಪ್ರಕಾರ KPPP ಮುಖಾಂತರ ಕರ್ನಾಟಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮಗಳು KTPP Act 1999 and KTPP Rule 2000 ರಲ್ಲಿ ಸಿವಿಲ್ ಗುತ್ತಿಗೆದಾರರುಗಳಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಕರೆಯಲಾಗಿದೆ. ಅಂದಾಜು ಮೊತ್ತ ರೂ. 200.00 ಲಕ್ಷಗಳ ಒಟ್ಟು 01 ಟೆಂಡರ್ ಆಹ್ವಾನಿಸಲಾಗಿದೆ. ಆನ್‌ಲೈನ್ ಟೆಂಡರ್ ಅಪ್‌ಲೋಡ್ ಮಾಡುವ ದಿನಾಂಕ : 13-12-2024 ಕೊನೆಯ ದಿನಾಂಕ: 23-12-2024 ಸಂಜೆ 5.00 ಗಂಟೆಯ ವರೆಗೆ ಹಾಗೂ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 26-12-2024. ಇನ್ನುಳಿದ ಹೆಚ್ಚಿನ ಮಾಹಿತಿಗಳನ್ನು KPPP website www.kppp.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ. ಹಾಗೂ ಕಚೇರಿ ದೂರವಾಣಿ ಸಂಖ್ಯೆ: 08226-223019ಕ್ಕೆ ಸಂಪರ್ಕಿಸುವುದು.

ಸಹಿ/-
ಕಾರ್ಯಪಾಲಕ ಇಂಜಿನಿಯರ್
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ
ಚಾಮರಾಜನಗರ

ವಾಸಾಸಂಇ/ಚಾನಗರ/472/2024-25

ಪತ್ನಿ, ಕುಟುಂಬಸ್ಥರ ಕಿರುಕುಳ: ಹೆಡ್ ಕಾನ್‌ಸ್ಟೇಬಲ್ ಆತ್ಮಹತ್ಯೆ

ಡೆತ್‌ನೋಟ್ ಬರೆದು ಕಾನ್‌ಸ್ಟೇಬಲ್ ಆತ್ಮಹತ್ಯೆ | ಪತ್ನಿ ಕಿರುಕುಳದ ಮತ್ತೊಂದು ಪ್ರಕರಣ

ಬೆಂಗಳೂರು: ಉತ್ತರ ಪ್ರದೇಶ ಮೂಲದ ಟೆಕ್ಕಿ ಅತುಲ್ ಸುಭಾಷ್ ತನ್ನ ಹೆಂಡತಿಯ ಕಿರುಕುಳಕ್ಕೆ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿದ್ದ ಘಟನೆ ಇಡೀ ದೇಶದಲ್ಲಿ ಸದ್ದು ಮಾಡಿರುವ ಬೆನ್ನಿಗೆ ಇದೀಗ ಅಂತಹದ್ದೇ ಘಟನೆಯೊಂದು ರಾಜ್ಯದಲ್ಲಿ ಬೆಳಕಿಗೆ ಬಂದಿದೆ.

ಹುಳಿಮಾವು ಪೊಲೀಸ್ ಠಾಣೆಯಲ್ಲಿ ಹೆಡ್ ಕಾನ್ಸ್‌ಟೇಬಲ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಎಚ್.ಸಿ.ತಿಪ್ಪಣ್ಣ (33) ರೈಲಿಗೆ ತಲೆಕೊಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ತಿಪ್ಪಣ್ಣ ಮೂಲತಃ ವಿಜಯಪುರದವರಾಗಿದ್ದು, ನಗರದ ನಾಗನಾಥಪುರದ ಕೃಷ್ಣಪ್ಪ ಗಾರ್ಡನ್‌ನಲ್ಲಿ ವಾಸವಾಗಿದ್ದರು. ತನಗೆ ಹೆಂಡತಿ ಕಿರುಕುಳ ನೀಡುತ್ತಿದ್ದಾಳೆ ಹಾಗೂ ಮಾವನೂ (ಪತ್ನಿಯ ತಂದೆ) ಕರೆ ಮಾಡಿ ಬೆದರಿಕೆ ಹಾಕುತ್ತಿದ್ದಾರೆ ಎಂದು ಆರೋಪಿಸಿ ಡೆತ್ ನೋಟ್ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಬೈಯ್ಯಪ್ಪನಹಳ್ಳಿ ರೈಲ್ವೇ ಠಾಣೆ ಪೊಲೀಸರು ತಿಳಿಸಿದ್ದಾರೆ. ಡೆತ್ ನೋಟ್ ನಲ್ಲಿ ಹೆಂಡತಿ ಹಾಗೂ ಮಾವ ಕಿರುಕುಳ ನೀಡುತ್ತಿರುವುದಾಗಿ ಆರೋಪಿಸಿದ್ದಾರೆ. ಮಾವ ಯಮನಪ್ಪ ಜೀವ ಬೆದರಿಕೆ ಹಾಕಿರುವುದಾಗಿಯೂ ಆರೋಪಿಸಿದ್ದಾರೆ. ಪ್ರಕರಣ ಸಂಬಂಧ ಬೈಯಪ್ಪನಹಳ್ಳಿ ರೈಲ್ವೆ ಪೊಲೀಸ್ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಮೃತ ತಿಪ್ಪಣ್ಣ ನಾಲ್ಕು ವರ್ಷದ ಹಿಂದೆ ಪಾರ್ವತಿ ಎಂಬುವವರನ್ನು ಮದುವೆಯಾಗಿದ್ದ, ತಿಪ್ಪಣ್ಣ ಪೋಷಕರು ಮನೆಗೆ ಬಂದಾಗ ಅವರನ್ನು ಸರಿಯಾಗಿ ನೋಡಿಕೊಳ್ಳುತ್ತಿರಲಿಲ್ಲ. ಅದನ್ನು ಪ್ರಶ್ನೆ ಮಾಡಿದ್ದಕ್ಕೆ ಅವಾಚ್ಯ ಶಬ್ದಗಳಿಂದ ಪೋಷಕರನ್ನು ನಿಂದಿಸಿದ್ದಳು. ಅಂದಿನಿಂದ ಇದೇ ವಿಚಾರವಾಗಿ ಪದೇ ಪದೆ ಗಲಾಟೆ ನಡೆದು ಪತ್ನಿ ಪಾರ್ವತಿ ತವರು ಮನೆಗೆ ಹೋಗಿದ್ದಳು. ಇತ್ತೀಚೆಗೆ ಮತ್ತೆ ರಾಜಿ ಸಂಧಾನ ಮಾಡಿ ಪತ್ನಿಯನ್ನು ಮನೆಗೆ ಕರೆಸಿದ್ದರು. ನಾಲ್ಕು ವರ್ಷವಾದರೂ ಮಕ್ಕಳಿಲ್ಲದ ಕಾರಣಕ್ಕೆ ತಿಪ್ಪಣ್ಣನನ್ನೇ ಹೊಣೆ ಮಾಡಿ ಪತ್ನಿ ಪಾರ್ವತಿ ನಿಂದಿಸುತ್ತಿದ್ದಳು, ಇದರಿಂದಾಗಿ ತಿಪ್ಪಣ್ಣ ತೀವ್ರವಾಗಿ ಮನನೊಂದಿದ್ದ ಎನ್ನಲಾಗಿದೆ.

ಬೈಯ್ಯಪ್ಪನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲು: ಈ ಸಂಬಂಧ ತಿಪ್ಪಣ್ಣ ಅವರ ಕುಟುಂಬಸ್ಥರು ಬೈಯ್ಯಪ್ಪನಹಳ್ಳಿ ರೈಲ್ವೆ ಪೊಲೀಸ್ ಠಾಣೆಯಲ್ಲಿ ಹೆಂಡತಿ ಹಾಗೂ ಮಾವನ ವಿರುದ್ಧ ಪ್ರಕರಣ ದಾಖಲು ಮಾಡಿದ್ದಾರೆ. ಬಿಎನ್‌ಎಸ್ ಆ್ಯಕ್ಟ್ 108, 351 (3), 352 ಅಡಿ ಪ್ರಕರಣ ದಾಖಲಾಗಿದೆ. ಬಿಎನ್‌ಎಸ್ 108- ಆತ್ಮಹತ್ಯೆಗೆ ಪ್ರಚೋದನೆ, 351 (3) ಬೆದರಿಕೆ ಹಾಕುವುದು, 352 ಉದ್ದೇಶ ಪೂರ್ವಕವಾಗಿ ಅವಮಾನ ಎಂದು ಪ್ರಕರಣದಲ್ಲಿ ದಾಖಲು ಮಾಡಲಾಗಿದೆ. ಪ್ರಕರಣ ಸಂಬಂಧ ಪೊಲೀಸರು ತನಿಖೆ ಕೈಗೊಂಡಿದ್ದು ಮೊದಲು ಅವರ ವೈವಾಹಿಕ ಜೀವನದ ಕುರಿತು ಮಾಹಿತಿ ಕಲೆ ಹಾಕಲಾಗುತ್ತಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಡೆತ್‌ನೋಟ್‌ನಲ್ಲಿ ಏನಿದೆ?

ನಾನು ನನ್ನ ಹೆಂಡತಿಯ ಕಾಟಕ್ಕೆ ಬೇಸತ್ತು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ. ನನ್ನ ಹೆಂಡತಿಯ ತಂದೆಯಾದ ಯಮುನಪ್ಪ ಇವನು ನನಗೆ ಜೀವ ಬೆದರಿಕೆ ಹಾಕಿರುತ್ತಾನೆ. ಡಿ.12 ರಂದು ದೂರವಾಣಿ ಕರೆ ಮಾಡಿ ಮಾತನಾಡಿ ಬೆದರಿಕೆ ಹಾಕಿರುತ್ತಾನೆ. ಬೆಳಗ್ಗೆ ನಾನು ಕಾಲ್ ಮಾಡಿದಾಗಲೂ ಕೂಡ, ನೀನು ಸತ್ತು ಹೋಗು ನನ್ನ ಮಗಳು ಚೆನ್ನಾಗಿರುತ್ತಾಳೆ ಎಂದು ಹೇಳಿ ಅವಾಚ್ಯ ಪದಗಳಿಂದ ಬೈದಿದ್ದಾರೆ ಎಂದು ಡೆತ್‌ನೋಟ್‌ನಲ್ಲಿ ಬರೆದಿದ್ದಾರೆ.

ಟ್ವೀಟೂ-ಖಾರಾ

ಕಾಂಗ್ರೆಸ್, ಕರ್ನಾಟಕ

ಕೇವಲ ಟಿಕ್‌ಟಾಕ್, ಶೇರ್ ಚಾಟ್‌ನಂತಹ 59 ಚೀನಿ ಆ್ಯಪ್‌ಗಳನ್ನು ಬ್ಯಾನ್ ಮಾಡಲು ಎಲ್ಲಿಲ್ಲದ ಆಸಕ್ತಿ ತೋರುವ ಪ್ರಧಾನಿ ಮೋದಿಯವರು, ಚೀನಾದಿಂದ ಆಮದಾಗುತ್ತಿರುವ ಸರಕುಗಳನ್ನು ನಿಷೇಧಿಸುವುದಕ್ಕೆ ಮಾತ್ರ ಹಿಂಜರಿಯುತ್ತಿದ್ದಾರೆ. 2013-14ರ ಯುಪಿಎ ಸರಕಾರದ ಅವಧಿಯಲ್ಲಿ ಚೀನಾದಿಂದ ಭಾರತಕ್ಕೆ 51.34 ಶತಕೋಟಿ ಡಾಲರ್‌ನಷ್ಟು ಸರಕುಗಳು ಆಮದಾಗುತ್ತಿದ್ದವು. ಆದರೆ 2023-24ರ ಮೋದಿ ಸರಕಾರದಲ್ಲಿ 101.7 ಶತಕೋಟಿ ಡಾಲರ್‌ನಷ್ಟು ಸರಕುಗಳು ಆಮದಾಗಿವೆ.

ಸುಕುಮಾರ್ ಪಿ.

2014ರಲ್ಲಿ ಅಮೆರಿಕ ಡಾಲರ್ ಮೌಲ್ಯ 63 ರು.ಗಳು. 2024ರಲ್ಲಿ 85 ರು.ಗಳಾಗಿವೆ. ನಿಮ್ಮ ಪ್ರಕಾರ ನೋಡಿದರೂ ರುಪಾಯಿ ಎದುರು ಡಾಲರ್ ಮೌಲ್ಯ ಶೇ. 100 ರಷ್ಟು ಹೆಚ್ಚಾಗುತ್ತದೆ. ಆದರೆ ಇಂದಿನ ಡಾಲರ್ ಬೆಲೆಗೆ ಹೋಲಿಸಿದರೆ 2014ಕ್ಕಿಂತ ಶೇ. 30 ರಷ್ಟು ಹೆಚ್ಚಾಗಿದೆ.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಬೆಳಗಾವಿ**

ಸಮಸ್ಯೆಯೇನು..?

- ಬೆಳಗಾವಿ ತಾಲೂಕಿನ ಹಿರೇಬಾಗೇವಾಡಿ ಗ್ರಾಮದ ರೇಷ್ಮೆ ಇಲಾಖೆ ಜಮೀನಿಗೆ ಹೊಂದಿಕೊಂಡ ಸರ್ವೆ ನಂಬರ್ 52 ಸುತ್ತಮುತ್ತ ಜಮೀನುಗಳಲ್ಲಿ ಕಳೆದ 2 ವರ್ಷಗಳಿಂದ ಕರೆಂಟ್ ವೈರ್ ಜೋತು ಬಿದ್ದಿರುವುದು.
- **ಪರಿಹಾರ:** ಬೆಳಗಾವಿ ತಾಲೂಕಿನ ಹಿರೇಬಾಗೇವಾಡಿ ಗ್ರಾಮದ ರೇಷ್ಮೆ ಇಲಾಖೆ ಜಮೀನಿಗೆ ಹೊಂದಿಕೊಂಡ ಸರ್ವೆ ನಂಬರ್ 52 ಸುತ್ತಮುತ್ತ ಜಮೀನುಗಳಲ್ಲಿ ಜೋತು ಬಿದ್ದಿರುವ ಕರೆಂಟ್ ವೈರ್‌ಗಳನ್ನು ಸರಿಪಡಿಸಲಾಗುತ್ತಿದೆ.

ಸಮಾಚಾರ ಸಣ್ಣದಲ್ಲ

ಎಂಜಿನಿಯರ್ ಆತ್ಮಹತ್ಯೆ

ಮಂಡ್ಯ: ನೀರಿನ ಟ್ಯಾಂಕ್‌ಗೆ ನೇಣು ಬಿಗಿದು ಎಂಜಿನಿಯರ್ ಆತ್ಮಹತ್ಯೆ ಮಾಡಿಕೊಂಡ ಘಟನೆ ಮಂಡ್ಯ ಜಿಲ್ಲೆ ಮದ್ದೂರು ತಾಲೂಕಿನ ಕುರುಬರದೊಡ್ಡಿ ಗ್ರಾಮದಲ್ಲಿ ನಡೆದಿದೆ. ಜ್ಞಾನೇಶ್ (30) ಮೃತ ಎಂಜಿನಿಯರ್. ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲೂಕಿನ ಹಮ್ಮತ್ತಿಯ ವರಾದ ಅವರು, ಕಳೆದ ಹಲವು ವರ್ಷಗಳಿಂದ ಕೆಸ್ತೂರು ಗ್ರಾಮದಲ್ಲಿ ವಾಸವಾಗಿದ್ದರು. ಶಿಂಷಾ ಏತ ನೀರಾವರಿ ಯೋಜನೆಯಲ್ಲಿ ಜ್ಞಾನೇಶ್ ಕಳೆದ 5 ವರ್ಷಗಳಿಂದ ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಆತ್ಮಹತ್ಯೆಗೂ ಮುನ್ನ ತನ್ನ ವಾಟ್ಸಾಪ್ ಸ್ಟೇಟಸ್‌ನಲ್ಲಿ ಕೆಲಸದ ಒತ್ತಡ ಎಂದು ಹಾಕಿಕೊಂಡಿದ್ದ. ಈ ಹಿನ್ನೆಲೆ ಕೆಲಸದ ಒತ್ತಡದಿಂದ ಆತ್ಮಹತ್ಯೆ ಮಾಡಿಕೊಂಡ ಶಂಕೆ ವ್ಯಕ್ತವಾಗಿದೆ. ಕೆಸ್ತೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಿಡಿಒಗೆ 3 ವರ್ಷ ಜೈಲುಶಿಕ್ಷೆ

ಮಂಗಳೂರು: ದಾಖಲೆ ನೀಡಲು ಹಣದ ಬೇಡಿಕೆ ಇಟ್ಟಿದ್ದ ಪಿಡಿಒಗೆ ದಕ್ಷಿಣ ಕನ್ನಡದ 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಮೂರು ವರ್ಷಗಳ ಸಾದಾ ಸಜೆ ಹಾಗೂ 50 ಸಾವಿರ ರು.ಗಳ ದಂಡ ವಿಧಿಸಿದೆ. ಕಡಬ ತಾಲ್ಲೂಕಿನ ಐತ್ತೂರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಪ್ರೇಮ್ ಸಿಂಗ್ ನಾಯ್ಕ 9/11ರ ದಾಖಲೆ ನೀಡಲು 9,000 ರು.ಗಳಿಗೆ ಬೇಡಿಕೆ ಇಟ್ಟಿದ್ದರು ಎಂಬ ಆರೋಪದ ಮೇಲೆ 2019ರ ಜೂನ್ 3ರಂದು ಭ್ರಷ್ಟಾಚಾರ ನಿಗ್ರಹ ದಳದ ಪೊಲೀಸರು ದಾಳಿ ನಡೆಸಿದ್ದರು.

{ **ಅರವಿಂದ ಬೆಲ್ಲದ** } ಶಾಸಕ

ಹುಬ್ಬಳ್ಳಿಯಲ್ಲಿ ಪೊಲೀಸ್ ಠಾಣೆಗೆ ಬೆಂಕಿ ಹಚ್ಚಿದವರಿಗೆ ಇವರು ಮುತ್ತು ಕೊಡುತ್ತಾರೆ, ಡಿಜೆ ಹಳ್ಳಿ, ಕೆಜೆ ಹಳ್ಳಿ ಗಲಭೆಕೋರರಿಗೆ ಮುತ್ತು ಕೊಡುತ್ತಾರೆ, ಕುಕ್ಕರ್ ಬಾಂಬ್ ಇಟ್ಟವರಿಗೂ ಮುತ್ತು ಕೊಡುತ್ತಾರೆ. ಆದರೆ ಶಾಂತ ರೀತಿಯಿಂದ ಹೋರಾಟ ಮಾಡಿದ ನಮ್ಮ ಮೇಲೆ ಲಾಠಿ ಚಾರ್ಜ್ ಮಾಡುತ್ತಾರೆ.

ಬೆಳಗಾವಿ ಅಧಿವೇಶನಕ್ಕೆ ನೂರು ವರ್ಷ ಪೂರ್ಣ। ಪ್ರತಿಯೊಬ್ಬ ಕಾಂಗ್ರೆಸಿಗರು ಭಾಗಿಯಾಗಲು ಡಿಕೆಶಿ ಕರೆ

ಅಧಿವೇಶನ ಶತಮಾನೋತ್ಸವ ಆಚರಣೆ ಹೆಮ್ಮೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮಹಾತ್ಮಾ ಗಾಂಧಿ ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಬೆಳಗಾವಿ ಅಧಿವೇಶನಕ್ಕೆ 100 ವರ್ಷಗಳು ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ನಡೆಸುತ್ತಿರುವ ಐತಿಹಾಸಿಕ ಶತಮಾನೋತ್ಸವ ಕಾರ್ಯಕ್ರಮಕ್ಕೆ ಪ್ರತಿಯೊಬ್ಬ ಕಾಂಗ್ರೆಸಿಗನೂ ಸಾಕ್ಷಿಯಾಗಬೇಕು ಎಂದು ಕೆಪಿಸಿಸಿ ಅಧ್ಯಕ್ಷ, ಡಿಸಿಎಂ ಡಿ.ಕೆ. ಶಿವಕುಮಾರ್ ಕರೆ ನೀಡಿದರು.

ಬೆಳಗಾವಿ ಕಾಂಗ್ರೆಸ್ ಅಧಿವೇಶನ ಶತಮಾನೋತ್ಸ ಆಚರಣೆ ಕುರಿತು ಕೆಪಿಸಿಸಿಯ ಭಾರತ ಜೋಡೋ ಭವನದಲ್ಲಿ ಶನಿವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, 1924ರಲ್ಲಿ ಮಹಾತ್ಮಾ ಗಾಂಧಿ ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಸ್ಥಾನವಹಿಸಿ ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ನೇತೃತ್ವ ವಹಿಸಿದರು. ಈ ಹೆಮ್ಮೆಯ ಕ್ಷಣ ಆಚರಿಸುವ ಅವಕಾಶ ಕಾಂಗ್ರೆಸ್ ಪಕ್ಷ ಹಾಗೂ ಕಾಂಗ್ರೆಸಿಗರಿಗೆ ಮಾತ್ರ ಸಿಕ್ಕಿದೆ. ಹೀಗಾಗಿ ಈ ಅವಕಾಶ ಎಲ್ಲರೂ ಬಳಸಿಕೊಳ್ಳಬೇಕು ಎಂದರು.

2028ರ ಚುನಾವಣೆಯಲ್ಲಿ ಪಕ್ಷ ಗೆಲ್ಲಿಸಲು ಮುನ್ನುಡಿ; ಗಾಂಧಿ ಅವರು ಕಾಂಗ್ರೆಸ್ ಅಧ್ಯಕ್ಷರಾದ ಜಾಗದಿಂದಲೇ ಕೆಪಿಸಿಸಿ ಅಧ್ಯಕ್ಷನಾಗಿ ನಾನು ಪ್ರಜಾಧ್ವನಿಯಾತ್ರೆ ಆರಂಭಿಸಿದೆ. ಗಾಂಧಿ ಬಾವಿಯಿಂದ ನೀರು ತೆಗೆದು ರಸ್ತೆ ತೊಳೆದು ಸ್ವಚ್ಛ ಮಾಡಿ ನಮ್ಮ ಗೃಹಜ್ಯೋತಿ ಗ್ಯಾರಂಟಿ ಯೋಜನೆ ಘೋಷಣೆ ಮಾಡಿ ನಮ್ಮ ಹೋರಾಟ ಆರಂಭಿಸಿ, ರಾಜ್ಯದಲ್ಲಿ ನಮ್ಮ ಪಕ್ಷ ಅಧಿಕಾರಕ್ಕೆ ತರಲು ಯಶಸ್ವಿಯಾಗಿದ್ದೇವೆ. ಈ ಶತಮಾನೋತ್ಸವದ ಕ್ಷಣದಲ್ಲಿ ಇತಿಹಾಸ ಮೆಲುಕು ಹಾಕುವ ಅದೃಷ್ಟ ನಮ್ಮದಾಗಿದೆ. ಮಲ್ಲಿಕಾರ್ಜುನ ಖರ್ಗೆ ಅವರ ನೇತೃತ್ವದಲ್ಲಿ ಈ ಸಂಭ್ರಮ ಆಚರಿಸುತ್ತಿದ್ದೇವೆ. ಗಾಂಧೀಜಿ ಅವರು ಅಂದು ಕುಳಿತ ಸ್ಥಾನದಲ್ಲಿ ಇಂದು ನಮ್ಮವರೇ ಆದ ಖರ್ಗೆ ಅವರು ಕೂತಿದ್ದಾರೆ. ನಾವು ಯಾವ ರೀತಿ ಪಕ್ಷ ಕಟ್ಟಬೇಕು ಎಂದು ಹೊಸ ಅಧ್ಯಾಯ ಆರಂಭಿಸಿ 2028ರ ಚುನಾವಣೆಯಲ್ಲಿ ಪಕ್ಷ ಗೆಲ್ಲಿಸಲು ಮುನ್ನುಡಿ ಬರೆಯಬೇಕಿದೆ ಎಂದರು.

ಇದು ಪಕ್ಷದ ಜತೆಗೆ ಸರಕಾರದ ಕಾರ್ಯಕ್ರಮವೂ ಆಗಿದೆ. ಎಚ್.ಕೆ. ಪಾಟೀಲ್, ವೀರಪ್ಪ ಮೊಯ್ಲಿ, ಬಿ.ಎಲ್.ಶಂಕರ್ ಅವರ ನೇತೃತ್ವದಲ್ಲಿ ಸರಕಾರದ ಸಚಿವರು ಹಾಗೂ ಪಕ್ಷದ ಮುಖಂಡರನ್ನೊಳಗೊಂಡ 60 ಸದಸ್ಯರ ಸಮಿತಿ ರಚಿಸಲಾಗಿದೆ. ಸರಕಾರ ಹಾಗೂ ಪಕ್ಷದ ವತಿಯಿಂದ ಹೇಗೆ ಕಾರ್ಯಕ್ರಮ ಮಾಡಬೇಕು ಎಂದು ಈ ಸಮಿತಿ ರೂಪುರೇಷೆ ಸಿದ್ಧಪಡಿಸಲಿದೆ. ಸರಕಾರದ ವತಿಯಿಂದ ಈಗಾಗಲೇ ಗಾಂಧಿ ಜಯಂತಿ ದಿನದಂದು ಗಾಂಧಿ ಭವನದಿಂದ ವಿಧಾನಸೌಧದ ಗಾಂಧಿ ಪ್ರತಿಮೆವರೆಗೂ ಗಾಂಧಿ ನಡಿಗೆ ಕಾರ್ಯಕ್ರಮ ಮಾಡಲಾಗಿದೆ. ನಂತರ ಶಾಲಾ ಮಕ್ಕಳೊಂದಿಗೆ ಸಂವಾದ ಕಾರ್ಯಕ್ರಮ ಮಾಡಲಾಗಿದೆ. ಪಕ್ಷದ ವತಿಯಿಂದ ಗಾಂಧಿ ವೃತ್ತದಿಂದ ಭಾರತ ಜೋಡೋ ಭವನದವರೆಗೂ ಹೆಜ್ಜೆ ಹಾಕಿದ್ದೇವೆ ಎಂದರು.

26ಕ್ಕೆ ಕಾರ್ಯಕಾರಿ ಸಮಿತಿ ಸಭೆ: ಬೆಳಗಾವಿಯಲ್ಲಿ ಗಾಂಧಿ ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಅಧಿಕಾರ ಸ್ವೀಕಾರ ಮಾಡಿದ ಜಾಗದಲ್ಲಿ ಇದೇ ತಿಂಗಳು 26ರಂದು ಕಾಂಗ್ರೆಸ್ ಪಕ್ಷದ ಕಾರ್ಯಕಾರಿ ಸಮಿತಿ ಸಭೆ ನಡೆಸಲಾಗುವುದು. ಈ ಕಾರ್ಯಕ್ರಮಕ್ಕೆ ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ಕಾರ್ಯಕಾರಿ ಸಮಿತಿಯ ಎಲ್ಲಾ ಸದಸ್ಯರು, ಎಲ್ಲಾ ರಾಜ್ಯಗಳ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರು, ಸಿಎಲ್‌ಪಿ ನಾಯಕರು, 150 ಸಂಸದರು, ಎಐಸಿಸಿ ಪ್ರಧಾನ ಕಾರ್ಯದರ್ಶಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಅಂದು ಮಹಾತ್ಮಾ ಗಾಂಧಿ ಅವರ ಪ್ರತಿಮೆ ಉದ್ಘಾಟನೆ ನಡೆಯಲಿದ್ದು, ನಂತರ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ನಂತರ ಮುಖ್ಯಮಂತ್ರಿಗಳು ಅತಿಥಿಗಳಿಗೆ ಭೋಜನ ಕೂಟ ಆಯೋಜಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಅಖಂಡ ಕಾಂಗ್ರೆಸ್ ಕಾರ್ಯಕರ್ತರು ಭಾಗಿಯಾಗಿ: 27ರಂದು ಬೆಳಗ್ಗೆ 11 ಗಂಟೆಗೆ ಐತಿಹಾಸಿಕ ಸಮಾವೇಶ ಹಮ್ಮಿಕೊಂಡಿದ್ದೇವೆ. ಈ ಸಮಾವೇಶದಲ್ಲಿ ನೀವು ಪಾಲ್ಗೊಂಡು ಸಾಕ್ಷಿಯಾಗಬೇಕು. ಕಿತ್ತೂರು ಹಾಗೂ ಕಲ್ಯಾಣ ಕರ್ನಾಟಕ ಭಾಗದ ಮುಖಂಡರಿಗೆ ಆಹ್ವಾನ ನೀಡಿದ್ದೇನೆ. ಸಚಿವ ಸಂಪುಟ ಸಭೆಯಲ್ಲಿ ನಾನು ಹಾಗೂ ಮುಖ್ಯಮಂತ್ರಿಗಳು ಎಲ್ಲರ ಜವಾಬ್ದಾರಿ ಹಂಚಿದ್ದೇವೆ. ಕೆಪಿಸಿಸಿ ಪದಾಧಿಕಾರಿಗಳಿಗೆ ನೀಡಲಾಗಿರುವ ಪಟ್ಟಿ ಸಿದ್ಧಪಡಿಸಲಾಗಿದೆ. ದೇಶಕ್ಕೆ 75ನೇ ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ನಮ್ಮ ಪಕ್ಷದ ವತಿಯಿಂದ ಸ್ವಾತಂತ್ರ್ಯ ನಡಿಗೆ ಎಂಬ ಕಾರ್ಯಕ್ರಮ ಮಾಡಲಾಯಿತು. ಸುಮಾರು 3 ಲಕ್ಷ ಜನ ಹೆಜ್ಜೆ ಹಾಕಿದ್ದರು. ಆಮೂಲಕ ಇತಿಹಾಸ ಪುಟಕ್ಕೆ ಸೇರಿದ್ದಿರಿ. ಈ ಕಾರ್ಯಕ್ರಮ ಮತ್ತಷ್ಟು ಪವಿತ್ರವಾದ ಕಾರ್ಯಕ್ರಮವಾಗಿದ್ದು, ಇದು ಕೇವಲ ಬೆಳಗಾವಿಗೆ ಮಾತ್ರ ಸೀಮಿತವಾಗಬಾರದು. ಅಖಂಡ ಕರ್ನಾಟಕ ಕಾಂಗ್ರೆಸ್ ಕಾರ್ಯಕರ್ತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಎಂದು ತಿಳಿಸಿದರು.

ಬೆಳಗಾವಿ ಕಾಂಗ್ರೆಸ್ ಅಧಿವೇಶನ ಶತಮಾನೋತ್ಸ ಆಚರಣೆ ಕುರಿತು ಕೆಪಿಸಿಸಿಯ ಭಾರತ ಜೋಡೋ ಭವನದಲ್ಲಿ ಶನಿವಾರ ಪೂರ್ವಭಾವಿ ಸಭೆ ನಡೆಯಿತು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮೊದಲಾದ ಕಾಂಗ್ರೆಸ್ ನಾಯಕರು ಇದ್ದರು.

ಮೈಸೂರು ದಸರಾವನ್ನು ಹೇಗ ನಾವು ವಿಜೃಂಭಣೆಯಿಂದ ಆಚರಣೆ ಮಾಡಿದ್ದೆವೋ ಅದೇ ರೀತಿ ಬೆಳಗಾವಿಯಲ್ಲೂ ಈ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಸಲು ಸುಮಾರು 8 ಕೋಟಿ ವೆಚ್ಚದಲ್ಲಿ ಬೆಳಗಾವಿಯಲ್ಲಿ ದೀಪಾಲಂಕಾರ ಮಾಡಲಾಗುವುದು. ನೀವೆಲ್ಲರೂ ಕಾಂಗ್ರೆಸಿಗರು, ಈ ಅಭೂತಪೂರ್ವ ಕ್ಷಣಕ್ಕೆ ಸಾಕ್ಷಿಯಾಗುವ ಅವಕಾಶ ನಿಮಗೆ ಮಾತ್ರ ಇದೆ. ಈ ಕಾರ್ಯಕ್ರಮಕ್ಕಾಗಿ ನಾವು ಅನೇಕ ಸಮಿತಿಗಳನ್ನು ಆಯೋಜಿಸುತ್ತಿದ್ದೇವೆ.

ಡಿ.ಕೆ.ಶಿವಕುಮಾರ್, ಡಿಸಿಎಂ

ಪ್ರತಿ ಕ್ಷೇತ್ರದಿಂದ ಐದು ಸಾವಿರ ಜನ ಕರೆ ತನ್ನಿ

ಕಾರ್ಯಕ್ರಮದ ಹಿನ್ನೆಲೆಯಲ್ಲಿ ಕಿತ್ತೂರು ಕರ್ನಾಟಕ ಭಾಗದ ಎಲ್ಲಾ ಕ್ಷೇತ್ರಗಳಲ್ಲಿ ಇದೇ 20-21ರಂದು ಪಕ್ಷದವತಿಯಿಂದ ಕಾರ್ಯಕರ್ತರ ಜಾಗೃತಿ ಸಭೆ ಮಾಡಿ ಈ ಕಾರ್ಯಕ್ರಮದ ಬಗ್ಗೆ ಅವರಲ್ಲಿ ಅರಿವು ಮೂಡಿಸಬೇಕು. ಪಕ್ಷದ ಪ್ರಧಾನ ಕಾರ್ಯದರ್ಶಿ ಹಾಗೂ ಉಪಾಧ್ಯಕ್ಷರುಗಳು ಈ ಸಭೆಗಳಿಗೆ ವೀಕ್ಷಕರಾಗಿ ತೆರಳಿ ಯಾವ ಕ್ಷೇತ್ರದಿಂದ ಎಷ್ಟು ಜನರನ್ನು ಹೊರಡಿಸುತ್ತಿದ್ದಾರೆ ಎಂದು ಮಾಹಿತಿ ಕಲೆಹಾಕಬೇಕು. ಈ ಭಾಗದ ಪ್ರತಿ ಕ್ಷೇತ್ರದಿಂದ ಕನಿಷ್ಠ 5000 ಜನರನ್ನು ಸಮಾವೇಶಕ್ಕೆ ಕರೆತರಬೇಕು. ಇದೊಂದು ದೊಡ್ಡ ಸಮಾವೇಶವಾಗಿದ್ದು, ಇದನ್ನು ಯಶಸ್ವಿಗೊಳಿಸಬೇಕು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಶಿಷ್ಟಾಚಾರದ ಜವಾಬ್ದಾರಿ

ಪ್ರತಿಯೊಬ್ಬ ಶಾಸಕರಿಗೆ ಶಿಷ್ಟಾಚಾರದ ಜವಾಬ್ದಾರಿ ನೀಡಲಾಗಿರುತ್ತದೆ. ಸಕ್ರಿಯರಾಗಿರುವ ಮಾಜಿ ಶಾಸಕರು ಹಾಗೂ ಮಾಜಿ ಸಚಿವರಿಗೆ ನಾವು ಜವಾಬ್ದಾರಿ ಹಂಚುತ್ತಿದ್ದೇವೆ. ನಾವು ಯಾರಿಗೂ ಉಳಿದುಕೊಳ್ಳುವ ಹಾಗೂ ಸಾರಿಗೆ ವ್ಯವಸ್ಥೆ ಕಲ್ಪಿಸಿರುವುದಿಲ್ಲ. ಪ್ರತಿ ಬ್ಲಾಕ್ ಹಾಗೂ ವಿಧಾನಸಭಾ ಕ್ಷೇತ್ರಗಳಿಂದ ಹಣ ಕೊಟ್ಟು ಜನರನ್ನು ಕರೆತರುವುದು ಬೇಡ. ಪಂಚಾಯ್ತಿ ಚುನಾವಣೆಯಲ್ಲಿ ನಿಂತು ಗೆದ್ದವರು, ಸೋತವರು, ವಿವಿಧ ಸಂಸ್ಥೆಗಳಲ್ಲಿ ನಾಮನಿರ್ದೇಶನವಾಗಿರುವವರು, ಕಾಂಗ್ರೆಸ್ ಕಾರ್ಯಕರ್ತರು, ವಿವಿಧ ಸಮಿತಿ ಸದಸ್ಯರು, ಪಾಲಿಕೆ ಸದಸ್ಯರುಗಳನ್ನು ಕರೆತರಬೇಕು. ಬೆಂಗಳೂರು ವಲಯದಿಂದ ಕನಿಷ್ಠ 100 ಜನರನ್ನಾದರೂ ನಿಮ್ಮ ನಿಮ್ಮ ವಾಹನಗಳಲ್ಲಿ ಆಗಮಿಸಬೇಕು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬೆಳಗಾವಿ ಲಾಠಿ ಪ್ರಹಾರಕ್ಕೆ ರೇಣುಕಾಚಾರ್ಯ ಕಿಡಿ

ಸ್ವಾಮೀಜಿ ವಿರುದ್ಧ ಷಡ್ಯಂತ್ರ

ದಾವಣಗೆರೆ: ಬೆಳಗಾವಿಯಲ್ಲಿ ಪಂಚಮಸಾಲಿ ಮೀಸಲಾತಿ ಹೋರಾಟಗಾರರ ಮೇಲೆ ಗೋಲಿ ಬಾರ್ ಮಾಡಲು ಸಂಚು ಮಾಡಲಾಗಿತ್ತು. ಈ ಮೂಲಕ ಹೋರಾಟ ನಿಲ್ಲಿಸಲು ಜಯಮೃತ್ಯುಂಜಯ ಸ್ವಾಮೀಜಿ ಮುಗಿಸಲು ಪ್ಲ್ಯಾನ್ ನಡೆದಿತ್ತು ಎಂದು ಮಾಜಿ ಸಚಿವ ಎಂ.ಪಿ ರೇಣುಕಾಚಾರ್ಯ ಆರೋಪಿಸಿದ್ದಾರೆ.

ಪಂಚಮಸಾಲಿ ಹೋರಾಟಗಾರರ ಮೇಲಿನ ಲಾಠಿ ಚಾರ್ಜ್ ವಿಚಾರಕ್ಕೆ ಸಂಬಂಧಿಸಿದಂತೆ ಅವರು ಪ್ರತಿಕ್ರಿಯಿಸಿ, ಸ್ವಾಮೀಜಿ ಮುಗಿಸಿದ್ರೆ ಹೋರಾಟ ನಿಲ್ಲುತ್ತೆ ಎಂದು ಗೋಲಿ ಬಾರ್ ಮಾಡಲು ಪ್ಲ್ಯಾನ್ ನಡೆದಿತ್ತು ಎಂದು ಬಾಂಬ್ ಸಿಡಿಸಿದ್ದಾರೆ.

ಚನ್ನಮ್ಮ ವಂಶಸ್ಥರ ಮೇಲೆ ನಡೆದ ಲಾಠಿ ಚಾರ್ಜ್‌ನ್ನು ಖಂಡಿಸಬೇಕು. ಇಲ್ಲವಾದರೆ ನಮಗೂ ಕೂಡ ಉಳಿಗಾಲವಿಲ್ಲದಂತಾಗುತ್ತದೆ. ನಾವು ಪಂಚಮಸಾಲಿ ಸಮುದಾಯದ ಜೊತೆ ಗಟ್ಟಿಯಾಗಿದ್ದೇವೆ. ಸಮುದಾಯದವರ ಮೇಲಿನ ದಾಳಿಯನ್ನು ಎಲ್ಲಾ ಮಠಾಧೀಶರು ಖಂಡಿಸಬೇಕು. ಮೀಸಲಾತಿ ಅವರ ಹಕ್ಕು, ಅದನ್ನು ಅವರು ಕೇಳುತಿದ್ದಾರೆ ಎಂದಿದ್ದಾರೆ.

ಲಾಠಿ ಚಾರ್ಜ್ ವಿಚಾರವಾಗಿ ಗೃಹ ಸಚಿವ ಜಿ.ಪರಮೇಶ್ವರ್ ಹಗುರವಾಗಿ ಮಾತನಾಡಿದ್ದಾರೆ. ಅವರನ್ನು ಸಂಪುಟದಿಂದ ವಜಾ ಮಾಡಬೇಕು. ಲಾಠಿ ಚಾರ್ಜ್ ಮಾಡುವ ಬದಲು ಮುತ್ತು ಕೊಡಬೇಕಾ ಅಂತ ಕೇಳ್ತಾರೆ. ಮುತ್ತು ಕೊಡು ಎಂದು ಕೇಳಿದ್ದಾರಾ? ಹೋರಾಟಗಾರರು ಇರುವಲ್ಲಿಗೆ ಹೋಗಿ ಅವರ ಮನವಿಯನ್ನ ಕೇಳಬೇಕಿತ್ತು ಎಂದು ಕಿಡಿಕಾರಿದ್ದಾರೆ.

ಹೋರಾಟ ಹತ್ತಿಕ್ಕಲು ಕಲ್ಲು ತೂರಿರಬಹುದು

ಆರ್‌ಎಸ್‌ಎಸ್‌ನವರು ಹೋರಾಟ ದಲ್ಲಿ ಕಲ್ಲು ತೂರಿದ್ದಾರೆ ಎಂಬ ಖಾಶಪ್ಪನವರ ಹೇಳಿಕೆ ವಿಚಾರವಾಗಿ, ಹೋರಾಟ ಹತ್ತಿಕ್ಕಲು ಅವರೇ ಕಲ್ಲು ತೂರಿರಬಹುದು. ಅಧಿಕಾರದ ಪಿತ್ತ ನೆತ್ತಿಗೇರಿ ಈ ರೀತಿ ಮಾತನಾಡುತಿದ್ದಾರೆ. ನಮ್ಮ ಸರಕಾರ ಇರುವ ಸಮಯದಲ್ಲಿ ಒಂದು ಕೂಡ ಅಹಿತಕರ ಘಟನೆ ನಡೆಯಲಿಲ್ಲ. ನೀವು ಈ ರೀತಿ ಮಾತನಾಡೋದು ಸರಿಯಲ್ಲ. ಈ ಬಗ್ಗೆ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದ್ದಾರೆ.

ಡಿಎನ್‌ಎ ಟೆಸ್ಟ್ ನಡೆಸುವಂತೆ ಕುಳಗಟ್ಟೆ ಗ್ರಾಮಸ್ಥರ ಆಗ್ರಹ

ದೇವರಕೋಣಕ್ಕಾಗಿ ಗ್ರಾಮಗಳ ಸಮರ

ದಾವಣಗೆರೆ: ದೇವರಕೋಣದ ಒಡೆತನ ಸಂಬಂಧ ದಾವಣಗೆರೆ ಜಿಲ್ಲೆಯ ಎರಡು ಗ್ರಾಮಗಳ ನಡುವಣ ಸಮರ ತಾರಕಕ್ಕೇರಿದೆ. ತಮಗೆ ಸೇರಿದ್ದು ಎಂದು ಹೇಳಿಕೊಂಡು ಆರಂಭಗೊಂಡ ಎರಡು ಗ್ರಾಮಸ್ಥರ ನಡುವಿನ ಸಂಘರ್ಷ ಡಿಎನ್‌ಎ ಪರೀಕ್ಷೆ ಹಂತಕ್ಕೆ ಬಂದು ತಲುಪಿದೆ.

ದೇವರಕೋಣವನ್ನು ಕುಣಿಬೆಳಕೆರೆ ಹಾಗೂ ಕುಳಗಟ್ಟೆ ಗ್ರಾಮದ ಜನರು ತಮಗೆ ಸೇರಿದ್ದು ಎಂದು ಹೇಳಿಕೊಳ್ಳುತ್ತಿದ್ದಾರೆ. ಈ ಸಂಬಂಧ ದಾವಣಗೆರೆ ಎಸ್ಪಿ ನೇತೃತ್ವದಲ್ಲಿ ಶನಿವಾರ ಎರಡು ಗ್ರಾಮಗಳ ಜನರ ಪಂಚಾಯ್ತಿ ನಡೆದಿದೆ. ಈ ವೇಳೆ ಕುಣಿಬೆಳಕೆರೆ ಗ್ರಾಮಸ್ಥರು, ದೇವರ ಬೆಳಕೆರೆಗೆ ಕೋಣ ಹೋಗಿದೆ, ಅಲ್ಲಿಂದ ಅದನ್ನು ಕದ್ದುಕೊಂಡು ಹೋಗಿದ್ದಾರೆ ಎಂದು ವಾದಿಸಿದ್ದಾರೆ. ಕೋಣ ಯಾವ ಗ್ರಾಮಕ್ಕೆ ಸೇರಿದ್ದು ಎಂಬ ಬಗ್ಗೆ ಡಿಎನ್‌ಎ ಟೆಸ್ಟ್ ಆಗಲಿ ಎಂದು ಕುಳಗಟ್ಟೆ ಗ್ರಾಮಸ್ಥರು ಪಟ್ಟು ಹಿಡಿದಿದ್ದಾರೆ. ಕೋಣನ ಮರಿಗಳು ನಮ್ಮ ಬಳಿ ಇವೆ. ಅವುಗಳ ಡಿಎನ್‌ಎ ಪರೀಕ್ಷಿಸಿದರೆ ಕೋಣ ಯಾರಿಗೆ ಸೇರಿದ್ದು ಎಂಬುದು ತಿಳಿಯಲಿದೆ ಎಂದು ಗ್ರಾಮಸ್ಥರು ಮಲೇಬೆನ್ನೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.



ಪೊಲೀಸರಿಗೆ ತಲೆನೋವು

ಶಿವಮೊಗ್ಗ ಪಶುವೈದ್ಯರು ಕೋಣವನ್ನು ಪರೀಕ್ಷಿಸಿ ಅದು ಆರು ವರ್ಷ ವಯಸ್ಸಿನ ಕೋಣ ಎಂದು ವರದಿ ನೀಡಿದ್ದಾರೆ. ವಿವಾದದ ಹಿನ್ನೆಲೆಯಲ್ಲಿ ಕೋಣವನ್ನು ಶಿವಮೊಗ್ಗದ ಗೋಶಾಲೆಯಲ್ಲಿ ಇರಿಸಲಾಗಿದೆ. ಮುಂದಿನ ವರ್ಷ ಗ್ರಾಮದಲ್ಲಿ ಕರಿಯಮ್ಮನ ಜಾತ್ರೆ ನಡೆಯಲಿದ್ದು ಅದಕ್ಕಾಗಿ ದೇವರ ಕೋಣ ಬೇಕಾಗಿದೆ. ಈಗಾಗಲೇ ಎರಡೂ ಗ್ರಾಮಗಳ ಜನರನ್ನು ಸೇರಿಸಿ ನಡೆಸಿದ ಸಭೆಗಳು ವಿಫಲವಾಗಿವೆ. ಕೋಣ ತಮ್ಮದೇ ಎಂದು ಎರಡೂ ಗ್ರಾಮಗಳು ಪಟ್ಟು ಹಿಡಿದಿರುವುದರಿಂದ ಪೊಲೀಸರಿಗೆ ತಲೆನೋವಾಗಿ ಮಾರ್ಪಟ್ಟಿದೆ.

ಗ್ಯಾರಂಟಿ ಹಣದಲ್ಲಿ ಬೋರ್‌ವೆಲ್ ಕೊರೆಸಿದ ಅತ್ತೆ-ಸೊಸೆ

ಗೃಹಲಕ್ಷ್ಮಿಗೆ ಒಲಿದ ಗಂಗಾಮಾತೆ

ಗದಗ: ಕಾಂಗ್ರೆಸ್ ಸರಕಾರದ ಪಂಚ ಗ್ಯಾರಂಟಿ ಯೋಜನೆಗಳಿಂದ ಬಡ, ಮಧ್ಯಮ ವರ್ಗದ ಕುಟುಂಬಗಳಿಗೆ ಸಾಕಷ್ಟು ಅನುಕೂಲವಾಗುತ್ತಿದೆ. ವಿಶೇಷವಾಗಿ ಗೃಹಲಕ್ಷ್ಮಿ ಯೋಜನೆಯ ಹಣವನ್ನು ಮಹಿಳೆಯರು ವಿವಿಧ ಉದ್ದೇಶಗಳಿಗೆ ಬಳಸಿಕೊಳ್ಳುತ್ತಿದ್ದಾರೆ. ಈ ದುಡ್ಡಿನಿಂದ ಮಗನಿಗೆ ಬೈಕ್ ಕೊಡಿಸಲು ತಾಯಿಯೊಬ್ಬರು ಇತ್ತೀಚೆಗೆ ಮುಂಗಡ ಪಾವತಿಸಿ ಗಮನ ಸೆಳೆದಿದ್ದರು. ಇದೀಗ ಯೋಜನೆ ಹಣದಿಂದ ಅತ್ತೆ-ಸೊಸೆ ಬೋರ್‌ವೆಲ್ ಕೊರೆಸಿದ್ದು, ಭಾರಿ ಪ್ರಮಾಣದಲ್ಲಿ ನೀರು ಸಿಕ್ಕಿದೆ.

44 ಸಾವಿರ ರು. ಉಳಿತಾಯ: ಗದಗ ಜಿಲ್ಲೆ ಗಜೇಂದ್ರಗಡ ಪಟ್ಟಣದ ಮಾಲಧಾರ ಓಣಿಯ ಅತ್ತೆ ಮಾಬುಬೀ ಮತ್ತು ಸೊಸೆ ರೋಷನ್ ಬೇಗಂ ಅವರು ಪ್ರತಿ ತಿಂಗಳು ತಮಗೆ ಬರುತ್ತಿದ್ದ ಗೃಹಲಕ್ಷ್ಮಿ ಯೋಜನೆ ಹಣದಲ್ಲಿ ಉಳಿತಾಯ ಮಾಡಿ 44 ಸಾವಿರ ರು.ಗಳನ್ನು ಕೊಳವೆಬಾವಿಗೆ ನೀಡಿದ್ದಾರೆ. ಬೋರ್‌ವೆಲ್ ಕೊರೆಸಲು 60 ಸಾವಿರ ರು. ಖರ್ಚು ಆಗಿದ್ದು, ಇದರಲ್ಲಿ 44 ಸಾವಿರ ರು.ಗಳನ್ನು ಅತ್ತೆ-ಸೊಸೆ ನೀಡಿದ್ದರೆ, ಉಳಿದ ಹಣವನ್ನು ಮಗ ಹಾಕಿ ಬೋರ್‌ವೆಲ್ ಕೊರೆಸಿದ್ದಾರೆ. ಇನ್ನು ಕೊಳವೆ ಬಾವಿಯಲ್ಲಿ ಭರ್ಜರಿ ನೀರು ಬಂದಿದ್ದರಿಂದ ಅತ್ತ-ಸೊಸೆ ಸಂತಸಗೊಂಡಿದ್ದು, ಸಿದ್ದರಾಮಯ್ಯ ಜಾರಿಮಾಡಿದ ಗೃಹಲಕ್ಷ್ಮಿ ಯೋಜನೆಯಿಂದ ಬಹಳ ಅನುಕೂಲವಾಗಿದೆ. ಹೀಗಾಗಿ ಅವರಿಗೆ ನಾವು ಕೃತಜ್ಞತೆ ಸಲ್ಲಿಸುತ್ತೇವೆ ಎಂದು ಅತ್ತೆ -ಸೊಸೆ ಹೇಳಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹರ್ಷ

ಈ ಕುರಿತು ಸಾಮಾಜಿಕ ಜಾಲತಾಣದ ತಮ್ಮ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿದ್ದ ಸಿಎಂ ಸಿದ್ದರಾಮಯ್ಯ , ಬಡತನದಲ್ಲೂ ಸ್ವಾವಲಂಬಿ ಬದುಕಿನ ಕನಸು ಕಾಣುತ್ತಿರುವ ಹೆಣ್ಣುಮಕ್ಕಳಿಗೆ ನೆರವಾಗುವುದೇ ನಮ್ಮ ಯೋಜನೆಯ ಉದ್ದೇಶ ಎಂದಿದ್ದಾರೆ. ಇದು ನನ್ನ ರಾಜಕೀಯ ಬದುಕಿನ ಮತ್ತೊಂದು ಸಾರ್ಥಕ ಕ್ಷಣ. ನಮ್ಮ ಗ್ಯಾರಂಟಿಗಳ ಬಗ್ಗೆ ದೇಶದ ಪ್ರಧಾನಿಯೇ ಅಪಪ್ರಚಾರಕ್ಕೆ ಇಳಿದಿರುವ, ಇಡೀ ಬಿಜೆಪಿ ಪಕ್ಷ ಗ್ಯಾರಂಟಿ ಯೋಜನೆಗಳು ಸ್ಥಗಿತವಾಗಲೆಂದು ದಿನವಿಡೀ ಜಪಿಸುತ್ತಿರುವ ಹೊತ್ತಿನಲ್ಲಿ ಇಂಥದ್ದೊಂದು ಪ್ರಸಂಗ ಬೆಳಕಿಗೆ ಬಂದಿರುವುದು ಗ್ಯಾರಂಟಿ ವಿರೋಧಿಗಳೆಲ್ಲರಿಗೂ ತಿರುಗೇಟು ನೀಡಿದಂತಿದೆ ಎಂದು ಟೀಕಾಪ್ರಹಾರ ನಡೆಸಿದ್ದಾರೆ.

ಜನರಿಗೆ ವರದಾನ

ಇತ್ತೀಚೆಗೆ ಮಹಿಳೆಯೊಬ್ಬರು ಗೃಹಲಕ್ಷ್ಮಿ ಯೋಜನೆಯ ಹಣ ಬಳಸಿಕೊಂಡು, ತನ್ನ ನಾಲ್ವರು ಹೆಣ್ಣು ಮಕ್ಕಳ ಉದ್ಯೋಗಕ್ಕೆ ದಾರಿ ಮಾಡಿಕೊಟ್ಟಿದ್ದರು. ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲೂಕಿನ ಕೊರ್ತಿಯ ಗಂಗವ್ವ ಬಿರಾದಾರ್ ಎಂಬ ಮಹಿಳೆ ಗೃಹಲಕ್ಷ್ಮಿ ಯೋಜನೆಯ 12 ತಿಂಗಳ ರು. 24,000 ಹಣ ಉಳಿತಾಯ ಮಾಡಿ ಹೊಲಿಗೆ ಯಂತ್ರ ಖರೀದಿಸಿ, ತನ್ನ ಹೆಣ್ಣುಮಕ್ಕಳಿಗೆ ಹೊಲಿಗೆ ತರಬೇತಿ ನೀಡುವ ಮೂಲಕ ಬದುಕು ರೂಪಿಸಿದ್ದರು.

ಕಾರಂಜಾ ಸಂತ್ರಸ್ತರಿಗೆ ಪ್ಯಾಕೇಜ್ ಘೋಷಿಸಿ

ಬೀದರ್: ಕಾರಂಜಾ ಯೋಜನೆಯಲ್ಲಿ ಜಮೀನು ಕಳೆದುಕೊಂಡು ಸಂತ್ರಸ್ತರಾದ ರೈತರಿಗೆ ವಿಶೇಷ ಪ್ಯಾಕೇಜ್ ಘೋಷಿಸಿ ಈ ಸಮಸ್ಯೆಗೆ ತಾರ್ಕಿಕ ಅಂತ್ಯ ಹಾಡಬೇಕು' ಎಂದು ಕಲ್ಯಾಣ ಕರ್ನಾಟಕ ಹೋರಾಟ ಸಮಿತಿ ಸಂಸ್ಥಾಪಕ ಅಧ್ಯಕ್ಷ ಲಕ್ಷ್ಮಣ ದಸ್ತಿ ಆಗ್ರಹಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಮಾನವೀಯ ಮಾನದಂಡದ ಮೇಲೆ ಕಲ್ಯಾಣ ಕರ್ನಾಟಕದ ಗಡಿ ಜಿಲ್ಲೆ ಬೀದರ್ನ ಸಂತ್ರಸ್ತ ರೈತರಿಗೆ ಒನ್ ಟೈಮ್ ಸೆಟ್ಲಮೆಂಟ್ ಮೂಲಕ ಪರಿಹಾರ ಘೋಷಿಸಬೇಕು' ಎಂದು ಒತ್ತಾಯಿಸಿದರು.

ಕಾರಂಜಾ ಯೋಜನೆಯಲ್ಲಿ ಜಮೀನು ಕಳೆದುಕೊಂಡ ರೈತರ ಪ್ರತಿ ಎಕರೆ ಜಮೀನಿಗೆ ಮಾರುಕಟ್ಟೆಯಲ್ಲಿ ಈಗ 30 ಲಕ್ಷ ಬೆಲೆ ಇದೆ. ಹಾಗಂತ ಅಷ್ಟು ಕೊಡಬೇಕೆಂದು ನಾವು ಕೇಳುತ್ತಿಲ್ಲ. ರೈತರಿಗೆ ಅನ್ಯಾಯವಾಗದಂತೆ ಪರಿಹಾರ ನೀಡಬೇಕು. 889 ದಿನಗಳಿಂದ ರೈತರು ಅಹೋರಾತ್ರಿ ಧರಣಿ ನಡೆಸುತ್ತಿದ್ದಾರೆ. ಮನನೊಂದು ರೈತರು ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಬಿಜೆಪಿ ಶಾಸಕ ಡಾ. ಶೈಲೇಂದ್ರ ಕೆ. ಬೆಲ್ದಾಳೆ ಅವರು ಸದನದಲ್ಲಿ ವಿಷಯ ಪ್ರಸ್ತಾಪಿಸಿರುವುದು ಸ್ವಾಗತಾರ್ಹ' ಎಂದು ಹೇಳಿದರು.

ಪ್ರವರ್ಗ-1ರ ಮೀಸಲಿಗೆ ಆಗ್ರಹ

ವಿಧಾನಪರಿಷತ್: ಹಿಂದುಳಿದ ಪ್ರವರ್ಗ-1ರಲ್ಲಿ ಬರುವ 95 ಉಪಜಾತಿಗಳಿಗೆ ಜನಸಂಖ್ಯೆಕ್ಕ ನುಗುಣವಾಗಿ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯವಾಗಿ ಮೀಸಲು ಅವೈಜ್ಞಾನಿಕವಾಗಿದ್ದು, ಇದನ್ನು ಸರಿಪಡಿಸಿ ಕನಿಷ್ಠ ಶೇ.7 ಮೀಸಲು ಹೆಚ್ಚಿಸಬೇಕು ಎನ್ನುವ ಪ್ರಸ್ತಾಪಕ್ಕೆ ಆಡಳಿತ ಮತ್ತು ವಿರೋಧಪಕ್ಷದ ಸದಸ್ಯರು ಪಕ್ಷಭೇದ ಮರೆತು ಒಕ್ಕೊರಲ ಬೆಂಬಲ ಸೂಚಿಸಿದರು.

ಗಮನ ಸೆಳೆಯುವ ಸೂಚನೆ ವೇಳೆ ಬಿಜೆಪಿ ಸದಸ್ಯ ಡಾ. ಸಾಬಣ್ಣ ತಳವಾರ ಪ್ರಸ್ತಾಪಿಸಿದ ವಿಷಯಕ್ಕೆ ಬಿಜೆಪಿ ಸದಸ್ಯರಾದ ಎನ್. ರವಿಕುಮಾರ, ಜೆಡಿಎಸ್ ಸದಸ್ಯ ವೈ.ಎ. ತಿಪ್ಪೇಸ್ವಾಮಿ ಧ್ವನಿಗೂಡಿಸಿದರು. ಇನ್ನು ಕಾಂಗ್ರೆಸ್ ಸದಸ್ಯ ಶ್ರೀನಿವಾಸ, ಬಿ.ಕೆ. ಹರಿಪ್ರಸಾದ್, ಎಂ. ನಾಗರಾಜು ಸಹಮತ ವ್ಯಕ್ತಪಡಿಸಿದರು. ಈಗಾಗಲೇ ತಮಿಳುನಾಡು ರಾಜ್ಯದಲ್ಲಿ ಮೀಸಲು ಪ್ರಮಾಣ ಶೇ.69 ಹೆಚ್ಚಿಸಲಾಗಿದೆ. ಅದೇ ರೀತಿ ಕರ್ನಾಟಕದಲ್ಲೂ ಸಂವಿಧಾನದ ಪರಿಚ್ಛೇದ 9 ರ ವ್ಯಾಪ್ತಿಗೆ ತಂದು ಮೀಸಲು ಪ್ರಮಾಣ ಹೆಚ್ಚಿಸಬೇಕು ಹಾಗೂ ಜಾತಿವಾರು ಜನಗಣತಿ ವರದಿ ಸಹ ಜಾರಿಗೊಳಿಸಬೇಕು ಎಂದು ಸರಕಾರಕ್ಕೆ ಆಗ್ರಹಿಸಿದರು.

ಬಿಜೆಪಿಯಿಂದ ಈಗ ಉತ್ಸುಕತೆ ಹೆಚ್ಚು

ಹಿಂದುಳಿದ ವರ್ಗಗಳ ಸಚಿವ ಶಿವರಾಜ ತಂಗಡಗಿ ಮಾತನಾಡಿ, ನಮ್ಮ ಸರಕಾರವೇ ಜಾತಿವಾರು ಜನಗಣತಿ ವರದಿ ಸ್ವೀಕರಿಸಿದರು. ಈ ಬಗ್ಗೆ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ . ಈಗಾಗಲೇ ಎಸ್‌ಸಿ-ಎಸ್‌ಟಿ ಕೆನೆಪದರು ತೆಗೆದುಹಾಕಿದ್ದಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಅನುಷ್ಠಾನಗೊಳಿ ಸುತ್ತಿರುವ ಎಲ್ಲ ಯೋಜನೆಗಳಿಗೆ ವಿಶೇಷವಾಗಿ ವಿದ್ಯಾರ್ಥಿಗಳಿಗೆ ನೀಡುವ ವಿದ್ಯಾರ್ಥಿ ವೇತನ, ಶುಲ್ಕಮರುಪಾವತಿ, ವಿದ್ಯಾಸಿರಿ ಯೋಜನೆಗಳಿಗೆ ವರಮಾನದ ಮಿತಿ ಕುರಿತು ಮಾಹಿತಿ ನೀಡಿ,ಬಿಜೆಪಿಯವರು ತಾವು ಅಧಿಕಾರದಲ್ಲಿ ಇದ್ದಾಗ ಇಚ್ಛಾಶಕ್ತಿ ಪ್ರದರ್ಶಿಸದೆ ಈಗ ಹೆಚ್ಚು ಉತ್ಸುಕತೆ ತೋರುತ್ತಾರೆ ಎಂದು ಚಾಟಿ ಬೀಸಿದರು.

ಕೇರಳದಂತೆ ವೇತನ ಅಸಾಧ್ಯ

ವಿಧಾನ ಪರಿಷತ್: ರಾಜ್ಯದಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷ, ಉಪಾಧ್ಯಕ್ಷರು ಹಾಗೂ ಸದಸ್ಯರುಗಳಿಗೆ ಮಾಸಿಕ ಗೌರವಧನ ಹೆಚ್ಚಳ ಮಾಡುವ ಕುರಿತ ಬೇಡಿಕೆಯನ್ನು ಮುಖ್ಯಮಂತ್ರಿ ಅವರ ಗಮನಕ್ಕೆ ತರಲಾಗುವುದು. ಆದರೆ, ಕೇರಳ ಮಾದರಿಯಲ್ಲಿ ಹೆಚ್ಚಳ ಆಗುವುದಿಲ್ಲ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಸ್ಪಷ್ಟಪಡಿಸಿದರು.

ಪ್ರಶ್ನೋತ್ತರ ವೇಳೆ ಬಿಜೆಪಿ ಸದಸ್ಯರಾದ ಡಾ.ಧನಂಜಯ ಸರ್ಜಿ, ಡಿ.ಎಸ್.ಅರುಣ್ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯದಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರುಗಳಿಗೆ ಕೇರಳದಲ್ಲಿರುವಂತೆ ಮಾಸಿಕ ಗೌರವ ಧನ ಹೆಚ್ಚಳ ಮಾಡಲು ಸಾಧ್ಯವಿಲ್ಲ. ಆದರೆ, ಹೆಚ್ಚಳ ಮಾಡುವ ಕುರಿತ ಮನವಿಯನ್ನು ಮುಖ್ಯಮಂತ್ರಿ ಅವರ ಗಮನಕ್ಕೆ ತರಲಾಗುವುದು ಎಂದರು.

ಬಾರಿ ಹೊರೆಯಾಗಲಿದೆ

ಕೇರಳ ಮಾದರಿ ಗೌರವ ಧನ ಹೆಚ್ಚಳ ಬಗ್ಗೆ ಪ್ರಸ್ತಾಪ ಆಗಿದೆ. ಕೇರಳ ಮಾದರಿಯಲ್ಲಿ ವೇತನ ಜಾಸ್ತಿ ಮಾಡಲು ಸಾಧ್ಯವಿಲ್ಲ. ಕೇರಳದಲ್ಲಿ ಕೇವಲ 900 ಗ್ರಾಪಂಯಿದ್ದರೆ ರಾಜ್ಯದಲ್ಲಿ 6 ಸಾವಿರಯಿದ್ದು, ನಮಗೆ ಹೀಗಾಗಿ ಬಾರಿ ಹೊರೆಯಾಗಲಿದೆ. ಆದ್ದರಿಂದ ಕೇರಳ ಮಾದರಿ ವೇತನ ಹೆಚ್ಚಳ ಸಾಧ್ಯವಿಲ್ಲ. ಆದಾಗ್ಯೂ ಪಂಚಾಯತಿ ಸದಸ್ಯರು, ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ವೇತನ ಹೆಚ್ಚಳಕ್ಕೆ ಕ್ರಮ ವಹಿಸಿ ಉಳಿದ ಬೇಡಿಕೆಗಳಲ್ಲಿ ಸಾಧ್ಯಸಾಧ್ಯತೆ ನೋಡಿಕೊಂಡು ಈಡೇರಿಕೆ ಮಾಡಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಭ್ರಷ್ಟಾಚಾರ ಆರೋಪ: ಗದ್ದಲ

ವಿಧಾನ ಪರಿಷತ್: ಶುಕ್ರವಾರ ಮೇಲ್ಮನೆಯಲ್ಲಿ ಉತ್ತರ ಕರ್ನಾಟಕ ನೀರಾವರಿ ಚರ್ಚೆ ವೇಳೆ ಅಬಕಾರಿ ಸಚಿವರ ಮೇಲಿನ ಭ್ರಷ್ಟಾಚಾರ ಆರೋಪದ ಕುರಿತು ಪರೋಕ್ಷವಾಗಿ ಬಿಜೆಪಿ ಸದಸ್ಯ ಪ್ರತಾಪಸಿಂಹ ನಾಯಕ್ ಪ್ರಸ್ತಾಪಿಸಿದ್ದು, ಕೋಲಾಹಲ ಸೃಷ್ಟಿಯಾಯಿತು.

ಉತ್ತರ ಕರ್ನಾಟಕದ ನೀರಾವರಿ ಚರ್ಚೆ ಮೇಲೆ ಮಾತನಾಡುತ್ತಿದ್ದ ಪ್ರತಾಪ್ ಸಿಂಹ ಅವರು, ಅಬಕಾರಿ ಸಚಿವರು ಶ್ರೀಮಂತರು ಎಂದು ಹೇಳುವ ಮೂಲಕ ಪರೋಕ್ಷವಾಗಿ ಸಚಿವರ ಮೇಲಿನ ಲಂಚದ ಆರೋಪ ಪ್ರಸ್ತಾಪಿಸಿದರು. ಇದರಿಂದ ಕೆರಳಿದ ಸಚಿವ ಭೋಸರಾಜ್ ಅವರು, ಹಿಂಗಾದ್ರೆ ಏನಾರ್ಥ? ಅವರು ಹೇಗೆ ಶ್ರೀಮಂತರು ಎಂದು ಪ್ರಶ್ನಿಸಿ ಮೊದಲು ತಮ್ಮ ರಾಜ್ಯದಿಂದ ಕೇಂದ್ರ ಮಂತ್ರಿಯಾದವರ ಬಗ್ಗೆ ಮಾತನಾಡಿ ಎಂದರು.

ಸಭಾಪತಿ ಗರಂ

ನಾಯಕ್ ಅವರು, ಸಚಿವರು ಆಗುವ ಮೊದಲು ಕಪ್ಪು ಕೂದಲು ಇತ್ತು ಇದೀಗ ಬಿಳಿ ಕೂದಲು ಬಂದಿರುವುದರಿಂದ ಶ್ರೀಮಂತರು ಎಂದೇ ಎಂದರು. ಹೀಗೆ ಮತ್ತೆ ಕಾಂಗ್ರೆಸ್ ಬಹುತೇಕ ಸದಸ್ಯರು ಎದ್ದು ನಿಂತು ಏರು ಧ್ವನಿಯಲ್ಲಿ ಮಾತಾಡುತ್ತಾ ಮುಗಿಬಿದ್ದರು. ಅವಾಗ ಬಿಜೆಪಿ ಸದಸ್ಯರು ಸಹ ಎದ್ದು ನಿಂತು ಗದ್ದಲ ಉಂಟು ಮಾಡಿದಾಗ ಸಭಾಪತಿಗಳು ಗರಂಯಾಗಿ ಹೀಗೆ ಮಾಡಿದರೆ ಸದನ ನಡೆಸುವುದು ಹೇಗೆ ಎಂದು ಗದರಿ ವಾತಾವರಣ ತಿಳಿಗೊಳಿಸಿ ಕಡತದಿಂದ ಆರ್.ಬಿ.ತಿಮ್ಮಾಪುರ ಅವರ ಹೆಸರು ತೆಗೆಸಿದರು.

ಬಡಾವಣೆ ನಿರ್ಮಿಸಲು ಹೊರಟವರು ಭವ್ಯ ನಗರ ಕಟ್ಟಿದರು!

ಇದೇ ಅಂತರಂಗ ಸುದ್ದಿ

ವಿಶ್ವೇಶ್ವರ ಭಟ್

vbhat@me.com

ಕತಾರ್‌ಗೆ ಕೆಲ ವರ್ಷಗಳ ಹಿಂದೆ ಹೋದಾಗ, ಅಲ್ಲಿ ಅಂಥ ಒಂದು ನಗರವೇ ಇರಲಿಲ್ಲ. ಅಲ್ಲಿ ಅಂಥದೊಂದು ನಗರ ತಲೆಯೆತ್ತಬಹುದು ಎಂದು ಯಾರೂ ನಿರೀಕ್ಷಿಸಿರಲಿಲ್ಲ. ದೋಹಾ ನಗರದಿಂದ ಸುಮಾರು 25 ಕಿ.ಮೀ. ದೂರದಲ್ಲಿ ಅದಕ್ಕೆ ಪರ್ಯಾಯವಾಗಿ ಮತ್ತೊಂದು ನಗರದ ಕನಸನ್ನು ಯಾರು ಕಂಡಿದ್ದರೋ ಗೊತ್ತಿಲ್ಲ. ಆದರೆ ತರುವಾಯದಲ್ಲೊಮ್ಮೆ ಹೋದಾಗ ಲುಸೈಲ್ ಎಂಬ ಹೊಸ ನಗರಿಯೇ ಅಲ್ಲಿ ಎದ್ದು ನಿಂತಿತ್ತು. ರಾತ್ರಿ ಮಲಗುವಾಗ ಇರಲಿಲ್ಲ, ಬೆಳಗ್ಗೆ ಏಳುವಾಗ ಅಂಗಳದಲ್ಲಿ ಇಮಾರತು ಎದ್ದು ನಿಂತಂತಾಗಿತ್ತು. ದೋಹಾ ಬಿಟ್ಟರೆ ಲುಸೈಲ್, ಕತಾರಿನ ಎರಡನೇ ಅತಿದೊಡ್ಡ ನಗರವಾಗಿ ರೂಪುಗೊಂಡಿದೆ. ಇದು ಫಿಫಾ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಗಾಗಿ ರೂಪುಗೊಂಡ, ಫುಟ್ಬಾಲ್ ನೆಪದಲ್ಲಿ ಕತಾರ್ ಉಡುಗೊರೆಯಾಗಿ ನೀಡಿದ ನಗರ!

ಇದು ಅಂತಿಂಥ ನಗರವಲ್ಲ. ಅಲ್ಲಿ ಏನುಂಟು, ಏನಿಲ್ಲ? ಸುಮಾರು 38 ಚದರ ಕಿ.ಮೀ. ವ್ಯಾಪ್ತಿ ಪ್ರದೇಶದಲ್ಲಿ, ನಾಲ್ಕು ಲಕ್ಷ ಐವತ್ತು ಸಾವಿರ ಮಂದಿಗೆ ವಾಸ್ತವ್ಯ ಒದಗಿಸುವ, ಆಧುನಿಕ ನಗರವೊಂದು ಹೊಂದಿರಬಹುದಾದ ಎಲ್ಲ ಸೌಲಭ್ಯಗಳನ್ನು ಒಳಗೊಂಡ ಹೊಸ ನಗರವನ್ನೇ ಸೃಷ್ಟಿಸಿಬಿಟ್ಟಿದೆ. ಚಿಕ್ಕಮಕ್ಕಳು ಆಟಿಕೆ ಸಾಮಾನುಗಳಲ್ಲಿ ಮನೆ ಕಟ್ಟುವ ರೀತಿಯಲ್ಲಿ, ಹೊಸ ನಗರವನ್ನು ಕಟ್ಟಿದ್ದಾರೆ ಅಂತ ಹೇಳಿದರೆ ಅತಿಶಯೋಕ್ತಿ ಎನಿಸಬಹುದು. ಆದರೆ ಖುದ್ದಾಗಿ ಲುಸೈಲ್ ನಗರದಲ್ಲಿ ನಡೆದಾಡಿದಾಗ, ಅದು ಅತಿರಂಜಿತ ಎಂದು ಅನಿಸುವುದಿಲ್ಲ.

ಕಾರಣ ಈ ನಗರ, ಪಂಚತಾರಾ ಹೋಟೆಲುಗಳು, ಮರಿನಾಸ್, ಐಲ್ಯಾಂಡ್ ರೆಸಾರ್ಟ್ಸ್, ಕಮರ್ಷಿಯಲ್ ಡಿಸ್ಟ್ರಿಕ್ಟ್, ಲಕ್ಸುರಿ ಶಾಪಿಂಗ್ ಮಾಲ್, ಗಾಲ್ಫ್ ಕೋರ್ಸ್, ಮನರಂಜನಾ ತಾಣಗಳು, ವಾಟರ್ ಸ್ಪೋರ್ಟ್ಸ್, ಸ್ಟೇಡಿಯಂ, ವಾಟರ್ ಫ್ರಂಟ್ ರೆಸಿಡೆನ್ಷಿಯಲ್ ಡಿಸ್ಟ್ರಿಕ್ಟ್, ಮೆಡಿಕಲ್ ಮತ್ತು ಎಜುಕೇಶನ್ ಡಿಸ್ಟ್ರಿಕ್ಟ್, ಬುಲೆವಾರ್ಡ್ ಕಮರ್ಷಿಯಲ್, ಮರೀನಾ ಡಿಸ್ಟ್ರಿಕ್ಟ್, ಕ್ವೆಟೈಫಾನ್ ಐಲ್ಯಾಂಡ್, ಬಹುರಾಷ್ಟ್ರೀಯ ಕಂಪನಿಗಳಿಗಾಗಿ (ಅಲ್ ಖರೇಯೇಜ್) ನಾಲ್ಕು ಟವರುಗಳಲ್ಲಿ ಆಫೀಸು, ಮಳಿಗೆಗಳು, ಫಾರ್ಮುಲಾ ಒನ್ ರೇಸ್ ಟ್ರ್ಯಾಕ್, ವಿಶಾಲ ರಸ್ತೆಗಳು, ಮೇಲುಸೇತುವೆಗಳು, ಭೂಮಿಯೊಳಗಿನ ರೈಲುಮಾರ್ಗ ಹೀಗೆ ಎಲ್ಲವನ್ನೂ ಒಳಗೊಂಡಿದೆ. ಅಲ್ಲಲ್ಲಿ ಉದ್ಯಾನ, ಪಾಕೆಟ್ ಗಾರ್ಡನ್, ಕಾರಂಜಿ, ಸಣ್ಣ ತೊರೆ, ಗಿಡ-ಮರಗಳು. ಲುಸೈಲ್ ಅನ್ನು ಭವಿಷ್ಯತ್ತಿನ ನಗರವೆಂದು ಬಣ್ಣಿಸಲಾಗಿದೆ. ಇದನ್ನು ಬೇರೆ ಯಾವ ಆಧುನಿಕ ನಗರದೊಂದಿಗೆ ಹೋಲಿಸಲಾಗದು. ಕಾರಣ ಇದಕ್ಕಿಂತ ಲೇಟೆಸ್ಟ್ ಆದ ನಗರ ಇನ್ನೊಂದಿಲ್ಲ. ಇದಕ್ಕೆ ಹೋಲಿಸಿದರೆ ಉಳಿದವೆಲ್ಲವೂ ಹಳತು. ಇದು ಹೊಸ ಜಗತ್ತಿನ ಎಲ್ಲಾ ಮಜಾ, ಮಹಾ, ಮಜಕೂರುಗಳ ಗರ್ಭದಲ್ಲಿ ಅರಳಿದ ಸುಂದರ, ದಷ್ಟಪುಷ್ಟ ನವಜಾತ ಶಿಶು!

ಲುಸೈಲ್ ನಗರವನ್ನು ಎಲ್ಲಿ ಅಭಿವೃದ್ಧಿಪಡಿಸಲಾಗಿದೆಯೋ, ಆ ಪ್ರದೇಶದಲ್ಲಿ 'ಅಲ್ ವಸೈಲ್' ಎಂಬ ಹೆಸರಿನ ಹೂವುಗಳು ಬೆಳೆಯುತ್ತಿದ್ದವಂತೆ. ಆ ಹೆಸರನ್ನೇ ಮೂಲವಾಗಿಟ್ಟುಕೊಂಡು 'ಲುಸೈಲ್' ಎಂದು ನಾಮಕರಣ ಮಾಡಲಾಗಿದೆ. ಸುಮಾರು 45 ಶತಕೋಟಿ ಡಾಲರ್ ಹಣದಲ್ಲಿ ನಿರ್ಮಿಸಿರುವ ಲುಸೈಲ್ ನಗರವು 19 ಡಿಸ್ಟ್ರಿಕ್ಟ್‌ಗಳನ್ನು ಒಳಗೊಂಡಿದೆ. ಅಲ್ಲಿ 22 ಬೇರೆ ಬ್ರ್ಯಾಂಡ್‌ಗಳಿಗೆ ಸೇರಿದ ಪಂಚತಾರಾ, ಸಪ್ತತಾರಾ ಹೋಟೆಲುಗಳನ್ನು ನಿರ್ಮಿಸಲಾಗಿದೆ. ಎರಡು ಗಾಲ್ಫ್ ಕೋರ್ಸುಗಳಿವೆ. ಇದರ ಜತೆಗೆ ಥೀಮ್ ಪಾರ್ಕ್, ಲಗೂನ್, ಬೀಚ್ ಕ್ಲಬ್, ಟೂರಿಸ್ಟ್ ಸೆಂಟರ್, ಮಾನವ ನಿರ್ಮಿತ ದ್ವೀಪ, ಎರಡು ಮರಿನಾಗಳು.

ಪ್ಯಾರಿಸ್‌ನಲ್ಲಿ 14ನೇ ಲೂಯಿ ನಿರ್ಮಿಸಿದ ಭವ್ಯ 'ಪ್ಲೇಸ್ ವೆಂಡೋಮ್' ಮಾದರಿಯಲ್ಲಿ ಕಟ್ಟಿದ ಶಾಪಿಂಗ್ ಕಾಂಪ್ಲೆಕ್ಸ್ ಮತ್ತು ರಫಲ್ಸ್ ಹೋಟೆಲ್, ಲುಸೈಲ್ ನಗರದ ಪ್ರಮುಖ ಆಕರ್ಷಣೆಗಳಲ್ಲೊಂದು. ಪ್ಲೇಸ್ ವೆಂಡೋಮ್ ಮಾದರಿಯಲ್ಲಿ ಕಟ್ಟಿದ ಶಾಪಿಂಗ್ ಕಾಂಪ್ಲೆಕ್ಸ್‌ಗೆ ಅದೇ ಹೆಸರನ್ನು ಇಡಲಾಗಿದೆ. ಈ ಕಾಂಪ್ಲೆಕ್ಸ್‌ನ ಕಾರಿಡಾರುಗಳು ಹೆದ್ದಾರಿಯಷ್ಟು ಅಗಲವಾಗಿವೆ. ಜಗತ್ತಿನ ಪ್ರಮುಖ ಮತ್ತು ಐಷಾರಾಮಿ ಬ್ರ್ಯಾಂಡ್ ಶೋರೂಮುಗಳನ್ನು ಹೊಂದಿರುವ ಪ್ಲೇಸ್ ವೆಂಡೋಮ್, ಯಾರಿಗಾದರೂ ಇಲ್ಲಿ ತನಕ ನೋಡಿರದ, ನೂತನ ಶಾಪಿಂಗ್ ಅನುಭವವನ್ನು ನೀಡಬಲ್ಲುದು. 'ಲಕ್ಸುರಿ' ಪದಕ್ಕೆ ಹೊಸ ಭಾಷ್ಯ ಬರೆಯುವ ತಾಣವಿದು. ಲುಸೈಲ್ ನಗರ 'ಲುಸೈಲ್ ಐಕಾನ್' ಎಂಬ ಸ್ಟೇಡಿಯಂ ಅನ್ನು ಸಹ ಹೊಂದಿದೆ. ಇದು 2022ರಲ್ಲಿ ನಡೆದ ಫಿಫಾ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಯ ಪ್ರಮುಖ ಆಕರ್ಷಣೆಯೂ ಆಗಿತ್ತು. 90,000 ಆಸನಗಳ ಸಾಮರ್ಥ್ಯ ಹೊಂದಿರುವ ಈ ಕ್ರೀಡಾಂಗಣ, ವಿಶ್ವದ ಅತ್ಯಾಧುನಿಕ ವ್ಯವಸ್ಥೆ, ಸೌಲಭ್ಯಗಳನ್ನು ಹೊಂದಿದೆ. ಕೇವಲ 16 ನಿಮಿಷಗಳಲ್ಲಿ ಇಡೀ ಸ್ಟೇಡಿಯಂ ಅನ್ನು ಬಯಸಿದ ತಾಪಮಾನಕ್ಕೆ ನಿಯಂತ್ರಿಸಬಹುದಾದ 'ಸುವಿಧಾ' ಇಲ್ಲಿದೆ. ಬಂಗಾರದ ಬೋಗುಣಿಯನ್ನು ಹೋಲುವ ಈ ಕ್ರೀಡಾಂಗಣವು ಆಧುನಿಕ ವಿನ್ಯಾಸ ಮತ್ತು ನಿರ್ಮಿತಿಗೆ ಮಾದರಿಯಾಗಿದೆ.

ಲುಸೈಲ್ ನಗರದ ಬುಲೆವಾರ್ಡ್‌ನಲ್ಲಿ ನಡೆಯುವಾಗ ಎಲ್ಲೆಂದರಲ್ಲಿ ಕಾರಂಜಿ, ನೃತ್ಯ ಕಾರಂಜಿಗಳನ್ನು ಅಳವಡಿಸಿರುವುದು ಪ್ರಮುಖ ಆಕರ್ಷಣೆ. ರಸ್ತೆಯಲ್ಲಿ ನಡೆದು ಹೋಗುತ್ತಿದ್ದರೆ ಹಿತವಾದ ತಂಪು ಗಾಳಿ ಕೆಳಗಿನಿಂದ ತೂರಿಬಂದ ಅನುಭವ. ರಸ್ತೆಯೊಳಗಿನಿಂದಲೇ ತಂಪು ಗಾಳಿ (ಎ.ಸಿ.) ಹೊರಸೂಸುವ ವ್ಯವಸ್ಥೆ ಕಂಡು ಕೇಳರಿಯದ್ದು. ಸಾಮಾನ್ಯವಾಗಿ ರಸ್ತೆಯ ಇಕ್ಕೆಲಗಳಲ್ಲಿ ಕಲ್ಲು ಅಥವಾ ಮರದ ಬೆಂಚುಗಳನ್ನು ಹಾಕುವುದು ಸಾಮಾನ್ಯ. ಆದರೆ ಲುಸೈಲ್ ನಗರದಲ್ಲಿ ಎಲ್ಲೆಡೆ ಮೆತ್ತನೆಯ ಕುಶನ್ ಹಾಸು.

ಲುಸೈಲ್ ಕತೆ ಅಂದ್ರೆ, ಫಿಫಾ ಫುಟ್ಬಾಲ್‌ಗಾಗಿ ಬಡಾವಣೆ ನಿರ್ಮಿಸಲು ಹೊರಟವರು, ಒಂದು ಭವ್ಯ ನಗರವನ್ನೇ ಕಟ್ಟಿದ ಕತೆಯಾದೀತು. ಮುಂಬರುವ ದಿನಗಳಲ್ಲಿ ಲುಸೈಲ್ ನಗರ ಜಗತ್ತಿನ ಪ್ರಮುಖ ಆಕರ್ಷಣೆಯಾಗುವುದರಲ್ಲಿ ಸಂದೇಹವಿಲ್ಲ.

'ಲೇ ಝುಟನ್' ಬರ್ಗರ್

ಸಾಮಾನ್ಯವಾಗಿ ಯಾವುದಾದರೂ ಫ್ರೆಂಚ್ ಕೆಫೆಗೆ ಹೋದರೆ, ಮೆನು ಕಾರ್ಡಿನಲ್ಲಿ 'ಲೇ ಜ್ಲ್ಯಾಟನ್' ಅಥವಾ 'ಲೇ ಝುಟನ್' ಎಂಬ ಹೆಸರಿನ ಬರ್ಗರ್ ನಿಮ್ಮ ಗಮನ ಸೆಳೆಯುತ್ತದೆ. ಅನೇಕರಿಗೆ ಈ ಬರ್ಗರ್ ಇಷ್ಟವಾದರೂ, ಆರ್ಡರ್ ಮಾಡುವುದಿಲ್ಲ. ಅದರಲ್ಲೂ ಒಬ್ಬರೇ ಕೆಫೆಗೆ ಹೋದಾಗಂತೂ ಆರ್ಡರ್ ಮಾಡುವುದಿಲ್ಲ. ಇಬ್ಬರು ಹೋದಾಗ ಇದನ್ನು ಹಂಚಿ (ಶೇರ್) ಸೇವಿಸುವುದುಂಟು. ಕಾರಣ ಅದರ ಗಾತ್ರ. ಈ ಬರ್ಗರ್ ಅನ್ನು ಒಬ್ಬ ಫುಟ್ಬಾಲ್ ಆಟಗಾರನ ನೆನಪಿನಲ್ಲಿ ಮಾಡಲಾಗಿದೆ. ಆತನ ಹೆಸರು ಝುಟನ್ ಇಬ್ರಾಹಿಮೊವಿಕ್. ಆತ ಸೆರಿ ಎ ಕ್ಲಬ್, ಎಸಿ ಮಿಲಾನ್ ಮತ್ತು ಸ್ವೀಡನ್ ರಾಷ್ಟ್ರೀಯ ತಂಡದ ಪ್ರಮುಖ (ಸ್ಟ್ರೈಕರ್) ಆಟಗಾರರಲ್ಲೊಬ್ಬ. ಈತನಿಗೆ ಗಾಳಿಯಲ್ಲಿ ಚೆಂಡನ್ನು ಒದೆಯುವ ಸ್ಟೈಲಿಶ್ ಆಟಗಾರ ಎಂಬ ಅಭಿದಾನ ಬೇರೆ. ನಿರಂತರವಾಗಿ 20 ವರ್ಷ ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ ಸ್ವೀಡನ್ ಅನ್ನು ಪ್ರತಿನಿಧಿಸಿದ ಈತ, ಪ್ರಥಮ ದರ್ಜೆ ಆಟದಲ್ಲಿ 570 ಗೋಲುಗಳನ್ನು ಹೊಡೆದ ಕೀರ್ತಿಗೆ ಪಾತ್ರನಾಗಿದ್ದಾನೆ.

ಈತನಿಗೆ ಫ್ರಾನ್ಸ್ ಮತ್ತು ಜರ್ಮನಿಯಲ್ಲೂ ಅಪಾರ ಅಭಿಮಾನಿಗಳಿದ್ದಾರೆ. ಫ್ರೆಂಚ್ ಕೆಫೆ ಈತನ ಹೆಸರಿನಲ್ಲಿ ಬರ್ಗರ್ ಸಿದ್ಧಪಡಿಸಿರುವುದೇ ಅದಕ್ಕೆ ನಿದರ್ಶನ. ಈ ಬರ್ಗರ್ ಅನ್ನು ಬಾಯಲ್ಲಿ ಇಟ್ಟುಕೊಳ್ಳಲು ಆಗದಷ್ಟು ದೊಡ್ಡದು. ಇದಕ್ಕಾಗಿ 600 ಗ್ರಾಂ ಬೀಫನ್ನು ಬಳಸಲಾಗುತ್ತದೆ. ಇದರ ಜತೆಗೆ ಬೇಕನ್, ಚೆಡ್ಡರ್ ಚೀಸ್, ಎಮೆಂಟಲ್ ಮತ್ತು ಈರುಳ್ಳಿ ಹೊಂದಿರುವ ಆ ಬರ್ಗರ್‌ಗೆ ವಿಶೇಷ ಬನ್ ಬೇಕು. ಮೆನು ಕಾರ್ಡಿನಲ್ಲಿ ಈ ಬರ್ಗರ್ ಕೆಳಗೆ, Even Chuck Norris couldn't fit it in his mouth ಎಂದು ಬರೆಯಲಾಗಿದೆ. (ಚಕ್ ನೋರಿಸ್ ಅಂದ್ರೆ ರೋಬೊ ಸಿನಿಮಾದ ರಜನಿಕಾಂತ್ ಇದ್ದ ಹಾಗೆ!).

ಗಿಬ್ಸ್ ಹೇಳಿದ ಆ ಮಾತು

ನೀವು ಲಾನ್ಸ್ ಗಿಬ್ಸ್ ಹೆಸರನ್ನು ಕೇಳಿರಬಹುದು ಎಂದು ಭಾವಿಸುತ್ತೇನೆ. ಇವರು ವೆಸ್ಟ್ ಇಂಡೀಸ್ ಕ್ರಿಕೆಟ್ ತಂಡದ ಯಶಸ್ವಿ ಸ್ಪಿನ್ ಬೌಲರ್‌ಗಳಲ್ಲಿ ಒಬ್ಬರು. ನನ್ನ ತಲೆಮಾರಿನವರು ಕ್ರಿಕೆಟ್ ಮ್ಯಾಚುಗಳನ್ನು ನೋಡಲು ಆರಂಭಿಸಿದಾಗ, ಗಿಬ್ಸ್ ನಿವೃತ್ತರಾಗಿದ್ದರು. ಆದರೂ ನಾನು ಗಿಬ್ಸ್ ಆಟವನ್ನು ನೋಡಿದ್ದಕ್ಕಿಂತ, ಅವರ ಬಗ್ಗೆ ಓದಿದ್ದು, ಕೇಳಿದ್ದು ಜಾಸ್ತಿ.

ಟೆಸ್ಟ್ ಪಂದ್ಯಗಳಲ್ಲಿ 309 ವಿಕೆಟ್ ಪಡೆದ ಗಿಬ್ಸ್, ರನ್ ಕೊಡುವುದರಲ್ಲಿ ಅತ್ಯಂತ ಜುಗ್ಗ. ಅವರು ಒಂದು ಓವರ್‌ಗೆ ಕೊಟ್ಟಿದ್ದು ಸರಾಸರಿ ಎರಡು ರನ್ ಮಾತ್ರ. ಟೆಸ್ಟ್ ಮ್ಯಾಚಿನಲ್ಲಿ 18 ಸಲ ಐದು ಮತ್ತು ಹೆಚ್ಚು ವಿಕೆಟ್ ಹಾಗೂ 2 ಸಲ ಹತ್ತು ವಿಕೆಟ್ ಪಡೆದವರು. ಅವರು ಕೊನೆಯ ಪಂದ್ಯ ಆಡಿದ್ದು 1975-76ರಲ್ಲಿ. 79 ಟೆಸ್ಟ್ ಪಂದ್ಯಗಳಲ್ಲಿ ಆಡಿದ ಗಿಬ್ಸ್, ಒಂದು ಸಲವೂ ಅರ್ಧ ಶತಕ ಹೊಡೆದವರಲ್ಲ. ಅಷ್ಟು ಪಂದ್ಯಗಳಿಂದ ಅವರು ಹೊಡೆದಿದ್ದು ಐನೂರಕ್ಕಿಂತ ಕಡಿಮೆ ರನ್.

ಇಂದಿಗೂ ವೆಸ್ಟ್ ಇಂಡೀಸ್‌ನ ಸಾರ್ವಕಾಲಿಕ ಐವತ್ತು ಕ್ರಿಕೆಟರುಗಳಲ್ಲಿ ಅವರ ಹೆಸರಿದೆ. ಐಸಿಸಿ 'ಕ್ರಿಕೆಟ್ ಹಾಲ್ ಆಫ್ ಫೇಮ್'ನಲ್ಲಿ ಗಿಬ್ಸ್ ಕೂಡ ಸೇರಿದ್ದಾರೆ. ಗಿಬ್ಸ್ 300 ವಿಕೆಟ್ ಗಳಿಸಿದ ಅತ್ಯಂತ ಹಿರಿಯ ಆಟಗಾರರಲ್ಲೊಬ್ಬರು. ಕೊನೆಯ ಪಂದ್ಯ ಆಡುವಾಗ ಅವರಿಗೆ 41 ವರ್ಷ ಆಗಿತ್ತು. ವೆಸ್ಟ್ ಇಂಡೀಸಿನ ಖ್ಯಾತ ಆಟಗಾರ ಮತ್ತು ಒಂದು ಕಾಲದ ಕ್ಯಾಪ್ಟನ್ ಕ್ಲೈವ್ ಲಾಯ್ಡ್ ಮೇಲೆ ಗಿಬ್ಸ್ ಪ್ರಭಾವ ಇದೆ. ಗಿಬ್ಸ್ ಅವರು ಲಾಯ್ಡ್‌ರ ಚಿಕ್ಕಪ್ಪ. ಅವರಿಬ್ಬರೂ ಒಟ್ಟಿಗೆ ವೆಸ್ಟ್ ಇಂಡೀಸ್ ತಂಡದಲ್ಲಿ ಆಡಿದವರು. ನಿವೃತ್ತಿಯ ಬಳಿಕ ಗಿಬ್ಸ್ ಅಮೆರಿಕಕ್ಕೆ ಹೋಗಿ ನೆಲೆಸಿದರು. ಆದರೆ ಅಲ್ಲಿ ಕ್ರಿಕೆಟ್ ಬಿಟ್ಟು ಜೀವಿಸಲು ಅವರಿಗೆ ಸಾಧ್ಯವಾಗಲೇ ಇಲ್ಲ. ತಾಯ್ನಾಡಿಗೆ ಬಂದು ಕೆಲಕಾಲ, ವೆಸ್ಟ್ ಇಂಡೀಸ್ ತಂಡದ ಮ್ಯಾನೇಜರ್ ಆಗಿ ಕೆಲಸ ನಿರ್ವಹಿಸಿದರು. ಕೆಲ ವರ್ಷದ ಹಿಂದೆ ನಾನು ಲಂಡನ್‌ಗೆ ಹೋದಾಗ, ಕ್ರಿಕೆಟ್ ತವರು ಎಂದು ಕರೆಯಿಸಿಕೊಂಡ ಲಾರ್ಡ್ಸ್ ಮೈದಾನಕ್ಕೆ ಹೋಗಿದ್ದೆ. ಅಲ್ಲಿನ ಮ್ಯೂಸಿಯಂನಲ್ಲಿ ಖ್ಯಾತ ಕ್ರಿಕೆಟ್ ಆಟಗಾರರ ಪ್ರಸಿದ್ಧವಾದ ಒಂದು ವಾಕ್ಯ ಅಥವಾ ಹೇಳಿಕೆಯನ್ನು ಸಂಗ್ರಹಿಸಿ ಇಟ್ಟಿದ್ದಾರೆ. ಗಿಬ್ಸ್ ಹೇಳಿದ ಒಂದು ಪುಟ್ಟ ವಾಕ್ಯ ನನ್ನ ಗಮನ ಸೆಳೆಯಿತು. ಅದು- Any time the West Indies lose, I cry.

ಇದು ಎಲ್ಲರಿಗೂ ಸಲ್ಲುವ ಕಸುಬು

ಒಂದು ಕಾಲವಿತ್ತು, ಕ್ಷೌರಿಕರೇ ತಲೆಗೂದಲು ಕತ್ತರಿಸುತ್ತಿದ್ದರು. ಈಗ ಹಾಗೇನಿಲ್ಲ, ಯಾರು ಬೇಕಾದರೂ ಆ ಉದ್ಯೋಗವನ್ನು ಮಾಡಬಹುದು. ತಲೆಗೂದಲು ಕತ್ತರಿಸುವುದನ್ನು ಕಲಿಸುವ ಅನೇಕ ಸಂಸ್ಥೆಗಳು ಹುಟ್ಟಿಕೊಂಡಿವೆ. ಅಲ್ಲಿ ಕಲಿತವರು ತಾವೇ ಕ್ಷೌರದ ಅಂಗಡಿಗಳನ್ನು ತೆರೆಯುತ್ತಿದ್ದಾರೆ. ನನಗೆ ಪರಿಚಯವಿರುವ ಅಯ್ಯರ್ (ಬ್ರಾಹ್ಮಣರು) ಎಂಬುವವರು ರಾಜರಾಜೇಶ್ವರಿನಗರದಲ್ಲಿ ಕೆಲ ವರ್ಷದ ಹಿಂದೆ ಸಲೂನ್ ಮತ್ತು ಸ್ಪಾ ಆರಂಭಿಸಿದ್ದುಂಟು, ಹತ್ತಾರು ಜನರನ್ನು ಕೆಲಸಕ್ಕೆ ಇಟ್ಟುಕೊಂಡಿದ್ದುಂಟು. ಅಂದರೆ ಈ ಉದ್ಯೋಗ ಈಗ ಒಂದು ಜಾತಿಯವರ ಕಸುಬಾಗಿ ಉಳಿದಿಲ್ಲ. ಕೆಲ ವರ್ಷದ ಹಿಂದೆ ನಾನು ಒಂದು ಹೇರ್ ಕಟಿಂಗ್ ಸಲೂನ್ ಅನ್ನು ಉದ್ಘಾಟಿಸಲು ಹೋಗಿದ್ದೆ. ಅದರ ಮಾಲೀಕರು ತಮ್ಮ ಭಾಷಣದಲ್ಲಿ, ತಮ್ಮ ಅಂಗಡಿಯಲ್ಲಿ ಎಲ್ಲಾ ಜಾತಿಯವರೂ ಇದ್ದಾರೆ ಎಂದು ಅಭಿಮಾನದಿಂದ ಹೇಳಿದರು. ಇದು ಎಲ್ಲಾ ಉದ್ಯೋಗದಂತೆ ಒಂದು ಗೌರವಾನ್ವಿತ ಮತ್ತು ಅಗತ್ಯ ಸೇವೆಯ ಉದ್ಯೋಗ, ಕೇವಲ ಒಂದು ಜಾತಿಗೆ ಸೇರಿದ ಉದ್ಯೋಗವಾಗಿ ಉಳಿದಿಲ್ಲ. ಹೇರ್ ಕಟಿಂಗ್ ಮಾಡುವುದನ್ನು ಕಲಿಸುವ ಸಂಸ್ಥೆಗಳಲ್ಲೂ, ಎಲ್ಲಾ ಜಾತಿಯ ಹುಡುಗರೂ ಸೇರುತ್ತಿರುವುದು ಒಂದು ಆರೋಗ್ಯಕರ ಬೆಳವಣಿಗೆ.

ಬೆಂಗಳೂರಿನಲ್ಲಿ 15 ದಿನ ಮತ್ತು ಒಂದು ತಿಂಗಳಲ್ಲಿ ಹೇರ್ ಕಟಿಂಗ್ ಕಲಿಸುವ ಹಲವಾರು ತರಬೇತಿ ಕೇಂದ್ರಗಳಿವೆ. ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವವರು ಹಗಲು ಹೊತ್ತಿನಲ್ಲಿ 2-3 ಗಂಟೆ ಸಲೂನ್‌ಗಳಲ್ಲಿ ಕಟಿಂಗ್ ಮಾಡುವ ಪ್ರವೃತ್ತಿ ಜಾಸ್ತಿಯಾಗಿದೆ. ನಾನು ವಾಸಿಸುವ ರಾಜರಾಜೇಶ್ವರಿ ನಗರವೊಂದರಲ್ಲೇ, ಏನಿಲ್ಲವೆಂದರೂ 50ಕ್ಕೂ ಹೆಚ್ಚು ಸಲೂನ್‌ಗಳಿವೆ ಮತ್ತು ಎಲ್ಲಾ ಸಲೂನ್‌ಗಳಲ್ಲೂ ಕಾಯಲೇಬೇಕು. ಕೆಲ ವರ್ಷದ ಹಿಂದೆ ನನ್ನ ಪರಿಚಯದವರೊಬ್ಬರ ಮಗ ಒಂದು ಸಲೂನ್ ಆರಂಭಿಸಿದ. ನನ್ನ ಸ್ನೇಹಿತರು ಆಹ್ವಾನ ಪತ್ರ ನೀಡಿದರು. Crazy Coiffure ಎಂಬ ಹೆಸರಿನಲ್ಲಿ ಅವರ ಮಗ ಸಲೂನ್ ಆರಂಭಿಸಿದ್ದ. ನನಗೆ ಆ ಹೆಸರಿನ ಬಗ್ಗೆ ಅತೀವ ಸೋಜಿಗವಾಯಿತು. Coiffure ಅಂದ್ರೆ ಎಷ್ಟು ಜನರಿಗೆ ಅರ್ಥವಾದೀತು ಎಂಬ ಜಿಜ್ಞಾಸೆ ಕಾಡಲಾರಂಭಿಸಿತು. Coiffure ಅಂದ್ರೆ ಏನು ಅಂತ ನನ್ನ ಸ್ನೇಹಿತರಿಗೆ ಕೇಳಿದೆ. ಅದಕ್ಕೆ ಅವರು, 'ಸರ್, ನನಗೆ ಗೊತ್ತಿಲ್ಲ. ನನ್ನ ಮಗ 75 ಲಕ್ಷ ರುಪಾಯಿ ಕೊಡು. ಒಂದು ಸಲೂನ್ ಇಡ್ತೀನಿ ಅಂತ ಹೇಳಿದ. ನಾನು ಹಣ ಕೊಟ್ಟಿದ್ದೇನೆ, ಅಷ್ಟೇ. ಈಗಿನ ಮಕ್ಕಳು ಗೊತ್ತಲ್ಲ, ಏನೇನೋ ಹೆಸರು ಇಡ್ತಾವೆ' ಎಂದು ಹೇಳಿ ನಕ್ಕರು. ನನಗೆ ಅವರ ಮಗನ ಬಗ್ಗೆ ಅಚ್ಚರಿಯಾಯಿತು. ಸಾಮಾನ್ಯ ಜನರಿಗೆ ಅರ್ಥ ಗೊತ್ತಿರದ ಒಂದು ಪದವನ್ನು ಅಂಗಡಿಯ ಹೆಸರನ್ನಾಗಿ ಬಳಸಿದ ಬಗ್ಗೆ ಅಷ್ಟೇ ಕುತೂಹಲವೂ ಆಯಿತು. Coiffure ಅಂದ್ರೆ ಸರಳವಾಗಿ ಹೇಳಬೇಕೆಂದರೆ 'ಹೇರ್ ಸ್ಟೈಲ್' ಎಂದರ್ಥ. ಅದನ್ನು 'ಕ್ವಾಫ್ ಫ್ಯರ್' ಎಂದು ಉಚ್ಚರಿಸುತ್ತಾರೆ. ಈ ಬಗ್ಗೆ ನಾನು ನನ್ನ ಸ್ನೇಹಿತರ ಮಗನನ್ನೇ ಕೇಳಿದೆ. ಅದಕ್ಕೆ ಆತ ಹೇಳಿದ ಉತ್ತರ ಕೇಳಿ ಇನ್ನೂ ಆಶ್ಚರ್ಯವಾಯಿತು. 'ಸರ್, Coiffure ಅರ್ಥ ಎಲ್ಲರಿಗೂ ಗೊತ್ತಿರುವುದಿಲ್ಲ ನಿಜ, ಒಪ್ಪುತ್ತೇನೆ. ಅದರ ಅರ್ಥ ಗೊತ್ತಿರುವವರೇ ಬರಬೇಕು ಎಂಬುದು ಮೂಲ ಆಶಯ. ಆ ಕ್ಲಾಸಿನ ಕಸ್ಟಮರುಗಳಿಗೆಂದೇ ಈ ಸಲೂನ್. ಸುಮ್ಮನೆ ನಾನು Crazy Hairstyle ಎಂದು ಹೆಸರಿಟ್ಟಿದ್ದಿದ್ದರೆ ಯಾರು ಬೇಕಾದರೂ ಬರುತ್ತಾರೆ. ನಮ್ಮದು ಎಲ್ಲಾ ಕ್ಲಾಸಿನ ಜನರಿಗೆ ಸಲ್ಲುವ ಸಲೂನ್ ಅಲ್ಲ' ಎಂದು ಸಮರ್ಥಿಸಿಕೊಂಡ.

ಆತ ಹೇಳಿದ್ದರಲ್ಲಿ ಅರ್ಥವಿದೆ ಮತ್ತು ಬಿಜಿನೆಸ್ ಸಂದೇಶವಿದೆ ಅನಿಸಿತು.

ಫಲಕ ಸಾಹಿತ್ಯ

ನಾನು ವಿದೇಶಗಳಿಗೆ ಹೋದಾಗ, ಅಲ್ಲಿನ ಫಲಕಗಳನ್ನು ಓದುವುದನ್ನು ಮರೆಯುವುದಿಲ್ಲ. ಫಲಕ ಸಾಹಿತ್ಯ ಯಾವ ವಿನೋದ ಸಾಹಿತ್ಯಕ್ಕೂ ಕಮ್ಮಿಯಿಲ್ಲ ಎಂಬುದು ಅನೇಕ ಸಲ ಅನಿಸಿದೆ. ಕೆಲ ವರ್ಷದ ಹಿಂದೆ ನಾನು ಸ್ಕಾಟ್ಲೆಂಡಿನ ಎಡಿನ್‌ಬರಕ್ಕೆ ಹೋದಾಗ ಅಲ್ಲಿನ ರೆಸ್ಟೋರೆಂಟಿನಲ್ಲಿನ ಫಲಕ ನೋಡಿ, ನಿಜಕ್ಕೂ ವಾರದಲ್ಲಿ ಎಷ್ಟು ದಿನಗಳು ಎಂಬ ಬಗ್ಗೆ ಸಂದೇಹ ಕಾಡಿತು. ಆ ಫಲಕದ ಮೇಲೆ ಹೀಗೆ ಬರೆದಿತ್ತು- Open seven days a week and weekends. ಎಡಿನ್‌ಬರದ ಟ್ರಾವೆಲ್ ಶಾಪ್ ಎದುರು ಕಂಡ ಒಂದು ಫಲಕ- I need a vacation of 6 months. Twice a year!. ಅಲ್ಲಿಯೇ ಕಂಡ ಇನ್ನೊಂದು ಬರಹ- You weren't born to just pay bills and die. ಅದೇ ನಗರದಲ್ಲಿ ನಾವು ಉಳಿದುಕೊಂಡ ಹಾಲಿಡೇ ಇನ್ ಹೋಟೆಲಿನ ಲಿಫ್ಟ್ ಬಳಿ ಕಂಡ ಒಂದು ಸಣ್ಣ ಫಲಕ- The lift is being fixed for the next day. During that time we regret that you will be unbearable.

ಲಂಡನ್‌ನ ಬೀದಿಗಳಲ್ಲಿರುವ ಭಿಕ್ಷುಕರ ವರ್ತನೆಯಲ್ಲಿ ಸಾಕಷ್ಟು ಸುಧಾರಣೆ ಕಂಡಿದೆ. ಅವರು ತಮಗೆ ಭಿಕ್ಷೆ ಹಾಕಿ ಎಂದು ಗೋಗರೆಯುವುದಿಲ್ಲ ಅಥವಾ ತಮ್ಮ ಕಷ್ಟಗಳನ್ನು ದಯನೀಯವಾಗಿ ನಿವೇದಿಸಿಕೊಳ್ಳುವುದಿಲ್ಲ. ಅದರ ಬದಲು ತಮ್ಮ ಪಾಡಿಗೆ ತಾವು ಗೋಡೆಗೊರಗಿ ಕುಳಿತುಕೊಂಡಿರುತ್ತಾರೆ. ತಾವು ಹೇಳಬೇಕಾದುದನ್ನು ಬೋರ್ಡು ಅಥವಾ ಫಲಕಗಳಲ್ಲಿ ಬರೆದಿರುತ್ತಾರೆ. ಅದನ್ನು ಓದಿದವರ ಮನ ಕಲಕಿದರೆ, ಹಣ ಹಾಕಿ ಹೋಗುತ್ತಾರೆ. ಅಲ್ಲಿನ ಭಿಕ್ಷುಕನೊಬ್ಬ ಬರೆದ ಈ ಫಲಕವನ್ನು ನೋಡಿ ಆತನ ಸೃಜನಶೀಲ ಮನಸ್ಸಿಗೆ ಒಂದು ಸಣ್ಣ ಸಲಾಂ ಹಾಕಿದೆ. ಆತ ಬರೆದಿದ್ದ- This is the first year I'm not going to Maldives because of COVID-19. Normally, I do not go because I am poor.

ಲಂಡನ್‌ನಲ್ಲಿ ಓಡಾಡುವಾಗ, ಸೂಟ್‌ಕೇಸ್ ಅಂಗಡಿಯ ಮುಂದೆ ಕಾಣಿಸಿದ ಫಲಕ ನೋಡಿ, ಅದನ್ನು ಬರೆದವನ ಬಗ್ಗೆ ಮನದಲ್ಲೇ ಸಣ್ಣ ಮೆಚ್ಚುಗೆ ವ್ಯಕ್ತಪಡಿಸಿದೆ. ಆ ಅಂಗಡಿಯ ಮುಂದೆ ಕಂಡ ಬರಹ- Overpack. That's why suitcases have wheels now.

ರಾಘವೇಂದ್ರ ಭಟ್ಟರ ಖಜಾನೆಯಿಂದ ಮತ್ತಷ್ಟು ರಸಪ್ರಸಂಗಗಳು

ತಿಳಿರು ತೋರಣ

ಶ್ರೀವತ್ಸ ಜೋಶಿ

srivathsajoshi@yahoo.com

ಅಡಿಗರ ಧೂಮವಿಲಾಸವನ್ನು ರಾಘವೇಂದ್ರ ಭಟ್ಟರು ನೆನಪಿಸಿಕೊಂಡಿದ್ದರ ಬಗ್ಗೆ ಕಳೆದ ವಾರ ಒಂದೇ ವಾಕ್ಯದಲ್ಲಿ ಚುಟುಕಾಗಿ ಉಲ್ಲೇಖಿಸಿದ್ದೆ. ನಿಜವಾಗಿ ಯಾದರೆ ಅದೊಂದು ಸ್ವಾರಸ್ಯಕರ ಸುದೀರ್ಘ ಟಿಪ್ಪಣಿ. ಅಂಕಣದ ಮಿತಿಯಿಂದಾಗಿ ಹ್ರಸ್ವಗೊಳಿಸಬೇಕಾಯ್ತು. ಅಂಥ ಕೆಲವನ್ನಾದರೂ ಒಂದೆಡೆ ಎಲ್ಲರ ಓದಿಗೆ ಒದಗಿಸಬೇಕೆಂಬ ಉದ್ದೇಶದಿಂದ ಇಂದಿನ ಅಂಕಣದಲ್ಲಿ ಮುಂದುವರಿದ ಭಾಗ ಎಂಬಂತೆ ವಿಸ್ತೃತವಾಗಿ ಬರೆಯುತ್ತಿದ್ದೇನೆ.

ಧೂಮವಿಲಾಸವನ್ನು ರಾಘವೇಂದ್ರ ಭಟ್ಟರು ನೆನಪಿಸಿಕೊಂಡದ್ದು 'ತಂಬಾಕಿನ ಸ್ಮೋಕ ಒಳ್ಳೆಯದಲ್ಲ, ಶ್ಲೋಕ ಒಳ್ಳೆಯದೇ!' ಲೇಖನಕ್ಕೆ ಪ್ರತಿಕ್ರಿಯೆಯಾಗಿ: ''ಅಡಿಗರ ಧೂಮಲೀಲೆ ಕವಿತೆ ನೆನಪಾಯ್ತು. ಸಿಗರೇಟಿನ ಹೊಗೆ ವರ್ತುಳ ವರ್ತುಳ ಧೂಪಧೂಮ ಮಾಲೆ; ವಿವಿಧರೂಪ ವಿಹ್ವಲವಿಲಾಪಗಳು ವಿಕೃತ ಚಿತ್ರಗಳು ಗಾಳಿಯಲೆಯ ಮೇಲೆ... ಎಂದು ಅದರ ಆರಂಭ. ಮೈಸೂರಿನ ಕಾಫೀಹೌಸಿನಲ್ಲಿ ಜತೆಯ ಗುಂಡುಗೋವಿಗಳ ನಡುವೆ ಅವರ ಧೂಮವಿಲಾಸ ನಡೆಯುತ್ತಿತ್ತು. ಆ ದಿನಗಳಲ್ಲಿ ಅಡಿಗರು ಒಂದು ಸಣ್ಣ ಬಟ್ಟೆ ಕೈಚೀಲ ಹಿಡಿದು ಬಸ್ ಹತ್ತಿ ದೇವರಾಜ ಮಾರ್ಕೆಟ್ ಹತ್ತಿರದ ಕಾಫೀಹೌಸ್‌ಗೆ ಬಂದರೆ ಈ ಪರಿವಾರ ದೈವಗಳು- ಅನಂತಮೂರ್ತಿ, ಬಿ.ಕೆ.ಸಿ. ಚನ್ನಯ್ಯ ಮುಂತಾದವರು- ಸುಮಾರು 2 ಗಂಟೆ ಮೀರಿ ಅಲ್ಲಿರುತ್ತಿದ್ದರು. ಅಲ್ಲಿ ಎಣ್ಣೆ ಸೇವನೆಯೇನೂ ಇರ್ತಿರಲಿಲ್ಲ. ಮಿಕ್ಕವರು ತಮ್ಮದೇ ಗುಂಗಿನಲ್ಲಿದ್ದರೆ ಅಡಿಗರಂತೂ ತಮ್ಮ ಧೂಮಲೀಲೆಯಲ್ಲೇ ಇರೋರು. ಅಲ್ಲೊಂದು ಜೂಕ್‌ಬಾಕ್ಸ್ ಸಹ ಇತ್ತು; ಹಿಂದೀ ಹಾಡಿನ ತಟ್ಟೆಗಳೇ ಹೆಚ್ಚು; ಆಗಾಗ ಅದರ ಕೇಳ್ಮೆಗೆ ನಾನೂ ಹೋದಾಗಲೆಲ್ಲಾ ಈ ಭಾನುವಾರದ ಗುಂಪು ತಪ್ಪದೇ ಇರೋದು. ಹಾಗೆ, ಸುಖಸಂಕಥಾ ವಿನೋದದಿಂದಿದ್ದ ಅಡಿಗರನ್ನು ಕೆ.ಎಚ್. ಶ್ರೀನಿವಾಸರು ಸಾಗರದ ಲಾಲ್‌ಬಹದ್ದೂರ್ ಕಾಲೇಜಿಗೆ ಪ್ರಿನ್ಸಿಪಾಲ್ ಆಗಿ ನೆಮ್ಮದಿಯ ಮೈಸೂರಿಂದ ಹಾರಿಸಿ ಒಯ್ದದ್ದೂ, ಅಡಿಗರು 'ಸಾಕ್ಷಿ' ಎಂಬ ಅನಿಯತಕಾಲಿಕೆಯಲ್ಲಿ 'ರಾಕ್ಷಸರು' ಎಂಬ ಬರೆಹ ಬರೆದದ್ದೂ ಇತಿಹಾಸ. ಹಾಗೆಯೇ, ಪಾಪದ ಕು.ಶಿ.ಹರಿದಾಸ ಭಟ್ಟರನ್ನು ಕುರಿತು ಖಾರವಾಗಿ ಕಾರಂತರು ಇಂಥದೇ ರೀತಿಯಲ್ಲಿ ಕಾದಂಬರಿ ಬರೆದಾಗ ಸುತ್ತಲೂ ಲತ್ತೆ ಕೊಡುವ ಕತ್ತೆ ನೆನಪಾಗಿ ಅದನ್ನೋದಿ ಕನಿಕರ ಪಟ್ಟವರ ಪೈಕಿ ನಾನೂ ಒಬ್ಬ. ನನ್ನ ಆರೋಗ್ಯ, ವಯಸ್ಸು ಮತ್ತು ಪರಿಸರಕ್ಕೆ ತಕ್ಕಂತೆ ಹವಣಾಗಿ ಇರೋದಕ್ಕೆ ಇಂಥ ನೆನಪುಗಳೇ ನನಗೆ ಟಾನಿಕ್ ಅಂದ್ರೆ ಅನ್ಯಥಾ ಭಾವಿಸಬೇಡಿ!''.

ನನಗೆ ಅನೇಕ ಸಲ ಅನಿಸಿದ್ದಿದೆ, ಇಂಥ ನೆನಪುಗಳನ್ನೆಲ್ಲ ರಾಘವೇಂದ್ರ ಭಟ್ಟರು ಒಂದೆಡೆ ಬರೆದಿಡಬೇಕಿತ್ತು, ಅದು ಪುಸ್ತಕರೂಪದಲ್ಲಿ ಪ್ರಕಟವಾಗಬೇಕಿತ್ತು, ಅಥವಾ ಕನಿಷ್ಠ ಧ್ವನಿಮುದ್ರಣವನ್ನಾದರೂ ಮಾಡಿಡಬೇಕಿತ್ತು ಎಂದು. ಮೇಲಿನ ಧೂಮವಿಲಾಸದ ನಿದರ್ಶನವನ್ನೇ ತೆಗೆದುಕೊಂಡರೂ- ಸಾಹಿತಿಗಳು ಆ ರೀತಿ ಸಂಜೆಹೊತ್ತು ಅಥವಾ ವಾರಾಂತ್ಯದಲ್ಲಿ ಒಂದೆಡೆ ಸೇರಿ ಹರಟುತ್ತಿದ್ದರು ಅನ್ನೋದು ವಿಶೇಷವಲ್ಲ, ಧಾರವಾಡದಲ್ಲಿ ಮನೋಹರ ಗ್ರಂಥಮಾಲೆ ಕಚೇರಿಯ ಅಟ್ಟದ ಮೇಲೆ ಬೇಂದ್ರೆ ಆದಿಯಾಗಿ ಸಾಹಿತಿಗಳ ಹರಟೆ ನಡೆಯುತ್ತಿದ್ದದ್ದು ಪ್ರಸಿದ್ಧವೇ. ಆದರೆ ಪ್ರತ್ಯಕ್ಷದರ್ಶಿಯೊಬ್ಬರು ಅಕ್ಷರಗಳಲ್ಲಿ ಅದನ್ನೆಲ್ಲ ದಾಖಲಿಸಿಟ್ಟರೆ ಮತ್ತೆಮತ್ತೆ ಓದಿ ಚಪ್ಪರಿಸುವುದಕ್ಕೆ ಸ್ವಾರಸ್ಯಕರವಾಗಿರುತ್ತದೆ. ಅದರಲ್ಲೂ ಸಾಂಸ್ಕೃತಿಕ ರಾಜಧಾನಿ ಮೈಸೂರಿನಲ್ಲಿ ಸಾಹಿತ್ಯ-ಸಂಸ್ಕೃತಿಯ ದಿಗ್ಗಜರ ಪರಿಚಯ, ಒಡನಾಟ ಇದ್ದ ರಾಘವೇಂದ್ರ ಭಟ್ಟರು ಅಷ್ಟಿಷ್ಟನ್ನಾದರೂ ಬರೆದಿಡಬೇಕಿತ್ತು ಎಂಬ ಅಪೇಕ್ಷೆ ಅತಾರ್ಕಿಕವಲ್ಲ. ಜಿ.ಟಿ.ನಾರಾಯಣ ರಾಯರ ಸೊಸೆ ರುಕ್ಮಿಣಿ ಮಾಲಾ ಮೊನ್ನೆ ಫೇಸ್‌ಬುಕ್‌ನಲ್ಲಿ ಶ್ರದ್ಧಾಂಜಲಿ ಸಲ್ಲಿಸಿದ್ದರಲ್ಲೂ ಈ ಅಂಶ ವ್ಯಕ್ತವಾಗಿತ್ತು: ''ರಾಘವೇಂದ್ರ ಭಟ್ಟರು ಕನ್ನಡ, ಸಂಸ್ಕೃತ, ಆಂಗ್ಲ ವಿಷಯಗಳಲ್ಲಿ ಪಂಡಿತೋತ್ತಮರು. ನಮ್ಮ ಮಾವನವರ ಪರಮಾಪ್ತ ಸ್ನೇಹಿತರು. ಪ್ರತಿನಿತ್ಯ ಇಬ್ಬರಿಗೂ ವಾಯುವಿಹಾರಕ್ಕೋ, ಸಂಗೀತ ಕಛೇರಿಗೋ ಜತೆಯಾಗಿ ನಡೆದುಕೊಂಡೇ ಹೋಗುವುದು ಪರಿಪಾಠ. ಮಾವನವರು ಲೇಖನ, ಪುಸ್ತಕ ಬರವಣಿಗೆಯಲ್ಲಿ ತೊಡಗಿದ್ದಾಗ, ಏನೇ ಸಂಶಯ ಬಂದರೂ ಭಟ್ಟರಲ್ಲಿ ಚರ್ಚಿಸಿಯೇ ಮುಂದುವರಿಕೆ. ಪುಸ್ತಕಗಳ ಅಚ್ಚಿಗೆ ಮುನ್ನ ಕರಡು ತಿದ್ದುವ ಕೆಲಸವೂ ಅವರದೇ. ಆದರೆ ನಮ್ಮ ಮಾವನಿಗೆ ಒಂದು ಕಾರಣಕ್ಕೆ ಅವರ ಮೇಲೆ ಮುನಿಸಿತ್ತು- ಇಷ್ಟು ವಿದ್ವತ್ತಿರುವ ವ್ಯಕ್ತಿ, ಲೇಖನ ಬರೆಯಿರೆಂದರೆ ಸುತರಾಂ ಒಪ್ಪುತ್ತಿರಲಿಲ್ಲ ಎಂದು. ಮಾವ ಈ ವಿಷಯದಲ್ಲಿ ಹತಾಶರಾಗಿ ಸೋಲೊಪ್ಪಿಕೊಂಡಿದ್ದರು. ಭಟ್ಟರು ಆಗ ಜಯಶಾಲಿಯಾಗಿದ್ದರು. ಆದರೆ, ಮೈಸೂರು ಆಕಾಶವಾಣಿಯ ದಿವಾಕರ ಹೆಗಡೆಯವರು ಭಟ್ಟರನ್ನು ಈ ವಿಷಯದಲ್ಲಿ ಸೋಲಿಸಿ, ಅವರಿಂದ ಮೂರು ಚಿಂತನ ಹೇಳಿಸುವಲ್ಲಿ ವಿಜಯಿಯಾದರು. ಭಟ್ಟರ ಯಾವ ಸಬೂಬಿಗೂ ಕಿವಿಗೊಡದೆ, ಅವರಿಂದ ಲೇಖನಿ ಹಿಡಿಸಿ, ಚಿಂತನ ಬರೆಯಿಸಿ, ಆಕಾಶವಾಣಿಯಲ್ಲಿ ಪ್ರಸಾರ ಮಾಡಿಸಿದ ಕೀರ್ತಿ ದಿವಾಕರ ಹೆಗಡೆಯವರದು. ಅಂತೂ ನೀವು ಸೋತಿರಿ. ತಪ್ಪಿಸಿಕೊಳ್ಳಲಾಗಲಿಲ್ಲ. ಈಗ ಮಾವನವರು ಸ್ವರ್ಗದಲ್ಲೇ ಬಹಳ ಖುಷಿಪಟ್ಟಿರಬಹುದು ಎಂದು ಆ ಸಂದರ್ಭದಲ್ಲಿ ನಾನು ಭಟ್ಟರ ಕಾಲೆಳೆದಾಗ, ಕೂಡಲೇ ಮಾತು ಬೇರೆಡೆ ತಿರುಗಿಸಿ ತಪ್ಪಿಸಿಕೊಂಡಿದ್ದರು!''.

ಆಕಾಶವಾಣಿಯ ವಿಚಾರವನ್ನು ರಾಘವೇಂದ್ರ ಭಟ್ಟರು ಒಮ್ಮೆ ನನ್ನಲ್ಲೂ ಹಂಚಿಕೊಂಡಿದ್ದರು: ''ನಿಮ್ಮ ಮಂಗಳೂರು ಆಕಾಶವಾಣಿ ಸಂದರ್ಶನವನ್ನು ಕೇಳಿ, ಲೇಖನ ಓದಿ, ನನ್ನ ಆಕಾಶವಾಣಿ ಅನುಭವ ನೆನಪಿಸಿಕೊಂಡೆ. ಮೈಸೂರು ಮಹಾರಾಜಾ ಕಾಲೇಜಿನ ನಾವು ನಾಲ್ವರು ಅಂತರ ವಿ.ವಿ. ಚರ್ಚೆಗೆ ಆಯ್ಕೆ ಆಗಿದ್ದೆವು. ಜಿ.ಎಚ್.ನಾಯಕ್, ವೈಕುಂಠರಾಜು, ಸೋಮಶೇಖರ ರಾವ್ ಮತ್ತು ನಾನು. ಹೀಗೆ ಬೆಂಗಳೂರಿಗೆ ಹೋದಾಗಿನ ಲಾಭ- ಕಾಳಿಂಗರಾಯರು ಸೋಹನ್‌ಕುಮಾರಿ ಮತ್ತು ಮೋಹನ್‌ಕುಮಾರಿಯರೊಡನೆ ಆವತ್ತು ಆಕಾಶವಾಣಿ ನಿಲಯಕ್ಕೆ ಬಂದಿದ್ದರು. ಅವರ ಪಾಳಿ ಆದ ಮೇಲೆ ನಮ್ಮದು. ಆಗ ಆಕಾಶವಾಣಿಯಲ್ಲಿ ವಿ.ಸೀ. ಮತ್ತು ಶ್ರೀರಂಗ ಬೇರೆಬೇರೆ ವಿಭಾಗಗಳಲ್ಲಿದ್ದರು. ವಿ.ಸೀ. ತಮ್ಮ ಮನೆಯ ಗ್ರಂಥಾಲಯದಿಂದ ಬಂಗಾಳಿ ಸಾಹಿತ್ಯ ಕುರಿತ ಪುಸ್ತಕ ತರಿಸಿಕೊಂಡು, ಅಂದು ಮಾತನಾಡುವವರ ಜತೆ ರೆಕಾರ್ಡಿಂಗ್ ಮಾಡುತ್ತ ಉದಾಹರಣೆಗಳನ್ನು ತಮ್ಮ ಪುಸ್ತಕದಿಂದ ಓದಿದ್ದರು. ಆಮೇಲೆ ಹೀಗೆಯೇ ಹರಟುತ್ತ ನಮಗೊಂದು ವಿಚಿತ್ರ ಸುದ್ದಿ ಕೊಟ್ಟರು- ಇಲ್ಲಿ ಅಲ್ಪ ಗೌರವಧನದ ಚೆಕ್ ಪಡೆದ ಜನ ಕೆಲವರು ರಸ್ತೆ ತುದಿಯ ಪ್ರಜಾವಾಣಿ ಕಚೇರಿಗೆ ಹೋಗಿ ದೂರು ಕೊಟ್ಟು ಹೋಗುವರು. ಹೀಗಿದೆ ನಮ್ಮ ಪಾಡು, ನೋಡಿ- ಎಂದು. ಆಕಾಶವಾಣಿಯಲ್ಲಿ ಅವರನ್ನು ನಡೆಸಿಕೊಂಡ ಪರಿ ಹಾಗಿರುತ್ತಿತ್ತು. ಈಚೆಗೆ, ಮೈಸೂರು ಆಕಾಶವಾಣಿಯ ದಿವಾಕರ ಹೆಗಡೆಯವರು ನನ್ನನ್ನು ಒತ್ತಾಯಿಸಿದರು. ಡಿವಿಜಿ ಮತ್ತು ಕೈಲಾಸಂ ಬಗ್ಗೆ ಮೂರು ಹೊಸೆದು ನಿಭಾಯಿಸಿದೆ! ಶ್ರೇಯಸ್ಸು ದಿವಾಕರರಿಗೇ ಸಲ್ಲಬೇಕು. ಏಕವ್ಯಕ್ತಿ ತಾಳಮದ್ದಳೆ ಪ್ರಸ್ತುತಿಯಲ್ಲಿ ಅವರು ಪ್ರಖ್ಯಾತರು. ಆಕಾಶವಾಣಿಯಲ್ಲಿ ಇಂಥ ಬಹುಶ್ರುತ ಸಜ್ಜನರು ಸಾಕಷ್ಟಿದ್ದಾರೆ; ಬಳಸಿಕೊಳ್ಳುವ ಧಣಿಗಳು ಇರಬೇಕಷ್ಟೆ'' ಎಂದು. ಇನ್ನೊಂದು ಸಂದರ್ಭದಲ್ಲಿ, ಆಕಾಶವಾಣಿ ಎಂಬ ಹೆಸರಿನ ಬಗ್ಗೆಯೂ ಬರೆದಿದ್ದರು: ''ಮಹಾರಾಜಾ ಕಾಲೇಜಿನ ಅಧ್ಯಾಪಕರ ಕೊಠಡಿಯಲ್ಲಿ, ಇದಕ್ಕೊಂದು ಹೆಸರು ಹೇಳಿರಯ್ಯಾ ಎಂದು ಕೇಳಿದ ಗೋಪಾಲಸ್ವಾಮಿಗಳಿಗೆ ತಟಕ್ಕನೆ 'ಆಕಾಶವಾಣಿ' ಅಂತ ನಾಮಕರಣಿಸಿದ್ದು ನಾ.ಕಸ್ತೂರಿ ಎಂದು ಮೂರ್ತಿರಾಯರು ಮತ್ತು ನನ್ನ ಗುರುಗಳು ಕೆ. ವೆಂಕಟರಾಮಪ್ಪನವರ ಬಾಯಲ್ಲಿ ಕೇಳಿದ್ದೆ!'' ನೋಡಿ! ಇಂಥ ಮೌಖಿಕ ದಾಖಲೆಗಳು ಮರೆಯಾದಾಗ ಇತಿಹಾಸದ ಸತ್ಯ ಮಸುಕಾಗುತ್ತದೆ. ಅದೇ ಬೇಜಾರು.

ಜಿ.ಟಿ.ನಾರಾಯಣ ರಾಯರ ಪ್ರಸ್ತಾವ ರಾಘವೇಂದ್ರ ಭಟ್ಟರ ಟಿಪ್ಪಣಿಗಳಲ್ಲಿ ಆಗಾಗ ಬರುವುದಿತ್ತು. ಪದ್ಮಪತ್ರಮಿವಾಂಭಸಾ ತತ್ತ್ವಜ್ಞಾನ ಮತ್ತದರ ಹಿಂದಿನ ವಿಜ್ಞಾನ ಲೇಖನದಲ್ಲಿ ಏಕಾಂಗಿತನ, ನಿರ್ಲಿಪ್ತತೆ, ಏಕಾಂತ ಮುಂತಾದ ವಿಚಾರಗಳನ್ನೋದಿ ''ಜಿಟಿಎನ್ ಬಾಯಿಂದ ಈ ಏಕಾಂಗಿ ಮತ್ತು ಏಕಾಂತ ಎಂಬುದರ ವಿಶ್ಲೇಷಣೆಯನ್ನು ಅದೆಷ್ಟು ಸಲ ಕೇಳಿದ್ದೇನೋ!'' ಎಂದು ಸ್ಮರಿಸಿದ್ದರು. ''ಟಾನಿಕ್ ಶಕ್ತಿವರ್ಧಕ ಆದ್ದರಿಂದ ಅದಕ್ಕೊಂದು ಮಹಾಪ್ರಾಣ ಸೇರಿಸಿ ಠಾನಿಕ್ ಎನ್ನಬೇಕು ಎಂದು ಜಿಟಿಎನ್ ಸೋಂಕಿಸಿದ ಉಚ್ಚಾರಣೆ'' ಎಂದಿದ್ದರು. ಪಾವೆಂ ಆಚಾರ್ಯರ ಬಗ್ಗೆ ಬರೆದಾಗಲೂ ''ಪಾವೆಂ ಅವರ ನಿಕಟಮಿತ್ರರು ನಮ್ಮ ಜಿಟಿಎನ್. ಆಚಾರ್ಯರ ವಿಶಾಲ ಓದು ಮತ್ತು ಸೂಕ್ಷ್ಮಗ್ರಾಹಿ ದೃಷ್ಟಿಯ ಬಗ್ಗೆ ರಾಯರಿಂದ ಕೇಳಿ ಬಲ್ಲೆ; ಪಾವೆಂ ಅವರಿಗೆ ಹಮ್ಮಿಣಿ ಒಂದನ್ನು ಮೈಸೂರಿನ ಅಭಿಮಾನಿಗಳಿಂದ ಒಪ್ಪಿಸಿ ಧನ್ಯತೆ ಕಂಡವರು ಜಿಟಿಎನ್'' ಎಂದು ಬರೆದಿದ್ದರು. ''ಕೆ.ಎಸ್.ನಿಸಾರ್ ಅಹ್ಮದ್ ಮತ್ತು ಜಿಟಿಎನ್ ನಡುವೆ ಒಂದು ತೆರನ ಕಾಲೆಳೆಯುವ ಸಂಬಂಧವಿತ್ತು. ಕನ್ನಡದ ಮೊತ್ತಮೊದಲ ಧ್ವನಿಸುರುಳಿ 'ನಿತ್ಯೋತ್ಸವ' ಬಂದಾಗ ಸಜೀವ (ಲೈವ್) ಸಂಗೀತದ ಸವಿ ಕೆಸೆಟ್ಟಿನಲ್ಲಿ ಕೇವಲ ನೀರಸವೆಂದಿದ್ದರು ರಾಯರು. ವಿಡಿಯೊದಲ್ಲಿ ನೃತ್ಯಪ್ರದರ್ಶನ ವೀಕ್ಷಿಸುವುದೂ ಅವರಿಗೆ ಹಿಡಿಸದು. ಏನಿದ್ದರೂ ಪ್ರತ್ಯಕ್ಷ ಸವಿಯಬೇಕು'' ಎಂದು ಒಮ್ಮೆ ಬರೆದಿದ್ದರು. ಇನ್ನೊಂದು ಟಿಪ್ಪಣಿಯಲ್ಲಿ ''ಮೋಹನಮೂರ್ತಿ ನನ್ನ ಶಿಷ್ಯ; ಅವರ ಪ್ರೆಸ್ಸಿನಲ್ಲಿ ಜಿಟಿಎನ್ ಪುಸ್ತಕಗಳು ಅಚ್ಚಾಗುವಾಗ 'ಬನ್ನಿ, ನಿಮ್ಮ ಶಿಷ್ಯನನ್ನು ಹರಸಿ' ಎಂದು ಜಿಟಿಎನ್ ನನ್ನನ್ನೂ ಕರೆದೊಯ್ಯುವರು. ಮೋಹನಮೂರ್ತಿಯ ತಂದೆ ರಾ.ವೆಂ.ಶ್ರೀನಿವಾಸ ಮೂರ್ತಿ ನನ್ನನ್ನಷ್ಟೇ ಪಕ್ಕಕ್ಕೆ ಕರೆದು ಮಾತನಾಡಿಸುವರು. ಜಿಟಿಎನ್ ನಿರೀಶ್ವರವಾದಿಯೆಂದು ಅವರಿಗೆ ಇಷ್ಟವಾಗದು!'' ಎಂದು ಬರೆದಿದ್ದರು.

ಜಿಟಿಎನ್ ಸಖ್ಯದಿಂದಾಗಿಯೇ ಇರಬಹುದು, ರಾಘವೇಂದ್ರ ಭಟ್ಟರಿಗೆ ವಿಜ್ಞಾನದಲ್ಲಿ ವಿಶೇಷ ಆಸಕ್ತಿ. ಗಣಿತದಿಂದ ದೂರ ಓಡಿಹೋದೆನಾದರೂ ವಿಜ್ಞಾನ ತನಗೆ ನೆಚ್ಚಿನದೆನ್ನುತ್ತಿದ್ದರು. ಖ್ಯಾತ ವಿಜ್ಞಾನಲೇಖಕ ಹಾಲ್ದೊಡ್ಡೇರಿ ಸುಧೀಂದ್ರರ ಅಕಾಲನಿಧನದ ಸುದ್ದಿಯಿಂದ ತೀವ್ರ ನೊಂದಿದ್ದರು. ''ಸಾಧ್ಯವಾದರೆ, ಸುಧೀಂದ್ರರನ್ನು ಕುರಿತಾದ ಬರಹ ನಿಮ್ಮಿಂದ ಬರಲೆಂದು ನನ್ನ ಆಗ್ರಹದ ಕರೆ. ಅಪಾರ ವಿದ್ವತ್ತಿನ ಅನನ್ಯ ಸಂಶೋಧಕ ಮತ್ತು ಕನ್ನಡದ ಚೆನ್ನುಡಿಯ ಸುಮಧುರ ಶೈಲಿಯ ಅವರ ಬಗೆಗೆ ಬರೀತೀರಿ ತಾನೆ?'' ಎಂದು ನನ್ನನ್ನು ಕೇಳಿದ್ದರು. 'ವಿಶ್ವವಾಣಿ'ಯಲ್ಲಿ ಪ್ರಕಟವಾಗಿದ್ದ ಶ್ರದ್ಧಾಂಜಲಿ ಲೇಖನವನ್ನು ಅವರ ಗಮನಕ್ಕೆ ತಂದಾಗ ''ನನ್ನ ಕೋರಿಕೆಗೆ ದೊರೆತ ನಿಮ್ಮ ಮರುನುಡಿ ಮನ ತುಂಬಿತು. ಇಂಥ ಸರಳ ಸಜ್ಜನರ ನೆನಪೇ ನಮಗೆಲ್ಲ ಟಾನಿಕ್ಕು. ಕಸ್ತೂರಿಯಲ್ಲಿ ಅವರ ಲೇಖನಗಳು ನನ್ನನ್ನೂ ನನ್ನ ಮನೆಯವರನ್ನೂ ಅದೆಷ್ಟು ಹಿಡಿದಿಟ್ಟಿತೆಂದರೆ ಬೇರೆಲ್ಲದಕ್ಕೂ ಮೊದಲು ಇವೇ ನಮ್ಮ ಮೊದಲ ಗುಟುಕು. ಟಿ.ಎಸ್.ಅನಂತರಾಮು ಅವರಂಥ ಜಿಟಿಎನ್ ಗರಡಿಯಲ್ಲಿ ಸಾಮು ತೆಗೆದವರು ಬೆರಳೆಣಿಕೆಯಷ್ಟು ಮಂದಿ ನಮ್ಮಲ್ಲಿ ಉಳಿದಿದ್ದಾರೆ; ನಮ್ಮ ಪತ್ರಿಕೆಗಳು ಯುವಪ್ರತಿಭೆಗಳನ್ನು ಇನ್ನಷ್ಟು ಬೆಳೆಸುವರೆಂದು ನಂಬಿದ್ದೇನೆ'' ಎಂದಿದ್ದರು. ಇಸ್ರೋ ವಿಜ್ಞಾನಿ ಸಿ.ಆರ್.ಸತ್ಯ ಅವರ ಆತ್ಮಚರಿತ್ರೆ 'ತ್ರಿಮುಖಿ' ಪುಸ್ತಕದ ಬಗೆಗಿನ ಲೇಖನ ಓದಿ ''ಕಳೆದ ಮೂರು ತಿಂಗಳ ಅಪರಂಜಿಯಲ್ಲಿ ತ್ರಿಮುಖಿ ಬಗ್ಗೆ ಪ್ರಕಟಣೆ ಇದ್ದರೂ ಅದನ್ನು ಹೇಗೆ ಸಂಪಾದಿಸಲೆಂದು ತಿಳಿಯದೆ ಬೆಪ್ಪನಾದವನಿಗೆ ಈ ಲೇಖನ ಚುರುಕು ಮುಟ್ಟಿಸಿದೆ. ಇಂದೇ ಮೂರುದಿಕ್ಕಿಗೆ ಅಂಚೆ ಕಳಿಸಿದ್ದೇನೆ. ತ್ರಿಮುಖಿ ಸಿಕ್ಕರೆ ಕೊಂಡು ಓದಿ ಕೊಂಡಾಡುವೆನು!'' ಎಂದು ಬರೆದಿದ್ದರು; ಪುಸ್ತಕ ತರಿಸಿ ಓದಿದ್ದರು. ಇತ್ತೀಚೆಗೆ ಶರತ್ ಭಟ್ ಸೇರಾಜೆಯವರ 'ಹತ್ತೇವು ವಿಜ್ಞಾನದ ಜೀಪ!' ಪುಸ್ತಕ ಪ್ರಕಟವಾಗಲಿದೆಯೆಂದು ತಿಳಿದಾಗ ''ಮುನ್ನುಡಿಗೇ ಫಿದಾ ಆದೆ. ಶರತ್ ಭಟ್ಟರನ್ನು ಸಂಪರ್ಕಿಸುತ್ತೇನೆ'' ಎಂದಿದ್ದರು. ವಿಧಿಲೀಲೆ ಎನ್ನಬೇಕು, ಪುಸ್ತಕದ ಪ್ರಕಾಶಕ ಸೂರ್ಯಪ್ರಕಾಶ ಪಂಡಿತರು ಇನ್ನೂ ಮೀನಮೇಷ ಎಣಿಸುತ್ತಿದ್ದು ಪುಸ್ತಕವು ಸೂರ್ಯಪ್ರಕಾಶ ಕಂಡಿಲ್ಲ, ರಾಘವೇಂದ್ರ ಭಟ್ಟರ ಓದಿಗೆ ಅದು ಸಿಗಲೇ ಇಲ್ಲ!

ಮೈಸೂರಿನ ರೀಜನಲ್ ಕಾಲೇಜಿನಲ್ಲಿ ರಾಘವೇಂದ್ರ ಭಟ್ಟರಿಗೆ ಭೈರಪ್ಪ ಸಹೋದ್ಯೋಗಿ. ''ಭೈರಪ್ಪನವರೂ ನಾನೂ ಕಾಲೇಜಿನ ಕೆಲಸದ ಮೇಲೆ ಧಾರವಾಡಕ್ಕೆ ಹೋಗಿದ್ದಾಗ ಅಲ್ಲಿ ತಂಗಿದ್ದು ಪಾವೆಂ ಆಚಾರ್ಯರ ಭಾವನವರ ಹೋಟೆಲಿನಲ್ಲಿ. ಆಗಸ್ಟ್ ತಿಂಗಳ ಮಳೆಗಾಲ. ಅಸ್ವಮಾಲಂಕೃತ ಪಾವೆಂ ತಾತ್ಕಾಲಿಕವಾಗಿ ಅಲ್ಲೇ ವಾಸವಾಗಿದ್ದರು; ಆಗೆಲ್ಲ ಭೈರಪ್ಪ ತಮ್ಮ ಬರವಣಿಗೆಯ ಅನೇಕ ವಿಷಯಗಳನ್ನು ಈ ಹಿರಿಯರೊಡನೆ ಪ್ರಸ್ತಾವಿಸಿ ಮಾರ್ಗದರ್ಶನ ಪಡೆದರು; ಅದರ ಲಾಭ ಕನ್ನಡಿಗರಿಗೆ ಈಗಲೂ ದೊರಕುತ್ತಿದೆ'' ಅಂತ ಒಮ್ಮೆ ಬರೆದಿದ್ದರು. ಮತ್ತೊಮ್ಮೆ ''ಶಿವಮೊಗ್ಗದಲ್ಲಿ ಎಸ್.ವಿ.ರಂಗಣ್ಣನವರ ಅಧ್ಯಕ್ಷತೆಯಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕೆ.ವಿ.ಸುಬ್ಬಣ್ಣ ತುರ್ತುಪರಿಸ್ಥಿತಿ ಬಗ್ಗೆ ಮಾತನಾಡಲು ತೊಡಗಿದಾಗ ಗೋಷ್ಠಿಯ ಅಧ್ಯಕ್ಷ ಭೈರಪ್ಪ ತಡೆದು ನಿಲ್ಲಿಸಿದ್ದರು! ಅಲ್ಲಿ ಹಾಜರಿದ್ದ ನನಗೆ ಸಹೋದ್ಯೋಗಿ ಭೈರಪ್ಪನವರ ಬಗ್ಗೆ ಅಭಿಮಾನವೆನ್ನಿಸಿತು. ಸುಬ್ಬಣ್ಣ ಎಷ್ಟಿದ್ದರೂ ಅನಂತಮೂರ್ತಿ ಬಳಗದವರು. ಈ ತೆರನ ಮುಖಭಂಗ ಅವರಿಗಾದದ್ದು ನನಗೆ ಇಷ್ಟವಾಯ್ತು. ಏಕೆಂದರೆ ಶಿವಮೊಗ್ಗದಲ್ಲಿ ಸಂಘದವರಿಗೆ ಕಟ್ಟಾ ವಿರೋಧಿಗಳು ಈ ಸೋಷಲಿಸ್ಟರು'' ಎಂದು ಬರೆದಿದ್ದರು. ಡಾ.ಮೈ.ಶ್ರೀ.ನಟರಾಜರಿಗೆ ಆಳ್ವಾಸ್ ನುಡಿಸಿರಿ ಪ್ರಶಸ್ತಿ ಬಂದಾಗಿನ ಲೇಖನದಲ್ಲಿ ಅನಂತಮೂರ್ತಿಯವರ ಪ್ರಸ್ತಾವವೂ ಇತ್ತಾದ್ದರಿಂದ ನಟರಾಜರಿಗೂ ನನಗೂ ಒಂದೇ ಮಿಂಚಂಚೆ ಬರೆದು ''ಶಿವಮೊಗ್ಗದಲ್ಲಿ ಅನಂತಮೂರ್ತಿ ನನಗೂ ಮೇಷ್ಟ್ರು. ಆಗ ಅವರನ್ನು ಸಂಘದ ಚಡ್ಡಿಗಳು ಹೇಗೆಲ್ಲ ಗೋಳಾಡಿಸಿದೆವೆಂದು ನಮಗೇ ಮರೆತರೂನೂವೆ ಎಷ್ಟೋ ವರ್ಷ ಕಳೆದು ನಮ್ಮ ಸಹೋದ್ಯೋಗಿಯ ಮಗಳ ಜತೆ ಕೆ.ವಿ.ಅಕ್ಷರರ ಮಗನ ಮದುವೆಗೆ ಗಿರೀಶ್ ಕಾಸರವಳ್ಳಿ, ಜಿ.ಕೆ ಗೋವಿಂದರಾಯರೇ ಮುಂತಾದ ಸಮಾಜವಾದಿ ಸಾಥಿಗಳ ಜತೆಗೆ ಮುಡದಿ ಎಸ್ತರರ ಕೂಡೆ ಬಂದ ಅನಂತಮೂರ್ತಿಗಳು ತಮ್ಮದೇ ವಿಶಿಷ್ಟ ತಬ್ಬುಗೆಯಲ್ಲಿ ನನ್ನನ್ನ ಹಿಡಿದು 'ನೀನು ನನ್ನ ವೈರಿ ಕಣಯ್ಯಾ'! ಎಂದಿದ್ದರು. 1955ಕ್ಕೆ ಮೊದಲು ಶಿವಮೊಗ್ಗದಲ್ಲಿ ಆಮೇಲೆ ಮೈಸೂರಲ್ಲಿ ಅವರ ವಿದ್ಯಾರ್ಥಿ ಆಗಿದ್ದವನು ತರುವಾಯ ರೀಜನಲ್ ಕಾಲೇಜಿನಲ್ಲಿ ಸಹೋದ್ಯೋಗಿಯೂ ಆಗಿ ಅವರಿಗೂ ಭೈರಪ್ಪನವರಿಗೂ ಆಗುತ್ತಿದ್ದ ಜುಗಲ್ಬಂದಿ ನೋಡಿದ ನನಗೆ ಹೇಗಾಗಿರಬೇಡ?'' ಎಂದು ಮೆಲುಕುಹಾಕಿದ್ದರು. ಆದರೆ ಒಂದು ಮಾತು. ರಾಘವೇಂದ್ರ ಭಟ್ಟರದು 'ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ' ಬಸವತತ್ತ್ವದ ಕಟ್ಟುನಿಟ್ಟಿನ ಪರಿಪಾಲನೆ. ತನಗೆ ಸಿಕ್ಕ ಗೌರವ-ಮೆಚ್ಚುಗೆಗಳನ್ನೂ 'ನ ಮಮ' ಎಂಬಂತೆ ಕಂಡವರು. ''ವನಮಾಲಾ ವಿಶ್ವನಾಥ್ ನನ್ನ ಶಿಷ್ಯೆ. ಎಂ.ಎ. ತರುವಾಯ ಇನ್ನಷ್ಟು ಪರಿಣತಿಯ ಭಾಷಾಂತರ ಕ್ಷೇತ್ರದಲ್ಲಿ ಸ್ಪಷ್ಟ ಮೈಲಿಗಲ್ಲುಗಳನ್ನು ಸ್ಥಾಪಿಸುವ ಶ್ಲಾಘನೀಯ ಸಾಧನೆ ಮಾಡಿಯೂ ಗುರುಪರಂಪರೆಯಲ್ಲಿ ಸಮುಚಿತ ಗೌರವಾಭಿಮಾನ ಇರಿಸಿದ್ದಾರೆ. ಇಂಥ ಶಿಷ್ಯರ ಪ್ರಗತಿಯು ಸಮಾಜದ ಸಾಂಸ್ಕೃತಿಕ ಸಂಸ್ಕರಣಕ್ಕೆ ಕಾರಣವಾದಂತೆಲ್ಲ ಅದರ ಎಲ್ಲ ಯಶಸ್ಸು ನಮ್ಮ ಗುರುಗಳ ಪಾದದಲ್ಲಿ ಒಪ್ಪಿಸುವಷ್ಟು ಆ ದಿವ್ಯ ಪೂರ್ವಸೂರಿಗಳಿಂದ ಕಲಿತು ಅರಗಿಸಿಕೊಂಡ ಹೆಮ್ಮೆ ನನಗಿದೆ'' ಎನ್ನುವರು. ಎಂಥ ವಿನಮ್ರತೆ! ಈರೀತಿ ಗುಣಗ್ರಾಹಿ ನಿಃಸ್ವಾರ್ಥಿಗಳು ಇನ್ನಂತೂ ಯಾರೂ ಸಿಗಲಾರರೇನೋ.

ತಪ್ಪು ತಿದ್ದಿಕೊಳ್ಳಲಿಕ್ಕೆ ಹೇಳುವಾಗಲೂ ಅಷ್ಟೇ. ಬೆಣ್ಣೆಯಿಂದ ಕೂದಲು ತೆಗೆದಂತೆ, ಮನನೋಯಿಸದೆ ತಿಳಿಸುವರು. 'ಪುತ್ಥಳಿ' ಸರಿಯಾದ ರೂಪ, 'ಪುತ್ತಳಿ' ಅಲ್ಲ ಎಂದು ಅವರಿಂದಲೇ ನಾನು ಕಲಿತದ್ದು. ಒಮ್ಮೆ, 'ಕುರಿತೋದದೆಯುಂ ಕಾವ್ಯಪ್ರಯೋಗಪರಿಣತಮತಿಗಳ್' ಎಂದು ಬರೆದಿದ್ದೆ. 'ಪರಿಣಿತ' ಎಂದರೆ ಮದುವೆಯಾದವಳು, ಅದು 'ಪರಿಣತ'ಮತಿಗಳ್ ಆಗಬೇಕು ಎಂದು ತಿಳಿಸಿದ್ದರು. 'ಅಕ್ಷರಮಾತ್ರಂ ಕಲಿಸಿದಾತಂ ಗುರು' ಎಂದು ಬರೆದಿದ್ದಕ್ಕೆ 'ವರ್ಣಮಾತ್ರಂ ಕಲಿಸಿದಾತಂ ಗುರು' ಎಂದು ತಿದ್ದಿಕೊಂಡರೆ ಚೆನ್ನು ಅಂತ ಬರೆದಿದ್ದರು. ಒಂದು ಲೇಖನದಲ್ಲಿ 'ಏಸು'ಕ್ರಿಸ್ತ ಎಂಬ ಪದಪ್ರಯೋಗ ನೋಡಿ ''ಯೇಸು ಸರಿಯಾದ ರೂಪ. Jesus ಎಂಬುದಕ್ಕೆ ಇದೇ ಸಂವಾದಿಯಾದದ್ದು. ಗೋವಿಂದ ಪೈಗಳ ಗೊಲ್ಗೊಥಾ ಖಂಡಕಾವ್ಯದಲ್ಲಿ John ಯೋಹಾನ ಆದಂತೆ, Judas ಯೂದಾಯ ಆದಂತೆ. ನಮ್ಮ ಭಾಷೆಯನ್ನೇ ನೋಡಿ: ಯಜ್ಞ-ಜನ್ನ. ಯಾತ್ರೆ-ಜಾತ್ರೆ. ಯಮುನೆ-ಜಮುನೆ ತಾನೇ?'' ಎಂದು ತಿಳಿಹೇಳಿದ್ದರು. ಮತ್ತೊಮ್ಮೆ 'ಮೌಲಿಕ' ಬದಲಿಗೆ 'ಮೌಲ್ವಿಕ' ಎಂದು ತಪ್ಪಾಗಿ ಬರೆದಿದ್ದಾಗ 'ಮೌಲ್ವಿ' ಎಂದರೆ ಮುಸಲ್ಮಾನ ಧರ್ಮಗುರು ಎಂದು ಎಚ್ಚರಿಸಿದ್ದರು. ಲೇಖನಕಲೆಯ ಕೆಲವು ಸೂಕ್ಷ್ಮಗಳನ್ನು ಗಮನಿಸಿ ಮೆಚ್ಚುಗೆಯನ್ನೂ ತಿಳಿಸುತ್ತಿದ್ದರು. ''ಇಂದಿನ ಲೇಖನದಲ್ಲಿ ಒಂದುಕಡೆ- ಕೋವಿಡಾಯನದಲ್ಲಿ 'ಷಟ್ಪದ ದೂರ' ನಮಗೆಲ್ಲ ಗೊತ್ತಾಗಿದೆ, ಸಾಧ್ಯವಾದಷ್ಟೂ ಮಟ್ಟಿಗೆ ಅದನ್ನು ನಾವೆಲ್ಲ ಪಾಲಿಸಿದ್ದೇವೆ ಕೂಡ. ಈಗ ಷಟ್ಪದ ಸಾಮೀಪ್ಯ ಏನೆಂದು ತಿಳಿದುಕೊಳ್ಳೋಣ- ಅಂತ ಬರೆದಿದ್ದೀರಿ. ವಿಷಯ ನಿರೂಪಣೆಯಲ್ಲಿ ಇಂಥ ಮಾತು ನುಸುಳಿದರೆ ಓದುಗನಿಗೆ ಜೋಕಾಲಿಯಲ್ಲಿ ಜೀಕಿದ ಅನುಭವ ಕೊಡಬಲ್ಲುದು!'' ಎಂದು ಬೆನ್ನು ತಟ್ಟಿದ್ದರು. ಇನ್ನೊಮ್ಮೆ ''ಇಂದಿನ ಲೇಖನ ಓದಿದಾಗ ಭದ್ರಗಿರಿ ಅಚ್ಯುತದಾಸರ ನೆನಪಾಯ್ತು. ಹೇಗೆಂದರೆ, ಪ್ರಾರಂಭದಲ್ಲಿ ಒಂದು ಕೀರ್ತನೆ ಹಾಡಿ ಕ್ರಮೇಣ ಕಥಾಸಾಗರದಲ್ಲಿ ನಮ್ಮನ್ನು ಓಲಾಡಿಸಿ ಮುಕ್ತಾಯದಲ್ಲಿ ಅದೇ ಕೀರ್ತನೆಗೆ ಬಂದುಬಿಡುತ್ತಿದ್ದರು; ಸುಮಾರು ಒಂದೂವರೆ ತಾಸು ಕಳೆದದ್ದೇ ನಮಗೆ ಗೊತ್ತಾಗುತ್ತಿರಲಿಲ್ಲ. ಎಲ್ಲ ಬರಹಗಳನ್ನೂ ಹೀಗೆ ನಿಭಾಯಿಸಲು ಬರುವುದಿಲ್ಲವಾದರೂ ಅವಕಾಶ ಸಿಕ್ಕಾಗ, ನಿಮ್ಮಂಥವರು ಅದನ್ನು ಪಾಲಿಸಿದಾಗ, ಯುಕ್ತ ಮುಕ್ತಾಯವನ್ನು ಓದಿದ ನನ್ನಂಥವರಿಗೆ ತೃಪ್ತಿ ದೊರಕುವುದು'' ಎಂದಿದ್ದರು. ನಿಜ, ಪ್ರತಿ ಸಲ ಹಾಗೆ ಯುಕ್ತ ಮುಕ್ತಾಯ ಕೊಡಲಿಕ್ಕಾಗಲಿಕ್ಕಿಲ್ಲ, ಆದರೆ ಎಲ್ಲಿಂದ ಆರಂಭಿಸಿದೆವೋ ಅಲ್ಲಿಗೇ ತಂದು ನಿಲ್ಲಿಸಿದರೆ ಅದಕ್ಕೊಂದು ಚಂದ. ಕಳೆದವಾರ ರಾಘವೇಂದ್ರ ಭಟ್ಟರು ಸ್ವರ್ಗದಲ್ಲೇ ಓದಿರಬಹುದಾದ ಅಂಕಣಬರಹದಲ್ಲಿ ಹಾಗೇ ಮಾಡಿದ್ದೆ: 'ಬಾಗಿಲು ತೆರೆಯೇ ಸೇಸಮ್ಮ...' ಎಂಬ ವಾಕ್ಯವಿದ್ದ ಅವರ ಮಿಂಚಂಚೆಯ ಉಲ್ಲೇಖದಿಂದ ಆರಂಭಿಸಿ 'ಅವರಿಗೆ ಸ್ವರ್ಗದ ಬಾಗಿಲನ್ನು ತೆರೆಸಿಕೊಂಡರು' ಎಂದು ಮುಗಿಸಿದ್ದೆ! ಅದನ್ನು ಕಲಿಸಿದ ತಸ್ಮೈ ಶ್ರೀ ಗುರವೇ ನಮಃ.

ಸಾಮರಸ್ಯ-ಸಹಿಷ್ಣುತೆ ಇಂದಿನ ಅನಿವಾರ್ಯತೆ

ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com

ಮಣಿಮಂಜರಿ ಎಂಬ ಶುದ್ಧಾಂಗ ಅಪಲಾಪ' ಎಂಬ ನನ್ನ ಲೇಖನಕ್ಕೆ (ನ.14) ಅನೇಕ ಉತ್ತಮ ಪ್ರತಿಕ್ರಿಯೆಗಳು ಬಂದವು. ಶಂಕರಾಚಾರ್ಯರ ಅವಹೇಳನ ಮಾಡುವ ತಾಮಸಿಕ ಮನಸ್ಥಿತಿಗಳನ್ನು ಸಾತ್ವಿಕವಾಗಿ ವಿರೋಧಿಸಿರುವುದು, ಲೋಕಹಿತದ ದೃಷ್ಟಿಯಿಂದ ಮತಸಾಮರಸ್ಯದ ಅಗತ್ಯವನ್ನು ಎತ್ತಿ ಹೇಳಿರುವುದು ಅನೇಕ ಓದುಗರ ಮನಮುಟ್ಟಿದೆಯೆಂದು ತಿಳಿದು ಸಂತಸವಾಯಿತು.

ಶ್ರೀ ಶಂಕರರನ್ನು ಅಕಾರಣವಾಗಿ ಅವಹೇಳನಮಾಡುವ, ದೂಷಿಸುವ ಯತ್ನಗಳು ಇಂದು ನಿನ್ನೆಯದಲ್ಲ. 'ತಾವು ಮಾತ್ರ ಸರಿ' ಎನ್ನುವ ಮೂಲಭೂತವಾದಿಗಳು ಸಣ್ಣ ಪ್ರಮಾಣದಲ್ಲಾದರೂ ಸಮಾಜದಲ್ಲಿ ಇದ್ದೇ ಇರುತ್ತಾರೆ. ಇಂಥ ಹೀನ ಮನಸ್ಥಿತಿಯ ಜನನವಾಗಿದ್ದೆಲ್ಲಿಂದ ಎಂದು ನೋಡುವಾಗ, 'ಮಣಿಮಂಜರಿ'ಯಂಥ 'ಅವಹೇಳನ ಭೂಯಿಷ್ಠ' ಪುಸ್ತಕಗಳು, ಅದರ ಪಾಠ-ಪ್ರವಚನ ಇತ್ಯಾದಿಗಳೇ ಎಂಬುದು ಗೊತ್ತಾಗುತ್ತದೆ. ಯಾವುದೋ ಕೀರ್ತಿ ಕಾಮನೆಯಿಂದಲೋ, ಆ ಕಾಲಕ್ಕೆ ಯಾರನ್ನೋ ಮೆಚ್ಚಿಸಲೋ, ಖ್ಯಾತರನ್ನು ಸಾರ್ವಜನಿಕವಾಗಿ ನಿಂದಿಸಿದರೆ ತಾನು ದೊಡ್ಡವ ಎನಿಸಿಕೊಳ್ಳಬಹುದು ಎಂಬ ಭಾವನೆಯಿಂದಲೋ ರಚಿತವಾದ ಇಂಥ ಪುಸ್ತಕಗಳು ಎರಡು ಮತಗಳ ನಡುವೆ ಅದೆಂಥಾ ಕಂದಕವನ್ನು ಸೃಷ್ಟಿಸಬಹುದು ನೋಡಿ? ಅಕ್ಷರಕ್ಕಿರುವ ತಾಕತ್ತದು. ಹಾಗಾಗಿ, ಏನನ್ನಾದರೂ ಬರೆದು ಪ್ರಕಟಿಸುವ ಮುನ್ನ ಸಮಾಜದ ಮೇಲಾಗುವ ಪರಿಣಾಮವನ್ನು ಲೇಖಕ ಮುನ್ನಂದಾಜಿಸಲೇಬೇಕಾಗುತ್ತದೆ. 'ನಮ್ಮ ದೇವರನ್ನು-ಆಚಾರ್ಯರನ್ನು ಆರಾಧಿಸುವವರಷ್ಟೇ ನಮ್ಮವರು, ಉಳಿದವರೆಲ್ಲಾ ಕಾಫಿರರು; ಕಾಫಿರರಿಗೆ ಭೂಮಿಯಲ್ಲಿ ಬದುಕುವ ಹಕ್ಕಿಲ್ಲ' ಎನ್ನುವುದು ಬೇರೆಯದ್ದೇ ಚಿಂತನೆ. 'ನಮ್ಮ ಸನಾತನ ಸಂಸ್ಕೃತಿ ಹಾಗಲ್ಲ' ಎಂಬುದು, ತ್ರಿಮತಗಳ-ತ್ರಿಮತಾಚಾರ್ಯರುಗಳ ಕುರಿತು ಪರಸ್ಪರ ಕ್ಷುಲ್ಲಕವಾಗಿ ಚಿಂತಿಸುವ ತಥಾಕಥಿತ ವಿದ್ವಾಂಸರಿಗೆ ಅರ್ಥವಾಗಬೇಕಾದ ಸತ್ಯ.

ನನ್ನ ಲೇಖನಕ್ಕೆ ಪ್ರತಿಸ್ಪಂದನೆಯಾಗಿ ಕಳೆದ ವಾರ 'ವಿಶ್ವವಾಣಿ'ಯಲ್ಲಿ ವಿದ್ವಾನ್ ಹೃಷೀಕೇಶಾಚಾರ್ಯ ಮಠದ ಇವರ 'ಮಣಿಮಂಜರಿ ಎಂಬುದು ಪ್ರಾಮಾಣಿಕ ಕೃತಿ, ಅದರ ಬಗ್ಗೆ ಅಪಲಾಪ ಸಲ್ಲ' ಎಂಬ ಲೇಖನ ಪ್ರಕಟವಾಯಿತು. ಇದನ್ನೋದುವ ಮೊದಲು, 'ಈ ಲೇಖನದಲ್ಲಿ ಒಂದು ಸಾತ್ವಿಕ ಪ್ರತಿಸ್ಪಂದನೆಯಿರಬಹುದು' ಎಂಬ ನಿರೀಕ್ಷೆಯಿತ್ತು. ಆದರೆ ಓದಿದ ಮೇಲೆ, 'ಇದು ಶ್ರೀ ಶಂಕರರನ್ನು ಅವಹೇಳನ ಮಾಡುವ ನಾರಾಯಣ ಪಂಡಿತರ ಪರಂಪರೆಯ ಮುಂದುವರಿದ ಭಾಗವಷ್ಟೇ' ಎನಿಸಿ ನಿರಾಶೆಯಾಯಿತು. ಈ ಲೇಖನದ ಮನೋಧರ್ಮದ ಅರಿವಾಗಿ, ಅದನ್ನು ಬರೆದ ವಿದ್ವಾಂಸರ ಕುರಿತು ಪಶ್ಚಾತ್ತಾಪವಾಯಿತು. 'ಶಾಂತಂ ಪಾಪಂ' ಎನ್ನುತ್ತಾ ಉದಾಸೀನ ಮಾಡುವುದೇ ಯೋಗ್ಯವೆನಿಸಿದರೂ, 'ಹೇಳಬಾರದ್ದನ್ನು ಹೇಳಿದರೆ ಪಾಪವಾಗುವ ಹಾಗೆ, ಹೇಳಬೇಕಾದ್ದನ್ನು ಹೇಳದೆ ಸುಮ್ಮನಿರುವುದೂ ಪಾಪವೇ' ಎಂಬ ನ್ಯಾಯದಿಂದ ಮತ್ತೆ ನಾಲ್ಕಕ್ಷರ ಬರೆಯಬೇಕೆನ್ನಿಸಿತು.

ಶತಾವಧಾನಿ ಗಣೇಶರ ಮಾತಲ್ಲಿ ನಂಬಿಕೆಯಿಟ್ಟು 'ಮಣಿಮಂಜರಿ'ಯ ಕೆಲ ಪುಟಗಳನ್ನು ತಿರುವಿಹಾಕಿ ಈ ಲೇಖನವನ್ನು ನಾನು ಪ್ರಸ್ತುತಪಡಿಸಿರುವೆ ಎಂಬ ಸಂಶಯ ಹೃಷೀಕೇಶಾಚಾರ್ಯರದ್ದು. ಈ ಅಸಾತ್ವಿಕ ಗ್ರಂಥವನ್ನು ನಾನು ಎಷ್ಟು ಓದಿರುವೆ ಎಂಬುದನ್ನು ನನ್ನ ಲೇಖನವೇ ಅಭಿವ್ಯಕ್ತಿಸಿದೆ, ಓದುಗರು ಅದನ್ನು ಸ್ವೀಕರಿಸಿಯಾಗಿದೆ. ಹಾಗಾಗಿ ನನ್ನ ಓದಿನ ಆಳ-ಅಗಲಗಳ ಬಗ್ಗೆ ಹೃಷೀಕೇಶಾಚಾರ್ಯರಿಗೆ ಲೆಕ್ಕ ಕೊಡುವ ಅಗತ್ಯವಿಲ್ಲ ಎಂದುಕೊಂಡಿರುವೆ. 'ಮನೀಷಿಣಃ ಸಂತಿ ನತೋ ಹಿತೈಷಿಣಃ, ಹಿತೈಷಿಣಃ ಸಂತಿ ನತೋ ಮನೀಷಿಣಃ'- ವಿದ್ವಾಂಸರುಗಳೆಲ್ಲಾ ವಿವೇಕಿಗಳಾಗಬೇಕಿಲ್ಲ, ವಿವೇಕಿಗಳು ವಿದ್ವಾಂಸರೇ ಆಗಿರಬೇಕು ಅಂತಲೂ ಇಲ್ಲ. ನಾನು 2ನೇ ಗುಂಪಿಗೆ ಸೇರಿದವನು ಎನ್ನಲು ಹೆಮ್ಮೆಯಿದೆ; ಕಾರಣ, ನನಗೆ ಲೋಕಹಿತದ ಕಾಳಜಿಯಷ್ಟೇ ಇದೆ.

ಮುಂದೆ ಅವರು, 'ಗರುಡ ಪುರಾಣ'ದ ಯಾವುದೋ ವಾಕ್ಯಾರ್ಥವನ್ನು ಉಲ್ಲೇಖಿಸುತ್ತಾರೆ ('ಮಣಿಮನ್ನಾಮ ದೈತ್ಯಸ್ತು ಸಂಕರಾಖ್ಯೋ ಭವಿಷ್ಯತಿ). ಸಂಸ್ಕೃತದಲ್ಲಿ 'ಸಂಕರ' ಮತ್ತು 'ಶಂಕರ' ಬೇರೆ ಬೇರೆ ಶಬ್ದಗಳು; 'ಶಂ ಕರೋತಿ ಇತಿ ಶಂಕರಃ' ಎಂಬುದು 'ಶಂಕರ' ಶಬ್ದದ ನಿಷ್ಪತ್ತಿ. ಶುಭವನ್ನೂ, ಮಂಗಳವನ್ನೂ ಉಂಟುಮಾಡುವವನು ಶಂಕರ ಎಂಬುದು ಇದರರ್ಥ. ಶ್ರೀ ಶಂಕರರಿಗೆ ಈ ಹೆಸರು ಅನ್ವರ್ಥವಾಗಿದೆ. ಹೃಷೀಕೇಶಾಚಾರ್ಯರಿಗೆ ಈ ಎರಡು ಶಬ್ದಗಳ ಅರ್ಥಭೇದದ ಅರಿವಿಲ್ಲವೆಂತಲ್ಲ. ಆದರೆ, ಶಂಕರರನ್ನು ದೂಷಿಸುವುದೇ ಉದ್ದೇಶವಾದ್ದರಿಂದ, 'ಮಣಿಮಂಜರಿ'ಯ ಮಾಯೆ ಅವರನ್ನಾವರಿಸಿರುವುದರಿಂದ, ಈ ಎರಡೂ ಶಬ್ದಗಳು ಅವರಿಗೆ ಒಂದೇ ಆಗಿ ಕಂಡಿರಬಹುದು. ಅವರು ಮುಂದುವರಿದು, 'ಶಂಕರರು ರಚಿಸಿದ ಅನೇಕ ಲೋಕಪ್ರಸಿದ್ಧ ಸ್ತೋತ್ರಗಳು ಅವರು ರಚಿಸಿದ್ದೇ ಅಲ್ಲ, ಬೇರೆ ಯಾರೋ ಬರೆದು ಶಂಕರರ ಹೆಸರಲ್ಲಿ ಪ್ರಸಿದ್ಧ ಮಾಡಿದ್ದಾರೆ' ಎಂಬ ಬಾಲಿಶ ವಾದವನ್ನು ಮಂಡಿಸುತ್ತಾರೆ. ಇದಕ್ಕೆ ಏನನ್ನುವುದು? ಇಂಥವರು ನಾಳೆ ''ವಾಲ್ಮೀಕಿ-ವ್ಯಾಸರ 'ರಾಮಾಯಣ-ಮಹಾಭಾರತ' ಮಹಾಕಾವ್ಯಗಳೂ ಅವರದ್ದಲ್ಲ, ಪ್ರಸಿದ್ಧಿಗೆಂದು ಅವರ ಹೆಸರು ಉಲ್ಲೇಖಿಸಲಾಗಿದೆ'' ಎಂದರೂ ಅಚ್ಚರಿಯಿಲ್ಲ. 'ವೇದಗಳು ಅನಿತ್ಯ, ಅವಕ್ಕೆ ನಾಶವಿದೆ, ದೇವರೆಲ್ಲಾ ಸುಳ್ಳು, ಬ್ರಹ್ಮವೊಂದೇ ಸತ್ಯವೆಂದು ಶಂಕರರು ಹೇಳಿದ್ದಾರೆ' ಎಂದೆಲ್ಲಾ ಒಂದಕ್ಕೊಂದು ಸಂಬಂಧವಿಲ್ಲದ ಸಂಗತಿಗಳನ್ನೇ, 'ಮಣಿಮಂಜರಿ'ಯಂಥ ಪುಸ್ತಕಗಳ ಪಾಠದಿಂದ ಬೆಳೆಸಿಕೊಂಡ 'ಶ್ರೀ ಶಂಕರ-ವಿರೋಧಿ' ಪೂರ್ವಗ್ರಹದ ಮನಸ್ಥಿತಿಯನ್ನೇ ಇಲ್ಲಿ ಅನಾವರಣಗೊಳಿಸಲು ಯತ್ನಿಸಿದ್ದಾರಷ್ಟೇ. 'ಶತಾವಧಾನಿ ಗಣೇಶರು, ವಿನಾಯಕ ಭಟ್ಟರು, ಶಂಕರ ಪರಂಪರೆಯವರು ಹೇಳುವುದೆಲ್ಲವೂ ಸುಳ್ಳು; ನಮ್ಮಲ್ಲಿ ಅನೇಕ ದಾಖಲೆಗಳಿವೆ, ಯಾವುದೇ ಸಂದರ್ಭದಲ್ಲಿ ಉತ್ತರಿಸಲು ಸಿದ್ಧ' ಎಂಬ ಯುದ್ಧೋನ್ಮಾದದ ಮಾತಿನೊಂದಿಗೆ ತಮ್ಮ ಲೇಖನವನ್ನು ಮುಗಿಸಿದ್ದಾರೆ. ಸಮರ್ಥನೆ ಮಾಡಬಾರದ, ಲೋಕದಲ್ಲಿ ಅಸಮಾಧಾನ ಸೃಷ್ಟಿಸಲೆಂದೇ ಹುಟ್ಟಿದ ಇಂಥ ವಿವಾದಾತ್ಮಕ ಕೃತಿಗಳ ಅಧ್ಯಯನಕ್ಕೆ ಸಮಯ ವ್ಯರ್ಥಮಾಡಿ ಅದರ ಪರ ಪ್ರಚಾರ ಮಾಡುವ ಬದಲು, ಶ್ರೀ ಮಧ್ವರ ಮತ್ತು ಮಧ್ವ ಸಂಪ್ರದಾಯದ ಇತರ ಉತ್ತಮ ಗ್ರಂಥಗಳ ಅಧ್ಯಯನದಲ್ಲಿ ಅವರು ಹೆಚ್ಚು ವ್ಯಸ್ತರಾಗಲಿ ಎಂದು ಹಾರೈಸುತ್ತ, ಅವರ ಒಳ್ಳೆಯದಕ್ಕೆ ಈಶ್ವರನಲ್ಲಿ ಪ್ರಾರ್ಥಿಸುತ್ತೇನೆ. ಈಶ್ವರೋ ರಕ್ಷತು!

ಲೇಖನ ಪ್ರಕಟವಾದ ಒಂದೆರಡು ದಿನಗಳಲ್ಲಿ ಮೈಸೂರಿನ ಓದುಗಮಿತ್ರ ಶ್ರೀಧರ್ ವಿಡಿಯೋ ತುಣುಕೊಂದನ್ನು ಕಳಿಸಿದ್ದರು. ಅದರಲ್ಲಿ ಮಂತ್ರಾಲಯದ ಇಂದಿನ ಪೀಠಾಧಿಪತಿ ಶ್ರೀ ಸುಬುಧೇಂದ್ರ ತೀರ್ಥರು ತ್ರಿಮತಾಚಾರ್ಯರ ಬಗ್ಗೆ ಅರ್ಥವತ್ತಾಗಿ ಮಾತಾಡಿರುವ ಪರಿ ಹೀಗಿದೆ: ''ಸನಾತನ ಹಿಂದೂಧರ್ಮವನ್ನು ಅನುಸರಿಸುತ್ತಿರುವವರು ಜಗತ್ತಿನಲ್ಲಿ ಅಲ್ಪಸಂಖ್ಯಾತರಾಗುತ್ತಿದ್ದ, ವೇದವಿದ್ಯೆಗಳು ನಶಿಸುತ್ತಿದ್ದ ಸಂದರ್ಭದಲ್ಲಿ ಶಂಕರಾಚಾರ್ಯರು ಅವತರಿಸಿ ವೈದಿಕ ಸಂಸ್ಕೃತಿಯನ್ನು ವ್ಯವಸ್ಥಿತಗೊಳಿಸಿ ಸಂರಕ್ಷಿಸದಿದ್ದಿದ್ದರೆ, ಮುಂದೆ ರಾಮಾನುಜರು ಮತ್ತು ಮಧ್ವರು ಅವತರಿಸುವ, ಶಂಕರರ ಕಾರ್ಯವನ್ನು ಮುಂದುವರಿಸುವ ಅವಕಾಶವೇ ಇರುತ್ತಿರಲಿಲ್ಲ. ಹಾಗಾಗಿ, ನಮ್ಮ ಸನಾತನ ಸಂಸ್ಕೃತಿಯನ್ನು ಗೌರವಿಸುವ ಯಾರೇ ಆದರೂ, ಮೊದಲು ಭಕ್ತಿ-ಗೌರವ ಪುರಸ್ಸರವಾಗಿ ಸ್ಮರಣೆ ಮಾಡಬೇಕಾದ್ದು ಶ್ರೀ ಶಂಕರರನ್ನು, ಆಮೇಲೆ ಶ್ರೀ ರಾಮಾನುಜರು ಮತ್ತು ಶ್ರೀ ಮಧ್ವರನ್ನು. ಹಾಗಾಗಿ ನಾವು ಶ್ರೀ ಶಂಕರರಿಗೆ ಸದಾ ಕೃತಜ್ಞರಾಗಿರಬೇಕು''.

ಸ್ವತಃ ವೈಷ್ಣವ ಪರಂಪರೆಯ ಈ ಶ್ರೀಗಳು, ಸಮಂಜಸವಾದ-ಸತ್ಯವಾದ ಮಾತನ್ನು ಹೀಗೆ ಪ್ರಾಂಜಲ ಮನಸ್ಸಿನಿಂದ ಆಡಿರುವುದು ಕೇಳಿ, 'ಸನಾತನ ಸಂತತಿಯ ಸಾಮರಸ್ಯವನ್ನು ಬಯಸುವ ಮಹಾತ್ಮರು ಇನ್ನೂ ಇದ್ದಾರೆ' ಎಂಬುದು ಅರಿವಾಗಿ ಸಮಾಧಾನವಾಯಿತು. ನಮ್ಮ ನಂಬಿಕೆ, ಆಸ್ಥೆ, ತಿಳಿವಳಿಕೆಗಳನ್ನು ಪ್ರೀತಿಸುತ್ತಾ, ಅನ್ಯ ನಂಬಿಕೆಗಳನ್ನು ಗೌರವಿಸುವುದೇ ನಮ್ಮ ಸನಾತನ ಪರಂಪರೆಯ ಧೋರಣೆ. 'ಸಹನಾ ವವತು, ಸಹನೌ ಭುನಕ್ತು, ಸಹ ವೀರ್ಯಂ ಕರವಾವಹೈ' ಎಂಬ ಶಾಂತಿಮಂತ್ರದ ಮೂಲಕ ಜಗತ್ತಿಗೆ ಶಾಂತಿ-ಸಹಿಷ್ಣುತೆಯನ್ನು ಮೊದಲು ಸಾರಿದ ಸನಾತನ ಸಂಸ್ಕೃತಿಯಿದು. ಶ್ರೀ ಮಧ್ವರು ಮತ್ತು ಶ್ರೀ ರಾಮಾನುಜರನ್ನು ಹೊಗಳಲು ಬೇಕಾದಷ್ಟು ಕಾರಣಗಳಿವೆ, ಶ್ರೀ ಶಂಕರರನ್ನು ದೂರಿಯೇ ಆ ಕೆಲಸ ಮಾಡಬೇಕೆಂದೇನೂ ಇಲ್ಲ, ಶಂಕರರನ್ನು ಧಿಕ್ಕರಿಸಿಯೇ ಮಧ್ವರನ್ನು ಪುರಸ್ಕರಿಸಬೇಕಾಗಿಲ್ಲ ತಾನೇ? ವಸ್ತುಸ್ಥಿತಿಯನ್ನು ಚೆನ್ನಾಗಿ ಅರ್ಥೈಸಿಕೊಂಡಿರುವ ಮಂತ್ರಾಲಯದ ಶ್ರೀಗಳಂಥವರಿಗೆ, ತ್ರಿಮತಗಳನ್ನೂ ಸತ್ವಭೂಯಿಷ್ಠವಾಗಿ ಅಧ್ಯಯನ ಮಾಡಿ ಸನಾತನ ಸಂಸ್ಕೃತಿಯ ಹಿತಬಯಸುವ ನಿಜಾರ್ಥದ ವಿದ್ವಾಂಸರಿಗೆ, ಸಮನ್ವಯವೇ ಕಾಣುತ್ತದೆ. ಅರ್ಥಂಬರ್ಥ ಓದಿಕೊಂಡು ತಪ್ಪಾಗಿ ಅರ್ಥೈಸುವ ತಥಾಕಥಿತ ವಿದ್ವಾಂಸರಿಗೆ ಮಾತ್ರ ಎಲ್ಲೆಡೆಯೂ ಭೇದವೇ ಕಾಣುವುದು. 'ಅಲ್ಪವಿದ್ಯಾತ್ ಭಿಭೇತ್ ವೇದಃ' ಎಂದಿರುವುದು ಇದಕ್ಕೇ ಇರಬೇಕು. ತನ್ನನ್ನು ಓದದಿರುವವರಿಗಿಂತ ಅರ್ಥಂಬರ್ಥ ಓದಿಕೊಂಡಿರುವವರನ್ನು ಕಂಡರೆ ವೇದಮಾತೆಗೂ ಭಯವಂತೆ!

2015ರ ಡಿಸೆಂಬರ್‌ನಲ್ಲಿ ಬನ್ನಂಜೆ ಗೋವಿಂದಾಚಾರ್ಯ ಪ್ರತಿಷ್ಠಾನವು ನಡೆಸಿದ 'ಬನ್ನಂಜೆ 80ರ ಸಂಭ್ರಮ' ಎಂಬ ಅರ್ಥಪೂರ್ಣ ಕಾರ್ಯಕ್ರಮವು ಉತ್ತಮ 'ಮತ-ಸಾಮರಸ್ಯ'ಕ್ಕೆ ಇನ್ನೊಂದು ಉದಾಹರಣೆ. ಅಲ್ಲಿ ನಾಡಿನ ಅನೇಕ ಮಠಾಧಿಪತಿಗಳು, ವಿದ್ವಾಂಸರು, ಚಿಂತಕರು ವಿವಿಧ ಗೋಷ್ಠಿಗಳಲ್ಲಿ ಪಾಲ್ಗೊಂಡು ವಿಚಾರ ವಿನಿಮಯ ಮಾಡಿಕೊಂಡಿದ್ದರು. 5ನೇ ದಿನದ 2ನೇ ಗೋಷ್ಠಿ ಅತ್ಯಂತ ವಿಶೇಷವಾದುದಾಗಿತ್ತು. ಡಾ.ಮಣಿದ್ರಾವಿಡ ಶಾಸ್ತ್ರಿಗಳು 'ಶಂಕರ ದರ್ಶನ'ವನ್ನೂ, ಮೇಲುಕೋಟೆಯ ಡಾ.ರಾಮಸ್ವಾಮಿ ಅಯ್ಯಂಗಾರರು 'ರಾಮಾನುಜ ದರ್ಶನ'ವನ್ನೂ, ಬನ್ನಂಜೆ ಗೋವಿಂದಾಚಾರ್ಯರು 'ಪೂರ್ಣಪ್ರಜ್ಞ ದರ್ಶನ'ವನ್ನೂ ಸ್ಥೂಲವಾಗಿ ಪರಿಚಯಿಸಿದರು. ಸ್ವತಃ ಶತಾವಧಾನಿ ಗಣೇಶರು ಈ ಗೋಷ್ಠಿಯನ್ನು ನಡೆಸಿಕೊಟ್ಟು ಕೊನೆಯಲ್ಲಿ, ''ಭಗವಾನ್ ವೇದವ್ಯಾಸರೇ ಈ ತ್ರಿಮತಗಳ ಪ್ರತಿಪಾದಕರಿಗೆ ಗುರುಗಳಾಗಿದ್ದಾರೆ, ತ್ರಿಮತಗಳಿಗೆ ಮೂಲವಸ್ತುಗಳಾದ ವೇದೋಪನಿಷತ್ತುಗಳು, ಗೀತೆ ಮತ್ತು ಸೂತ್ರಗಳೂ ಒಂದೇ ಆಗಿವೆ. ಹಾಗಾಗಿ ತ್ರಿಮತಗಳಲ್ಲಿ ಭೇದವಿರುವುದು ಉಪಾಧಿಯಲ್ಲಿಯೇ ಹೊರತು, ಆನಂದ ಎಂಬ ಉಪೇಯದಲ್ಲಿ ಅಲ್ಲ; ಇಲ್ಲಿ ಯಾರ ದರ್ಶನವು ಇನ್ನಾರ ದರ್ಶನಕ್ಕೆ ಅಧೀನ ಎಂಬ ಪ್ರಶ್ನೆಯೇ ಇಲ್ಲ, ಎಲ್ಲವೂ ಸ್ವತಂತ್ರವಾಗಿವೆ'' ಎನ್ನುವ ಸುಂದರ ಸಮನ್ವಯವನ್ನು ಹೇಳಿ ಗೋಷ್ಠಿಯನ್ನು ಮುಗಿಸಿದ್ದರು. ''ಸಾಧಕರಿಗೆ ಅವರವರ ಆಚಾರ್ಯರ ತತ್ವಗಳನ್ನು ಸರಿಯಾಗಿ ತಿಳಿದು ರೂಢಿಸಿಕೊಳ್ಳುವುದಕ್ಕೆ ನೆರವಾಗಲು ಇಂಥ ಗೋಷ್ಠಿ ನಡೆಯುತ್ತಿರುವುದು. ನಮ್ಮ ನಮ್ಮ ಆಚಾರ್ಯರ ಉಪದೇಶಗಳನ್ನು ಅಧ್ಯಯನ ಮಾಡಿ, ಗ್ರಹಿಸಿ, ಜೀವನಾನ್ವಯ ಮಾಡಿಕೊಂಡಾಗ ಮಾತ್ರ ನಾವು ದ್ವೈತಿಗಳು, ಅದ್ವೈತಿಗಳು ಅಥವಾ ವಿಶಿಷ್ಟಾದ್ವೈತಿಗಳಾಗಲು ಸಾಧ್ಯವಿದೆ. ನನ್ನ ತಂದೆ ಅದ್ವೈತಿಯಾಗಿದ್ದರೆಂಬ ಕಾರಣಕ್ಕೆ ನಾನೂ ಅದ್ವೈತಿಯಾಗುವುದಲ್ಲ. ಈಗ ನಾವು, ದ್ವೈತಿ-ಅದ್ವೈತಿ-ವಿಶಿಷ್ಟಾದ್ವೈತಿಗಳು ಅಂತ ಅಥವಾ 'ನಮ್ಮದೇ ಸರಿಯಾದದ್ದು' ಎಂದು ಜಗಳವಾಡುವ ಮೊದಲು ಎಲ್ಲವನ್ನೂ ಅಧ್ಯಯನ ಮಾಡಿ ನಮಗೆ ಸರಿಯೆನಿಸಿದ್ದನ್ನು ಅನುಸರಿಸಬಹುದು'' ಎಂದು ಬನ್ನಂಜೆಯವರು ಅಲ್ಲಿ ಅಭಿಪ್ರಾಯಪಟ್ಟಿದ್ದರು. ಭಾರತೀಯ ಸನಾತನ ಶ್ರೀಮಂತಿಕೆಗೆ ಶಂಕರರ ಕೊಡುಗೆಯನ್ನು ಉಪನ್ಯಾಸದುದ್ದಕ್ಕೂ ಕೊಂಡಾಡಿದ್ದ ಬನ್ನಂಜೆಯವರ ಮಾತು ಕೇಳಿದಾಗ, 'ಶಂಕರರ ನಿಂದನೆಯಲ್ಲೇ ಅನ್ನಾಹಾರ ಕಂಡುಕೊಳ್ಳುತ್ತಿರುವ ಕೆಲವರು ಮಧ್ವರನ್ನು ಸರಿಯಾಗಿ ಓದಿಕೊಂಡಿಲ್ಲ, ಹೀಗೆ ಸಾರವತ್ತಾದ ಅಧ್ಯಯನ ಮಾಡಿದವರು ಶಂಕರರನ್ನು ಅವಹೇಳನ ಮಾಡುವುದಿಲ್ಲ' ಎಂಬುದು ಅರ್ಥವಾಗುತ್ತದೆ. ಪಾಲ್ಗೊಂಡಿದ್ದ ಮೂರೂ ವಿದ್ವಾಂಸರು ಗೋಷ್ಠಿಯುದ್ದಕ್ಕೂ ಶಾಂತಚಿತ್ತದಿಂದ, ಕಠಿಣಾತಿಕಠಿಣ ವಿಷಯವನ್ನು ಕೇಳುಗರಿಗಾಗಿ ಸಮರಸಗೊಳಿಸಿದ್ದು ವಿಶೇಷವಾಗಿತ್ತು. ಅವರಲ್ಲಿ ಪರಸ್ಪರ ಪ್ರೀತಿ-ಗೌರವಗಳಿದ್ದವು.

ಮುಂದೆ ನನ್ನ ಲೇಖನದ ಕುರಿತು, ನವದೆಹಲಿಯ ಕೇಂದ್ರೀಯ ಸಂಸ್ಕೃತ ವಿ.ವಿ.ಯ ಕುಲಪತಿ ಪ್ರೊ.ಶ್ರೀನಿವಾಸ ವರಖೇಡಿಯವರ 'ಸಮನ್ವಯ-ಪ್ರತಿಪಾದಕ' ಪ್ರತಿಸ್ಪಂದನೆಯೂ 'ವಿಶ್ವವಾಣಿ'ಯಲ್ಲಿ ಪ್ರಕಟವಾಯಿತು. ಅದರಲ್ಲಿ ಅವರು ಸನಾತನ ಸಮಾಜದ ಉಳಿವಿಗಾಗಿ ವ್ಯಕ್ತಪಡಿಸಿದ ಕಾಳಜಿ ಮನಮುಟ್ಟುವಂತಿತ್ತು. ಈ ವಿವಾದಕ್ಕೆ ಸರಳ-ಸುಂದರ-ಶಾಶ್ವತ ಪರಿಹಾರವನ್ನೂ ಅವರು ಸೂಚಿಸಿರುವುದನ್ನು ನೋಡಿದಾಗ, ಅವರ ಮೇಲಿನ ಪ್ರೀತಿ-ಗೌರವ ಹೆಚ್ಚಾದವು. ಅವರ ಈ ಸಮಯೋಚಿತ ಪ್ರತಿಸ್ಪಂದನೆಗೆ ನನ್ನ ಗೌರವ-ಪುರಸ್ಸರ ಅಭಿವಾದನೆಗಳು. ನಿನ್ನೆ, ಶತಾವಧಾನಿ ಗಣೇಶರೂ, 'ಮಣಿಮಂಜರಿ' ಕುರಿತು ತಾವಾಡಿದ ಮಾತುಗಳ ಹಿನ್ನೆಲೆ ಮತ್ತು ಕಾರಣಗಳ ಕುರಿತು 'ವಿಶ್ವವಾಣಿ'ಯಲ್ಲಿ ಸ್ಪಷ್ಟೀಕರಿಸಿ, ಸಂಶಯಗ್ರಸ್ತ ಮನಸ್ಸುಗಳಿಗೆ ಸಮಾಧಾನ ನೀಡಿದ್ದಾರೆ. ಜತೆಗೆ, ಲೋಕದಲ್ಲಿನ ವಿವಿಧ 'ಶ್ರೀ ಶಂಕರ ದಿಗ್ವಿಜಯ'ಗಳ ಕುರಿತು ಹೇಳುತ್ತ, ಶ್ರೀ ಸಚ್ಚಿದಾನೇಂದ್ರ ಸರಸ್ವತೀ ಸ್ವಾಮಿಗಳ 'ಶ್ರೀ ಶಂಕರ ಭಗವತ್ಪಾದ ವೃತ್ತಾಂತ ಸಾರಸರ್ವಸ್ವ' ಮತ್ತು ವಿದ್ವಾನ್ ಎಸ್. ರಂಗನಾಥ ಶರ್ಮರ 'ಮಾಧವೀಯ ಶಂಕರವಿಜಯ'ದ ಕನ್ನಡಾನುವಾದದ ಉಲ್ಲೇಖ ಮಾಡಿ ಆಸಕ್ತರಿಗೆ ಉಪಕರಿಸಿದ್ದಾರೆ. ಎಲ್ಲ ಮತದವರಿಗೂ ಆಸರೆಯಾದ ಸನಾತನಕ್ಕೆ, ಅದರ ಆಧಾರವಾದ ನಮ್ಮೀ ದೇಶಕ್ಕೆ ಒಳಿತಾಗಲಿ ಎಂದು ಹಾರೈಸಿರುವ ಅವರ ಸುಮನಸ್ಸಿಗೆ ನನ್ನ ಶರಣು.

'ದೌರ್ಲಭ್ಯಾತ್ ಶುದ್ಧಬುದ್ಧೀನಾಂ, ಬಾಹುಳ್ಯಾತ್ ಅಲ್ಪವೇದಿನಾಂ, ದುರಾಗ್ರಹ ಗ್ರಹೀತತ್ವಾತ್ ವರ್ತಂತೆ ಸಮಯಾಃಸ್ಸದಾ' ಎಂಬ ಮಧ್ವರ ಮಾತು ಇಂದಿಗೂ ಪ್ರಸ್ತುತ. ಶುದ್ಧಬುದ್ಧಿಯುಳ್ಳವರ ಕೊರತೆ, ಅರ್ಥಂಬರ್ಥ ತಿಳಿವಳಿಕೆಯವರ ಮತ್ತು ದುರಾಗ್ರಹಪೀಡಿತರ ಬಾಹುಳ್ಯ ಎಂಬುದು ಎಲ್ಲ ಕಾಲದಲ್ಲೂ ಇದ್ದದ್ದೇ. ಹಾಗಂತ ಸಾತ್ವಿಕರು ಅಂಜಬೇಕಿಲ್ಲ. ಶ್ರೀ ಸುಬುಧೇಂದ್ರ ತೀರ್ಥರು, ಶತಾವಧಾನಿ ಗಣೇಶರು, ಪ್ರೊ.ಶ್ರೀನಿವಾಸ ವರಖೇಡಿಯವರು ಮತ್ತು ಬನ್ನಂಜೆ ಗೋವಿಂದಾಚಾರ್ಯರೇ ಮೊದಲಾದ ಸಮ್ಯಕ್ ಜ್ಞಾನಿಗಳು ಸಮಾಜದಲ್ಲಿ ಆಗಾಗ ಹುಟ್ಟಿ ವೈಚಾರಿಕ ಸಮತೋಲನಕ್ಕೆ ಕಾರಣರಾಗುತ್ತಾರೆ ಎಂಬ ನಂಬಿಕೆ ನನ್ನದು.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಬೊಂಬೆ ಹೇಳುತೈತೆ, ಮತ್ತೆ ಹೇಳುತೈತೆ...!



ರಸದೌತಣ
ಯಗಟಿ ರಘು ನಾಡಿಗ್
naadigru@gmail.com

ಚಲನಚಿತ್ರವನ್ನು ಎರಡೂವರೆ ಗಂಟೆಯ ಮನರಂಜನೆಯ ಬಾಬತ್ತಾಗಿ ಪರಿಗಣಿಸಿ ವೀಕ್ಷಿಸಿ, ಚಿತ್ರಮಂದಿರದಿಂದ ಹೊರಬರುವಾಗ ಅದನ್ನು ಅಲ್ಲೇ ಕೊಡವಿ ಬರುವವರದು ಒಂದು ವರ್ಗ. ಮತ್ತೊಂದೆಡೆ, ಅದರ ಕಥೆ-ಹಾಡು, ಸಂಭಾಷಣೆ-ಸನ್ನಿವೇಶಗಳೊಂದಿಗೆ ತಮ್ಮನ್ನು ಗುರುತಿಸಿಕೊಂಡು ಅದೇ 'ಹ್ಯಾಂಗೋವರ್' ಕಾಪಿಟ್ಟುಕೊಳ್ಳುವವರು, ತಮ್ಮ ಸ್ವಭಾವಾನುಸಾರ ಚಿತ್ರದ ಸಕಾರಾತ್ಮಕ/ನಕಾರಾತ್ಮಕ ಅಂಶಗಳನ್ನು ಅನುಸರಿಸುವವರು ಕೂಡ ಇದ್ದಾರೆ. ಡಾ.ರಾಜ್‌ಕುಮಾರ್‌ರ 'ಬಂಗಾರದ ಮನುಷ್ಯ' ಚಿತ್ರದಿಂದ ಪ್ರಭಾವಿತರಾದ ಅನೇಕ ನಗರಿಗರು ತಾವು ನಿರ್ವಹಿಸುತ್ತಿದ್ದ ಉದ್ಯೋಗ/ವ್ಯವಹಾರವನ್ನು ಕೈಬಿಟ್ಟು ಹಳ್ಳಿಗೆ ಮರಳಿ ಕೃಷಿಯಲ್ಲಿ ತೊಡಗಿಸಿಕೊಂಡದ್ದಿದೆ. ಅಣ್ಣಾವ್ರ 'ಜೀವನಚೈತ್ರ'ದಿಂದ ಪ್ರೇರಿತರಾಗಿ ಮದ್ಯವ್ಯಸನದಿಂದ ಬಿಡಿಸಿಕೊಂಡವರ ನಿದರ್ಶನಗಳಿವೆ. ವಿಷ್ಣುವರ್ಧನ್ ಅಭಿನಯದ 'ಬೂತಯ್ಯನ ಮಗ ಅಯ್ಯು'ವಿನಿಂದ ಬುದ್ಧಿ ಕಲಿತು, ಊರು-ಮನೆಯಲ್ಲಿನ ಸಣ್ಣಪುಟ್ಟ ವ್ಯಾಜ್ಯಗಳಿಗೆ ಕೋರ್ಟು ಮೆಟ್ಟಿಲು ಹತ್ತದೆ, ಅಲ್ಲಲ್ಲೇ ಬಗೆಹರಿಸಿಕೊಂಡವರು ಸಾಕಷ್ಟಿದ್ದಾರೆ. ಒಟ್ಟಿನಲ್ಲಿ, ಶ್ರೀಸಾಮಾನ್ಯರ ದೈನಂದಿನ ಬದುಕಿನ ಮೇಲೆ ಚಲನಚಿತ್ರಗಳು ತಮ್ಮದೇ ಆದ ಪ್ರಭಾವ ಬೀರುವುದಿದೆ.

ಈ ಪ್ರಭಾವ ಕೆಲವೊಮ್ಮೆ ಎಲ್ಲಿಯವರೆಗೂ ಮುಟ್ಟುತ್ತದೆ ಎಂದರೆ, ಮನೆಯಲ್ಲಿ ದೇವತಾಕಾರ್ಯವಿದ್ದಾಗಲೋ, ಅರಿಶಿನ-ಕುಂಕುಮಕ್ಕೆ ಕರೆದಾಗಲೋ, ''ಎಲ್ಲಮ್ಮಾ, ಒಂದು ಹಾಡು ಹೇಳಿ'' ಅಂತ ಹೆಂಗೆಳೆಯರನ್ನು 'ಶ್ರೋತೃ'ಗಳು ಕೋರಿದಾಗ, ಲಕ್ಷಣವಾಗಿ ದೇವರನಾಮವನ್ನೋ ಸ್ತೋತ್ರವನ್ನೋ ಹಾಡೋ ಬದಲು, ಚಲನಚಿತ್ರದ 'ಸೋ-ಕಾಲ್ಡ್' ಭಕ್ತಿಗೀತೆಗಳನ್ನು ಪಲುಕಿಬಿಡುತ್ತಾರೆ. ಭಕ್ತಿಲೇಪಿತ ಚಿತ್ರಗೀತೆಗಳನ್ನು ಇಂಥ ವೇಳೆ ಹಾಡಬಾರದು ಅಂತಲ್ಲ; ಆದರೆ ಇಂಥ ಎಲ್ಲವೂ 'ಭಕ್ತಿಗೀತೆಯೇ' ಎಂದು ನಿರ್ಧರಿಸಿಬಿಡುವುದಿದೆಯಲ್ಲಾ... ಅದು ಕೆಲವೊಮ್ಮೆ ಎಡವಟ್ಟಿನ ಸರಕಾಗುತ್ತದೆ!

ಕೊಂಚ ಫ್ಲ್ಯಾಷ್‌ಬ್ಯಾಕ್‌ಗೆ ಹೋಗೋಣ. ಪುಟ್ಟಣ್ಣ ಕಣಗಾಲರ ನಿರ್ದೇಶನದ 'ಶರಪಂಜರ' ಚಿತ್ರದ 'ಹದಿನಾಲ್ಕು ವರ್ಷ ವನವಾಸದಿಂದ ಮರಳಿಬಂದಳು ಸೀತೆ...' ಹಾಡು ನಿಮಗೆ ಗೊತ್ತಿರುವಂಥದೇ. ಕಲ್ಪನಾ ಅಭಿನಯದಲ್ಲಿ ಮೂಡಿಬಂದಿರುವ ಈ ಗೀತೆ ನೋಡುಗರ ಕಣ್ಣನ್ನು ತೇವವಾಗಿಸುವಂಥದ್ದು. ಗೀತೆಯ ಸನ್ನಿವೇಶ ಹೀಗಿದೆ: ದಸರಾ ಬೊಂಬೆ ಕೂರಿಸಿದ್ದ ಮನೆಯುವರು ಹೆಂಗೆಳೆಯರನ್ನು ಅರಿಶಿನ-ಕುಂಕುಮಕ್ಕೆ ಕರೆದಿರುತ್ತಾರೆ. ಅಲ್ಲಿಗೆ ಬರುವ ಕಥಾನಾಯಕಿ ಕಾವೇರಿ (ಕಲ್ಪನಾ) ಬೊಂಬೆಗಳನ್ನೆಲ್ಲಾ ಆಸಕ್ತಿಯಿಂದ ನೋಡುತ್ತಿರುವಾಗ ಹೆಂಗಸೊಬ್ಬರು, ''ಆ ಸೀತೆಯ ಬೊಂಬೆ ಥರವೇ ನಿಮಗೂ ಸೀರೆ ಉಡಿಸಿ ಅಲಂಕಾರ ಮಾಡಿದ್ರೆ ನೀವೂ ಹಾಗೇ ಕಾಣ್ತೀರಿ'' ಎನ್ನುತ್ತಾರೆ. ಆಗ ಕಾವೇರಿ ಆ 'ಸೀತೆ-ಬೊಂಬೆ'ಯನ್ನೇ ನೋಡಿಕೊಂಡು 'ಹದಿನಾಲ್ಕು ವರ್ಷ ವನವಾಸದಿಂದ ಮರಳಿ ಬಂದಳು ಸೀತೆ' ಹಾಡನ್ನು ಹಾಡುತ್ತಾಳೆ. ಅರಿಯದ ವಯಸ್ಸಲ್ಲಿ ತನ್ನ ಮೇಲಾದ ಲೈಂಗಿಕ ದೌರ್ಜನ್ಯ, ಅದರ ನೆನಪಿನ ಮರುಕಳಿಕೆಯಿಂದಾಗಿ ಒದಗಿದ ಮನೋರೋಗ, ಕೌಟುಂಬಿಕ ಬದುಕಿನಲ್ಲಿ ಬಿದ್ದ ಮಾನಸಿಕ ಪೆಟ್ಟುಗಳು, ತನ್ನವರಿಂದಲೇ ಪರಿತ್ಯಕ್ತಳಾಗಿದ್ದು ಇತ್ಯಾದಿಗಳನ್ನು ಕಾವೇರಿ ನೆನಪಿಸಿಕೊಂಡು, ಸೀತೆಯ ದುಃಖಮಯ ಬದುಕಿನೊಂದಿಗೆ ತನ್ನನ್ನು ಸಮೀಕರಿಸಿಕೊಂಡು ಹಾಡುವ ಹಾಡಿದು. ಮೇಲ್ನೋಟಕ್ಕಿದು ಸೀತೆಯ ಕುರಿತಾದ ಗೀತೆಯಂತೆ ಕಂಡರೂ, ಇದು ಬೊಂಬೆಯ ನೆಪದಲ್ಲಿ ಕಾವೇರಿ ತನ್ನ 'ಕಣ್ಣೀರ-ಕಥೆಯನ್ನು' ಪರೋಕ್ಷವಾಗಿ ತೋಡಿಕೊಳ್ಳುವ ಹಾಡಷ್ಟೇ. ದೇವರಾಣೆಗೂ ಇದು 'ಭಕ್ತಿಗೀತೆ' ಅಲ್ಲ!

ಆದರೆ, 'ಶರಪಂಜರ'ದ ಈ ಹಾಡು ಪಾಪ್ಯುಲರ್ ಆಗಿದ್ದೇ ಆಗಿದ್ದು, ನಮ್ಮೂರಿನ ಶಾಂತಮ್ಮನನ್ನು ಯಾವುದೇ ಮನೆಯವರು ಬೊಂಬೆ ಹಬ್ಬದಂದು ಅರಿಶಿನ-ಕುಂಕುಮಕ್ಕೆ ಕರೆದು ''ಎಲ್ಲಮ್ಮಾ, ಒಂದು ಹಾಡು ಹೇಳಿ'' ಅಂದುಬಿಟ್ಟರೆ ಸಾಕು, ಈ 'ಹದಿನಾಲ್ಕು ವರ್ಷ ವನವಾಸದ' ಹಾಡನ್ನು 'ಮೈದುಂಬಿ' ಹಾಡಿಬಿಡುತ್ತಿದ್ದರು ಶಾಂತಮ್ಮ! ಕಾರಣ, ಬೊಂಬೆ ಹಬ್ಬದ ಹಿನ್ನೆಲೆಯಲ್ಲಿ ಅದು ಚಿತ್ರೀಕರಿಸಲ್ಪಟ್ಟಿದೆಯಲ್ಲಾ ಅದಕ್ಕೆ! ಅರಿಶಿನ-ಕುಂಕುಮಕ್ಕೆ ಆಹ್ವಾನವಿಲ್ಲದಿದ್ದರೂ 'ಚಿಗಳಿ-

ತಂಬಿಟ್ಟಿನ' ಆಸೆಗೆ ಜತೆಗೇ ಹೋಗುತ್ತಿದ್ದ ಶಾಂತಮ್ಮನ ಗಂಡನಿಗೋ 'ಆಡಲಾಗದ ಅನುಭವಿಸಲಾಗದ' ಪರಿಸ್ಥಿತಿ! ಹಾಡಿನಲ್ಲಿನ ಶಾಂತಮ್ಮನ 'ಪರಕಾಯ ಪ್ರವೇಶ'ವನ್ನು ಸಾಕಷ್ಟು ವರ್ಷ ನೋಡಿದ ಆತ ಕೊನೆಗೊಮ್ಮೆ ರೋಸತ್ತು, ''ಲೇಯ್ ಸಾಕು ನಿಲ್ಲಿಸೇ ನಿನ್ನ ಗೋಳಿನ ಹಾಡನ್ನ'' ಅಂತ ಗದರಿ, ಈ ಗೀತೆಯ ಹಿಂದು-ಮುಂದನ್ನು ವಿವರಿಸಿದಾಗಲೇ 'ಹದಿನಾಲ್ಕು ವರ್ಷದ' ಈ ಹಾಡು 'ವನವಾಸಕ್ಕೆ' ಹೋಗಿದ್ದು!

ಈ ಸುಧಾರಣೆ ಕೆಲ ಕಾಲದವರೆಗೂ ಮುಂದುವರಿಯಿತು. ನಂತರ ಬಂತು ಕಣ್ರೀ ಶ್ರೀನಾಥ್-ಸರಿತಾ-ಗೀತಾ ಅಭಿನಯದ 'ಎರಡು ರೇಖೆಗಳು' ಚಿತ್ರ! ಅದರಲ್ಲೂ ಇಂಥದೇ ಸನ್ನಿವೇಶವಿದೆ. ದಸರಾ ಪ್ರಯುಕ್ತ ಸರಿತಾ ಮನೆಯಲ್ಲಿ ಬೊಂಬೆ ಇಟ್ಟಿರುತ್ತಾರೆ, ಅರಿಶಿನ ಕುಂಕುಮಕ್ಕೆ ಗೀತಾರನ್ನು ಕರೆದಿರುತ್ತಾರೆ. ಅಲ್ಲೂ ಮತ್ತದೇ, ''ಎಲ್ಲಮ್ಮಾ, ಒಂದು ಹಾಡು ಹೇಳಿ'' ಎಂಬ ಕೋರಿಕೆ ಗೀತಾರಿಗೆ! ಮೊದಲು ಹಿಂಜರಿದರೂ ನಂತರ, ''ನವರಾತ್ರಿ ಸಂಜೆಯಲಿ, ನನ್ನೆದೆಯ ಹಾಡಿನಲಿ, ಪ್ರಶ್ನೆಯೊಂದು ಮೂಡಿಹುದು ನೋಡಮ್ಮಾ'' ಎಂಬ ಹಾಡನ್ನು ಶುರುಮಾಡೇಬಿಡುತ್ತಾರೆ. ಹಾಡಿನ ರೂಪದಲ್ಲಿ ಗೀತಾ ಕೇಳಿಕೊಂಡು ಹೋಗುವ ಪ್ರಶ್ನೆಗಳಿಗೆ ಅದೇ ಧಾಟಿಯಲ್ಲಿ ಸರಿತಾ ಉತ್ತರಿಸುತ್ತಾ ಹೋಗುತ್ತಾರೆ. ಇದು ಚಿತ್ರದ ಸನ್ನಿವೇಶವಾಯಿತು....

ಅಷ್ಟು ಹೊತ್ತಿಗೆ ನಮ್ಮೂರಲ್ಲಿ, ಮೇಲಿನ ಸನ್ನಿವೇಶದಲ್ಲಿ ಹಾಗೆ 'ಗದರಿಕೊಂಡ' ಗಂಡನೂ, 'ಗದರಿಸಿಕೊಂಡ' ಶಾಂತಮ್ಮನೂ ಕಾಲವಾಗಿದ್ದರು; ಆದರೆ ಸಾಕಷ್ಟು ಮನೆಗಳಲ್ಲಿ ಟಿವಿಗಳು ಬಂದಿದ್ದವು. ಹೀಗಾಗಿ, 'ಎರಡು ರೇಖೆಗಳು' ಸಿನಿಮಾವನ್ನು ನೋಡದಿದ್ದರೂ ಟಿವಿಯಲ್ಲಿ ಈ ಹಾಡನ್ನು ಸಾಕಷ್ಟು ಸಲ ನೋಡುವ ಅವಕಾಶ ಹೆಣ್ಣು ಮಕ್ಕಳಿಗೆ ಇದ್ದೇ ಇರುತ್ತಿತ್ತು. ಇಲ್ಲಿ ಕೂಡ, 'ನವರಾತ್ರಿ ಸಂಜೆಯಲಿ' ಹಾಡು ಬೊಂಬೆ ಹಬ್ಬದ ಸನ್ನಿವೇಶದಲ್ಲಿ ಬರುವುದರಿಂದ, ಬೊಂಬೆ ಹಬ್ಬದಂದು ಅರಿಶಿನ-ಕುಂಕುಮಕ್ಕೆ ಕರೆದಾಗ, ಈ ಹಾಡನ್ನೇ ಕಂಠದಿಂದ ಕಿತ್ತು ವಗಾಯಿಸಲು ಶುರುಮಾಡಿಬಿಟ್ರು ನಮ್ಮೂರಿನ ಹೆಣ್-ಹೈಕ್ಳು! ಈ ಹಾಡಲ್ಲಿದ್ದುದೂ ಮತ್ತದೇ 'ಶರಪಂಜರ'ದ 'ಹದಿನಾಲ್ಕು ವರ್ಷ ವನವಾಸ'ದಂಥ ಗೋಳಿನ ಕಥೆಯೇ. ಆದರೆ, 'ಎರಡು ರೇಖೆಗಳು' ಬರೋ ಹೊತ್ತಿಗೆ ಒಂದಷ್ಟು ಇಂಪ್ರೂವ್‌ಮೆಂಟ್ ಆಗಿತ್ತು. ಅದೆಂದರೆ, 'ಹದಿನಾಲ್ಕು ವರ್ಷ' ಹಾಡಿನಂತೆ ಒಬ್ಬಾಕೆಯೇ ಹಾಡದೆ, 'ನವರಾತ್ರಿ ಸಂಜೆಯಲಿ' ಹಾಡಿನಂತೆ 'ವಾದ-ಪ್ರತಿವಾದ' ರೂಪದ ಸಾಲುಗಳನ್ನು ಇಬ್ಬರು ಹೆಂಗೆಳೆಯರು ಹಂಚಿಕೊಂಡು ಹಾಡುವಿಕೆ. ''ಇದೊಂಥರಾ ಹೊಸ ಪ್ರಯೋಗ, ಚೆನ್ನಾಗಿರುತ್ತೆ ಬಿಡಿ'' ಅನ್ನಬೇಡಿ. ಕಾರಣ ಈ ಹಾಡಿನಲ್ಲಿರೋ ಸೂಕ್ಷ್ಮವನ್ನು ಅರಿಯದೆ ಆ 'ಯುಗಳ-ಗಾಯಕಿ'ಯರಿಂದ ಆಗುತ್ತಿದ್ದ ಎಡವಟ್ಟು!

'ನವರಾತ್ರಿ ಸಂಜೆಯಲಿ' ಗೀತೆಯ ಮೊದಲ ನುಡಿಯು ಶಿವ-ಗಂಗೆ-ಗೌರಿಯರ ಬಗ್ಗೆ ಬರುತ್ತದೆ; ಹೀಗಾಗಿ ಅದು ದೇವರ ಮೇಲಿನ ಹಾಡು ಎಂಬ 'ಸಮರ್ಥನೆ'ಗೆ 'ಎಸ್' ಎನ್ನೋಣ. ಆದರೆ, ಎರಡನೇ ನುಡಿಯಲ್ಲಿ, ಪಾತ್ರಧಾರಿ ಗೀತಾ ಮಂಡಿಸುವ ವಾದ ಹೀಗಿದೆ: ''ಮಲ್ಲೆ ಹೂವ ನಲ್ಲೆ ಮುಡಿಗೆ ಇಟ್ಟ ನಲ್ಲನು, ಎಂದೂ ಅವಳ ಬಿಟ್ಟು ನೋಡ ಬೇರೆ ಯಾರನೂ''. ಇದಕ್ಕೆ ಸರಿತಾ, ''ನಲ್ಲ ನೆಟ್ಟ ಪ್ರೀತಿ ಬಳ್ಳಿ ಎರಡು ತೋಟದೇ, ಎರಡೂ ಬಳ್ಳಿ ತಂದಾ ಹೂವು ಎಲ್ಲಾ ಅವನದೇ'' ಎಂಬ ಪ್ರತಿವಾದವನ್ನು ಮಂಡಿಸುತ್ತಾರೆ. 'ಎರಡು ರೇಖೆ' ಚಿತ್ರದ ಕಥೆಯಂತೆ, ಸರಿತಾರನ್ನು ಕಥಾನಾಯಕ ಶ್ರೀನಾಥ್ ಮೊದಲೇ ಮೋಹಿಸಿ, ಮದುವೆಯಾಗುವ ಭರವಸೆಯೊಂದಿಗೆ ಲೈಂಗಿಕ ಸಂಬಂಧವನ್ನೂ ಹೊಂದಿರುತ್ತಾರೆ; ಆದರೆ ತಪ್ಪುಗ್ರಹಿಕೆ ಮತ್ತು ತಮ್ಮ ತಾಯಿಯ ಕುತಂತ್ರದಿಂದಾಗಿ ಈ ಮದುವೆಯಾಗದೆ, ನಂತರ ಗೀತಾರನ್ನು ಮದುವೆಯಾಗುತ್ತಾರೆ. ಅವರಿಗೂ ಎರಡು ಮಕ್ಕಳಾಗುತ್ತವೆ. ತರುವಾಯದಲ್ಲಿ ಗೀತಾರಿಗೆ 'ಪ್ರಣಯರಾಜ'ರ ಈ 'ಫ್ಲ್ಯಾಷ್‌ಬ್ಯಾಕ್ ಪ್ರಣಯ' ಗೊತ್ತಾದರೂ, 'ಪತಿ-ಪತ್ನಿಯ ಸಂಬಂಧದ ವಿಷಯ ಬಂದಾಗ ನಾನೇ ಹಕ್ಕುದಾರಳು; ನನ್ನ ಗಂಡನ ಪ್ರೀತಿ ನನಗಷ್ಟೇ ಮೀಸಲು' ಎಂದು ಸಮರ್ಥಿಸುವಂತೆ ಈ ಹಾಡು ಹಾಡುತ್ತಾರೆ, ಅದು 'ವಾದ-ಪ್ರತಿವಾದ'ದ ರೂಪ ಪಡೆಯುತ್ತೆ ಎನ್ನಿ. ''ಮಲ್ಲೆ ಹೂವ ನಲ್ಲೆ ಮುಡಿಗೆ ಇಟ್ಟ ನಲ್ಲನು, ಎಂದೂ ಅವಳ ಬಿಟ್ಟು ನೋಡ ಬೇರೆ ಯಾರನು'' ಎಂದು ಗೀತಾ ಹೇಳುವಾಗ, 'ನನ್ನ ಗಂಡ ನನಗೆ ಮಾತ್ರ ಮೀಸಲು, ನೀನು ಕಣ್ಣು ಹಾಕಬೇಡ' ಎಂಬ ಧೋರಣೆ ಅದರಲ್ಲಿ ಅಡಗಿರುತ್ತದೆ. ಆದರೆ ಮರುಕ್ಷಣದಲ್ಲೇ ಸರಿತಾ, ''ನಲ್ಲ ನೆಟ್ಟ ಪ್ರೀತಿ ಬಳ್ಳಿ ಎರಡು ತೋಟದೆ, ಎರಡು ಬಳ್ಳಿ ತಂದಾ ಹೂವು ಎಲ್ಲಾ ಅವನದೇ'' ಎಂದು ಪ್ರತ್ಯುತ್ತರಿಸಿ, 'ನಿನ್ನ ಗಂಡನಿಂದ ನಿನಗಷ್ಟೇ ಮಕ್ಕಳಾಗಿಲ್ಲ, ನಿನಗಿಂತ ಮುಂಚೆ ನನಗೂ ಆಗಿದೆ. ಹೀಗಾಗಿ ಅವನ 'ಇನ್ವಾಲ್ವ್‌ಮೆಂಟ್' ಇದ್ದುದೆಲ್ಲವೂ ಅವನಿಗೇ ಸೇರಬೇಕು' ಎನ್ನುತ್ತಾರೆ ಸೂಚ್ಯವಾಗಿ! (ಹೀಗೆ ಎರಡು ಕಡೆ ಜರುಗಿದ 'ಲೈಂಗಿಕ ಸಂಬಂಧ'ವನ್ನು, ಅದರ 'ಫಲಶ್ರುತಿ'ಯನ್ನು ಇಷ್ಟು ಸಭ್ಯವಾಗಿ ಕಟ್ಟಿಕೊಟ್ಟ ಗೀತರಚನೆಕಾರ ಆರ್.ಎನ್. ಜಯಗೋಪಾಲ್‌ರಿಗೆ ಥ್ಯಾಂಕ್ಸ್ ಹೇಳಲೇಬೇಕು; 'ಅಕ್ರಮ-ಸಕ್ರಮ' ಸಂಬಂಧದ ಪರಿಯನ್ನು ಇದಕ್ಕಿಂತ ಸಂಭಾವಿತ ರೀತಿಯಲ್ಲಿ ಪ್ರಾಯಶಃ ಹೇಳಲಾಗದು. ಇನ್ಯಾರಾದರೂ ಆಗಿದ್ದಿದ್ದರೆ, 'ಆ್ಯವ್.. ಟಚಿಂಗ್ ಟಚಿಂಗ್', 'ಪೆಟ್ರೋಮ್ಯಾಕ್ಸ್', 'ಎರಡು ಟ್ರಾಕಲ್ಲೂ ಓಡಿದ ಎಂಜಿನ್ನು' ಎಂದೆಲ್ಲಾ ಪದಗುಚ್ಛ ಬಳಸಿ ಬರೆಯುತ್ತಿದ್ದರೇನೋ?!).

ಈಗ, ಅರಿಶಿಣ-ಕುಂಕುಮಕ್ಕೆ ಬಂದವರ ಕಥೆಗೆ ಮತ್ತೆ ಬರೋಣ. ಬೊಂಬೆ ಹಬ್ಬದಲ್ಲಿ ಈ ಹಾಡನ್ನು 'ಹಂಚಿಕೊಂಡು' ಹಾಡುತ್ತಿದ್ದ ಇಬ್ಬರು ಹೆಂಗೆಳೆಯರಿಗೆ ಈ ಸೂಕ್ಷ್ಮವೇ ಅರ್ಥವಾಗಿರಲಿಲ್ಲ. ಎಷ್ಟೆಂದರೂ 'ದೇವರ ಹಾಡಲ್ಲವೇ' ಎಂಬ ಗ್ರಹಿಕೆಗೇ ಜೋತುಬಿದ್ದು, ಚಚ್ಚಿ ಬಾರಿಸಿಬಿಟ್ಟರು! ಹಾಡು ಮುಗಿಯುತ್ತಿದ್ದಂತೆ 'ನೆರೆದಿದ್ದವರ' (ಅಂದರೆ ಅರಿಶಿನ-ಕುಂಕುಮಕ್ಕೆ ಬಂದಿದ್ದವರ!) ಪುಷ್ಕಳ ಚಪ್ಪಾಳೆ! ಬೊಂಬೆಗಳಿಗೆ ಮಂಗಳಾರತಿ ಮಾಡಿ, ಎಲ್ಲರಿಗೂ ಚಿಗಳಿ-ತಂಬಿಟ್ಟು-ಕೋಸಂಬರಿ ಕೊಟ್ಟು ಕಳಿಸಿದ ನಂತರ, ಈ ಹಾಡು ಹಾಡಿದ ಹೆಂಗೆಳೆಯರ ಗಂಡಂದಿರು (ಅವರೂ 'ಒನ್ಸ್ ಎಗೇನ್' ಆಹ್ವಾನವಿಲ್ಲದಿದ್ದರೂ ಚಿಗಳಿ-ತಂಬಿಟ್ಟಿನ ಆಸೆಗೆ ಬಂದವರು!) ಅವರಿಬ್ಬರಿಗೂ ಸರಿಯಾಗಿ 'ಮಂಗಳಾರತಿ' ಮಾಡಿದರು. ''ಕಮಂಗಿಗಳಾ, ಸಿನಿಮಾದಲ್ಲಿರೋ ಬೊಂಬೆಹಾಡು ಅಂದ ಮಾತ್ರಕ್ಕೆ ಹಿಂದು-ಮುಂದು ನೋಡದೆ ತೋಡಿರಾಗದಲ್ಲಿ ತೋಡಿಬಿಡಬೇಡಿ; ಸ್ವಲ್ಪ ಅರ್ಥಮಾಡ್ಕೊಂಡು ಹಾಡಿ...'' ಅಂತ ಲೈಟಾಗಿ 'ಕ್ಲಾಸ್' ತೆಗೆದುಕೊಂಡು ಗದರಿದರು. ಆ ಪತಿ ಮಹಾಶಯರಲ್ಲಿ 'ಸ್ಪೋರ್ಟಿವ್ ಸ್ಪಿರಿಟ್' ಇದ್ದುದರಿಂದ ಈ ಪ್ರಕರಣವನ್ನು ಅತಿರೇಕಕ್ಕೆ ಬೆಳೆಸಲಿಲ್ಲ, ಆ ಮಾತು ಬೇರೆ!

ಈಗಲೂ ಟಿವಿಯಲ್ಲಿ 'ಹದಿನಾಲ್ಕು ವರ್ಷ ವನವಾಸದಿಂದ' ಅಥವಾ 'ನವರಾತ್ರಿ ಸಂಜೆಯಲಿ' ಹಾಡು ಬಂದಾಗಲೆಲ್ಲ ಈ ಎರಡು ಪ್ರಸಂಗಗಳು ನೆನಪಾಗುತ್ತವೆ...

ಸ್ಯಾಂಡಲ್‌ವುಡ್ ಕಳ್ಳಸಾಗಣೆ ಮಾಡಿದ್ದಕ್ಕೆ ಕನ್ನಡಿಗರೇ ಅರೆಸ್ಟ್ ಮಾಡಿಸಿದ್ದಾರೆ

ಸಿನಿಗನ್ನಡ

ತುಂಟರಗಾಳಿ
ಹರಿ ಪರಾಕ್
vveditoped@gmail.com

ಫೇಸ್‌ಬುಕ್‌ನಲ್ಲಿ ಯಾರೋ ಪೋಸ್ಟ್ ಹಾಕಿದ್ರು, ಅವರು ಪ್ರತಿ ದಿನ ಮಾಲ್‌ಗೆ ಸಿನಿಮಾ ನೋಡೋಕೆ ಹೋಗೋದ್ ನೋಡಿ, ಅಲ್ಲಿನ ಸೆಕ್ಯುರಿಟಿ, 'ಸರ್, ನೀವು ಇಲ್ಲೇ ಕೆಲಸ ಮಾಡೋದಾ?' ಅಂತ ಕೇಳಿದ್ನಂತೆ. ಕೇಳೋಕೆ ತಮಾಷೆಯಾಗಿದ್ದರೂ ಇದು ವಾಸ್ತವ. ಸಿನಿಮಾಪ್ರಿಯರ ಬಳಿ ಈಗ ನೋಡ್ಬೇಕು ಅಂತಿರುವ ಮತ್ತು ನೋಡಿರುವ ಸಿನಿಮಾಗಳ ಪಟ್ಟಿಗಿಂತ, ನೋಡಬೇಕಾಗಿತ್ತು ಆದ್ರೆ ಆಗ್ಲಿಲ್ಲ ಅನ್ನೋ ಸಿನಿಮಾಗಳ ಪಟ್ಟಿಯೇ ದೊಡ್ಡದಾಗಿದೆ. ಪ್ರತಿವಾರ 7-8 ಚಿತ್ರಗಳ ಬಿಡುಗಡೆ. ಅದರಲ್ಲಿ ನೋಡುವಂಥವು ಕಮ್ಮಿ ಇದ್ದರೂ, ಹಲವು ಚಿತ್ರಗಳು ಇನ್ನೂ ನೋಡಬೇಕು ಅಂತ ಅಂದುಕೊಳ್ಳುತ್ತಿರುವಾಗಲೇ ಚಿತ್ರಮಂದಿರಗಳಿಂದ ಮಾಯವಾಗುತ್ತಿವೆ. ಹೋಗ್ಲಿ, ಒಟಿಟಿಯಲ್ಲಿ ನೋಡೋಣ ಅಂದ್ರೆ ಅರಳಿದ ಎಲ್ಲ ಹೂವೂ ಭಗವಂತನ ಪಾದ ಸೇರೊಲ್ಲ, ಬಿಡುಗಡೆ ಆದ ಎಲ್ಲ ಚಿತ್ರಗಳೂ ಒಟಿಟಿಗೆ ಬರಲ್ಲ. ಹಾಗಾಗಿ ಅಪ್ಪಟ ಚಿತ್ರಪ್ರೇಮಿಗಳು, 'ಅಯ್ಯೋ, ಆ ಸಿನಿಮಾ ನೋಡೋಕಾಗ್ಲಿಲ್ಲ, ಈ ಸಿನಿಮಾ ನೋಡೋಕಾಗ್ಲಿಲ್ಲ' ಅಂತ ಕೊರಗೋದು ತಪ್ಪುತ್ತಿಲ್ಲ. ಬರೀ ಸಿನಿಮಾ ಪ್ರೇಮಿಗಳು ಯಾಕೆ, ಸ್ವತಃ ಸಿನಿಮಾ ಪತ್ರಕರ್ತರು ಮತ್ತು ವಿಮರ್ಶಕರಿಗೇ ಎಲ್ಲ ಸಿನಿಮಾಗಳನ್ನು ನೋಡೋಕೆ ಆಗ್ತಿಲ್ಲ. ಹಾಗೊಂದು ವೇಳೆ ಹಠಕ್ಕೆ ಬಿದ್ದು ದಿನಕ್ಕೆರಡು ಸಿನಿಮಾ ನೋಡಿದರೂ ಕೊನೆಯ ಸಿನಿಮಾ ವಿಮರ್ಶೆ ಮಾಡುವ ಹೊತ್ತಿಗೆ ಮುಂದಿನ ವಾರದ ಸಿನಿಮಾಗಳು ಬಿಡುಗಡೆ ಆಗಿರುತ್ತವೆ. ಒಟ್ಟಿನಲ್ಲಿ ಕೆಲವು ಸಿನಿಮಾಗಳು ತಮ್ಮ ಕಳಪೆ ಕ್ವಾಲಿಟಿಯಿಂದ ಜನರನ್ನು ತಲುಪಲು ವಿಫಲವಾಗುತ್ತಿದ್ದರೆ, ಹಲವು ಸಿನಿಮಾಗಳು ಎಲ್ಲಾ ಇದ್ದರೂ ಓವರ್ ಕಾಂಪಿಟೇಶನ್‌ನಿಂದ ಜನರಿಗೆ ತಲುಪುತ್ತಿಲ್ಲ ಅನ್ನೋದಂತೂ ನಿಜ.

ಲೂಸ್ ಟಾಕ್

ಅಲ್ಲು ಅರ್ಜುನ್

- **ಏನ್ ಅರ್ಜುನ್, ಪುಷ್ಪನ್ನ ಕಡೆಗೂ ಅರೆಸ್ಟ್ ಮಾಡಿಬಿಟ್ರಲ್ಲ?**
- ಏನ್ ಮಾಡೋದು, ಅಲ್ಲಿ ಯಾರೋ ಕಾಲ್ತುಳಿತಕ್ಕೆ ಸಿಕ್ಕು ಸತ್ರೆ, ಇವ್ರು ನನ್ನ ಕೈಗೆ ಕೋಳ ಹಾಕಿಬಿಟ್ರು.
- **ಪೊಲೀಸ್ನೋರು ನಿಮ್ಮನ್ನ ಅರೆಸ್ಟ್ ಮಾಡೋಕೆ ಮನೆಗೆ ಬಂದಾಗ ಏನನ್ನಿಸಿತು?**
- ಪೊಲೀಸ್ನೋರು ಸಾಮಾನ್ಯವಾಗಿ ಸಿನಿಮಾದ ಕೊನೆಯಲ್ಲಿ ಬರೋರು, ಈಗ ಸಿನಿಮಾ ಮುಗಿದ ಮೇಲೆ ಬಂದ್ರಲ್ಲ ಅಂತ ಆಶ್ಚರ್ಯ ಆಯ್ತು.
- **ಆದ್ರೂ, ನೀವು ಅರೆಸ್ಟ್ ಆಗಿದ್ದಕ್ಕೆ ನಿಮ್ಮ ವಿರೋಧಿಗಳಿಗೆ ಖುಷಿ ಆಗಿರಬೇಕಲ್ಲ?**
- ಯಾರಿಗೆ ಖುಷಿ ಆಗಿದೆಯೋ ಇಲ್ವೋ, ನಮ್ಮ ಪುಷ್ಪ ಸಿನಿಮಾದ ಶೆಕಾವತ್ ಸಾಹೇಬ, ಫಹಾದ್ ಫಜಿಲ್ ಮಾತ್ರ ಫುಲ್ ಖುಷಿ ಆಗಿರ್ತಾನೆ
- **ಅಂದಹಾಗೆ, ನಿಮ್ಮ ಪುಷ್ಪ 2 ಸಿನಿಮಾ ಬಾಲಿವುಡ್ ನಲ್ಲೂ ಒಳ್ಳೆ ಕಲೆಕ್ಷನ್ ಮಾಡಿದೆಯಂತೆ?**
- ಹೌದು ಮತ್ತೆ ನಾನು ಅರ್ಜುನ. ಸೋಲಿಲ್ಲದ ಸರದಾರ. ನಾನು ಇಲ್ಲೂ ಅರ್ಜುನ್, ಅಲ್ಲೂ ಅರ್ಜುನ್.
- **ನಿಮ್ಮನ್ನ ಅರೆಸ್ಟ್ ಮಾಡಿದ್ದರ ಹಿಂದೆ ಯಾರ ಕೈವಾಡವಿದೆ ಅಂತ ನಿಮಗೆ ಅನುಮಾನ?**
- ಅನುಮಾನ ಏನಿಲ್ಲ, ಫುಲ್ ಕನ್ಫರ್ಮ್. ನಿಮ್ಮ ಕರ್ನಾಟಕದವರೇ ನನ್ನ ಅರೆಸ್ಟ್‌ಗೆ ಕಾರಣ. ಪುಷ್ಪ ಸಿನಿಮಾದಲ್ಲಿ ನಾನು ಸ್ಯಾಂಡಲ್‌ವುಡ್ ಕಳ್ಳಸಾಗಣೆ ಮಾಡ್ತೀನಿ ಅಂತ ಸ್ಯಾಂಡಲ್‌ವುಡ್‌ನವರು ನನ್ನ ವಿರುದ್ಧ ಪಿತೂರಿ ನಡೆಸಿದ್ದಾರೆ.

ನೆಟ್ ಪಿಕ್ಸ್

ಖೇಮು ಒಂದು ಸಂಜೆ ಆಫೀಸಿನಿಂದ ಮನೆಗೆ ಬಂದಾಗ ಹೊರಗೆ ಅಂಗಳದಲ್ಲಿ ಕಸದ ರಾಶಿ ಬಿದ್ದಿತ್ತು. ರಂಗೋಲಿ ಇರಲಿ, ಹೊಸಿಲನ್ನೂ ತೊಳೆದಿರಲಿಲ್ಲ. ಎಲ್ಲಾ ಧೂಳುಮಯ. ಮನೆಯೊಳಗೆ ಅಡಿಯಿಡುತ್ತಿದ್ದಂತೆ ಖೇಮುಗೆ ಮಕ್ಕಳು ಆಡುವ ಸದ್ದು ಕೇಳಿಸಿ ಆ ಕಡೆ ತಿರುಗಿ ನೋಡಿದ. ಮಕ್ಕಳು ಮನೆಯ ಸಾಮಾನುಗಳನ್ನೆಲ್ಲಾ ಎಲ್ಲೆಂದ್ರಲ್ಲಿ ಹರಡಿ ರಾಡಿ ಮಾಡಿಟ್ಟಿದ್ದರು. ಮೊದಲು ನೀರು ಕುಡಿಯೋಣ ಅಂತ ಅಡುಗೆ ಮನೆಗೆ ಹೋದ ಖೇಮುಗೆ ಅಲ್ಲೂ ಶಾಕ್ ಕಾದಿತ್ತು. ಬೆಳಗ್ಗೆ ಮಾಡಿದ ತಿಂಡಿ ಪಾತ್ರೆಗಳು, ತಿಂದ ಪ್ಲೇಟ್, ಕಾಫಿ ಗ್ಲಾಸ್ ಎಲ್ಲವೂ ಎಲ್ಲೆಂದರಲ್ಲಿ ಅಸ್ತವ್ಯಸ್ತವಾಗಿ ಬಿದ್ದಿದ್ದವು. ಖೇಮುಗೆ ಒಂದು ಕ್ಷಣ ಗಾಬರಿ ಆಯ್ತು. ಬೆಡ್‌ರೂಮಿಗೆ ಹೋಗಿ ನೋಡಿದರೆ ಅಲ್ಲಿ ಖೇಮುಶ್ರೀ ಇರಲಿಲ್ಲ. ಅದರ ಬದಲಾಗಿ ರೂಮ್ ತುಂಬಾ ಚೆಲ್ಲಾಪಿಲ್ಲಿಯಾಗಿ ಹರಡಿದ್ದ ಬಟ್ಟೆಗಳು ಬಿದ್ದಿದ್ದವು. ಹಾಸಿಗೆಯ ಮೇಲಿನ ದಿಂಬು, ಬೆಡ್‌ಶೀಟ್‌ಗಳು ಅಗಸರ ಅಂಗಡಿಯನ್ನು ನೆನಪಿಸುತ್ತಿದ್ದವು. ಹಾಲಿನಲ್ಲಿ ಹಾಕಿದ ಟಿವಿ ಹಾಗೇ ಇತ್ತು. ಯಾರೂ ನೋಡುತ್ತಿರಲಿಲ್ಲ. ದೇವರ ಮನೆಯ ದೀಪ ಹಚ್ಚಿರಲಿಲ್ಲ. ಬಚ್ಚಲು ಮನೆಯ ನಲ್ಲಿಯಿಂದ ನೀರು ಸೋರಿಹೋಗುತ್ತಿತ್ತು. ಆಫ್ ಮಾಡುವವರೇ ಇರಲಿಲ್ಲ. ಇದನ್ನೆಲ್ಲಾ ನೋಡಿದ ಖೇಮುಗೆ ಪಿತ್ತ ನೆತ್ತಿಗೇರಿತು. ಮನೆಯನ್ನು ಹೀಗೆ ಅಧ್ವಾನ ಮಾಡಿ ಖೇಮುಶ್ರೀ ಎಲ್ಲಿಗೆ ಹೋದಳು ಅಂತ ಹುಡುಕಿಕೊಂಡು ಹೊರಟ. ಆಗ ಹೆಂಡತಿ ಲಿವಿಂಗ್ ರೂಮ್‌ನಲ್ಲಿ ಇದ್ದಾಳೆ ಅಂತ ಗೊತ್ತಾಯ್ತು. ಅಲ್ಲಿಗೆ ಹೋಗಿ ನೋಡಿದರೆ ಖೇಮುಶ್ರೀ ಯಾವುದೋ ಹಳೆಯ ನೈಟಿ ಹಾಕಿಕೊಂಡು ಮ್ಯಾಗಝೀನ್ ಓದುತ್ತಾ ಅಡ್ಡಾದಿಡ್ಡಿಯಾಗಿ ಮಲಗಿದ್ದಳು. ಖೇಮುಗೆ ಸಿಟ್ಟು ಇನ್ನಷ್ಟು ಜಾಸ್ತಿಯಾಗಿ, 'ಏನಿದು, ಮನೆ ಹೀಗಿದೆ, ಏನಾಗಿದೆ ನಿಂಗೆ?' ಅಂತ ಜೋರುದನಿಯಲ್ಲಿ ಅವಳನ್ನು ಕೇಳಿದ. ಅದಕ್ಕೆ ಖೇಮುಶ್ರೀ ಶಾಂತವಾಗಿ, 'ಪ್ರತಿದಿನ ನೀನು ಆಫೀಸಿನಿಂದ ಮನೆಗೆ ಬಂದಾಗ, ನಂಗೆ ಆಫೀಸಲ್ಲಿ ಬೆಳಗ್ಗೆಯಿಂದ ಸಂಜೆಯವರೆಗೂ ಎಷ್ಟ್ ಕೆಲಸ ಇರುತ್ತೆ ಗೊತ್ತಾ. ಎಷ್ಟು ಸುಸ್ತಾಗಿರ್ತೀನಿ, ನೀನೇನು ಇಡೀ ದಿನ ಮನೆಯಲ್ಲಿ ಕಡಿದು ಕಿತ್ತಾಕುವಂಥ ಕೆಲಸ ಮಾಡ್ತೀಯಾ? ಅಂತ ಕೇಳ್ತೀಯ ಅಲ್ವಾ' ಅಂತ ಕೇಳಿದಳು. ಅದಕ್ಕೆ ಖೇಮು, 'ಹೌದು ಕೇಳ್ತೀನಿ ಅದಕ್ಕೇನೀಗ?' ಅಂದ. ಅದಕ್ಕೆ ಖೇಮುಶ್ರೀ ಹೇಳಿದಳು, 'ಇವತ್ತು ಮನೇಲಿದ್ಕೊಂಡು ನಾನು ಏನೂ ಕಡಿದು ಕಿತ್ತಾಕಲಿಲ್ಲ'.

ಲೈನ್ ಮ್ಯಾನ್

- ಅಸಿಡಿಟಿ ಬರಬಾರದು ಅಂದ್ರೆ ಏನ್ ಮಾಡಬೇಕು?
- **'ತೇಗ'ದ ಮರವನ್ನು ಒಲೆಗೆ ಇಟ್ಟು ಅಡುಗೆ ಮಾಡಬೇಕು**
- ಆಪತ್ ಬಂದು ಚಾಪೆ ಸುತ್ಕೊಂಡೋಗ ಅನ್ನೋದನ್ನು ಇಂಗ್ಲಿಷ್‌ನಲ್ಲಿ ಹೆಂಗೆ ಹೇಳೋದು
- **'ಮ್ಯಾಟ್' 'ಫಿನಿಷ್'**
- ಕೂದಲಿಗೆ ಒಳ್ಳೆ ಟ್ರೀಟ್‌ಮೆಂಟ್ ಕೊಡುವವಳು
- **ಹೇರ್ ಹೋಸ್ಟೆಸ್**
- ಕಡಿಮೆ ಕೂದಲು ಇರುವವನು
- **'ಲೋ'ಕೇಶ**
- ಮೆನಿಕ್ಯೂರ್ ಪೆಡಿಕ್ಯೂರ್ ಮಾಡಿಸಲ್ಲ ಅನ್ನೋದನ್ನು ಹೇಳೋದು ಹೇಗೆ?
- **ಹಲ್ಲಲ್ಲಿ ಹೋಗೋ ಉಗುರಿಗೆ ಅಷ್ಟೊಂದು ದುಡ್ಡು ಯಾಕೆ 'ಕೊಡಲಿ'?**
- ಸ್ಟಾರ್ ನಟರ ಲೈಫು
- **ಎಲ್ಲಾ ಚೆನ್ನಾಗಿದ್ದಾಗ: ಲಕ್ಸುರಿ ಕ್ಯಾರವಾನ್**
- **ವಯಸ್ಸಾಗಿ ಅವಕಾಶಗಳೇ ಇಲ್ಲದಾಗ: ಯಾದೋಂ ಕಿ ಕಾರ್‌ವಾನ್**
- ಪರೀಕ್ಷಾ ಟಿಪ್ಸ್
- **ಎಕ್ಸಾಮ್ ಸಮಯದಲ್ಲಿ Jail break ಸಿನಿಮಾಗಳನ್ನ ನೋಡ್ಬೇಡಿ, ಟೆಂಪ್ಟ್ ಆಗುತ್ತೆ. ಓದೋದ್ ಬಿಟ್ಟು ಏನಾದ್ರೂ ಮಾಡಿ ಮನೆಯಿಂದ ಹೊರಗ್ ಹೋಗ್ಬೇಕು ಅಂತ.**
- ಆಸ್ತಿಕತೆ ನಾಸ್ತಿಕತೆ ನಡುವಿನ ಗುದ್ದಾಟ
- **ದೇವಸ್ಥಾನ ಬೀಗ ಹಾಕಿದೆ ಅಂದ್ರೆ, ದೇವರು ಒಳಗಿಲ್ಲ ಅಂತ ಅರ್ಥಾನಾ?**
- ಉರಿಗೌಡರ ಟಿಪ್ಸ್
- **ನಮ್ಮ ಅಂಡು ಉರೀತಿದೆ ಅಂದಾಗ ಇನ್ನೊಬ್ಬರ ಅಂಡು ತಣ್ಣಗಿದೆ ಅಂತ ಹೊಟ್ಟೆ ಕಿಚ್ಚು ಪಟ್ರೆ. ಅಂಡಿನ ಜತೆ ಹೊಟ್ಟೇನೂ ಉರಿಯುತ್ತೆ.**
- ಕ್ರಿಕೆಟ್ ಆಟದಲ್ಲಿ 5 ಬಾಲ್ ಬೋಲ್ ಮಾಡಿ, 6 ಬಾಲ್ ಆಯ್ತು ಅಂತ ಅಂದ್ಕೊಳ್ಳೋದು
- **'ಓವರ್' ಕಾನ್ಫಿಡೆನ್ಸ್**

ಅಚ್ಚುಕಟ್ಟು ಪ್ರದೇಶ
RNI : KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 356

ಸಮಾಚಾರ ಸಣ್ಣದಲ್ಲ

ಫ್ರಾಂಕೊಯಿಸ್ ಬೈರೂ ಫ್ರಾನ್ಸ್‌ನ ಹೊಸ ಪ್ರಧಾನಿ

ಪ್ಯಾರಿಸ್: ಪ್ರಸ್ತುತ ರಾಜಕೀಯ ಬಿಕ್ಕಟ್ಟು ಎದುರಿಸುತ್ತಿರುವ ಫ್ರಾನ್ಸ್‌ನ ಹೊಸ ಪ್ರಧಾನಿಯಾಗಿ ಫ್ರಾಂಕೋಯಿಸ್ ಬೈರೂ(73) ನೇಮಕಗೊಂಡಿದ್ದಾರೆ. ಅಧ್ಯಕ್ಷ



ಎಮ್ಯಾನ್ಯುಯೆಲ್ ಮ್ಯಾಕ್ರನ್, ಶುಕ್ರವಾರ ನೇಮಕ ಆದೇಶ ಹೊರಡಿಸಿದ್ದಾರೆ. ಬೈರೂ ಹೊಸ ಸಚಿವ ಸಂಪುಟವನ್ನು ಸದ್ಯದಲ್ಲೇ ರಚಿಸಲಿದ್ದಾರೆ. ಆ ಸಂಬಂಧ ವಿವಿಧ ರಾಜಕೀಯ ಪಕ್ಷಗಳ ಮುಖಂಡರ ಜತೆ ಚರ್ಚಿಸಲಿದ್ದಾರೆ ಎನ್ನಲಾಗಿದೆ. ಬಜೆಟ್ ವಿವಾದದ ಕಾರಣ ಹಿಂದಿನ ಪ್ರಧಾನಿ ಮೈಕೆಲ್ ಬರ್ನಿಯರ್ ವಿರುದ್ಧ ಸಂಸತ್ತಿನಲ್ಲಿ ಅವಿಶ್ವಾಸ ನಿರ್ಣಯ ಮಂಡನೆಯಾಗಿದ್ದರಿಂದ ಬರ್ನಿಯರ್ ಕಳೆದ ವಾರ ಪದತ್ಯಾಗ ಮಾಡಿದ್ದರು.

ದೆಹಲಿ ಶಾಲೆಗಳಿಗೆ ಮತ್ತೆ ಬಾಂಬ್ ಬೆದರಿಕೆ

ದೆಹಲಿ: ದೆಹಲಿಯ ಶಿಕ್ಷಣ ಸಂಸ್ಥೆಗಳಿಗೆ ಬಾಂಬ್ ಬೆದರಿಕೆ ಬರುವುದು ಇನ್ನೂ ಕೊನೆಗೊಂಡಿಲ್ಲ. ಶನಿವಾರವೂ ಆರ್‌ಕೆ ಪುರಂನ ಡೆಲ್ಲಿ ಪಬ್ಲಿಕ್ ಸ್ಕೂಲ್ ಸೇರಿದಂತೆ ಹಲವು ಶಾಲೆಗಳಿಗೆ ಇಮೇಲ್ ಮೂಲಕ ಬಾಂಬ್ ಬೆದರಿಕೆ ಬಂದಿದೆ. ಶೋಧದ ಬಳಿಕ ಅವೆಲ್ಲವೂ ಹುಸಿ ಬಾಂಬ್ ಬೆದರಿಕೆ ಎಂದು ತಿಳಿದುಬಂದಿರುವುದಾಗಿ ಪೊಲೀಸರು ಹೇಳಿದ್ದಾರೆ. ಇದು ಈ ವಾರ ನಡೆದ ಮೂರನೇ ಹುಸಿ ಬಾಂಬ್ ಬೆದರಿಕೆ ಸಂದೇಶವಾಗಿದೆ. ಡಿ.9ರಂದು ದೆಹಲಿಯ 40 ಶಾಲೆಗಳಿಗೆ ಬಾಂಬ್ ಬೆದರಿಕೆ ಇ-ಮೇಲ್ ಬಂದಿತ್ತು. ಶುಕ್ರವಾರವೂ ದೆಹಲಿಯ 30 ಶಾಲೆಗಳಿಗೆ ಹುಸಿ ಬಾಂಬ್ ಬೆದರಿಕೆ ಬಂದಿತ್ತು ಎಂದು ಆಗ್ನೇಯ ದೆಹಲಿ ಪೊಲೀಸ್ ಉಪ ಆಯುಕ್ತ ರವಿಕುಮಾರ್ ಸಿಂಗ್ ಹೇಳಿದ್ದಾರೆ. ಅದಕ್ಕೂ ಮುನ್ನ ಡಿ.8ರ ರಾತ್ರಿ 11.38ರಲ್ಲಿಯೂ ಕೆಲ ಶಾಲೆಗಳಿಗೆ ಬೆದರಿಕೆ ಇಮೇಲ್ ಬಂದಿತ್ತು.

ಸಾವರ್ಕರ್ ಅವಹೇಳನ: ರಾಹುಲ್‌ಗೆ ಸಮನ್ಸ್

ಲಖನೌ: ಸ್ವಾತಂತ್ರ್ಯ ಹೋರಾಟಗಾರ ವೀರ ಸಾವರ್ಕರ್ ಅವರ ಬಗ್ಗೆ ವಿವಾದಾತ್ಮಕ ಹೇಳಿಕೆಗಳನ್ನು ನೀಡಿದ ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ 2025ರ ಜ.10ರಂದು ವಿಚಾರಣೆಗೆ ಹಾಜರಾಗಬೇಕು ಎಂದು ಲಖನೌ ನ್ಯಾಯಾಲಯ ಶನಿವಾರ ಸಮನ್ಸ್ ಜಾರಿ ಮಾಡಿದೆ. 2022ರ ನ.17ರಂದು ಮಹಾರಾಷ್ಟ್ರದ ಅಕೋಲಾದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ವೀರ ಸಾವರ್ಕರ್ ವಿರುದ್ಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವಹೇಳನಕಾರಿ ಭಾಷೆ ಬಳಸಿದ್ದಾರೆ, ಇಂಗ್ಲಿಷರ ಸೇವಕ ಮತ್ತು ಪಿಂಚಣಿದಾರ ಎಂದು ಉಲ್ಲೇಖಿಸಿದ್ದಾರೆ, ಪ್ರಚೋದನಕಾರಿ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿ ವಕೀಲ ನೃಪೇಂದ್ರ ಪಾಂಡೆ ಅವರು ಮಾನಹಾನಿ ದಾವೆ ಹೂಡಿದ್ದಾರೆ. ಅದರನ್ವಯ ಖುದ್ದು ಹಾಜರಿಗೆ ಕೋರ್ಟ್ ಆದೇಶ ಹೊರಡಿಸಿದೆ.

ಲೌಡ್‌ಸ್ಪೀಕರ್; ಮಸೀದಿಗೆ ದಂಡ

ಲಖನೌ: ಕಿವಿ ತೂತಾಗುವಷ್ಟು ಸದ್ದು ಮಾಡುತ್ತಿದ್ದ ಅಧಿಕ ಡೆಸಿಬಲ್ ಸಾಮರ್ಥ್ಯದ ಧ್ವನಿವರ್ಧಕ ಬಳಸಿದ ಸಂಭಾಲ್ ಪಟ್ಟಣದ ಕೋಟ್ ಗರ್ವಿ ಪ್ರದೇಶದ ಅನಾರ್ ವಾಲಿಯಲ್ಲಿನ ಈದ್ಗಾ ಮಸೀದಿ ಇಮಾಂಗೆ ಜಿಲ್ಲಾಡಳಿತ 2 ಲಕ್ಷ ರು. ದಂಡ ವಿಧಿಸಿದೆ. ಮಸೀದಿಯಲ್ಲಿ ಹೆಚ್ಚಿನ ಸಾಮರ್ಥ್ಯದ ಧ್ವನಿವರ್ಧಕ ಬಳಸಿ ಅತ್ಯಧಿಕ ಪ್ರಮಾಣದಲ್ಲಿ ಧ್ವನಿ ಹೊರಡುವಂತೆ ಮಾಡಲಾಗಿತ್ತು. ಹಾಗಾಗಿ, ಕಾನೂನು ಪ್ರಕಾರ ಕ್ರಮ ಕೈಗೊಳ್ಳುವುದು ಅನಿವಾರ್ಯವಾಯಿತು. ನಿಗದಿಪಡಿಸಿದ ಮಿತಿಗಿಂತ ಅಧಿಕ ಸದ್ದು ಮಾಡಿದ ಮಸೀದಿಗೆ 2 ಲಕ್ಷ ರು. ದಂಡ ವಿಧಿಸಲಾಗಿದೆ ಎಂದು ಉಪ ಜಿಲ್ಲಾಧಿಕಾರಿ ವಂದನಾ ಮಿಶ್ರಾ ಹೇಳಿದ್ದಾರೆ.

ಬಾಂಗ್ಲಾ: ಹಿಂದೂ ಆಸ್ತಿ ನಾಶ-ನಾಲ್ವರ ಬಂಧನ

ಢಾಕಾ: ಬಾಂಗ್ಲಾದೇಶದ ಉತ್ತರ ಭಾಗದಲ್ಲಿನ ಸುನಾಮ್ ಗಂಜ್ ಜಿಲ್ಲೆಯಲ್ಲಿ ಹಿಂದೂಗಳ ಮನೆ, ಅಂಗಡಿ ಹಾಗೂ ಲೋಕನಾಥ್ ದೇವಾಲಯ ನಾಶಪಡಿಸಿದ ಪ್ರಕರಣದಲ್ಲಿ ನಾಲ್ವರು ದುಷ್ಕರ್ಮಿಗಳನ್ನು ಸುನಾಮ್ ಗಂಜ್ ಜಿಲ್ಲೆಯ ದೋರಬಜಾರ್ ಪ್ರದೇಶದಲ್ಲಿ ಬಾಂಗ್ಲಾ ಪೊಲೀಸರು ಬಂಧಿಸಿದ್ದಾರೆ. ಅಲ್ಲದೇ, ಗಲಭೆ ನಡೆಸಿದ ಆರೋಪದಡಿ 170 ಜನರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ. ಡಿ.3ರಂದು ಸುನಾಮ್‌ಗಂಜ್ ಜಿಲ್ಲೆಯ ನಿವಾಸಿ ಆಕಾಶ್ ದಾಸ್ ಎಂಬವರು ಫೇಸ್‌ಬುಕ್‌ನಲ್ಲಿ ಮಾಡಿದ್ದ ಪೋಸ್ಟ್ ಜಿಲ್ಲೆಯಲ್ಲಿ ಉದ್ವಿಗ್ನತೆ, ಹಿಂಸಾಚಾರಕ್ಕೆ ಕಾರಣವಾಯಿತು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಜಿಲ್ಲಾಧಿಕಾರಿ ಮತ್ತು ಸೇನಾ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಪರಿಸ್ಥಿತಿ ಹತೋಟಿಗೆ ತಂದರು. ಘಟನೆಯಲ್ಲಿ ಭಾಗಿಯಾದ ಆರೋಪಿಗಳನ್ನು ಪೊಲೀಸರು ಗುರುತಿಸಿ 170 ಜನರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

{ಕಿರಣ್ ರಿಜಿಜು} ಸಂಸದೀಯ ವ್ಯವಹಾರಗಳ ಸಚಿವ

ಅಂಬೇಡ್ಕರ್ ಆಲೋಚನೆ-ಬರಹಗಳನ್ನು ಅವರ ಮರಣಾನಂತರ ತಪ್ಪಾಗಿ ಅರ್ಥೈಸಲಾಗುತ್ತಿದೆ. ಅಂಬೇಡ್ಕರ್ ಹಿಂದೂ ಧರ್ಮ ತ್ಯಜಿಸಿದ್ದರೂ ಹಿಂದೂ ಧರ್ಮವನ್ನು ಎಂದೂ ದ್ವೇಷಿಸಲಿಲ್ಲ, ಯಾವ ಧರ್ಮದ ವಿರುದ್ಧವೂ ಮಾತನಾಡಲಿಲ್ಲ. ಹಿಂದೂಗಳಲ್ಲಿನ ಅಸ್ಪೃಶ್ಯತೆ ಮತ್ತಿತರ ಆಚರಣೆ, ಪದ್ಧತಿಗಳ ವಿರುದ್ಧ ಹೋರಾಡಿದರು. ಅವರು ರಚಿಸಿದ ಸಂವಿಧಾನ ವಿಶ್ವದಲ್ಲೇ ಅತ್ಯಂತ ಶ್ರೇಷ್ಠ.



ಪ್ರಜಾಪ್ರಭುತ್ವ ವಿರೋಧಿ: 15 ಪಕ್ಷಗಳ ಭಿನ್ನ ನಿಲುವು | ಬಹುಮತದ ಮೇರೆಗೆ ಹೊಸ ಪದ್ಧತಿ ಜಾರಿಗೊಳ್ಳಬೇಕು: ರಾಮನಾಥ ಕೋವಿಂದ್

ಒಂದು ರಾಷ್ಟ್ರ, 1 ಚುನಾವಣೆಗೆ 32 ಪಕ್ಷ ಬೆಂಬಲ

ದೆಹಲಿ: 'ಒಂದು ರಾಷ್ಟ್ರ, ಒಂದು ಚುನಾವಣೆ' ವಿಧೇಯಕವನ್ನು 32 ರಾಜಕೀಯ ಪಕ್ಷಗಳು ಬೆಂಬಲಿಸಿವೆ. ಆದರೆ, 15 ಪಕ್ಷಗಳು ಮಾತ್ರ ವಿರುದ್ಧ ನಿಲುವು ತಳೆದಿವೆ ಎಂದು 'ಒಂದು ರಾಷ್ಟ್ರ, ಒಂದು ಚುನಾವಣೆ' ವಿಧೇಯಕದ ಪರಾಮರ್ಶೆಗೆ ರಚನೆಯಾಗಿದ್ದ ಉನ್ನತ ಮಟ್ಟದ ಸಮಿತಿಯ ನೇತೃತ್ವವಹಿಸಿದ್ದ ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಹೇಳಿದ್ದಾರೆ.



ಹೊಸ ಚುನಾವಣಾ ಪದ್ಧತಿಗೆ ಸಂಬಂಧಿಸಿದ ವಿಧೇಯಕ ಕುರಿತ ಸಮಾಲೋಚನೆ ಪ್ರಕ್ರಿಯೆಯಲ್ಲಿ 47 ರಾಜಕೀಯ ಪಕ್ಷಗಳು ಭಾಗಿಯಾಗಿದ್ದವು ಎಂದು ವಿವರ ನೀಡಿದ ಮಾಜಿ ರಾಷ್ಟ್ರಪತಿ, ಹೊಸ ಪ್ರಕ್ರಿಯೆ ಬಗ್ಗೆ ಭಿನ್ನ ಅಭಿಪ್ರಾಯ ಹೊಂದಿರುವ ಪಕ್ಷಗಳು ತಮ್ಮ ನಿಲುವನ್ನು ಮರುಪರಿಶೀಲಿಸಬೇಕು ಎಂದು ಒತ್ತಾಯಿಸಿದರು. ಪ್ರಜಾಪ್ರಭುತ್ವದಲ್ಲಿ ಬಹುಮತ, ಸರ್ವಸಮ್ಮತ ನಿರ್ಧಾರಗಳ ಪ್ರಾಮುಖ್ಯತೆಯನ್ನು ಅವರು ಒತ್ತಿಹೇಳಿದರು.

ಲೋಕಸಭೆಗೆ ಮತ್ತು ರಾಜ್ಯಗಳ ವಿಧಾನಸಭೆಗಳಿಗೆ ಒಂದೇ ಸಮಯದಲ್ಲಿ ಚುನಾವಣೆ ನಡೆಸುವ ಪರಿಕಲ್ಪನೆ ದೇಶದ ಸ್ಥಾಪಕ ಪಿತಾಮಹರ ಕನಸಿನ ಕೂಸಾಗಿದೆ. ಇದು ಭಾರತೀಯ ಜನತಾ ಪಕ್ಷದ(ಬಿಜೆಪಿ) ಪರಿಕಲ್ಪನೆಯಲ್ಲ ಎಂದೂ ಕೋವಿಂದ್ ಸ್ಪಷ್ಟಪಡಿಸಿದರು.

ರಾಮನಾಥ್ ಕೋವಿಂದ್ ಅವರ ನೇತೃತ್ವದ ಉನ್ನತ ಮಟ್ಟದ ಪರಾಮರ್ಶೆ ಸಮಿತಿಯು ಲೋಕಸಭೆ, ರಾಜ್ಯ ವಿಧಾನಸಭೆ ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಏಕಕಾಲದಲ್ಲಿ ಹಂತಹಂತವಾಗಿ ನಡೆಸಲು ಶಿಫಾರಸು ಮಾಡಿದೆ. ಇದಕ್ಕೆ ಸಂಬಂಧಿಸಿದ ಎರಡು ವಿಧೇಯಕಗಳಿಗೆ ಕೇಂದ್ರ ಸಚಿವ ಸಂಪುಟವೂ ಗುರುವಾರ ಅನುಮೋದನೆ ನೀಡಿದೆ. ಈ ಹಿನ್ನೆಲೆಯಲ್ಲಿ ಮಾಧ್ಯಮದ ಜತೆ ಮಾತನಾಡಿದ ರಾಮನಾಥ್ ಕೋವಿಂದ್, ಚುನಾವಣೆಗಳು ಐದು ವರ್ಷಗಳಿಗೊಮ್ಮೆ ನಡೆಯುತ್ತವಾದರೂ ಭರವಸೆಗಳು ಮತ್ತು ಜನರ ಆಕಾಂಕ್ಷೆಗಳನ್ನು ಈಡೇರಿಸಲು ಚುನಾಯಿತ ಸರಕಾರಕ್ಕೆ ಮೂರೂವರೆ ವರ್ಷಗಳ ಸಮಯವಷ್ಟೇ ಸಿಗುತ್ತದೆ. ಎಲ್ಲಾ ಶಾಸನ ಸಭೆಗಳಿಗೂ ಏಕಕಾಲದಲ್ಲಿ ಚುನಾವಣೆ ನಡೆಸುವುದರಿಂದ ಸರಕಾರಗಳಿಗೂ ಆಡಳಿತಕ್ಕೆ ಹೆಚ್ಚಿನ ಸಮಯ ನೀಡಲು ಸಾಧ್ಯವಾಗುತ್ತದೆ. ಇದರಿಂದ ದೇಶದ ಜನತೆಗೂ ಅನುಕೂಲ ಎಂದು ಅಭಿಪ್ರಾಯಪಟ್ಟರು.

ಪ್ರಣವ್ ಮುಖರ್ಜಿ ಸ್ಮರಣೆ

ನಾವೀಗ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿಯೇ ಇರುವುದರಿಂದ ಈ ಹೊಸ ಚುನಾವಣಾ ಪರಿಕಲ್ಪನೆ ಮೇಲೆ ನನಗೆ ಪೂರ್ಣ ವಿಶ್ವಾಸವಿದೆ. ಸದ್ಯ 32 ಪಕ್ಷಗಳು ಹೊಸ ಚುನಾವಣಾ ಪದ್ಧತಿಯ ಪರವಾಗಿರುವಾಗ ಅವರ ಅಭಿಪ್ರಾಯವನ್ನು ದೇಶ ಒಪ್ಪಬೇಕು. ಹೊಸ ಪದ್ಧತಿ ಒಪ್ಪದ 15 ಪಕ್ಷಗಳೂ ಬಹುಮತವಿರುವ ಸತ್ಯವನ್ನು ಒಪ್ಪಿಕೊಂಡು ಸಹಕರಿಸಬೇಕು ಎಂದು ರಾಮನಾಥ ಕೋವಿಂದ್ ಪ್ರತಿಪಾದಿಸಿದರು. ಮಾಜಿ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರೂ ಏಕಕಾಲದಲ್ಲಿ ಚುನಾವಣೆ ನಡೆಸುವ ಪರಿಕಲ್ಪನೆಯನ್ನು ಬೆಂಬಲಿಸಿದ್ದರು ಎಂದು ನೆನಪಿಸಿಕೊಂಡರು.

ಹಿಂದೆ ಸರಿದ ಅಧೀರ್

ಉನ್ನತ ಮಟ್ಟದ ಪರಾಮರ್ಶೆ ಸಮಿತಿಯಲ್ಲಿ ಪ್ರತಿಪಕ್ಷದ ಸದಸ್ಯರಾಗಿ ಇರುವುದಕ್ಕೆ ಅಂದಿನ ಲೋಕಸಭೆಯಲ್ಲಿನ ಪ್ರತಿಪಕ್ಷ ನಾಯಕರಾದ ಕಾಂಗ್ರೆಸ್ ಸಂಸದ ಅಧೀರ್ ರಂಜನ್ ಚೌಧರಿ ಆರಂಭದಲ್ಲಿ ಸಿದ್ಧರಿದ್ದರು. ಅವರ ಹೆಸರಿನಲ್ಲೇ ನೇಮಕ ಪತ್ರ ಕಳುಹಿಸಲು ಸರಕಾರವೂ ಸಿದ್ಧವಿತ್ತು. ಆದರೆ, ಅಧೀರ್ ಅವರು ತಮ್ಮ ಪಕ್ಷದ ವರಿಷ್ಠರ ಜತೆ ಚರ್ಚಿಸಿದ ನಂತರ ಸಮಿತಿ ಸೇರುವ ವಿಚಾರದಿಂದ ಹಿಂದೆ ಸರಿದರು ಎಂದು ರಾಮನಾಥ ಕೋವಿಂದ್ ವಿವರಿಸಿದರು.

16 ವರ್ಷ ಏಕಕಾಲಿಕ ಚುನಾವಣೆ

1951 ಮತ್ತು 1967ರ ನಡುವಿನ ಅವಧಿಯಲ್ಲಿ ದೇಶದಲ್ಲಿ ಸಂಸತ್ತು ಮತ್ತು ರಾಜ್ಯ ವಿಧಾನಸಭೆಗಳಿಗೆ ಒಂದೇ ಸಮಯದಲ್ಲಿ ಚುನಾವಣೆಗಳು ನಡೆದಿದ್ದವು. ಬಳಿಕ 'ಏಕಕಾಲಿಕ ಚುನಾವಣೆ' ಪರಿಕಲ್ಪನೆ 1983ರಿಂದ ಅನೇಕ ವರದಿಗಳು ಮತ್ತು ಅಧ್ಯಯನಗಳಲ್ಲಿ ಚರ್ಚೆಗೊಳಗಾಗಿದೆ. ಏಕಕಾಲದಲ್ಲಿ ಚುನಾವಣೆ ನಡೆಸುವ ಹಿಂದಿನ ಅಭ್ಯಾಸಕ್ಕೆ ಮರಳುವುದನ್ನು ಅದು ಸೂಚಿಸಿದೆ. 2014ರಲ್ಲಿ ಎನ್‌ಡಿಎ ಮೈತ್ರಿಕೂಟದಡಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಾಗಿನಿಂದಲೂ ಬಿಜೆಪಿಯ ಪ್ರಮುಖ ಗುರಿ 'ಒಂದು ರಾಷ್ಟ್ರ ಒಂದು ಚುನಾವಣೆ' ಎಂಬುದೇ ಆಗಿದೆ. ಆದರೆ, ಈ ಪ್ರಸ್ತಾವನೆಗೆ ಪ್ರತಿಪಕ್ಷಗಳಿಂದ ನಿರಂತರ ವಿರೋಧ ವ್ಯಕ್ತವಾಗುತ್ತಿದೆ. ಒಂದೇ ಸಮಯದಲ್ಲಿ ಚುನಾವಣೆ ನಡೆಸುವ ಕ್ರಮ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ದುರ್ಬಲಗೊಳಿಸುತ್ತದೆ ಮತ್ತು ಸಂವಿಧಾನದ ಮೂಲ ರಚನೆಯನ್ನು ಉಲ್ಲಂಘಿಸುತ್ತದೆ ಎಂಬುದು ಪ್ರತಿಪಕ್ಷಗಳ ವಾದವಾಗಿದೆ.

ನಾಲ್ಕು ಪ್ರಮುಖ ಅಂಶಗಳು

- ಏಕಕಾಲದಲ್ಲಿ ಚುನಾವಣೆಗಳು: ಲೋಕಸಭೆ, ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸುವುದಕ್ಕೆ ಸಂಬಂಧಿಸಿದ ನಿಯಮಗಳಿರುವ ವಿಧಿ 82ಎ ಸಂವಿಧಾನಕ್ಕೆ ಸೇರ್ಪಡೆ. 82ಎ(3) ಉಪ ನಿಬಂಧನೆಯು ಲೋಕಸಭೆಯ ಅವಧಿಯಿನ್ನೂ ಪೂರ್ಣಗೊಂಡಿಲ್ಲದಿರುವಾಗಲೂ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸುವ ಅಧಿಕಾರವನ್ನು ಆಯೋಗಕ್ಕೆ ನೀಡುತ್ತದೆ.
- ವಿಧಾನಸಭೆಗೆ ಪ್ರತ್ಯೇಕ ಚುನಾವಣೆಯ ಅಗತ್ಯ: 82ಎ(5) ನಿಯಮವು ಲೋಕಸಭಾ ಚುನಾವಣೆಯ ಜತೆಗೇ ವಿಧಾನಸಭೆ ಚುನಾವಣೆಗಳನ್ನೂ ಒಂದೇ ಸಮಯದಲ್ಲಿ ಯಾವ ಸಂದರ್ಭಗಳಲ್ಲಿ ನಡೆಸಬಾರದು, ಬೇರೆ ಸಮಯದಲ್ಲಿ ನಡೆಸಬಹುದು ಎಂಬ ಅಭಿಪ್ರಾಯವನ್ನು ಆಯೋಗ ಹೊಂದಬಹುದು ಎಂಬುದನ್ನು ಹೇಳುತ್ತದೆ.
- ವಿಧಾನಸಭೆಗಳ ಅವಧಿ ಮೊಟಕು: ಸಂವಿಧಾನಕ್ಕೆ ಸೇರ್ಪಡೆಯಾಗಲಿರುವ ವಿಧಿ 172, ಯಾವ ಸಂದರ್ಭಗಳಲ್ಲಿ ರಾಜ್ಯ ವಿಧಾನಸಭೆಗಳನ್ನು ಅವಧಿಗೂ ಮುನ್ನವೇ ಕೊನೆಗೊಳಿಸಿ ಲೋಕಸಭೆ ಜತೆಗೇ ಚುನಾವಣೆ ನಡೆಸಲು ಅವಕಾಶ ನೀಡುತ್ತದೆ ಎಂಬುದನ್ನು ತಿಳಿಸಿಕೊಡುತ್ತದೆ.
- ಮಧ್ಯಂತರ ಅವಧಿ ಚುನಾವಣೆಗಳು: ಸಂವಿಧಾನದ ವಿಧಿ 83 (ಉಪಬಂಧ 3ರಿಂದ 7) ಮಧ್ಯಂತರ ಅವಧಿಯ ಚುನಾವಣೆಗಳ ಬಗ್ಗೆ ನಿರ್ದೇಶನ ನೀಡುತ್ತದೆ. 5 ವರ್ಷ ಅವಧಿ ಪೂರ್ಣಗೊಳ್ಳುವುದಕ್ಕೂ ಮುನ್ನವೇ ಲೋಕಸಭೆಯನ್ನು ವಿಸರ್ಜಿಸಿ ಚುನಾವಣೆಗೆ ಹೋಗಬಹುದು ಎಂಬುದರ ಬಗ್ಗೆ ನಿರ್ದೇಶನ ನೀಡುತ್ತದೆ.

ಸಂವಿಧಾನ 129ನೇ ತಿದ್ದುಪಡಿ ವಿಧೇಯಕ-2024

ಪ್ರಸಕ್ತ ಚಳಿಗಾಲದ ಅಧಿವೇಶನದಲ್ಲೇ 'ಒಂದು ದೇಶ-ಒಂದು ಚುನಾವಣೆ' ವಿಧೇಯಕವನ್ನು ಮಂಡಿಸಲು ಕೇಂದ್ರದ ಎನ್‌ಡಿಎ ಸರಕಾರ ಸಜ್ಜಾಗಿದೆ. ಕೇಂದ್ರದ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರು 'ಸಂವಿಧಾನ(129ನೇ ತಿದ್ದುಪಡಿ) ವಿಧೇಯಕ-2024' ಶೀರ್ಷಿಕೆಯಡಿ ಈ ವಿಧೇಯಕವನ್ನು ಲೋಕಸಭೆಯಲ್ಲಿ ಸೋಮವಾರ ಮಂಡನೆ ಮಾಡಲಿದ್ದಾರೆ. ವಿಧೇಯಕವು ವಿಧಿ 82ಎ (ಲೋಕಸಭೆ ಮತ್ತು ರಾಜ್ಯಗಳ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆಗಳು) ಸೇರ್ಪಡೆ ಹಾಗೂ ವಿಧಿ 83(ಸಂಸತ್ತಿನ ಸದನಗಳ ಕಾಲಾವಧಿ), ವಿಧಿ 172(ರಾಜ್ಯಗಳ ವಿಧಾನಸಭೆಗಳ ಕಾಲಾವಧಿ), ವಿಧಿ 327ರ(ಶಾಸನಸಭೆಗಳಿಗೆ ಚುನಾವಣೆಗಳನ್ನು ನಡೆಸುವುದಕ್ಕೆ ನೀಡಲಾಗುವ ಸಂಸತ್ತಿನ ಅಧಿಕಾರ) ತಿದ್ದುಪಡಿ ಕುರಿತದ್ದಾಗಿದೆ. ವಿಧೇಯಕವೂ ಸಂಸತ್ತಿನ ಎರಡೂ ಸದನಗಳಲ್ಲಿ ಮಂಡನೆಯಾಗಿ ಅಂಗೀಕಾರಗೊಂಡ ಬಳಿಕ ರಾಷ್ಟ್ರಪತಿಗಳ ಅಂಕಿತ ಪಡೆದು, ಸರಕಾರದ ಅಧಿಕೃತ ಗೆಜೆಟ್ ಅಧಿಸೂಚನೆಯೊಂದಿಗೆ ಜಾರಿಗೆ ಬರಲಿದೆ. ಇದರೊಟ್ಟಿಗೇ ಮತ್ತೊಂದು ವಿಧೇಯಕವೂ ಮಂಡನೆಯಾಗಲಿದೆ. ಅದು 'ಕೇಂದ್ರಾಡಳಿತ ಪ್ರದೇಶಗಳ ಕಾಯಿದೆ(ತಿದ್ದುಪಡಿ) ವಿಧೇಯಕ-2024'. ಇದರ ಮೂಲಕ ಕೇಂದ್ರಾಡಳಿತ ಪ್ರದೇಶಗಳ ಸರಕಾರಗಳ ಕಾಯಿದೆ-1963 ಮತ್ತು ರಾಷ್ಟ್ರ ರಾಜಧಾನಿ ಪ್ರದೇಶವಾದ ದೆಹಲಿ ಸರಕಾರದ ಕಯಿದೆ-1991 ಹಾಗೂ ಜಮ್ಮು-ಕಾಶ್ಮೀರ ಮರು ರಚನೆ ಕಾಯಿದೆ-2019ಕ್ಕೆ ತಿದ್ದುಪಡಿಯಾಗಲಿದೆ.

'ಓಪನ್ ಎಐ' ಕಂಪನಿ ವಿರುದ್ಧ ಆರೋಪಿಸಿದ್ದ ಬಾಲಾಜಿ ಶವ ಸ್ಯಾನ್‌ಫ್ರಾನ್ಸಿಸ್ಕೊ ಮನೆಯಲ್ಲಿ ಪತ್ತೆ

'ಎಐ' ಸಂಶೋಧಕ ಸುಚಿರ್ ಬಾಲಾಜಿ ಶಂಕಾಸ್ಪದ ಸಾವು

ಸ್ಯಾನ್‌ಫ್ರಾನ್ಸಿಸ್ಕೊ: ಕೃತಕ ಬುದ್ಧಿಮತ್ತೆ(ಎಐ) ತಂತ್ರಜ್ಞಾನ ಸಂಸ್ಥೆ 'ಓಪನ್ ಎಐ'ನಲ್ಲಿನ ಚಟುವಟಿಕೆಗಳು ಹಕ್ಕುಸ್ವಾಮ್ಯ ಕಾಯಿದೆಯ ನಿಯಮಗಳನ್ನು ಉಲ್ಲಂಘಿಸುತ್ತಿವೆ ಎಂದು ಆರೋಪಿಸಿದ್ದ, ಸಂಸ್ಥೆಯ ಮಾಜಿ ಉದ್ಯೋಗಿ, ಭಾರತ ಮೂಲದ ಸುಚಿರ್ ಬಾಲಾಜಿ(26) ಸಂಶಯಾಸ್ಪದ ರೀತಿ ಸಾವಿಗೀಡಾಗಿದ್ದಾರೆ. ಅವರ ಮೃತದೇಹ ಸ್ಯಾನ್ ಫ್ರಾನ್ಸಿಸ್ಕೋದ ಅವರದೇ ಅಪಾರ್ಟ್ ಮೆಂಟ್‌ನಲ್ಲಿ ಪತ್ತೆಯಾಗಿದೆ.

ಬಾಲಾಜಿ ನ.26ರಂದೇ ಮೃತಪಟ್ಟಿದ್ದು, ಘಟನೆ ತಡವಾಗಿ ಬೆಳಕಿಗೆ ಬಂದಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಮೊದಲಿಗೆ ಸ್ಥಳೀಯ ಮಾಧ್ಯಮಗಳಲ್ಲಷ್ಟೇ ವರದಿಯಾಗಿದ್ದ ಸುಚಿರ್ ಸಾವಿನ ಸುದ್ದಿ, ತಡವಾಗಿ ಜಾಗತಿಕ ಮಾಧ್ಯಮದಲ್ಲಿ ಪ್ರಕಟವಾಗಿದೆ. ಸ್ಥಳ ಮಹಜರು ನಡೆಸಿದ ಸ್ಯಾನ್‌ಫ್ರಾನ್ಸಿಸ್ಕೊ ಪೊಲೀಸರು, ಬಾಲಾಜಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರ ಅಪಾರ್ಟ್‌ಮೆಂಟ್‌ನಲ್ಲಿಯೇ ಶವ ಪತ್ತೆಯಾಗಿದೆ. ಬೇರಾವುದೇ ಅಪರಾಧ ಕೃತ್ಯ ನಡೆದಿರುವುದಕ್ಕೆ ಸ್ಥಳದಲ್ಲಿ ಪುರಾವೆಗಳಿಲ್ಲ ಎಂದಿದ್ದಾರೆ.

'ಎಐ' ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿದ್ದ ಬಾಲಾಜಿ ಕಂಪನಿಯಲ್ಲಿನ ನಿಯಮ ಬಾಹಿರ ಕ್ರಮಗಳು ಮತ್ತು ಚಟುವಟಿಕೆಗಳ ವಿರುದ್ಧ 2023ರ ಅಕ್ಟೋಬರ್‌ನಲ್ಲಿಯೇ ಧ್ವನಿ ಎತ್ತಿದರು. ಚಾಟ್ ಜಿಪಿಟಿಯಂತಹ ತಂತ್ರಜ್ಞಾನಗಳು ಇಂಟರ್ನೆಟ್‌ಗೆ ಹಾನಿ ಮಾಡುತ್ತಿವೆ ಎಂದು 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆಗೆ ನೀಡಿದ ಸಂದರ್ಶನದಲ್ಲೇ ಅಸಮಾಧಾನ ವ್ಯಕ್ತಪಡಿಸಿದ್ದರು. 'ಓಪನ್ ಎಐ' ಕಂಪನಿಯು ಚಾಟ್ ಜಿಪಿಟಿ ವಿಚಾರದಲ್ಲಿ ಹಕ್ಕುಸ್ವಾಮ್ಯ ಕಾಯಿದೆಯ ಎಲ್ಲಾ ನಿಯಮಗಳನ್ನೂ ಉಲ್ಲಂಘಿಸುತ್ತಿದೆ ಎಂದು ಗಂಭೀರ ಆರೋಪ ಮಾಡಿ ತಂತ್ರಜ್ಞಾನ ಕ್ಷೇತ್ರದ ಗಮನ ಸೆಳೆದಿದ್ದರು.

ಬಾಲಾಜಿ ಸಾವಿಗೂ ಮುಂಚಿನ ದಿನ ಅಮೆರಿಕದ ನ್ಯಾಯಾಲಯವೊಂದರಲ್ಲಿ ಓಪನ್ ಎಐ ಕಂಪನಿ ವಿರುದ್ಧ ಹಕ್ಕುಸ್ವಾಮ್ಯ ಉಲ್ಲಂಘನೆಯ ದಾವೆ ದಾಖಲಾಗಿದ್ದು, ಅದರಲ್ಲಿ ಸುಚಿರ್ ಬಾಲಾಜಿ ಹೆಸರೂ ಉಲ್ಲೇಖವಾಗಿತ್ತು. ಬಾಲಾಜಿ ಆರೋಪದ ಕಾರಣದಿಂದಾಗಿಯೇ 'ಓಪನ್ ಎಐ' ಮತ್ತು 'ಮೈಕ್ರೊಸಾಫ್ಟ್' ಕಂಪನಿಗಳು 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆ ಸೇರಿದಂತೆ ವಿವಿಧ ಕಂಪನಿಗಳು ಹೂಡಿದ ದಾವೆಗಳ ಕಾರಣ ಕಾನೂನು ಸಮಸ್ಯೆ ಎದುರಿಸುವಂತಾಗಿದೆ ಎಂಬುದು ಗಮನಾರ್ಹ. 2020ರ ನವೆಂಬರ್‌ನಿಂದ 2024ರ ಆಗಸ್ಟ್‌ವರೆಗೆ 'ಓಪನ್ ಎಐ' ಕಂಪನಿಯಲ್ಲಿಯೇ ಸುಚಿರ್ ಬಾಲಾಜಿ ಕೆಲಸ ಮಾಡಿದ್ದರು. ಒಂದೂವರೆ ವರ್ಷಗಳ ಕಾಲ ಚಾಟ್ ಜಿಪಿಟಿಯಲ್ಲಿ ಸೇವೆ ಸಲ್ಲಿಸಿದ್ದರು. ಕ್ಯಾಲಿಫೋರ್ನಿಯ ವಿವಿಯಲ್ಲಿ ಕಂಪ್ಯೂಟರ್ ಸೈನ್ಸ್ ವ್ಯಾಸಂಗ ಮಾಡಿದ್ದರು. ವಿದ್ಯಾರ್ಥಿ ದೆಸೆಯಲ್ಲೇ 'ಓಪನ್ ಎಐ' ಮತ್ತು 'ಸ್ಕೇಲ್ ಎಐ' ಇಂಟರ್ನಿ ಆಗಿದ್ದರು.

ಬಾಲಾಜಿ ಅಕ್ಟೋಬರ್ ಸಂದೇಶ

'ಹಕ್ಕುಸ್ವಾಮ್ಯ, ಅದಕ್ಕೆ ಸಂಬಂಧಿಸಿ ಕಾಯಿದೆ, ತಂತ್ರಜ್ಞಾನದ ನ್ಯಾಯಬದ್ಧ ಬಳಕೆ ಮೊದಲಾದ ವಿಷಯ



ಗಳ ಬಗ್ಗೆ ಆರಂಭದಲ್ಲಿ ನನಗೆ ಹೆಚ್ಚು ತಿಳಿದಿರಲಿಲ್ಲ. 'ಜೆನ್ ಎಐ' ಕಂಪನಿಗಳ ವಿರುದ್ಧ ಹಲವು ದಾವೆಗಳು ನ್ಯಾಯಾಲಯಗಳಲ್ಲಿ ದಾಖಲಾದ ಬಳಿಕ ಹಕ್ಕುಸ್ವಾಮ್ಯ ಕಾಯಿದೆಯ ಬಗ್ಗೆ ಕುತೂಹಲಗೊಂಡೆ. ಆ ಬಳಿಕ ಸ್ಪಷ್ಟವಾಗಿ ಅರ್ಥ ಮಾಡಿಕೊಂಡೆ. ನಂತರ ಎಐ ಕ್ಷೇತ್ರದ ಕಂಪನಿಗಳು ಜಾಣ್ಮೆಯಿಂದ ಹಕ್ಕುಸ್ವಾಮ್ಯವನ್ನು ಉಲ್ಲಂಘಿಸುತ್ತಿರುವುದು ಮನವರಿಕೆ ಆಯಿತು' ಎಂದು ಸುಚಿರ್ ಬಾಲಾಜಿ ಇದೇ ವರ್ಷದ ಅಕ್ಟೋಬರ್‌ನಲ್ಲಿ 'ಎಕ್ಸ್' ಸಂದೇಶದಲ್ಲಿ ಬರೆದಿದ್ದರು.

ಮಸ್ಕ್ ಪ್ರತಿಕ್ರಿಯೆ

ಸುಚಿರ್ ಬಾಲಾಜಿ ನಿಧನಕ್ಕೆ ತಂತ್ರಜ್ಞಾನ ಕ್ಷೇತ್ರ ಆಘಾತ ವ್ಯಕ್ತಪಡಿಸಿದೆ. 'ಓಪನ್ ಎಐ' ಕಂಪನಿಯ



'ಸಿಇಒ' ಸ್ಯಾಮ್ ಆಲ್ಟಮನ್ ವಿರುದ್ಧ ಕಾನೂನು ಸಮರ ನಡೆಸುತ್ತಿರುವ 'ಎಕ್ಸ್' ಕಂಪನಿ ಮಾಲೀಕ ಎಲಾನ್ ಮಸ್ಕ್, ಸುಚಿರ್ ಬಾಲಾಜಿ ಸಂಶಯಾಸ್ಪದ ಸಾವಿನ ಸುದ್ದಿ ಕೇಳಿ 'ಎಕ್ಸ್' ಖಾತೆಯಲ್ಲಿ 'ಹಾಂ' ಎಂದು ಚುಟುಕಾದ, ಅಷ್ಟೇ ಮಾರ್ಮಿಕವಾದ ಪ್ರತಿಕ್ರಿಯೆ ನೀಡಿದ್ದಾರೆ.

ಐಸಿಎಆರ್ ಡೀಮ್ಡ್ ವಿವಿಗೆ ಡಾ.ಮಂಜುನಾಥ್ ಮನವಿ

2025ರ ವೇಳೆಗೆ 1.50 ಲಕ್ಷ ಕೃಷಿ ಪದವೀಧರರ ಅಗತ್ಯ

ದೆಹಲಿ: ದೇಶದ ಕೃಷಿಕರು, ಕೃಷಿ ಉತ್ಪನ್ನಗಳ ಮಾರಾಟಗಾರರು ಮತ್ತು ಕೃಷಿ ಪದವೀಧರರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಬೆಂಗಳೂರಿನಲ್ಲಿರುವ 'ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ' (ಐಸಿಎಆರ್-ಐಐಎಚ್‌ಆರ್) ಸಂಸ್ಥೆಯನ್ನು 'ಡೀಮ್ಡ್ ವಿಶ್ವವಿದ್ಯಾಲಯ'ವನ್ನಾಗಿಸಿ ಮೇಲ್ದರ್ಜೆಗೇರಿಸಬೇಕು ಎಂದು ಸಂಸದ ಡಾ.ಸಿ.ಎನ್ ಮಂಜುನಾಥ್ ಕೇಂದ್ರ ಸರಕಾರಕ್ಕೆ ಮನವಿ ಮಾಡಿದ್ದಾರೆ.

ಕೇಂದ್ರ ಕೃಷಿ-ರೈತರ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರನ್ನು ದೆಹಲಿಯಲ್ಲಿ ಶನಿವಾರ ಭೇಟಿ ಮಾಡಿದ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಸದಸ್ಯರಾದ ಮಂಜುನಾಥ್, 2025ರ ವೇಳೆಗೆ ದೇಶಕ್ಕೆ ಏನಿಲ್ಲವೆಂದರೂ 1.50 ಲಕ್ಷ ತೋಟಗಾರಿಕಾ ಪದವೀಧರರ ಅವಶ್ಯಕತೆ ಬರಲಿದೆ. ಆದರೆ, ಪ್ರಸ್ತುತ ದೇಶದಲ್ಲಿ 57 ತೋಟಗಾರಿಕಾ ಕಾಲೇಜುಗಳಷ್ಟೇ ಇದ್ದು, ಅವುಗಳಿಂದ ವಾರ್ಷಿಕ 10 ಸಾವಿರಕ್ಕೂ ಕಡಿಮೆ ಪದವೀಧರರು ಹೊರಬರುತ್ತಿದ್ದಾರೆ. ಕೃಷಿ ಪದವೀಧರರ ಸಂಖ್ಯೆ ಹೆಚ್ಚಿಸುವ ದಿಶೆಯಲ್ಲಿ ಸರಕಾರ ಗಮನ ಹರಿಸಬೇಕಿದೆ ಎಂದು ಮನವಿ ಮಾಡಿದರು.

ರಾಮನಗರ ಜಿಲ್ಲಾದ್ಯಂತ ಮಾವು-ತೆಂಗು ಬೆಳೆ ಶೇ.90ರಷ್ಟು ಹಾನಿಯಾಗಿದೆ. ಪರಿಣಾಮ 50 ಸಾವಿರಕ್ಕೂ ಅಧಿಕ ರೈತರು ನಷ್ಟ ಅನುಭವಿಸಿದ್ದಾರೆ. ಮಾವು ಬೆಳೆಗೆ 57.67 ಕೋಟಿ ರು. ತೆಂಗು ಬೆಳೆಗೆ 30.65 ಕೋಟಿ ರು. ನೆರವನ್ನು ಎನ್‌ಡಿಆರ್‌ಎಫ್ ಮೂಲಕ ಒದಗಿಸಬೇಕು. ಆ ಮೂಲಕ ಕರ್ನಾಟಕದ ರೈತರ ಕಷ್ಟ ಪರಿಹರಿಸಬೇಕು ಎಂದು ಸಂಸದ ಮಂಜುನಾಥ್ ಮನವಿ ಮಾಡಿದರು.

ಮಹಾಯುತಿ 2.0 ಸಚಿವ ಸಂಪುಟ ಇಂದು ವಿಸ್ತರಣೆ

ಮುಂಬೈ: ಬಿಜೆಪಿ, ಶಿವಸೇನೆ, ಎನ್‌ಸಿಪಿ ಪಕ್ಷಗಳ ಮೈತ್ರಿಕೂಟ ವಾದ 'ಮಹಾಯುತಿ' ಮಹಾರಾಷ್ಟ್ರ ಸರಕಾರದ ಸಚಿವ ಸಂಪುಟ ವಿಸ್ತರಣೆ ಭಾನುವಾರ ನಡೆಯಲಿದೆ. ನಾಗಪುರದಲ್ಲಿ ಭಾನುವಾರ ನಡೆಯಲಿರುವ ಸಮಾರಂಭದಲ್ಲಿ ಮುಖ್ಯಮಂತ್ರಿ ದೇವೇಂದ್ರ ಫಡನವೀಸ್ ನೇತೃತ್ವದ ಸಚಿವ ಸಂಪುಟ ವನ್ನು ಸೇರಲಿರುವ 40 ಸಚಿವರುಗಳು ಪ್ರಮಾಣವಚನ ಸ್ವೀಕರಿಸಲಿದ್ದಾರೆ ಎಂದು ಬಿಜೆಪಿಯ ಹಿರಿಯ ಮುಖಂಡರು ತಿಳಿಸಿದ್ದಾರೆ.

288 ಸದಸ್ಯ ಬಲದ ಮಹಾರಾಷ್ಟ್ರ ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಸೇರಿದಂತೆ ಒಟ್ಟು 43 ಸಚಿವರಿಗೆ ಅವಕಾಶವಿದೆ. ಬಿಜೆಪಿ 132 ಶಾಸಕರನ್ನು ಹೊಂದಿದ್ದು, 20-21 ಸಚಿವ ಸ್ಥಾನ ಪಡೆಯಲಿದೆ, 57 ಶಾಸಕ ಬಲದ ಶಿವಸೇನೆ 11-12 ಸಚಿವ ಸ್ಥಾನ ಹೊಂದಲಿದೆ. ಎನ್‌ಸಿಪಿಯಿಂದ 41 ಶಾಸಕರು ಗೆದ್ದಿದ್ದು, 9-10 ಸಚಿವ ಸ್ಥಾನ ನೀಡಲಾಗುತ್ತದೆ ಎಂದು ಬಿಜೆಪಿ ಮೂಲಗಳಿಂದ ತಿಳಿದುಬಂದಿದೆ. ಆ ಬಳಿಕ ಸೋಮವಾರದಿಂದಲೇ ನಾಗಪುರದಲ್ಲಿ ಮಹಾಯುತಿ 2.0 ಸರಕಾರದ ಅವಧಿಯ ಮೊದಲ ಚಳಿಗಾಲದ ವಿಧಾನಸಭೆ ಅಧಿವೇಶನ ಆರಂಭವಾಗಲಿದೆ. ಒಂದು ವಾರ ಕಾಲ ಕಲಾಪ ನಡೆಯಲಿದೆ.

ಬಿಜೆಪಿ ಭೀಷ್ಮನ ಆರೋಗ್ಯ ತುಸು ಏರುಪೇರು

ಭಾರತ ರತ್ನ ಅಡ್ವಾಣಿ ಮತ್ತೆ ಆಸ್ಪತ್ರೆಗೆ

ದೆಹಲಿ: 'ಭಾರತ ರತ್ನ' ಮಾಜಿ ಉಪ ಪ್ರಧಾನಿ ಲಾಲ್ ಕೃಷ್ಣ ಅಡ್ವಾಣಿ ಅವರ ಆರೋಗ್ಯದಲ್ಲಿ ತುಸು ವ್ಯತ್ಯಯವಾಗಿದ್ದರಿಂದ ಅವರನ್ನು ಶನಿವಾರ ಬೆಳಗ್ಗೆ ದೆಹಲಿಯ ಅಪೋಲೋ



ಆಸ್ಪತ್ರೆಗೆ ದಾಖಲಿಸಲಾಗಿದೆ. ಬಿಜೆಪಿಯ ಭೀಷ್ಮ, ಭಾರತ ರಾಜಕಾರಣದ ಹಿರಿಯ ನಾಯಕ ಎಲ್.ಕೆ.ಅಡ್ವಾಣಿ ಅವರ ಆರೋಗ್ಯದಲ್ಲಿ ಶನಿ ವಾರ ಬೆಳಗ್ಗೆ ದಿಢೀರ್ ಏರುಪೇರಾಗಿದ್ದರಿಂದ ತಕ್ಷಣ ಆಸ್ಪತ್ರೆಗೆ ದಾಖಲಿಸಲಾಯಿತು. 97 ವರ್ಷಗಳನ್ನು ಸವೆಸಿ ರುವ ಅಡ್ವಾಣಿ ಅವರು ವಯೋ ಸಹಜ ಅನಾರೋಗ್ಯದಿಂದ ಬಳಲುತ್ತಿ ದ್ದಾರೆ. ಅಡ್ವಾಣಿ 1927ರ ನವೆಂಬರ್ 8ರಂದು ಕರಾಚಿಯಲ್ಲಿ (ಇಂದಿನ ಪಾಕಿಸ್ತಾನ) ಜನಿಸಿದರು. 2002-04ರ ಅವಧಿಯ ಯಲ್ಲಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಎನ್‌ಡಿಎ ಸರಕಾರದಲ್ಲಿ ಉಪ ಪ್ರಧಾನಿಯಾಗಿದ್ದರು. ಸದ್ಯ ಬಿಜೆಪಿ ಹಿರಿಯ ನಾಯಕನಿಗೆ ಮಥುರಾ ರಸ್ತೆಯಲ್ಲಿನ ಅಪೋಲೋ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗು ತ್ತಿದ್ದು, ಬಿಗಿಭದ್ರತೆ ವ್ಯವಸ್ಥೆಯಾಗಿದೆ. ಅಡ್ವಾಣಿ ಅವರ ಆರೋಗ್ಯದತ್ತ ತಜ್ಞ ವೈದ್ಯರು ನಿಗಾ ಇರಿಸಿದ್ದಾರೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ.

ದೇಗುಲದೆದುರೇ ಅತ್ಯಾಚಾರ, 7 ಸೆರೆ

ಗುವಾಹಟಿ: ಅಸ್ಸಾಂನ ಗುವಾಹಟಿಯಲ್ಲಿ ದುರ್ಗಾ ದೇವಸ್ಥಾನದ ಆವರಣದಲ್ಲಿಯೇ ಒಬ್ಬ ಯುವತಿ ಮೇಲೆ 9 ಕಾಮುಕರು ಮುಗಿಬಿದ್ದು ಸಾಮೂಹಿಕ ಅತ್ಯಾಚಾರ ನಡೆಸಿದ್ದು, ಇಡೀ ರಾಜ್ಯ ಬೆಚ್ಚಿಬಿದ್ದಿದೆ. ಕೃತ್ಯವನ್ನು ಮೊಬೈಲ್‌ನಲ್ಲಿ ಸೆರೆ ಹಿಡಿದಿರುವ ದುರುಳರು, ಜಾಲತಾಣದಲ್ಲಿ ಹರಿಬಿಟ್ಟಿದ್ದಾರೆ.

ನಗರದ ಹೊರವಲಯ ಬೋರಗಾಂವ್‌ನ ನಿಜಾರಪರ್ ಪ್ರದೇಶದ ದುರ್ಗಾ ದೇವಸ್ಥಾನದ ಆವರಣದಲ್ಲಿ ನ.16ರ ಮಧ್ಯರಾತ್ರಿ ಘಟನೆ ನಡೆದಿದ್ದು, ವಿಡಿಯೋ ಜಾಲತಾಣಗಳಲ್ಲಿ ವೈರಲ್ ಆದ ಬಳಿಕ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಈವರೆಗೆ ಏಳು ಕಾಮುಕರನ್ನು ಬಂಧಿಸಿರುವ ಪೊಲೀಸರು, ಉಳಿದವರಿಗಾಗಿ ಶೋಧ ನಡೆಸಿದ್ದಾರೆ. ಬಂಧಿತರನ್ನು ಕುಲದೀಪ್ ನಾಥ್, ಪಿಂಕು ದಾಸ್, ಗಗನ್ ದಾಸ್, ಮೃಣಾಲ್ ರಭಾ, ಬಿಜೋಯ್ ರಭಾ, ಸೌರವ್ ಬೋರೋ ಮತ್ತು ದೀಪಂಕರ್ ಮುಖಿಯಾ ಎಂದು ಗುರುತಿಸಲಾಗಿದೆ. ಆರೋಪಿಗಳು 18-23 ವರ್ಷ ವಯೋಮಾನದವರು. ಕೃತ್ಯದ ಮುಖ್ಯ ರೂವಾರಿಗಳಾದ ಇಬ್ಬರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ. ಅವರಿಗಾಗಿ ಪೊಲೀಸರು ಶೋಧ ನಡೆಸಿದ್ದಾರೆ. ಬೋರಗಾಂವ್ ನಿವಾಸಿಗಳ ಮೊಬೈಲ್‌ನಲ್ಲಿ ಹರಿದಾಡುತ್ತಿದ್ದ ವಿಡಿಯೋ ಪೊಲೀಸರ ಗಮನಕ್ಕೆ ಬಂದಿದ್ದು, ಬಳಿಕ ಪ್ರಕರಣ ದಾಖಲಾಗಿದೆ. ತಕ್ಷಣವೇ ಪೊಲೀಸ್ ತಂಡವನ್ನು ಸ್ಥಳಕ್ಕೆ ಕಳುಹಿಸಲಾಗಿದೆ ಮತ್ತು ಆರೋಪಿಗಳ ಮುಖಗಳು ಸ್ಪಷ್ಟವಾಗಿ ಗೋಚರಿಸುವ ವಿಡಿಯೋದಿಂದ ಇಬ್ಬರನ್ನು ಗುರುತಿಸಿ ಸೆರೆಹಿಡಿಯಲಾಯಿತು. ಬಳಿಕ ಉಳಿದವರೂ ಸೆರೆ ಸಿಕ್ಕರು ಎಂದು ಪೊಲೀಸ್ ಅಧಿಕಾರಿ ಹೇಳಿದ್ದಾರೆ.

91 ಜಿಲ್ಲೆ ಬರಗಾಲ, 51 ಜಿಲ್ಲೆಗೆ ಪ್ರವಾಹ ಭೀತಿ

ದೆಹಲಿ: ಹವಾಮಾನ ವೈಪರೀತ್ಯದ ಪರಿಣಾಮ ದೇಶದ 91 ಜಿಲ್ಲೆಗಳು ಬರಗಾಲದ ಅಪಾಯ ಎದುರಿಸುತ್ತಿದ್ದರೆ, 51 ಜಿಲ್ಲೆಗಳು ಪ್ರವಾಹ ಸಂಕಷ್ಟದ ಅಪಾಯದಲ್ಲಿವೆ. ಇದರಲ್ಲಿ 11 ಜಿಲ್ಲೆಗಳು ಬರಗಾಲ ಮತ್ತು ಪ್ರವಾಹದ ಅತಿ ಹೆಚ್ಚು ಅಪಾಯವನ್ನು ಎದುರಿಸುತ್ತಿವೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಬಿಡುಗಡೆ ಮಾಡಿದ ಹೊಸ ಅಧ್ಯಯನ ವರದಿ ತಿಳಿಸಿದೆ. ಪ್ರವಾಹ ಮತ್ತು ಬರಗಾಲ ಎದುರಾಗುವ ಅಪಾಯಗಳ ನಕಾಶೆ ತಯಾರಿಕೆ ವರದಿಯಲ್ಲಿ ಈ ಜಿಲ್ಲೆಗಳಲ್ಲಿನ ಭವಿಷ್ಯದ ಪರಿಸ್ಥಿತಿಯನ್ನು ಗುರುತಿಸಲಾಗಿದೆ. ಸ್ವಿಸ್ ಏಜೆನ್ಸಿಯೊಂದು ಈ ಅಧ್ಯಯನದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಜತೆಗೂಡಿದೆ. ಅಧ್ಯಯನದ ಪ್ರಕಾರ, ಅಸ್ಸಾಂ, ಬಿಹಾರ, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಗುಜರಾತ್, ಒಡಿಶಾ ಮತ್ತು ಜಮ್ಮು- ಕಾಶ್ಮೀರದ ಶೇ.85 ಜಿಲ್ಲೆಗಳು ಅತ್ಯಧಿಕ ಪ್ರಮಾಣದ ಪ್ರವಾಹ ಭೀತಿ ಎದುರಿಸಬೇಕಾದ ವರ್ಗದಲ್ಲಿವೆ. ಐವತ್ತೊಂದು ಜಿಲ್ಲೆಗಳು ಅತಿ ಹೆಚ್ಚು ಪ್ರವಾಹ ಅಪಾಯವನ್ನು ಎದುರಿಸುತ್ತಿವೆ ಮತ್ತು 118 'ಹೆಚ್ಚಿನ' ಅಪಾಯದ ವರ್ಗದಲ್ಲಿ ಬರುತ್ತವೆ. ಬಿಹಾರ, ಅಸ್ಸಾಂ, ಜಾರ್ಖಂಡ್, ಒಡಿಶಾ, ಉತ್ತರ ಪ್ರದೇಶ, ಮಹಾ ರಾಷ್ಟ್ರ, ಪಶ್ಚಿಮ ಬಂಗಾಳ, ಕರ್ನಾಟಕ, ತಮಿಳುನಾಡು, ಛತ್ತೀಸ್‌ಗಢ, ಕೇರಳ, ಉತ್ತರಾಖಂಡ ಮತ್ತು ಹರಿಯಾಣ ರಾಜ್ಯಗಳ ಶೇ.85ಕ್ಕಿಂತ ಹೆಚ್ಚು ಜಿಲ್ಲೆಗಳು ಅತ್ಯಧಿಕ ಪ್ರಮಾಣದ ಬರಗಾಲ ಎದುರಿಸಬೇಕಾದ ಅಪಾಯದ ವರ್ಗದಲ್ಲಿವೆ.

ಅಭಿಮಾನಿಗಳನ್ನು ಹುರಿದುಂಬಿಸಿದ್ದರಿಂದಲೇ ಅಂದು ಪರಿಸ್ಥಿತಿ ನಿಯಂತ್ರಣ ಮೀರಿ ಕಾಲ್ತುಳಿತವಾಗಿದೆ

ಅಲ್ಲು ಅರ್ಜುನ್ ಬಂಧನ: ಸಿಎಂ ರೇವಂತ್ ಸಮರ್ಥನೆ

ಅಮರಾವತಿ: ತೆಲುಗು ಚಿತ್ರರಂಗದ ಖ್ಯಾತ ನಟ ಅಲ್ಲು ಅರ್ಜುನ್ ಅವರನ್ನು ಪೊಲೀಸರು ಬಂಧಿಸಿರುವುದನ್ನು ತೆಲಂ

ಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಸಮರ್ಥಿಸಿಕೊಂಡು ಶನಿವಾರ ಮಾತನಾಡಿದ್ದಾರೆ.

ಚಿತ್ರಮಂದಿರದಲ್ಲಿ ಪ್ರೇಕ್ಷಕ ಗಣದಲ್ಲಿದ್ದ ಒಬ್ಬ ಮಹಿಳೆ ಸಾವಿಗೀಡಾದ ದಿನ ನಟ ಅಲ್ಲು ಅರ್ಜುನ್ ಚಿತ್ರಮಂದಿರಕ್ಕೆ ತೆರಳಿ ಸುಮ್ಮನೆ ಕೂತು ಸಿನಿಮಾ ನೋಡಿ ಬಂದಿಲ್ಲ. ಅವರು ತಮ್ಮ ಕಾರಿನ ಸನ್‌ರೂಫ್‌ನಿಂದ ಹೊರಗೆ ಕಾಣಿಸಿಕೊಂಡಿದ್ದಾರೆ, ಅಭಿಮಾನಿಗಳತ್ತ ಕೈಬೀಸಿದ್ದಾರೆ, ಸಂಭ್ರಮಾಚರಣೆ ಮಾಡುತ್ತಿದ್ದ ಅಭಿಮಾನಿಗಳನ್ನು ಹುರಿದುಂಬಿಸಿದ್ದಾರೆ. ಅದರಿಂದಾಗಿಯೇ ಅಂದು ಪರಿಸ್ಥಿತಿ ನಿಯಂತ್ರಣ ಮೀರಿದೆ. ಪರಿಣಾಮವಾಗಿಯೇ ಕಾಲ್ತುಳಿತವಾಗಿದ್ದು, ಮಹಿಳೆಯ ಸಾವಿಗೀಡಾಗಿದ್ದಾರೆ ಎಂದು ಸಿಎಂ ರೇವಂತ್ ರೆಡ್ಡಿ ಹೇಳಿದ್ದಾರೆ. ನಟ ಅಲ್ಲು ಅರ್ಜುನ್ ಬಂಧನದ ಬಗ್ಗೆ ಬಹಳ ಚರ್ಚೆಗಳಾಗುತ್ತಿವೆ. ಆದರೆ, ಕಾಲ್ತುಳಿತಕ್ಕೆ ಬಲಿಯಾದ ಮಹಿಳೆ ಮತ್ತು ಅವರ ಕುಟುಂಬದ ಬಗ್ಗೆ ಯಾರೂ ಮಾತನಾಡುತ್ತಿಲ್ಲ. ಬಡ ಕುಟುಂಬ ಪ್ರಮುಖ ಸದಸ್ಯೆಯನ್ನೇ ಕಳೆದುಕೊಂಡಿದೆ. ಗಾಯಾಳು ಪುತ್ರನಿನ್ನೂ ಆಸ್ಪತ್ರೆಯಲ್ಲಿ ಕೋಮಾದಲ್ಲಿದ್ದಾನೆ. ಅವನು ಕೋಮಾದಿಂದ ಹೊರಬಂದು ತನ್ನ ತಾಯಿಯಿಲ್ಲದ ಜೀವನವನ್ನು ನಡೆಸಬೇಕಾಗುತ್ತದೆ. ಇದಕ್ಕೆಲ್ಲಾ ಯಾರು ಹೊಣೆ? ಎಂದು ರೇವಂತ್ ರೆಡ್ಡಿ ಪ್ರಶ್ನೆ ಮಾಡಿದ್ದಾರೆ. ಸಿನಿಮಾ ತಾರೆಯರು ಹಣ ಸಂಪಾದನೆಗಾಗಿಯೇ ಇದ್ದಾರೆ. ಜನಸಾಮಾನ್ಯರಿಗೂ ಇದಕ್ಕೂ ಸಂಬಂಧವಿಲ್ಲ ಎಂದು ಸಿಎಂ ಕಿಡಿಕಾರಿದ್ದಾರೆ. 'ನಿಮ್ಮ ನೆಚ್ಚಿನ ನಟ ಯಾರು?' ಎಂಬ ಪ್ರಶ್ನೆಗೆ 'ನಾನೇ ಸ್ಟಾರ್, ಯಾರ ಅಭಿಮಾನಿಯೂ ಅಲ್ಲ' ಎಂದು ರೇವಂತ್ ಪ್ರತಿಕ್ರಿಯಿಸಿದ್ದಾರೆ.

ಕಾನೂನು ಪಾಲಕ ಪ್ರಜೆ-ತನಿಖೆಗೆ ಸಹಕರಿಸುವೆ

ಹೈದರಾಬಾದ್: ಚಿತ್ರಮಂದಿರ ಕಾಲ್ತುಳಿತ ಪ್ರಕರಣದಲ್ಲಿ ನ್ಯಾಯಾಂಗ ಬಂಧನಕ್ಕೊಳಗಾಗಿದ್ದ ತೆಲುಗು ಚಿತ್ರನಟ ಅಲ್ಲು ಅರ್ಜುನ್ ಮಧ್ಯಂತರ ಜಾಮೀನಿನಡಿ ಶನಿವಾರ ಬಿಡುಗಡೆಯಾಗಿ ಮನೆಗೆ ಮರಳಿದರು. ಪುತ್ರ ಅರ್ಜುನ್‌ರನ್ನು ಕರೆದೊಯ್ಯಲು ತಂದೆ ಅಲ್ಲು ಅರವಿಂದ್ ಚಂಚಲಗುಡ ಕೇಂದ್ರ ಕಾರಾಗೃಹ ಬಳಿ ಬಂದಿದ್ದರು.

ಈ ಸಂದರ್ಭ ಸುದ್ದಿಗಾರರ ಪ್ರಶ್ನೆಗೆ 'ನಾನು ಕಾನೂನು ಪಾಲಕ ಪ್ರಜೆ, ತನಿಖೆಗೆ ಪೂರ್ಣ ಸಹರಿಸುವೆ. ಕಾನೂನನ್ನು ಗೌರವಿಸುವೆ' ಎಂದು ಅಲ್ಲು ಅರ್ಜುನ್ ಪ್ರತಿಕ್ರಿಯಿಸಿದರು. ನನ್ನ ಸಿನಿಮಾಗಳ ಪ್ರಥಮ ಪ್ರದರ್ಶನ ನೋಡಲು 20 ವರ್ಷಗಳಿಂದಲೂ ಚಿತ್ರಮಂದಿರಕ್ಕೆ ಹೋಗುತ್ತಿರುವೆ. ಪ್ರೇಕ್ಷಕರೊಬ್ಬರ ಸಾವಿನಂಥ ದುರಂತ ಎಂದೂ ನಡೆದಿರಲಿಲ್ಲ. ಆ ಬಗ್ಗೆ ವಿಷಾದವಿದೆ. ಆ ಕುಟುಂಬದವರ ಬಳಿ ಕ್ಷಮೆ ಯಾಚಿಸುವೆ ಎಂದರು.

ಕಾನೂನು ಕ್ರಮ ಖಚಿತ: ವಕೀಲ ಅಶೋಕ್ ರೆಡ್ಡಿ ಮಾತನಾಡಿ, ತೆಲಂಗಾಣ ಹೈಕೋರ್ಟ್ ಶುಕ್ರವಾರವೇ ಆದೇಶದ ಪ್ರತಿ ನೀಡಿದ್ದರೂ, ಪೊಲೀಸರು ಆದೇಶದ ಪ್ರತಿ ಸ್ವೀಕರಿಸಿದ್ದರೂ ಜೈಲು ಅಧಿಕಾರಿಗಳು ಮಾತ್ರ ಬಿಡುಗಡೆ ಮಾಡಲಿಲ್ಲ. ಇದು ನಿಜಕ್ಕೂ ಅಕ್ರಮ, ಕಾನೂನುಬಾಹಿರ ಬಂಧನವಾಗಿದೆ. ಇದಕ್ಕೆ ಅವರು ಉತ್ತರ ನೀಡಲೇಬೇಕಾಗುತ್ತದೆ. ಕಾನೂನು ಕ್ರಮ ತೆಗೆದುಕೊಳ್ಳುತ್ತೇವೆ ಎಂದರು.

ಸಮಾಚಾರ ಸಣ್ಣದಲ್ಲ

ಕಿರಣ್ ಮಜುಂದಾರ್ ಶಾಗೆ ಜೆಮ್‌ಶೆಡ್ ಜಿ ಟಾಟಾ ಪ್ರಶಸ್ತಿ

ಐಎಸ್‌ಕ್ಯೂ ಅಧ್ಯಕ್ಷ ಜನಕ್ ಕುಮಾರ್ ಮೆಹ್ತಾರಿಂದ ಪ್ರಶಸ್ತಿಯನ್ನು ಸ್ವೀಕರಿಸಿದ ಕಿರಣ್ ಮಜುಂದಾರ್-ಶಾ. ಟಿಕ್ಯೂಎಮ್ ಅಂತಾರಾಷ್ಟ್ರೀಯ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕ ಬಿ. ಮುತ್ತುರಾಮನ್, ಟಾಟಾ ಸ್ಟೀಲ್‌ನ ಮಾಜಿ ಉಪಾಧ್ಯಕ್ಷ ಡಾ.ಕೆ.ಎನ್. ಸುಬ್ರಹ್ಮಣ್ಯ, ಆರ್.ವಿ. ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರು ಇದ್ದರು

ಬೆಂಗಳೂರು: ಬಯೋಕಾನ್ ಸಮೂಹದ ಅಧ್ಯಕ್ಷೆ ಕಿರಣ್ ಮಜುಂದಾರ್-ಶಾ ಅವರಿಗೆ ಭಾರತದಲ್ಲಿ ಜೈವಿಕ ವಿಜ್ಞಾನದ ಅಭಿವೃದ್ಧಿಗೆ ನೀಡಿರುವ ಕೊಡುಗೆ ಪರಿಗಣಿಸಿ ಇಂಡಿಯನ್ ಸೊಸೈಟಿ ಫಾರ್ ಕ್ವಾಲಿಟಿಯು ಪ್ರತಿಷ್ಠಿತ ಜೆಮ್‌ಶೆಡ್ ಜಿ ಟಾಟಾ ಪ್ರಶಸ್ತಿ ನೀಡಿ ಗೌರವಿಸಿದೆ. ಬೆಂಗಳೂರಿನಲ್ಲಿ ನಡೆದ ಐಎಸ್‌ಕ್ಯೂ ವಾರ್ಷಿಕ ಸಮ್ಮೇಳನ-2024ದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಐಎಸ್‌ಕ್ಯೂ ಅಧ್ಯಕ್ಷ ಮತ್ತು ಟಿಕ್ಯೂಎಮ್ ಅಂತಾರಾಷ್ಟ್ರೀಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಕಿರಣ್ ಜನಕ್ ಕುಮಾರ್ ಮೆಹ್ತಾ ಮಾತನಾಡಿ, 1978ರಿಂದ ಭಾರತದಲ್ಲಿ ಜೀವವಿಜ್ಞಾನ ಆಂದೋಲನದಲ್ಲಿ ಮುಂಚೂಣಿಯಲ್ಲಿರುವ ಕಿರಣ್ ಮಜುಂದಾರ್-ಶಾ ಅವರಿಗೆ ಈ ಜೀವಮಾನ ಸಾಧನೆ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಭಾರತದಲ್ಲಿ ಮತ್ತು ಪ್ರಪಂಚದಾದ್ಯಂತ ಗ್ರಾಹಕರಿಗೆ ಸೇವೆ ಸಲ್ಲಿಸಲು ಬಯೋಕಾನ್ ಲಿಮಿಟೆಡ್ ಮತ್ತು ಸಂಬಂಧಿತ ಕಂಪನಿಗಳನ್ನು ಸ್ಥಾಪಿಸುವ ಮೂಲಕ ಸಮಾಜಕ್ಕೆ ಅಪಾರ ಒಳಿತನ್ನು ಮಾಡಿದ್ದು, ಆ ಮಹೋನ್ನತ ಕಾರ್ಯ ಭಾರತವನ್ನು ವಿಶ್ವದಲ್ಲಿ ಮಿಂಚುವಂತೆ ಮಾಡಿದೆ ಎಂದರು. ಬಯೋಕಾನ್ ಗ್ರೂಪ್ ಅಧ್ಯಕ್ಷೆ ಕಿರಣ್ ಮಜುಂದಾರ್-ಶಾ ಮಾತನಾಡಿ, ಈ ಗೌರವಕ್ಕೆ ಆಭಾರಿಯಾಗಿದ್ದೇನೆ. ಐಎಸ್‌ಕ್ಯೂ ಸ್ಥಾಪಿಸಿದ 2024ರ ಜೆಮ್‌ಶೆಡ್ ಜಿ ಟಾಟಾ ಪ್ರಶಸ್ತಿಯನ್ನು ಸ್ವೀಕರಿಸಿದ್ದು, ಅತ್ಯಂತ ಸಂತಸವಾಗಿದೆ. ಈ ಪ್ರಶಸ್ತಿಯು ನನಗೆ ಬಹಳ ವಿಶೇಷವಾದುದಾಗಿದೆ, ಏಕೆಂದರೆ ಈ ಪ್ರಶಸ್ತಿಯು ಭಾರತದ ಶ್ರೇಷ್ಠ ದಾರ್ಶನಿಕರಲ್ಲಿ ಒಬ್ಬರ ಹೆಸರನ್ನು ಹೊಂದಿದೆ ಎಂದು ಹೇಳಿದರು.

ಅಲ್ಲು ಅರ್ಜುನ್ ಬಂಧನ: ಬಂಡಿ ಸಂಜಯ್ ತಿರುಗೇಟು

ದೆಹಲಿ: ಕಾಲ್ತುಳಿತದಲ್ಲಿ ಮಹಿಳೆ ಸಾವು ಪ್ರಕರಣದಲ್ಲಿ ನಟ ಅಲ್ಲು ಅರ್ಜುನ್ ಬಂಧನವಾದ ವಿಚಾರ ರಾಜಕೀಯ ಚರ್ಚೆಗೂ ಗ್ರಾಸವಾಗಿದೆ. ಸದ್ಯ ಅರ್ಜುನ್ ಮಧ್ಯಂತರ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದರೂ, ಅವರ ಬಂಧನ ಸಂಬಂಧ ತೆಲಂಗಾಣ ಸಿಎಂ ರೇವಂತ್ ರೆಡ್ಡಿ ನೀಡಿದ್ದ ಹೇಳಿಕೆಗೆ ಕೇಂದ್ರ ಸಚಿವ ಬಂಡಿ ಸಂಜಯ್ ತಿರುಗೇಟು ನೀಡಿದ್ದಾರೆ. ಈ ವಿಚಾರವಾಗಿ ಅವರ ಟ್ವೀಟ್ ಮಾಡಿದ್ದಾರೆ. ಅಲ್ಲು ಅರ್ಜುನ್‌ರಂತಹ ನಟರು ಲಕ್ಷಾಂತರ ಜನರಿಗೆ ಪ್ರೇರೇಪಣೆಯಾಗಿದ್ದಾರೆ. ಸರಕಾರಿ ಕಚೇರಿಯನ್ನು ನಗದು ನೀಡುವ ಹಸುವಿನಂತೆ ಪರಿಗಣಿಸುವ, ಲೂಟಿ ಮಾಡುವ, ಭ್ರಷ್ಟಾಚಾರದಲ್ಲಿ ಸಿಲುಕಿಹಾಕಿಕೊಳ್ಳುವ ನಾಯಕರಿಗಿಂತ ಅಲ್ಲು ಅರ್ಜುನ್‌ನಂತಹ ನಟರು ಎಷ್ಟೋ ವಾಸಿ. ದೇಶಪ್ರೇಮ ಎಂಬುದು ಭಾರತ-ಪಾಕ್ ಗಡಿಯಲ್ಲಿ ಮಾತ್ರವಲ್ಲ, ಅದು ಇಡೀ ರಾಷ್ಟ್ರವನ್ನೇ ಪ್ರೇರೇಪಿಸುತ್ತದೆ. ಬಹುಶಃ ಕಾಂಗ್ರೆಸ್ ಲೂಟಿ ನಿಲ್ಲಿಸಿ, ಇದನ್ನು ಕಲಿಯಲು ಪ್ರಾರಂಭಿಸಬೇಕು ಎಂದು ಬಂಡಿ ಸಂಜಯ್ ಉಲ್ಲೇಖಿಸಿದ್ದಾರೆ.

ವಿದ್ಯಾರ್ಥಿನಿಗೆ ಪ್ರವೇಶ ನಿಷೇಧ

ದೆಹಲಿ: ಉತ್ತರಾಖಂಡದಲ್ಲಿ ಬಾಲಕಿಯೊಬ್ಬಳು ತಿಲಕ ಇಟ್ಟುಕೊಂಡು ಬಂದಿದ್ದಕ್ಕೆ ಆಕೆಗೆ ತರಗತಿಯೊಳಗೆ ಬರಲು ಅವಕಾಶ ನಿರಾಕರಿಸಲಾಗಿದ್ದು, ಬಳಿಕ ಆಕೆ ತನ್ನ ಶಿಕ್ಷಕರ ಮಾತಿಗೆ ಒಪ್ಪಿ ತಿಲಕ ಅಳಿಸಿಕೊಂಡು ತರಗತಿಗೆ ಹಾಜರಾಗಿದ್ದಾಳೆ. ಆದರೆ ನಂತರ ಈ ವಿಷಯವನ್ನು ತನ್ನ ಪೋಷಕರಿಗೆ ತಿಳಿಸಿದ್ದಾಳೆ. ಆಕೆಯ ಪೋಷಕರು, ಹಿಂದೂ ಸಂಘಟನೆಗಳೊಂದಿಗೆ ಗುರುವಾರ ಶಾಲೆಗೆ ಆಗಮಿಸಿ ಪ್ರತಿಭಟನೆ ನಡೆಸಿದ್ದಾರೆ. ಉತ್ತರಾಖಂಡದ ರಿಷಿಕೇಶದ ಶಾಲೆಯೊಂದರಲ್ಲಿ ಹಣೆಯ ಮೇಲಿದ್ದ ತಿಲಕ ತೆಗೆಯದೆ ವಿದ್ಯಾರ್ಥಿನಿಯೊಬ್ಬಳು ತನ್ನ ತರಗತಿಗೆ ಪ್ರವೇಶಿಸಲು ಬಿಡಲಿಲ್ಲ. ಆಕೆಯ ಪೋಷಕರು ಮತ್ತು ಹಿಂದೂ ಸಂಘಟನೆಗಳು ಪ್ರತಿಭಟನೆಗೆ ಪ್ರೇರೇಪಿಸಿತು, ಈ ಹಿನ್ನೆಲೆಯಲ್ಲಿ ಪ್ರಾಂಶುಪಾಲರು ಕ್ಷಮೆ ಯಾಚಿಸಿದ್ದಾರೆ.

{ **ಡಾ.ಸಿ.ಎನ್.ಮಂಜುನಾಥ್** } ಸಂಸದ

ಬೆಂಗಳೂರು ಹೊರವಲಯದ ಹೆಸರಘಟ್ಟದಲ್ಲಿರುವ ಭಾರತೀಯ ತೋಟಗಾರಿಕೆ ಸಂಶೋಧನಾ ಕೇಂದ್ರವನ್ನು ಡೀಮ್ಡ್ ವಿಶ್ವವಿದ್ಯಾಲಯವಾಗಿ ಮೇಲ್ದರ್ಜೆಗೇರಿಸಬೇಕು. ಹವಾಮಾನ ವೈಪರೀತ್ಯದಿಂದ ಮಾವು ಮತ್ತು ತೆಂಗು ಬೆಳೆ ಕಳೆದುಕೊಂಡಿರುವ ರಾಮನಗರ ಜಿಲ್ಲೆಯ ರೈತರಿಗೆ ನೆರವು ನೀಡಬೇಕೆಂದು ಕೇಂದ್ರ ಸಚಿವ ಚೌಹಾಣ್‌ಗೆ ಮನವಿ ಮಾಡಿದ್ದೇನೆ.

ವಚನ ಹೃದಯ-ವಚನಾಂಕಿತಗಳ ವೈಶಿಷ್ಟ್ಯ ಮತ್ತು ವೈವಿಧ್ಯ ಗ್ರಂಥ ಬಿಡುಗಡೆ

ವಚನಗಳಿಂದ ಮನಃಪರಿವರ್ತನೆ: ಗೊರುಚ

ಬೆಂಗಳೂರು: ವಚನಗಳು ಅಂತರ್ದರ್ಶನದ ಪ್ರತಿರೂಪಗಳು,ಸಾರ್ವಕಾಲಿಕ ಸತ್ಯಗಳಾಗಿದ್ದು, ವಚನಗಳಿಂದ ಮನಃ ಪರಿವರ್ತನೆ ಮತ್ತು ಆತ್ಮವಿಮರ್ಶೆ ಸಾಧ್ಯ ಎಂದು ಹಿರಿಯ ಸಾಹಿತಿ, 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಸರ್ವಾಧ್ಯಕ್ಷ ನಾಡೋಜ ಗೊ.ರು.ಚನ್ನಬಸಪ್ಪ ತಿಳಿಸಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮತ್ತು ವೀರಶೈವ-ಲಿಂಗಾಯತ ಬಂಧು ಬಳಗದ ವತಿಯಿಂದ ಆಯೋಜಿಸಿದ್ದ ಪೂಜ್ಯಶ್ರೀ ಬಸವಾನಂದ ಮಹಾಸ್ವಾಮಿಗಳು ರಚಿಸಿದ 'ವಚನ ಹೃದಯ - ವಚನಾಂಕಿತಗಳ ವೈಶಿಷ್ಟ್ಯ ಮತ್ತು ವೈವಿಧ್ಯ ಗ್ರಂಥ' ಬಿಡುಗಡೆ ಮಾಡಿ ಮಾತನಾಡಿ, ವಚನಗಳು ಆಯಾ ಸಂದರ್ಭಕ್ಕೆ ಅನುಸಾರವಾಗಿ ಸೃಷ್ಟಿಯಾಗಿದ್ದರೂ ಇಂದಿಗೂ ಕೂಡ ಸಾರ್ವಕಾಲಿಕವಾಗಿದೆ ಮತ್ತು ಪ್ರಸ್ತುತವಾಗಿದೆ. ವಚನಕಾರರು ತಮ್ಮ ಅನುಭವಗಳನ್ನು ಬದುಕಿನ ಸಾರಗಳನ್ನು ವಚನಗಳ ಮೂಲಕ ಕೊಡುಗೆಯಾಗಿ ಕೊಟ್ಟಿದ್ದಾರೆ. 12 ನೇ ಶತಮಾನದಲ್ಲಿ ಬಸವಾದಿ ಶರಣರು ವಚನಗಳ ಮೂಲಕ ಅಕ್ಷರ ಕ್ರಾಂತಿಯನ್ನೇ ಸೃಷ್ಟಿಸಿದರು. ವಚನಗಳಿಂದ ಮನ ಪರಿವರ್ತನೆ, ಆತ್ಮ ವಿಮರ್ಶೆ ಸಾಧ್ಯ ಎಂದರು. ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಪೂಜ್ಯ ಶ್ರೀಬಸವಾನಂದ ಸ್ವಾಮಿಗಳು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಉಪಾಧ್ಯಕ್ಷ ಡಾ.ಸಿಂ.ರಾ.ಹೊನ್ನಲಿಂಗಯ್ಯ,ಬೆಂಗಳೂರು ವಿವಿಯ ವಿಶ್ರಾಂತ ಕುಲಪತಿ ಡಾ.ಕೆ.ಸಿದ್ದಪ್ಪ ಇದ್ದರು.

ವಚನಗಳ ಬಗ್ಗೆ ಗೊಂದಲ, ಅನುಮಾನಕ್ಕೆ ಉತ್ತರ

ಕಾಲಾಂತರದಲ್ಲಿ ವಚನ,ವಚನ ಸಂದೇಶ,ಅಂಕಿತನಾಮಗಳ ಬಗ್ಗೆ ಸಾಕಷ್ಟು ಗೊಂದಲ,ಅನುಮಾನ,ಅಪಸವ್ಯಗಳು ಸೃಷ್ಟಿಯಾಗಿದ್ದವು. ಈ ಗ್ರಂಥದ ಮೂಲಕ ಶ್ರೀಗಳು ಆ ಎಲ್ಲ ಗೊಂದಲಗಳಿಗೆ ಉತ್ತರ ಕೊಟ್ಟಿದ್ದಾರೆ. ಅಂಕಿತನಾಮಗಳು, ಇಷ್ಟಲಿಂಗ ದೈವದ ಇತಿಹಾಸ, ಆರಾಧನಾ ಕ್ರಮ, ವಚನಗಳ ಸಾರ ಎಲ್ಲವನ್ನೂ ವಿವರವಾಗಿ ಕಾರಣ ಸಮೇತ ತಿಳಿಸಿದ್ದಾರೆ. ಅಂಕಿತನಾಮಗಳ ಕುರಿತು ಇತಿಹಾಸದಲ್ಲಿಯೇ ಬೇರಾವ ವಿದ್ವಾಂಸರು ಮಾಡದಿರುವ ಸಂಶೋಧನೆ ಮತ್ತು ವಿಶ್ಲೇಷಣೆಯನ್ನು ಶ್ರೀಗಳು ಮಾಡಿದ್ದಾರೆ. ಪ್ರಸ್ತುತ ಸಾಹಿತ್ಯ ಓದುಗರು ಮನರಂಜನಾ ಸಾಹಿತ್ಯದ ಕಡೆ ಹೆಚ್ಚಿನ ಗಮನ ಕೊಟ್ಟಿದ್ದಾರೆ ಆದರೆ ಈ ರೀತಿಯ ವಿಶ್ಲೇಷಣಾ ಗ್ರಂಥಗಳ ಅಧ್ಯಯನ ಮಾಡಬೇಕಾಗಿದೆ. ದೇಶದಲ್ಲೇ ವಚನಗಳ ಮೇಲೆ ನಡೆದಿರುವಷ್ಟು ಚರ್ಚೆ, ವಿಮರ್ಶೆ, ಸಂವಾದ, ವಿಶ್ಲೇಷಣೆ ಬೇರೆ ಯಾವ ಸಾಹಿತ್ಯ ಪ್ರಕಾರದಲ್ಲೂ ಕಾಣಲು ಸಾಧ್ಯವಿಲ್ಲ. ವಚನಾನುಭವ ಈ ಪುಸ್ತಕದ ಮೂಲಕ ಓದುಗರು ಪಡೆದುಕೊಳ್ಳಬೇಕು ಎಂದು ಗೊ.ರು.ಚನ್ನಬಸಪ್ಪ ಆಶಯ ವ್ಯಕ್ತಪಡಿಸಿದರು.

ಮೋದಿ ನಿರ್ಧಾರ ವಿರೋಧಿಸುವವರು ದೇಶದ ಅಭಿವೃದ್ಧಿ ವಿರೋಧಿಗಳು

ಒಂದು ದೇಶ, ಒಂದು ಚುನಾವಣೆ ದಿಟ್ಟ ನಿರ್ಧಾರ

ದೆಹಲಿ: ಒಂದು ದೇಶ ,ಒಂದು ಚುನಾವಣೆ ವ್ಯವಸ್ಥೆ ಜಾರಿಗೆ ತರಲು ಸಂವಿಧಾನ ತಿದ್ದುಪಡಿಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರಕಾರ ದಿಟ್ಟ ನಿರ್ಧಾರ ತೆಗೆದುಕೊಂಡಿದೆ. ಈ ತೀರ್ಮಾನವನ್ನು ವಿರೋಧಿಸುವವರು ದೇಶದ ಅಭಿವೃದ್ಧಿ ವಿರೋಧಿಗಳು ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಒಂದು ದೇಶ ,ಒಂದು ಚುನಾವಣೆ ವ್ಯವಸ್ಥೆ ಜಾರಿಯಾದರೆ ಆಡಳಿತದಲ್ಲಿ ಸ್ಥಿರತೆ ಬರುತ್ತದೆ. ಅಭಿವೃದ್ಧಿ ಸ್ಥಿರತೆ ಬಹಳ ಮುಖ್ಯ. ಬೇರೆ ಯಾವ ದೇಶಗಳಲ್ಲಿಯೂ ಈ ರೀತಿಯ ವ್ಯವಸ್ಥೆ ಇಲ್ಲ. ಆದ್ದರಿಂದ ಇದಕ್ಕೆ ಇತಿಶ್ರೀ ಹಾಡಬೇಕೆಂದು ದಶಕಗಳಿಂದ ಚರ್ಚೆ ನಡೆಯುತ್ತಿತ್ತು. ನಮ್ಮ ಪ್ರಧಾನಿ ದಿಟ್ಟ ನಿರ್ಧಾರ ಮಾಡಿದ್ದು, ಇದು ದೂರಗಾಮಿಯಾಗಿ ಸಕಾರಾತ್ಮಕ ಪರಿಣಾಮ ಬೀರುತ್ತದೆ. ಇದು ಈ ದೇಶಕ್ಕೆ ಒಳ್ಳೆಯದಾಗುವ ನಿರ್ಧಾರ.

-ಬಸವರಾಜ ಬೊಮ್ಮಾಯಿ, ಸಂಸದ

ನವದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಧಾನಿ ಮೋದಿ ನೇತೃತ್ವದ ಸಚಿವ ಸಂಪುಟದಲ್ಲಿ ಒಂದು ದೇಶ ,ಒಂದು ಚುನಾವಣೆ ವ್ಯವಸ್ಥೆ ಜಾರಿಗೆ ತರಲು ಸಂವಿಧಾನ ತಿದ್ದುಪಡಿಗೆ ಒಪ್ಪಿಗೆ ನೀಡಿದೆ. ಅದನ್ನು ಇದಕ್ಕೆ ಸಂಬಂಧಿಸಿದ ವಿಧೇಯಕ ಸಂಸತ್ ಅಧಿವೇಶನದಲ್ಲಿ ಮಂಡನೆಯಾಗಲಿದೆ. ಮುಂದಿನ ದಿನಗಳಲ್ಲಿ ದೇಶದ ಅಭಿವೃದ್ಧಿ ಆಗಬೇಕಾದರೆ ಪ್ರತಿನಿತ್ಯ ಚುನಾವಣೆ ಮಾಡಲು ಆಗುವುದಿಲ್ಲ. ಈ ದೇಶದಲ್ಲಿ ಸಹಕಾರಿ ವ್ಯವಸ್ಥೆಯಿಂದ ಹಿಡಿದು, ಪಂಚಾಯತಿ ಚುನಾವಣೆ, ವಿಧಾನಸಭೆ ಲೋಕಸಭೆವರೆಗೆ ಒಂದಿಲ್ಲ ಒಂದು ಚುನಾವಣೆ ನಡೆಯುತ್ತಲೇ ಇರುತ್ತವೆ. ಪ್ರತಿ ಚುನಾವಣೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಖರ್ಚಾಗುತ್ತದೆ. ಅಷ್ಟೇ ಅಲ್ಲ ಆ ದಿನಗಳಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಮಾಡಲು ಸಾಧ್ಯವಿಲ್ಲ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಬಿಜೆಪಿಯ ಸಂಸದರಾದ ಬಸವರಾಜ ಬೊಮ್ಮಾಯಿ ಮತ್ತು ಗೋವಿಂದ ಕಾರಜೋಳ ಸಂಸತ್ ಭವನದ ಮೇಲಿನ ದಾಳಿಯ ಹುತಾತ್ಮರಿಗೆ ನಮನ ಸಲ್ಲಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ಬಿಜೆಪಿ ಸಂಸದರಾದ ಬಸವರಾಜ ಬೊಮ್ಮಾಯಿ ಮತ್ತು ಗೋವಿಂದ ಕಾರಜೋಳ ಅವರು ನವದೆಹಲಿಯಲ್ಲಿ ಸಂಸತ್ ಮೇಲಿನ ದಾಳಿಯ ಹುತಾತ್ಮರಿಗೆ ಪುಷ್ಪನಮನ ಸಲ್ಲಿಸಿದರು.

ಯಕೃತ್ತಿನ ಶಸ್ತ್ರಚಿಕಿತ್ಸೆ ಯಶಸ್ವಿ



ಬೆಂಗಳೂರು: ದೀರ್ಘಕಾಲದ ಹೆಪಟೈಟಿಸ್ ಬಿ ಸಮಸ್ಯೆ ಹೊಂದಿರುವ ಹಾಗೂ ಯಕೃತ್ತು ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಕೀನ್ಯಾದ 61 ವರ್ಷದ ವ್ಯಕ್ತಿಗೆ ಸ್ಪರ್ಶ್ ಆಸ್ಪತ್ರೆ ಹೊಸ ಜೀವನ ನೀಡಿದೆ. ಪೋರ್ಟಲ್ ವೈನ್ ಲಿಗೇಷನ್ ಫಾರ್ ಸ್ಟೇಜ್ಡ್ ಹೆಪಟೆಕ್ಟಮಿ (ಎಎಲ್ಪಿಪಿಎಸ್) ಜತೆಗೆ ಯಕೃತ್ತು ವಿಭಜನೆ ಮಾಡುವಂತಹ ಹೊಸ ತಂತ್ರ ಬಳಸಿ ಕೊಂಡು, ಸ್ಪರ್ಶ್ ಆಸ್ಪತ್ರೆಯ ಪರಿಣಿತರ ತಂಡವು ಯಕೃತ್ತಿನ ತ್ವರಿತ ಬೆಳವಣಿಗೆ ಉತ್ತೇಜಿಸುವ ಎರಡು-ಹಂತದ ಯಕೃತ್ತಿನ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಇದು ಯಕೃತ್ತಿನ ಮಾರಣಾಂತಿಕ ಭಾಗ ಸುರಕ್ಷಿತವಾಗಿ ತೆಗೆದುಹಾಕಲು ನೆರವಾಗಿದೆ. ಯಕೃತ್ತಿನ ಬಲ ಭಾಗದಲ್ಲಿ ದೊಡ್ಡ ಹೆಪಟೊಸೆಲ್ಯುಲರ್ ಕಾರ್ಸಿನೋಮ ಕಾಣಿಸಿಕೊಂಡ ಕಾರಣದಿಂದಾಗಿ ಮತ್ತು ಹೆಪಟೈಟಿಸ್ ಬಿ ನ ಫೈಬ್ರೋಸಿಸ್‌ನಿಂದಾಗಿ ರೋಗಿಯು ಭಾರಿ ಸವಾಲುಗಳನ್ನು ಎದುರಿಸಬೇಕಾಯಿತು. ತಜ್ಞರ ಪ್ರಕಾರ, ದೀರ್ಘಕಾಲದ ಪಿತ್ತಜನಕಾಂಗದ ಕಾಯಿಲೆ ಇದ್ದಲ್ಲಿ ಮತ್ತು ಪಿತ್ತಜನಕಾಂಗದ ಗೆಡ್ಡೆಗಳಿದ್ದಲ್ಲಿ ಶಸ್ತ್ರಚಿಕಿತ್ಸೆಯ ಮೂಲಕ ಭಾಗವನ್ನು ತೆಗೆದುಹಾಕುವುದು ಕಠಿಣವಾಗಿರುತ್ತದೆ.

ಏಕೆಂದರೆ ಉಳಿದ ಯಕೃತ್ತು ಸಾಮಾನ್ಯವಾಗಿ ತುಂಬಾ ಚಿಕ್ಕದಾಗಿರುತ್ತದೆ ಅಥವಾ ಶಸ್ತ್ರಚಿಕಿತ್ಸೆಯ ನಂತರದ ಪಚನ ಕ್ರಿಯೆಯಲ್ಲಿ ತೊಂದರೆಯಾಗುತ್ತದೆ. ಎಎಲ್ಪಿಪಿಎಸ್ ತಂತ್ರಜ್ಞಾನ ಬಳಸದೆ ಹೆಪಟೆಕ್ಟಮಿ ನಡೆಸಿದಲ್ಲಿ ಯಕೃತ್ತು ವಿಫಲವಾಗುವ ಅಪಾಯ ಹೆಚ್ಚಿರುತ್ತದೆ. ಆದಾಗ್ಯೂ, ತಂಡವು ಎಎಲ್ ಪಿಪಿಎಸ್‌ನೊಂದಿಗೆ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ಪೂರ್ಣಗೊಳಿಸಿತು.

ಮತ್ತೆ ಟೋಯಿಂಗ್ ಜಾರಿ?

ಬೆಂಗಳೂರು: ನಗರದಲ್ಲಿ ಮತ್ತೆ ಟೋಯಿಂಗ್ ವ್ಯವಸ್ಥೆ ಜಾರಿಗೆ ತರಲು ಚಿಂತಿಸಲಾಗುತ್ತಿದೆ ಎಂದು ನಗರ ಪೊಲೀಸ್ ಆಯುಕ್ತ ದಯಾನಂದ ಅವರು ಹೇಳಿದರು. ಕೆಂಗೇರಿ ಉಪನಗರದ ಸುರಾನ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಸಂಚಾರ ಸಂಪರ್ಕ ದಿವಸ್ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ಅಹವಾಲು ಆಲಿಸಿ ಅವರು ಮಾತನಾಡಿ, ನಗರದ ಹಲವು ಕಡೆಗಳಲ್ಲಿ ಎಲ್ಲೆಂದರಲ್ಲಿ ವಾಹನಗಳನ್ನು ಪಾರ್ಕಿಂಗ್ ಮಾಡುವುದರಿಂದ ಸಂಚಾರ ದಟ್ಟಣೆ ಉಂಟಾಗುತ್ತಿದೆ. ಹಾಗಾಗಿ ಸುಗಮ ಸಂಚಾರಕ್ಕಾಗಿ ಮತ್ತೆ ಟೋಯಿಂಗ್ ವ್ಯವಸ್ಥೆ ಜಾರಿಗೆ ತರಲು ಚರ್ಚಿಸಲಾಗುತ್ತಿದೆ. ಈ ಹಿಂದೆ ಇದ್ದ ಟೋಯಿಂಗ್ ಸಮಸ್ಯೆ ಸರಿಪಡಿಸಿ ಮತ್ತೆ ಜಾರಿಗೆ ತಂದರೆ ಸುಗಮ ಸಂಚಾರಕ್ಕೆ ಅನುವಾಗುತ್ತದೆ. ಅಲ್ಲದೆ ಎಲ್ಲೆಂದರಲ್ಲಿ ವಾಹನಗಳನ್ನು ಪಾರ್ಕಿಂಗ್ ಮಾಡುವುದನ್ನು ತಡೆಗಟ್ಟಬಹುದಾಗಿದೆ ಎಂದು ಅವರು ಹೇಳಿದರು.

ಹಗಲು ವೇಳೆ ಅನ್‌ಲೋಡಿಂಗ್ ಬೇಡ: ವಾರಾಂತ್ಯದಲ್ಲಿ ಗೂಡ್ಸ್ ವಾಹನಗಳು ಸಂಚರಿಸದಂತೆ ನಿರ್ಬಂಧ ವಿಧಿಸಿರುವ ಬಗ್ಗೆ ಸಾರ್ವಜನಿಕರೊಬ್ಬರು ಕೇಳಲಾದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಆಯುಕ್ತರು, ಹಗಲು ವೇಳೆ ಲೋಡಿಂಗ್ ಮತ್ತು ಅನ್‌ಲೋಡಿಂಗ್ ಮಾಡುವುದು ಬೇಡ. ರಾತ್ರಿ ವೇಳೆ ಅನ್‌ಲೋಡ್ ಮತ್ತು ಲೋಡ್ ಮಾಡಿಕೊಂಡರೆ ಬೆಳಗ್ಗೆ ವಾಹನಗಳ ದಟ್ಟಣೆ ಕಡಿಮೆ ಮಾಡಲು ಸಹಕಾರಿಯಾಗುತ್ತದೆ ಎಂದು ಆಯುಕ್ತರು ಸೂಚಿಸಿದರು.

ರಾತ್ರಿ ವೇಳೆ ಅನ್‌ಲೋಡ್ ಮಾಡುವಾಗ ಕೆಲವು ದುಷ್ಟ ಶಕ್ತಿಗಳು ಬಂದು ತೊಂದರೆ ಕೊಡುತ್ತಾರೆ. ಬೆಳಗಿನಜಾವ 4 ಗಂಟೆ ಸುಮಾರಿಗೆ ಬ್ಯಾಟರಾಯನಪುರ ಟಿಂಬರ್ ಯಾರ್ಡ್ ಸ್ಥಳಕ್ಕೆ ಬಂದು ಅಡ್ಡಿಪಡಿಸುತ್ತಾರೆ. ಹಾಗಾಗಿ ಈ ಭಾಗದಲ್ಲಿ ಪೊಲೀಸ್ ಗಸ್ತು ಹೆಚ್ಚಿಸಬೇಕೆಂದು ವ್ಯಕ್ತಿಯೊಬ್ಬರು ಮಾಡಿದ ಮನವಿಗೆ ಆಯುಕ್ತರು ಸ್ಪಂದಿಸಿ, ಹಾಗೇನಾದರೂ ತೊಂದರೆ ಕೊಟ್ಟರೆ ತಕ್ಷಣ 112ಗೆ ತಿಳಿಸಿ. ನಾವು ಅವರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ದೇಶದಲ್ಲಿ ರಸ್ತೆ ಅಪಘಾತ: ರಾಜ್ಯಕ್ಕೆ 5ನೇ ಸ್ಥಾನ

5 ವರ್ಷಕ್ಕೆ 7.77 ಲಕ್ಷ ಸಾವು

ದೆಹಲಿ: ರಸ್ತೆ ಅಪಘಾತಗಳ ವಿಚಾರದಲ್ಲಿ ಭಾರತದ ಪರಿಸ್ಥಿತಿ ತೀವ್ರ ಕಳವಳಕಾರಿಯಾಗಿದೆ. ಕಳೆದ 5 ವರ್ಷಗಳಲ್ಲಿ ಭಾರತದಲ್ಲಿ ಜರುಗಿದ ರಸ್ತೆ ಅಪಘಾತಗಳಲ್ಲಿ ಒಟ್ಟು 7.77 ಲಕ್ಷಕ್ಕೂ ಅಧಿಕ ಮಂದಿ ಸಾವಿಗೀಡಾಗಿದ್ದಾರೆ.

2018-22ರ ನಡುವಿನ ರಸ್ತೆ ಅಪಘಾತದ ಸಾವುಗಳ ಅಂಕಿ ಅಂಶ ಬಹಳ ಆತಂಕಕಾರಿಯಾಗಿದೆ. ರಸ್ತೆ ಅಪಘಾತಗಳಲ್ಲಿ ಅತೀ ಹೆಚ್ಚು ಸಾವು ಸಂಭವಿಸಿದ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ 5ನೇ ಸ್ಥಾನದಲ್ಲಿದೆ.



2018-22ರ ನಡುವಿನ ಅವಧಿಯಲ್ಲಿ ದೇಶದಲ್ಲಿ ರಸ್ತೆ ಅಪಘಾತಗಳಲ್ಲಿ 7.77 ಲಕ್ಷಕ್ಕೂ ಹೆಚ್ಚು ಸಾವಾಗಿದೆ. ಉತ್ತರ ಪ್ರದೇಶ, ಮಹಾರಾಷ್ಟ್ರ ಮತ್ತು ತಮಿಳುನಾಡು ಅತಿ ಹೆಚ್ಚು ರಸ್ತೆ ಅಪಘಾತಗಳಿಗೆ ಸಾಕ್ಷಿಯಾಗಿವೆ. ಈ ಸಾಲಿನಲ್ಲಿ ಮಧ್ಯಪ್ರದೇಶ 4ನೇ ಮತ್ತು ಕರ್ನಾಟಕ 5ನೇ ಸ್ಥಾನದಲ್ಲಿವೆ. ಮಧ್ಯಪ್ರದೇಶದಲ್ಲಿನ ರಸ್ತೆ ಅಪಘಾತಗಳಲ್ಲಿ 5 ವರ್ಷದಲ್ಲಿ 58,580 ಸಾವು ಉಂಟಾಗಿದ್ದರೆ, ಕರ್ನಾಟಕದಲ್ಲಿ 53,448 ಸಾವು ವರದಿಯಾಗಿವೆ ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಶನಿವಾರ ಅಂಕಿ ಅಂಶ ಪ್ರಕಟಿಸಿದೆ.

ದೇಶದಲ್ಲಿನ ಒಟ್ಟು ರಸ್ತೆ ಅಪಘಾತಗಳಲ್ಲಿನ ಸಾವುಗಳ ಸಂಖ್ಯೆ 2021ರಲ್ಲಿ 1,53,972 ಇದ್ದುದು, 2022ರಲ್ಲಿ 1,68,491 ಕ್ಕೆ ಏರಿಕೆಯಾಗಿದೆ.

5 ವರ್ಷದಲ್ಲಿ ರಸ್ತೆ ಅಪಘಾತ ಸಾವು

ರಾಜ್ಯ	ಸಾವಿನ ಸಂಖ್ಯೆ
ಉತ್ತರ ಪ್ರದೇಶ	1,08,882
ತಮಿಳುನಾಡು	84,316
ಮಹಾರಾಷ್ಟ್ರ	66,370
ಮಧ್ಯಪ್ರದೇಶ	58,580
ಕರ್ನಾಟಕ	53,448
ರಾಜಸ್ಥಾನ	51,280
ಆಂಧ್ರಪ್ರದೇಶ	39,058
ಬಿಹಾರ	36,191
ತೆಲಂಗಾಣ	35,565
ಗುಜರಾತ್	36,626

2022 ಕರಾಳ ವರ್ಷ

2022ರಲ್ಲಿ ರಸ್ತೆ ಅಪಘಾತಗಳಲ್ಲಿ ಉತ್ತರ ಪ್ರದೇಶದಲ್ಲಿ 22,595 ಸಾವಾಗಿದ್ದು, ಅತಿ ಹೆಚ್ಚು ರಸ್ತೆ ಅಪಘಾತದ ಸಾವು ದಾಖಲಿಸಿದ ರಾಜ್ಯ ಎಂಬ ಕುಖ್ಯಾತಿಗೆ ಪಾತ್ರವಾಗಿದೆ. ಇದೇ ವರ್ಷ ಮಹಾರಾಷ್ಟ್ರದಲ್ಲಿ 15,224, ತಮಿಳುನಾಡಲ್ಲಿ 17,884 ರಸ್ತೆ ಅಪಘಾತದ ಸಾವುಗಳಾಗಿವೆ.

ರಸ್ತೆ ಅಪಘಾತಗಳ ಕುರಿತಾದ ಅಂತಾರಾಷ್ಟ್ರೀಯ ಸಮ್ಮೇಳನಗಳಿಗೆ ಭಾರತದ ಪರವಾಗಿ ಹಾಜರಾಗಲು ಮುಜುಗರವಾಗುತ್ತದೆ. ಅಪಘಾತಗಳನ್ನು ಶೇ.50ರಷ್ಟು ಕಡಿಮೆ ಮಾಡುವ ಗುರಿ ಹೊಂದಲಾಗಿತ್ತು. ಆದರೆ, ಭಾರತದಲ್ಲಿ ರಸ್ತೆ ಅಪಘಾತಗಳು ಹೆಚ್ಚುತ್ತಲೇ ಇವೆ. ಮಾನವ ನಡವಳಿಕೆ ಮತ್ತು ಸಾಮಾಜಿಕ ಮಾನದಂಡಗಳಲ್ಲಿ ಬದಲಾವಣೆಯ ಅಗತ್ಯವಿದೆ. ರಸ್ತೆ ಸುರಕ್ಷತೆ ಸುಧಾರಿಸಲು ಜನತೆ ಕಾನೂನು ಬಗ್ಗೆ ಗೌರವ ಬೆಳೆಸಿಕೊಳ್ಳಬೇಕು.

-ನಿತಿನ್ ಗಡ್ಕರಿ, ಕೇಂದ್ರ ರಸ್ತೆ ಸಾರಿಗೆ ಸಚಿವ

ಹೆಚ್ಚಿನ ರಸ್ತೆ ಅಪಘಾತಗಳಿಗೆ ಅತಿ ವೇಗ, ವಾಹನ ಚಾಲನೆ ವೇಳೆ ಮೊಬೈಲ್ ಫೋನ್ ಬಳಕೆ, ಮದ್ಯಪಾನ ಮಾಡಿ ವಾಹನ ಚಲಾಯಿಸುವುದು ಮತ್ತು ಚಾಲಕರ ಅಶಿಸ್ತಿನ ಚಾಲನೆಯೇ ಹೆಚ್ಚು ಕಾರಣಗಳಾಗಿವೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಶೇಷಾದ್ರಿಪುರಂನಲ್ಲಿ ನಡೆದ ಪವನ್ ಆಂಗ್ಲ ಶಾಲೆ ಮತ್ತು ಕಾಲೇಜಿನ 44ನೇ ವಾರ್ಷಿಕ ಮಹೋತ್ಸವವನ್ನು ಪವನ್ ಶಾಲೆ ಸಂಸ್ಥಾಪಕಿ ಡಾ.ಪ್ರಭಾ ಶ್ರೀಧರ್, ಕ್ಷೇತ್ರ ಶಿಕ್ಷಣಾಧಿಕಾರಿ ರಘುಚಂದ್ರ, ಕ್ಷೇತ್ರ ಸಮನ್ವಯ ಅಧಿಕಾರಿ ಶೈಲಾ, ಎಜಿಎಸ್ ಶಿಕ್ಷಣ ಸಂಸ್ಥೆ ಸಂಸ್ಥಾಪಕ ಡಾ.ಅಂಬರೀಶ್, ಜನಸಿರಿ ಫೌಂಡೇಶನ್ ನಾಗಲೇಖ ಅವರು ಉದ್ಘಾಟಿಸಿದರು.

ಬಿಜೆಪಿ ವಿರುದ್ಧ ರಾವತ್ ತರಾಟೆ

ಮುಂಬೈ: ಮಹಾರಾಷ್ಟ್ರದಲ್ಲಿ ಬಿಜೆಪಿ ನೇತೃತ್ವದ ಮಹಾಯುತಿ ಮೈತ್ರಿಕೂಟವನ್ನು ಇಂದು ತರಾಟೆಗೆ ತೆಗೆದುಕೊಂಡ ಶಿವಸೇನೆ (ಉದ್ಧವ್ ಬಣ) ನಾಯಕ ಸಂಜಯ್ ರಾವತ್ ಅವರು ಎಲೆಕ್ಟ್ರಾನಿಕ್ ಮತ ಯಂತ್ರಗಳ ಮೆರವಣಿಗೆ ನಡೆಸಿ, ಇವಿಎಂ ಮಂದಿರ ನಿರ್ಮಿಸುವ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ. ನಾಗ್ಪುರದ ಆರ್‌ಎಸ್‌ಎಸ್ ಕೇಂದ್ರ ಕಚೇರಿಯ ಮುಂಭಾಗದಲ್ಲಿ ಇವಿಎಂ ಮಂದಿರ ನಿರ್ಮಾಣ ಕುರಿತು ಮೊದಲ ಸಂಪುಟ ಸಭೆಯಲ್ಲಿ ಘೋಷಿಸಬೇಕು ಎಂದು ಒತ್ತಾಯಿಸಿದ್ದಾರೆ.

ಚಾಲಕನಿಂದಲೇ 50 ಲಕ್ಷ ಕಳವು

ಬೆಂಗಳೂರು: ರಿಯಲ್ ಎಸ್ಟೇಟ್ ಉದ್ಯಮಿಯೊಬ್ಬರಿಗೆ ಸೇರಿದ 50 ಲಕ್ಷ ರು. ಹಣವನ್ನು ಅವರ ಕಾರು ಚಾಲಕನೇ ಕಳವು ಮಾಡಿಕೊಂಡು ಪರಾರಿಯಾಗಿರುವ ಘಟನೆ ಕೋರಮಂಗಲ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಕೋರಮಂಗಲದ ರಿಯಲ್ ಎಸ್ಟೇಟ್ ಉದ್ಯಮಿ ಸುಬ್ಬಾರೆಡ್ಡಿ ಬಳಿ ಕಳೆದ 8 ತಿಂಗಳಿನಿಂದ ಕಾರು ಚಾಲಕನಾಗಿ ಕೆಲಸ ಮಾಡಿಕೊಂಡಿದ್ದ ರಕ್ಷಿತ್ ಕುಮಾರ್ ಎಂಬಾತ 50 ಲಕ್ಷ ರು.ಗಳೊಂದಿಗೆ ನಾಪತ್ತೆಯಾಗಿದ್ದಾನೆ. ಸುಬ್ಬಾರೆಡ್ಡಿ ಅವರು ವ್ಯವಹಾರದ ನಿಮಿತ್ತ ತಮ್ಮ ಸ್ನೇಹಿತರಿಂದ 50 ಲಕ್ಷ ಹಣ ಸಂಗ್ರಹಿಸಿ ಕಾರಿನಲ್ಲಿಟ್ಟು ಶುಕ್ರವಾರ ಮಧ್ಯಾಹ್ನ ಮನೆಗೆ ಊಟಕ್ಕೆ ಹೋಗಿದ್ದಾರೆ. ಇದೇ ಸಮಯಕ್ಕಾಗಿ ಕಾಯುತ್ತಿದ್ದ ಅವರ ಕಾರು ಚಾಲಕ ರಕ್ಷಿತ್ ಕುಮಾರ್ ಬ್ಯಾಗ್ ತೆಗೆದುಕೊಂಡು ಕಾರಿನ ಕೀಯನ್ನು ಉದ್ಯಮಿ ಮನೆಯ ಸೆಕ್ಯೂರಿಟಿ ಗಾರ್ಡ್ ಕೈಗೆ ಕೊಟ್ಟು ಪರಾರಿಯಾಗಿದ್ದಾನೆ. ಕೆಲ ಸಮಯದ ಬಳಿಕ ಸುಬ್ಬಾರೆಡ್ಡಿ ಅವರು ಕಾರಿನ ಬಳಿ ಬಂದಾಗ ಚಾಲಕ ಇಲ್ಲದಿರುವ ಬಗ್ಗೆ ಸೆಕ್ಯೂರಿಟಿ ಗಾರ್ಡ್ ತಿಳಿಸಿದ್ದಾರೆ.

ತಕ್ಷಣ ಕಾರಿನಲ್ಲಿ ನೋಡಿದಾಗ 50 ಲಕ್ಷ ಹಣ ಇದ್ದ ಬ್ಯಾಗ್ ಇಲ್ಲದಿರುವುದು ಗೊತ್ತಾಗಿದೆ. ಕೂಡಲೇ ಸುಬ್ಬಾರೆಡ್ಡಿ ಅವರ ಕೋರಮಂಗಲ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಕೈಗೊಂಡಿದ್ದು, ಆರೋಪಿಯ ಸುಳಿವು ಪತ್ತೆ ಹಚ್ಚಿದ್ದು, ಶೀಘ್ರದಲ್ಲೆ ಬಂಧಿಸಲಿದ್ದಾರೆ.

ಕ್ಷಮೆಯಾಚನೆ

ಬೆಂಗಳೂರು: ಪ್ರಕರಣದಲ್ಲಿ ನಾವು ಆರೋಪಿಗಳಾಗಿದ್ದು ನಾವು ಹವಾಮಾನ ತಜ್ಞರು ಮತ್ತು ವೈಜ್ಞಾನಿಕ ಬರಹಗಾರರಾಗಿರುತ್ತೇವೆ. ಸಾರ್ವಜನಿಕ ಹಿತದೃಷ್ಟಿಯಿಂದ ಪತ್ರಿಕೆಯೊಂದರಲ್ಲಿ 27/05/2020ರಂದು ವಾಚಕರವಾಣಿ ವಿಭಾಗದಲ್ಲಿ ದೂರುದಾರರಾದ ಡಾ.ಎಚ್.ಎಸ್.ಎಂ. ಪ್ರಕಾಶ್ ಅವರ ಹವಾಮಾನ ಸಂಬಂಧ ಹೇಳಿಕೆಗೆ ಒಂದು ಪ್ರತಿಕ್ರಿಯಾತ್ಮಕ ಅಭಿಪ್ರಾಯ ತಿಳಿಸಿ ಇವರ ಕುರಿತು ಯಾವುದೇ ದುರುದ್ದೇಶವಿಲ್ಲದೆ ಬುರುಡೆ ಬಾಬಾ ಎಂಬ ಶಬ್ದ ಬಳಸಿದ್ದೆವು. ಇದರಿಂದ ದೂರುದಾರರಾಗಿ ನೋವಾಗಿದೆ ಎಂದು ದೂರುದಾರರು ನಮ್ಮಗಳ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿರುತ್ತಾರೆ. ಆದ್ದರಿಂದ ನ್ಯಾಯಾಲಯದ ಸಮಕ್ಷಮ ನಾವು ಬಳಸಿರುವ ಶಬ್ಧ ತಪ್ಪು ಎಂದು ಅರಿವಾಗಿ ಎ-2 ನಾಗೇಶ್ ಹೆಗಡೆ ಅವರನ್ನು ಬಿಟ್ಟು ಈ ಮೂಲಕ ಕ್ಷಮೆಯಾಚಿಸುತ್ತಿದ್ದೇವೆ ಮತ್ತು ದೂರುದಾರ ಎಚ್.ಎಸ್.ಎಂ.ಪ್ರಕಾಶ್ ಅವರ ಕೋರಿಕೆ ಮೇರೆಗೆ ನಾವು 2 ಲಕ್ಷ ರು.ಗಳನ್ನು ಡಿ.30ರೊಳಗೆ ಪಾವತಿಸಲು ಒಪ್ಪಿರುತ್ತೇವೆ. ಎ2 ನಾಗೇಶ್ ಹೆಗಡೆ ಅವರನ್ನು ಹೊರತುಪಡಿಸಿ ಈ ಜಂಟಿ ಮೆಮೋಗೆ ನ್ಯಾಯಾಲಯದ ಸಮಕ್ಷಮ ಸಹಿ ಮಾಡಲಾಗಿದೆ ಎಂದು ಪ್ರಕರಣದಲ್ಲಿ ಎ1 ವೆಂಕಟಸ್ವಾಮಿ, ಎ3 ಟಿ.ಆರ್.ಅನಂತರಾಮು, ಎ4 ಡಾ.ಜಿ.ಎಸ್.ಶ್ರೀನಿವಾಸ ರೆಡ್ಡಿ, ಎ5 ಡಾ.ವಿ.ಎಸ್.ಪ್ರಕಾಶ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶೇ.50 ಮೀಸಲು ಮಿತಿ ಗೋಡೆ ತೆಗೆಯುತ್ತೇವೆ: ಲೋಕಸಭೆಯಲ್ಲಿ ರಾಹುಲ್ ವಾಗ್ದಾಳಿ

ನಿಮ್ಮ ಆದ್ಯತೆ ಮನುಸ್ಮೃತಿಯೊ-ಸಂವಿಧಾನವೋ?

ದೆಹಲಿ: ಭಾರತದ ಆಡಳಿತ ವ್ಯವಸ್ಥೆ ಮನುಸ್ಮೃತಿಯನ್ನೇ ಪಾಲಿಸಬೇಕು ಎಂದು ವೀರ ಸಾವರ್ಕರ್ ಹೇಳಿದ್ದರು. ಸಾವರ್ಕರ್ ನೀತಿ ಅನುಸರಿಸುವ ಬಿಜೆಪಿ ನಾಯಕರು ಈಗ ಸಂವಿಧಾನದ ಬಗ್ಗೆ ಮಾತನಾಡುತ್ತಿದ್ದಾರೆ. ಅವರು ಸಂವಿಧಾನದ ಪರವೋ, ಮನುಸ್ಮೃತಿ ಪರವೋ? ಬಿಜೆಪಿ ಇದನ್ನು ಸ್ಪಷ್ಟಪಡಿಸಬೇಕು ಎಂದು ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಎನ್‌ಡಿಎ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಸಂವಿಧಾನ ಜಾರಿಯಾದ 75ನೇ ವರ್ಷದ ಹಿನ್ನೆಲೆ ಲೋಕಸಭೆಯಲ್ಲಿನ ವಿಶೇಷ ಚರ್ಚೆಯಲ್ಲಿ ಭಾಗಿಯಾದ ರಾಹುಲ್, ಪ್ರಾಚೀನ ಭಾರತ ಹೇಗೆ ನಡೆಯುತ್ತಿತ್ತೋ ಹಾಗೆಯೇ ಈಗಲೂ ನಡೆಸಲು ಬಿಜೆಪಿ ನಾಯಕರು ಬಯಸುತ್ತಾರೆ. ಕೀಳುಜಾತಿಯವನೆಂಬ ಕಾರಣಕ್ಕೆ ಏಕಲವ್ಯನಿಗೆ ವಿದ್ಯೆಯನ್ನೇ ಕಲಿಸದ ದ್ರೋಣಾಚಾರ್ಯರು, ಗುರುದಕ್ಷಿಣೆಯಾಗಿ ಶಿಷ್ಯನ ಹೆಬ್ಬೆರಳು ಪಡೆದರು. ಬಿಜೆಪಿಯೂ ಹಾಗೆಯೇ ಮಾಡುತ್ತಿದೆ ಎಂದು ಕಿಡಿಕಾರಿದರು.



ಅಗ್ನಿವೀರ್, ಪೇಪರ್ ಲೀಕ್ ಮೂಲಕ ಬಿಜೆಪಿಯೂ ಭಾರತದ ಯುವಕರ ಹೆಬ್ಬೆರಳನ್ನು ಕತ್ತರಿಸಿದೆ, ಬೆಂಬಲ ಬೆಲೆ ಕೇಳುವ ರೈತರ ಮೇಲೆ ಅಶ್ರುವಾಯು ಪ್ರಯೋಗಿಸಿ ಅವರ ಹೆಬ್ಬೆರಳು ಕತ್ತರಿಸುತ್ತಿದೆ. ಸಂವಿಧಾನದಲ್ಲಿ ಜನರ ಬೆರಳು ಕತ್ತರಿಸಿ ಅವರ ಹಕ್ಕು ಕಿತ್ತುಕೊಳ್ಳಿ ಎಂದು ಹೇಳಿಲ್ಲ. ಆದರೆ ನೀವು ಅದನ್ನೇ ಮಾಡುತ್ತಿರುವಿರಿ ಎಂದು ಆರೋಪಿಸಿದರು.

ಜಾತಿ, ಧರ್ಮದ ಹೆಸರಲ್ಲಿ ತಾರತಮ್ಯ ಸಲ್ಲ ಎಂದು ಸಂವಿಧಾನ ಹೇಳಿದೆ. ಆದರೆ ನೀವು ಹೋದಲ್ಲೆಲ್ಲಾ ಧರ್ಮಗಳ ನಡುವೆ ಜಗಳ ಹಚ್ಚುತ್ತಿದ್ದೀರಿ. ದ್ವೇಷ ಬೆಳೆಸುತ್ತಿದ್ದೀರಿ, ದಲಿತ ಕುಟುಂಬಗಳನ್ನು ಮನೆಯಲ್ಲಿ ಕೂಡಿ ಹಾಕಿದ್ದೀರಿ ಎಂದು ವಾಗ್ದಾಳಿ ನಡೆಸಿದರು. ರಾಜಕೀಯ, ಸಾಮಾಜಿಕ, ಆರ್ಥಿಕ ಸಮಾನತೆಗಾಗಿ ಜಾತಿ ಗಣತಿಗೆ ನಿರ್ಧರಿಸಿದ್ದೇವೆ. ಶೇ.50ರ ಮೀಸಲು ಮಿತಿ ಗೋಡೆ ಒಡೆದು ಹಾಕಲಿದ್ದೇವೆ. ಅದರಿಂದ ದೇಶದಲ್ಲಿ ಹೊಸಬಗೆ ಅಭಿವೃದ್ಧಿಯಾಗಲಿದೆ. ಹೊಸ ರೀತಿ ರಾಜಕೀಯ ಶುರುವಾಗಲಿದೆ ಎಂದು ರಾಹುಲ್ ಗಾಂಧಿ ಪ್ರತಿಪಾದಿಸಿದರು.

ಕ್ಷಮೆ ಯಾಚಿಸಿ: ಸದನದಲ್ಲಿ ಸಂವಿಧಾನವನ್ನು ತಪ್ಪಾಗಿ ಉಲ್ಲೇಖಿಸಿದ್ದಾರೆಂದು ರಾಹುಲ್ ಗಾಂಧಿಯನ್ನು ಬಿಜೆಪಿ ಸಂಸದ ಅನುರಾಗ್ ಠಾಕೂರ್ ಆಕ್ಷೇಪ ವ್ಯಕ್ತಪಡಿಸಿದ್ದು, ಕ್ಷಮೆ ಯಾಚಿಸಬೇಕೆಂದು ಒತ್ತಾಯಿಸಿದರು. ಸಂವಿಧಾನದ ಬಗ್ಗೆ ಸರಿಯಾಗಿ ತಿಳಿದು ಮಾತನಾಡಿ. 1975ರಲ್ಲಿ ತುರ್ತು ಪರಿಸ್ಥಿತಿ ಹೇರುವ ಮೂಲಕ ಸಂವಿಧಾನವನ್ನು ಜಾರಿಯಲ್ಲಿಲ್ಲದಂತೆ ಮಾಡಿದ್ದೇ ಕಾಂಗ್ರೆಸ್. ಅಂತಹ ತುರ್ತುಪರಿಸ್ಥಿತಿಯನ್ನು ಕೊನೆಗೊಳಿಸಿದ್ದು ಇದೇ ಸಂವಿಧಾನ ಎಂದು ಠಾಕೂರ್, ರಾಹುಲ್ ಗಾಂಧಿಯನ್ನು ತರಾಟೆಗೆ ತೆಗೆದುಕೊಂಡರು.

ರಾಹುಲ್ ಮಾತಿಗೆ ನಕ್ಕ ಸದನ!

ಏಕಲವ್ಯನ ಬಗ್ಗೆ ಮಾತನಾಡುತ್ತಿದ್ದ ರಾಹುಲ್ ಗಾಂಧಿ, ಅಲ್ಲಿ ಒಬ್ಬ ಹುಡುಗ ತಪಸ್ಸು ಮಾಡಿದ. ಬೆಳಿಗ್ಗೆ ಬೇಗನೆ ಎದ್ದು ಬಿಲ್ಲು ಮತ್ತು ಬಾಣದೊಂದಿಗೆ ಅಭ್ಯಾಸ ಮಾಡುತ್ತಿದ್ದ. 'ತಪಸ್ಯ (ತಪಸ್ಸು) ಎಂದರೆ ದೇಹದಲ್ಲಿ ಉಷ್ಣತೆಯನ್ನು ಸೃಷ್ಟಿಸುವುದು' ಎಂದು ಹೇಳುವ ಮೂಲಕ ಸದನ ನಗೆಗಡಲಲ್ಲಿ ತೇಲುವಂತೆ ಮಾಡಿದರು. ಪ್ರತಿಪಕ್ಷ ನಾಯಕನ ಮಾತಿಗೆ ಆಡಳಿತ ಪಕ್ಷದವರು ಜೋರು ನಗೆಯ ಹುಯಿಲೆಬ್ಬಿಸಿದರು.

[CMYK colour bars]

ಸಮಾಚಾರ ಸಣ್ಣದಲ್ಲ

ಕ್ರಿಕೆಟ್‌ಗೆ ಮತ್ತೆ ಅಮೀರ್ ವಿದಾಯ

ಇಸ್ಲಾಮಾಬಾದ್: ಪಾಕಿಸ್ತಾನ ಕ್ರಿಕೆಟ್ ತಂಡದ ಪೇಸ್ ಬೌಲರ್ ಮೊಹಮ್ಮದ್ ಅಮೀರ್ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಮತ್ತೆ ನಿವೃತ್ತಿ ಘೋಷಣೆ ಮಾಡಿದ್ದಾರೆ. ಆಲ್ ರೌಂಡರ್ ಇಮಾದ್ ವಾಸಿಮ್ ನಿವೃತ್ತಿ ಘೋಷಣೆ ಮಾಡಿದ ಮರುದಿನವೇ ಮೊಹಮ್ಮದ್ ಅಮೀರ್ ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ. 2009ರಲ್ಲಿ



ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. ಈ ಹಿಂದೆ ಒಮ್ಮೆ ಕ್ರಿಕೆಟ್‌ಗೆ ವಿದಾಯ ಹೇಳಿ ಮತ್ತೆ ಆಟ ಮುಂದು ವರಿಸಿದ್ದರು. ಆದರೆ ಈಗ ಮತ್ತೊಮ್ಮೆ ನಿವೃತ್ತಿ ಘೋಷಣೆ ಮಾಡಿದ್ದಾರೆ. ಇಲ್ಲಿವರೆಗೆ ಮೀರ್ 36 ಟೆಸ್ಟ್ ಪಂದ್ಯಗಳನ್ನು ಆಡಿದ್ದು 119 ವಿಕೆಟ್‌ಗಳನ್ನು ಪಡೆದಿದ್ದಾರೆ. 44 ರನ್‌ಗೆ 6 ವಿಕೆಟ್ ಪಡೆದಿರುವುದು ಅವರ ಟೆಸ್ಟ್ ಬೆಸ್ಟ್ ಬೌಲಿಂಗ್ ಸಾಧನೆ ಆಗಿದೆ. 61 ಏಕದಿನ ಪಂದ್ಯಗಳನ್ನು ಆಡಿದ್ದು 81 ವಿಕೆಟ್‌ಗಳನ್ನು ಪಡೆದಿದ್ದು, 30 ರನ್‌ಗೆ 5 ವಿಕೆಟ್ ಪಡೆದಿರುವುದು ಉತ್ತಮ ಸಾಧನೆ ಆಗಿದೆ. 32 ಟಿ20 ಪಂದ್ಯಗಳನ್ನು ಆಡಿದ್ದು 71 ವಿಕೆಟ್ ಉರುಳಿಸಿದ್ದಾರೆ, 13 ರನ್‌ಗೆ 4 ವಿಕೆಟ್ ಪಡೆದಿರುವುದು ಅವರ ಟಿ20 ಕ್ರಿಕೆಟ್ ಜೀವನದ ಬೆಸ್ಟ್ ಬೌಲಿಂಗ್ ಆಗಿದೆ. 2017ರ ಚಾಂಪಿಯನ್ ಟ್ರೋಫಿ ಫೈನಲ್ ಪಂದ್ಯದಲ್ಲಿ ಭಾರತ ಜೊತೆ ಉತ್ತಮ ಬೌಲಿಂಗ್ ಮಾಡಿದ್ದ ಅಮೀರ್ 16 ರನ್‌ಗೆ 3 ವಿಕೆಟ್ ಪಡೆದು ತಂಡದ ಗೆಲುವುಗೆ ಕಾರಣರಾಗಿದ್ದರು.

ಪಾಕ್ ಹಿಂದೆ ಸರಿದರೆ ಆರ್ಥಿಕ ನಷ್ಟ

ಕರಾಚಿ: ಮುಂದಿನ ವರ್ಷ ಫೆಬ್ರವರಿ-ಮಾರ್ಚ್‌ನಲ್ಲಿ ನಿಗದಿಯಾಗಿರುವ ಐಸಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಿಂದ ಹಿಂದೆ ಸರಿಯಲು ನಿರ್ಧರಿಸಿದರೆ ಪಾಕಿಸ್ತಾನ ಕ್ರಿಕೆಟ್ ಮಂಡಳಿಯು(ಪಿಸಿಬಿ) ಭಾರೀ ಆರ್ಥಿಕ ನಷ್ಟವನ್ನು ಎದುರಿಸುವ ಸಾಧ್ಯತೆಯಿದೆ ಎಂದು ಪಿಸಿಬಿ ಆಡಳಿತಾಧಿಕಾರಿಯೊಬ್ಬರು ತಿಳಿಸಿದ್ದಾರೆ. ಈ ಬಗ್ಗೆ ಸುದ್ದಿಸಂಸ್ಥೆಯೊಂದಕ್ಕೆ ಮಾಹಿತಿ ನೀಡಿರುವ ಅವರು, ಐಸಿಸಿ ಮತ್ತು ಬಿಸಿಸಿಐ ಸೂಚಿಸಿರುವ ಹೈಬ್ರಿಡ್ ಮಾದರಿಯನ್ನು ಒಪ್ಪಿಕೊಳ್ಳದಿದ್ದರೆ, ಟೂರ್ನಿಯಿಂದ ಪಿಸಿಬಿ ಹೊರಬರುವುದು ಸುಲಭದ ಮಾತಲ್ಲ. ಪಾಕಿಸ್ತಾನವು ಕೇವಲ ಐಸಿಸಿ ಜೊತೆ ಒಪ್ಪಂದಕ್ಕೆ ಸಹಿ ಹಾಕಿಲ್ಲ, ಟೂರ್ನಿಯಲ್ಲಿ ಭಾಗವಹಿಸುವ ಇತರ ರಾಷ್ಟ್ರಗಳಂತೆ ಐಸಿಸಿಯೊಂದಿಗೆ ಕಡ್ಡಾಯ ಸದಸ್ಯರ ಭಾಗವಹಿಸುವಿಕೆ ಒಪ್ಪಂದಕ್ಕೆ (ಎಂಪಿಎ)ಸಹಿ ಹಾಕಿದೆ ಎಂದಿದ್ದಾರೆ. ಆದರೆ ಪಂದ್ಯಾವಳಿಯಿಂದ ಪಾಕಿಸ್ತಾನ ಹಿಂದಕ್ಕೆ ಸರಿದರೆ ಪಿಸಿಬಿಗೆ ಕಾನೂನು ತೊಡಕಿನ ಜೊತೆಗೆ ಆರ್ಥಿಕತೆಯ ಮೇಲೆಯೂ ಪ್ರತಿಕೂಲ ಪರಿಣಾಮ ಬೀರಲಿದೆ ಎಂದೂ ಅವರು ಎಚ್ಚರಿಸಿದ್ದಾರೆ.

ಭಾರತ-ಆಸ್ಟ್ರೇಲಿಯಾ ಮೂರನೇ ಟೆಸ್ಟ್ | ಇನ್ನಿಂಗ್ಸ್ ಆರಂಭದಲ್ಲೇ ಆಟಕ್ಕೆ ವರುಣನ ಕಾಟ

ಕೇವಲ 13.2 ಓವರ್‌ಗೆ ಮೊದಲ ದಿನದಾಟ ಮುಕ್ತಾಯ

ಬ್ರಿಸ್ಬೇನ್: ಇಲ್ಲಿನ ಗಾಬಾ ಮೈದಾನದಲ್ಲಿ ಶನಿವಾರ ಆರಂಭಗೊಂಡ ಭಾರತ-ಆಸೀಸ್ ನಡುವಿನ ಗವಾಸ್ಕರ್-ಬಾರ್ಡರ್ ಟ್ರೋಫಿಯ ಮೂರನೇ ಟೆಸ್ಟ್ ಪಂದ್ಯದಲ್ಲಿ ಟಾಸ್ ಗೆದ್ದ ಭಾರತ ತಂಡವು ಬೌಲಿಂಗ್ ಆಯ್ದುಕೊಂಡಿತು. ಆದರೆ ಬೆಳಿಗ್ಗೆಯೇ ಎರಡು ಬಾರಿ ಸುರಿದ ಭಾರೀ ಮಳೆಯು ಪಂದ್ಯಕ್ಕೆ ಅಡಚಣೆ ಉಂಟು ಮಾಡಿತು. ಚಹಾ ವಿರಾಮ ಮತ್ತು ಭೋಜನ ವಿರಾಮದ ತನಕ ಕಾದರೂ ಮಳೆ ಬಿಡುವು ಕೊಡಲಿಲ್ಲ, ಹೀಗಾಗಿ ಬ್ಯಾಟಿಂಗ್ ಆರಂಭಿಸಿದ ಆಸ್ಟ್ರೇಲಿಯಾ ತಂಡವು ಕೇವಲ 13.2 ಓವರ್ ಆಟವಾಡಿ 28 ರನ್ ಗಳಿಸಿದಾಗ ಮೊದಲ ದಿನದ ಆಟವನ್ನು ನಿಲ್ಲಿಸಬೇಕಾಯಿತು.

47 ಬಾಲ್‌ಗಳನ್ನು ಎದುರಿಸಿದ ಆಸೀಸ್ ತಂಡದ ಆರಂಭಿಕ ಆಟರಾಗರ ನಾಥನ್ ಮೆಕ್‌ಸ್ವೀನಿ (4 ನಾಟೌಟ್) ಮತ್ತು 33 ಬಾಲ್‌ಗಳನ್ನು ಎದುರಿಸಿದ ಉಸ್ಮಾನ್ ಖವಾಜ(19 ನಾಟೌಟ್) ಕ್ರೀಸ್‌ನಲ್ಲಿದ್ದಾರೆ. ಭಾರತದ ಪರವಾಗಿ ಬೂಮ್ರಾ 6 ಓವರ್‌ಗಳನ್ನು, ಮೊಹಮ್ಮದ್ ಸಿರಾಜ್ 4 ಓವರ್‌ಗಳನ್ನು ಹಾಗೂ ಆಕಾಶ್ ದೀಪ್ 3.2 ಓವರ್‌ಗಳನ್ನು ಎಸೆದರೂ ಆಸ್ಟ್ರೇಲಿಯಾ ತಂಡದ ಆರಂಭಿಕ ಜೋಡಿಯನ್ನು ಬೇರ್ಪಡಿಸುವಲ್ಲಿ ವಿಫಲರಾದರು.

ಭಾರತ ಕ್ರಿಕೆಟ್ ತಂಡವು ಈ ಪಂದ್ಯಕ್ಕೆ ತನ್ನ ತಂಡದಲ್ಲಿ ಎರಡು ಬದಲಾವಣೆ ಮಾಡಿತು. ಆರ್.ಅಶ್ವಿನ್ ಮತ್ತು ಹರ್ಷಿತ್ ರಾಣಾ ಅವರನ್ನು ಕೈಬಿಟ್ಟು ಆಕಾಶ್ ದೀಪ್ ಮತ್ತು ರವೀಂದ್ರ ಜಡೇಜಾಗೆ ಅವಕಾಶ ನೀಡಲಾಯಿತು. ಆಸ್ಟ್ರೇಲಿಯಾ ಪರವಾಗಿ ಗಾಯದಿಂದ



ದ್ವಿತೀಯ ಪಂದ್ಯವನ್ನಾಡದ ವೇಗಿ ಜೋಶ್ ಹ್ಯಾಜಲ್‌ವುಡ್ ಈ ಮೂರನೇ ಪಂದ್ಯದಲ್ಲಿ ಮತ್ತೆ ಕಣಕ್ಕಿಳಿದರು, ಅವರಿಗಾಗಿ ಸ್ಕಾಟ್ ಬೋಲ್ಯಾಂಡ್ ಜಾಗ ತೆರವು ಮಾಡಿಕೊಟ್ಟರು.

ಪರ್ತ್ ಮೈದಾನದಲ್ಲಿ ನಡೆದ ಮೊದಲ ಪಂದ್ಯದಲ್ಲಿ 295 ರನ್‌ಗಳಿಂದ ಗೆಲುವು ಸಾಧಿಸಿದ್ದ ಭಾರತ ತಂಡವು ಎರಡನೇ ಟೆಸ್ಟ್‌ನಲ್ಲಿ ಮುಗ್ಗರಿಸಿತ್ತು, ಹಾಗಾಗಿ ಕಾಂಗರೂ ಪಡೆಯು ಆ ಪಮದ್ಯವನ್ನು 10 ವಿಕೆಟ್‌ಗಳಿಂದ ಗೆದ್ದುಕೊಂಡಿತು. ಆ ಮೂಲಕ ಟೆಸ್ಟ್ ರ್‍ಯಾಂಕಿಂಗ್ ಅಂಕಪಟ್ಟಿಯಲ್ಲಿ ಭಾರತವನ್ನು ಹಿಂದಿಕ್ಕಿತು. ಹಾಗಾಗಿ ಭಾರತ ತಂಡವು ಮೂರನೇ ಟೆಸ್ಟ್ ಗೆದ್ದು ಆಸ್ಟ್ರೇಲಿಯಾ ವಿರುದ್ಧ ಸೇಡು ತೀರಿಸಿಕೊಳ್ಳಲು ಎದುರು ನೋಡುತ್ತಿತ್ತು. ಈ ಮಧ್ಯೆ ಇನ್ನೂ ನಾಲ್ಕು ದಿನಗಳ ಕಾಲ ಬ್ರಿಸ್ಬೇನ್‌ನಲ್ಲಿ ಮಳೆ ಮುಂದುವರೆಯಲಿದೆ ಎಂದು ಹವಾಮಾನ ಇಲಾಖೆ ವರದಿ ಮಾಡಿದೆ.

ಭಾರತ ಮತ್ತು ಆಸ್ಟ್ರೇಲಿಯಾ ನಡುವಿನ ಈ ಟೆಸ್ಟ್ ಡ್ರಾಗೊಂಡರೆ, ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನ ಪಾಯಿಂಟ್ ಪಟ್ಟಿಯಲ್ಲಿ ಯಾವುದೇ ಬದಲಾವಣೆಯಾಗುವುದಿಲ್ಲ, ಆದರೆ ಭಾರತ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಪ್ರವೇಶಕ್ಕೆ ಶೇಕಡವಾರು ಗಳಿಕೆಯಲ್ಲಿ ಸ್ವಲ್ಪ ಮಟ್ಟಿಗೆ ಅಡ್ಡಿ ಆಗುವ ಸಾಧ್ಯತೆ ಹೆಚ್ಚು. ಭಾರತಕ್ಕೆ ಇಂತಹ ಪರಿಸ್ಥಿತಿಯಲ್ಲಿ ಕಾಂಗರೂ ತಂಡದ ವಿರುದ್ಧ ಮುಂದಿನ ಎರಡು ಟೆಸ್ಟ್‌ಗಳನ್ನು ಗೆಲ್ಲಲೇಬೇಕಾದ ಅನಿವಾರ್ಯತೆ ಎದುರಾಗಲಿದೆ. ಅದರ ಜೊತೆಗೆ ಇತರ ತಂಡಗಳ ಫಲಿತಾಂಶಗಳನ್ನೂ ಸಹ ಅವಲಂಬಿಸಬೇಕಾಗುತ್ತದೆ. ಒಂದು ವೇಳೆ ನಾಲ್ಕು ದಿನ ಮಳೆ ನಿಂತು ಈ ಪಂದ್ಯದಲ್ಲಿ ಭಾರತ ಗೆಲುವು ಸಾಧಿಸಿದರೆ ಎರಡನೇ ಸ್ಥಾನಕ್ಕೆ ತಲುಪಲಿದೆ. ಸದ್ಯ ವಿಶ್ವ ಟೆಸ್ಟ್ ಚಾಂಪಿಯನ್ಸ್ ಅಂಕಪಟ್ಟಿಯಲ್ಲಿ, ಮೊದಲ ಸ್ಥಾನದಲ್ಲಿ ದಕ್ಷಿಣ ಆಫ್ರಿಕಾ ತಂಡ ಇದೆ. ಹರಿಣ ಪಡೆಯು 63.33 ಶೇಕಡವಾರು ಅಂಕಗಳೊಂದಿಗೆ ಮೊದಲ ಸ್ಥಾನದಲ್ಲಿದ್ದರೆ, ಆಸ್ಟ್ರೇಲಿಯಾ 60.71 ಮತ್ತು ಭಾರತ 57.29 ಶೇಕಡವಾರು ಅಂಕದೊಂದಿಗೆ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿವೆ.

ಸ್ಕೋರ್ ವಿವರ

ಆಸ್ಟ್ರೇಲಿಯಾ ಮೊದಲ ಇನ್ನಿಂಗ್ಸ್:
ನಾಥನ್ ಮೆಕ್‌ಸ್ವೀನಿ-4 (ಅಜೇಯ)
ಉಸ್ಮಾನ್ ಖವಾಜ-19 (ಅಜೇಯ)
ಬೌಲಿಂಗ್
ಬೂಮ್ರಾ: 6-3-8-0
ಸಿರಾಜ್: 4-2-13-0
ಆಕಾಶ್ ದೀಪ್: 3.2-2-2-0



ವಿರಾಟ್ ಕೊಹ್ಲಿ ಶನಿವಾರ ಆಟದ ಮೈದಾನಕ್ಕಿಳಿಯುತ್ತಿದ್ದಂತೆ ಆಸ್ಟ್ರೇಲಿಯಾ ವಿರುದ್ಧ 100 ಅಂತಾರಾಷ್ಟ್ರೀಯ ಪಂದ್ಯಗಳನ್ನಾಡಿದ ವಿಶ್ವದ 2ನೇ ಆಟಗಾರ ಎನಿಸಿಕೊಂಡರು. ಆಸೀಸ್ ವಿರುದ್ಧ ಅತ್ಯಧಿಕ ಪಂದ್ಯವನ್ನಾಡಿದ ದಾಖಲೆ ಭಾರತದ ಮಾಜಿ ಆಟಗಾರ ಸಚಿನ್ ತೆಂಡೂಲ್ಕರ್ ಅವರ ಹೆಸರಿನಲ್ಲಿದೆ. ಸಚಿನ್ ಆಸೀಸ್ ವಿರುದ್ಧ 6,707 ರನ್ ಕಲೆಹಾಕಿದ್ದು, ವಿರಾಟ್ ಕೊಹ್ಲಿ 5,326 ರನ್ ಗಳಿಸಿದ್ದಾರೆ.

ಭಾರತದ ಬೌಲಿಂಗ್ ಆಯ್ಕೆ ನಿಜಕ್ಕೂ ಅಚ್ಚರಿ: ಅಭಿಪ್ರಾಯ ವ್ಯಕ್ತಪಡಿಸಿದ ಮ್ಯಾಥ್ಯೂ ಹೇಡನ್

ಆಸ್ಟ್ರೇಲಿಯಾ ವಿರುದ್ಧ ಮೂರನೇ ಟೆಸ್ಟ್ ಪಂದ್ಯದಲ್ಲಿ ಟಾಸ್ ಗೆದ್ದು ಬೌಲಿಂಗ್ ಆಯ್ಕೆ ಮಾಡಿಕೊಂಡ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರ ನಿರ್ಧಾರದ ಬಗ್ಗೆ ಆಸೀಸ್‌ನ ಮಾಜಿ ಆರಂಭಿಕ ಬ್ಯಾಟ್ಸ್‌ಮನ್



ಮ್ಯಾಥ್ಯೂ ಹೇಡನ್ ಅಚ್ಚರಿ ವ್ಯಕ್ತಪಡಿಸಿದ್ದಾರೆ. ಟಾಸ್ ಆದ ಬಳಿಕ ಮಾತನಾಡಿದ್ದ ರೋಹಿತ್ ಶರ್ಮಾ, ಓವರ್‌ಕಾಸ್ಟ್ ಕಂಡೀಷನ್ಸ್‌ನಲ್ಲಿ ನಮ್ಮ ಬೌಲರ್‌ಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಬೌಲಿಂಗ್ ಆಯ್ಕೆ ಮಾಡಿಕೊಂಡಿದ್ದೇನೆಂದು ಸ್ಪಷ್ಟನೆ ನೀಡಿದ್ದರು.

'ಈ ಅಂಗಣದಲ್ಲಿ ವಿಶ್ವದಾದ್ಯಂತ ಸ್ಪಿನ್ನರ್‌ಗಳು ಉತ್ತಮ ಪ್ರದರ್ಶನ ತೋರಿರುವುದನ್ನು ನಾವು ನೋಡಿದ್ದೇವೆ. ಇಲ್ಲಿ ಸಾಮಾನ್ಯ ಹವಾಮಾನ ಇದ್ದರೆ, ಪಿಚ್‌ನಲ್ಲಿ ಬಿರುಗಳಿದ್ದರೆ, ಸ್ಪಿನ್ನರ್‌ಗಳು ಮೇಲುಗೈ ಸಾಧಿಸಬಹುದು, ಆದರೆ ಇಲ್ಲಿ ಕಳೆದ ಒಂದು ತಿಂಗಳಿಂದ ಮಳೆಯಾಗುತ್ತಿದೆ, ಹಾಗಾಗಿ ಆರಂಭದಲ್ಲಿ ವಿಕೆಟ್ ನಿಧಾನಗತಿಯಿಂದ ಕೂಡಿರುತ್ತದೆ. ಕ್ವೀನ್ಸ್‌ಲ್ಯಾಂಡ್‌ನಲ್ಲಿ ನಾವು ವಿಶಿಷ್ಟವಾದ ಹವಾಮಾನವನ್ನು ನೋಡುತ್ತೇವೆ. ಪಂದ್ಯದ ಆರಂಭಿಕ ಎರಡು ದಿನಗಳುನ ಪಿಚ್ ಬ್ಯಾಟ್ಸ್‌ಮನ್‌ಗಳಿಗೆ ನೆರವು ನೀಡಲಿದೆ' ಎಂದು ಆಸೀಸ್ ಮಾಜಿ ಆರಂಭಿಕ ಬ್ಯಾಟ್ಸ್‌ಮನ್ ಹೇಳಿದ್ದಾರೆ.

ಆರ್‌ಸಿಬಿ ನಾಯಕತ್ವದ ಲೆಕ್ಕಾಚ್ಚಾರ

ಮುಂಬೈ: 18ನೇ ಆವೃತ್ತಿಯ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಪ್ರಾರಂಭಕ್ಕೆ ಇನ್ನೂ ಮೂರು ತಿಂಗಳು ಬಾಕಿ ಇದೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳಿಗೆ ಮುಂದಿನ ನಾಯಕ ಯಾರಾಗಲಿದ್ದಾರೆ ಎಂಬ ಪ್ರಶ್ನೆಗಳು ಹರಿದಾಡುತ್ತಿವೆ. ಹಾಗಾದರೆ ಆ ಮೂವರು ಆಟಗಾರರ ಯಾರಿರಬಹುದು ಎಂದು ಇದೀಗ ತಿಳಿದುಕೊಳ್ಳೋಣ.

ವಿರಾಟ್ ಕೊಹ್ಲಿ: ಭಾರತದ ಸ್ಟಾರ್ ಬ್ಯಾಟರ್ ಆಗಿರುವ ವಿರಾಟ್ ಕೊಹ್ಲಿ ಈ ಹಿಂದೆ ರಾಯಲ್ಸ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕರಾಗಿದ್ದರು. ಅವರು ನಾಯಕತ್ವದ ಜೊತೆಗೆ ತಂಡವನ್ನು ಮುನ್ನಡೆಸುವ ಸಂಪೂರ್ಣ ಅನುಭವವನ್ನು ಹೊಂದಿದ್ದಾರೆ. ಭುವನೇಶ್ವರ್ ಕುಮಾರ್: ಆರ್‌ಸಿಬಿ ನಾಯಕತ್ವದ ರೇಸ್‌ನಲ್ಲಿ ವೇಗದ ಬೌಲರ್ ಭುವನೇಶ್ವರ್ ಕುಮಾರ್ ಹೆಸರು ಕೂಡ ಕೇಳಿ ಬರುತ್ತಿದೆ. ಅನುಭವಿ ಬೌಲರ್ ಆಗಿರುವ ಭುವಿ ಟೀಂ ಇಂಡಿಯಾ ಪರ ಹಲವಾರು ಪಂದ್ಯಗಳನ್ನು ಆಡಿದ್ದಾರೆ. ಮುಂಬರುವ ಐಪಿಎಲ್ ಸೀಸನ್‌ಗಾಗಿ ರಾಯಲ್ಸ್ ಚಾಲೆಂಜರ್ಸ್ ಬೆಂಗಳೂರು ತಂಡವು ಭುವಿಯನ್ನು 10.75 ಕೋಟಿ ರು.ಗೆ ಮೆಗಾ ಹರಾಜಿನಲ್ಲಿ ತಂಡಕ್ಕೆ ಸೇರಿಸಿಕೊಂಡಿದೆ. ಇದಕ್ಕೂ ಮುನ್ನ ಸನ್ ರೈಸರ್ಸ್ ಹೈದರಾಬಾದ್ ಪರ ಆಡುತ್ತಿದ್ದರು. ಭುವನೇಶ್ವರ್ ಅಂತರಾಷ್ಟ್ರೀಯ ಕ್ರಿಕೆಟ್ ಆಡಿದ ಅನುಭವವಿದ್ದು ಈ ಲೆಕ್ಕದಲ್ಲೂ ಅವರಿಗೆ ನಾಯಕತ್ವದ ಜವಾಬ್ದಾರಿ ನೀಡಬಹುದು ಎಂದು ಹೇಳಲಾಗುತ್ತಿದೆ.

ರಜತ್ ಪಾಟಿದಾರ್: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕತ್ವದ ಪಟ್ಟಿಯಲ್ಲಿ ರಜತ್ ಪಾಟಿದಾರ್ ಹೆಸರು ಮುಂಚುಣಿಯಲ್ಲಿದೆ. ರಜತ್ ಅವರು ಸೈಯದ್ ಮುಷ್ತಾಕ್ ಅಲಿ ಟ್ರೋಫಿ 2024ರಲ್ಲಿ ಮಧ್ಯಪ್ರದೇಶದ ನಾಯಕರಾಗಿದ್ದು, ಅವರ ತಂಡವು ಫೈನಲ್‌ಗೂ ತಲುಪಿದೆ. ಪಾಟಿದಾರ್ ಬ್ಯಾಟಿಂಗ್ ಮೂಲಕ ಗಮನ ಸೆಳೆದಿದ್ದಾರೆ. ಕಳೆದ ಐಪಿಎಲ್ ಋತುವಿನಲ್ಲೂ ರಜತ್ ಉತ್ತಮ ಇನ್ನಿಂಗ್ಸ್‌ಗಳನ್ನು ಆಡಿದ್ದರು. 11 ಕೋಟಿ ರು. ನೀಡಿ ಉಳಿಸಿಕೊಂಡಿರುವ ಕಾರಣ ಆರ್‌ಸಿಬಿ ನಾಯಕತ್ವದ ಜವಾಬ್ದಾರಿ ಸಿಗುವ ಸಾಧ್ಯತೆಯೂ ಇದೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯ

ಇಂದು ಮುಸ್ತಾಕ್ ಆಲಿ ಕ್ರಿಕೆಟ್ ಟ್ರೋಫಿ ಫೈನಲ್

ಬೆಂಗಳೂರು: ಇಂದು ಮುಸ್ತಾಕ್ ಆಲಿ ಟ್ರೋಫಿ ಫೈನಲ್ ಪಂದ್ಯವು ಇಲ್ಲಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿದೆ.

13 ವರ್ಷಗಳ ನಂತರ ಫೈನಲ್ ತಲುಪಿದ ಮಧ್ಯಪ್ರದೇಶ ತಂಡವು ಮುಂಬೈ ತಂಡವನ್ನು ಎದುರಿಸಲಿದೆ.

ಈ ದೇಶೀಯ ಕ್ರಿಕೆಟ್ ಋತುವಿನ ಅತ್ಯುತ್ತಮ ಬ್ಯಾಟ್ಸ್‌ಮನ್ ಎನಿಸಿಕೊಂಡಿರುವ ರಜತ್ ಪಾಟಿದಾರ್ ತಮ್ಮ ಅಬ್ಬರದ ಬ್ಯಾಟಿಂಗ್ ಮೂಲಕ ಶುಕ್ರವಾರ ನಡೆದ ಪಂದ್ಯದಲ್ಲಿ ಮಧ್ಯಪ್ರದೇಶವನ್ನು ಫೈನಲ್‌ಗೆ ಕೊಂಡೊಯ್ದಿದ್ದರು. ದೆಹಲಿ ವಿರುದ್ಧದ ಎರಡನೇ ಸೆಮಿಫೈನಲ್‌ನಲ್ಲಿ ಅಜೇಯ ಅರ್ಧಶತಕ ಬಾರಿಸಿದ್ದರು. ಆ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಡೆಲ್ಲಿ ತಂಡವು ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್‌ಗೆ 146 ರನ್ ಗಳಿಸಿತ್ತು. ಇನ್ನೂ 26 ಎಸೆತಗಳಿರುವಂತೆ ಜಯ 148ರನ್ ಗಳ ಗುರಿ ಬೆನ್ನಟ್ಟಿದ ಮಧ್ಯಪ್ರದೇಶ್ ತಂಡ 15.4 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು ಗುರಿ ತಲುಪಿತು. ಅಜಿಂಕ್ಯ ರಹಾನೆ ಅರ್ಧ ಶತಕ ಬಾರಿಸಿ ಬರೋಡಾ ತಂಡವನ್ನು ಸೋಲಿಸಿ ಮುಂಬೈ ತಂಡವನ್ನು ಗುರುವಾರ ಫೈನಲ್‌ಗೆ ಈ ಸಲ ಒಯ್ದಿದ್ದರು. ಎರಡೂ ತಂಡಗಳು ಬಲಿಷ್ಠವಾಗಿರುವುದರಿಂದ ಭಾನುವಾರ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ಮಧ್ಯಪ್ರದೇಶ ತಂಡ ಮುಂಬೈ ತಂಡಗಳ ನಡುವೆ ನಡೆಯಲಿರುವ ಈ ಸಲದ ಮುಸ್ತಾಕ್ ಆಲಿ ಟ್ರೋಫಿ ಫೈನಲ್ ಪಂದ್ಯವು ಪಂದ್ಯ ರೋಚಕವೆನಿಸಿಲಿದೆ ಎಂಬುದು ಕ್ರಿಕೆಟ್ ಪ್ರೇಮಿಗಳ ನಿರೀಕ್ಷೆಯಾಗಿದೆ.

ಚೆಸ್ ಚಾಂಪಿಯನ್‌ಶಿಪ್ ಗೆದ್ದ ಗುಕೇಶ್‌ಗೆ ನಗದು ಬಹುಮಾನಗಳ ಮಹಾಪೂರ

ಐಪಿಎಲ್‌ಗೂ ಕಮ್ಮಿ ಇಲ್ಲ ನಗದು ಬಹುಮಾನ

ಸಿಂಗಾಪುರ: ಭಾರತದ ದೊಮ್ಮರಾಜು ಗುಕೇಶ್ ಅತ್ಯಂತ ಕಿರಿ ವಯಸ್ಸಿಗೆ ವರ್ಲ್ಡ್ ಚೆಸ್ ಚಾಂಪಿಯನ್‌ಶಿಪ್ ಗೆದ್ದುಕೊಳ್ಳುವ ಮೂಲಕ ಗುರುವಾರ ಇಲ್ಲಿ ನಡೆದಿದ್ದ ಅಂತಾರಾಷ್ಟ್ರೀಯ ಚೆಸ್ ಚಾಂಪಿಯನ್‌ಶಿಪ್‌ನಲ್ಲಿ ಇತಿಹಾಸ ಸೃಷ್ಟಿಸಿದ್ದರು. ಹಿಂದಿನ ಬಾರಿಯ ಚಾಂಪಿಯನ್ ಚೀನಾದ ಡಿಂಗ್ ಲಿರೆನ್ ಅವರನ್ನೇ ಸೋಲಿಸುವ ಮೂಲಕ ಗೆದ್ದು ಬೀಗಿದ್ದರು.

ಕೇವಲ 18ನೇ ವರ್ಷದಲ್ಲಿ ಈ ಸಾಧನೆ ಮಾಡುವ ಮೂಲಕ ರಷ್ಯಾದ ಗ್ಯಾರಿ ಕಾಸ್ಪರೋವ್ ಹಾಗೂ ಇನ್ನೋರ್ವ ದಿಗ್ಗಜ ಮ್ಯಾಗ್ನಸ್ ಕಾರ್ಲ್‌ಸನ್ ಹೆಸರಿನಲ್ಲಿದ್ದ ದಾಖಲೆಯನ್ನು ಗುಕೇಶ್ ಅಳಿಸಿದ್ದರು. ಈ ಹಿಂದೆ ಕ್ಯಾಸ್ಪರೋವ್ 22ನೇ ಹರೆಯದಲ್ಲಿ ಚಾಂಪಿಯನ್ ಆಗಿದ್ದರು.

ಹಾಗಾದರೆ ಗುಕೇಶ್‌ಗೆ ಸಿಕ್ಕಿದ ನಗದು ಬಹುಮಾನ ಎಷ್ಟು?: ಬಹುಮಾನದ ಮೊತ್ತದ ಬಗ್ಗೆ ನೋಡುವುದಾದರೆ ವರ್ಲ್ಡ್ ಚೆಸ್ ಚಾಂಪಿಯನ್‌ಶಿಪ್‌ನಲ್ಲಿ ಗೆದ್ದುಕೊಳ್ಳುವ ಪ್ರತಿ ಪಂದ್ಯಕ್ಕೆ 2 ಲಕ್ಷ ಡಾಲರ್ ಸಿಗುತ್ತದೆ. ಭಾರತೀಯ ಲೆಕ್ಕದಲ್ಲಿ ಇದರ ಮೊತ್ತ ರು. 1.69 ಕೋಟಿ ರೂ. ಆಗುತ್ತದೆ.

ಚಾಂಪಿಯನ್‌ಶಿಪ್‌ನಲ್ಲಿ ಗುಕೇಶ್ ಒಟ್ಟು ಮೂರು ಪಂದ್ಯ ಗೆದ್ದಿದ್ದರು, ಈ ಮೂಲಕ 6 ಲಕ್ಷ ಅಮೆರಿಕನ್ ಡಾಲರ್ ಅಂದರೆ ಸುಮಾರು 5.07 ಕೋಟಿ ರು. ತನ್ನದಾಗಿರಿಸಿಕೊಂಡಿದ್ದರು. ಇನ್ನೊಂದೆಡೆ ಎರಡು ಪಂದ್ಯಗಳನ್ನೂ ಗೆದ್ದ ಚೀನಾದ ಡಿಂಗ್ ಲಿರೆನ್ 4 ಲಕ್ಷ ಅಮೆರಿಕನ್ ಡಾಲರ್ ಅಂದರೆ ರು. 3.38 ಕೋಟಿ ಪಡೆದುಕೊಂಡಿದ್ದಾರೆ.

ಇದಲ್ಲದೆ ಇನ್ನುಳಿದ 15 ಲಕ್ಷ ಅಮೆರಿಕನ್ ಡಾಲರ್

ಬಹುಮಾನವನ್ನು ಇಬ್ಬರೂ ಹಂಚಿಕೊಂಡರು. ಒಟ್ಟಾರೆ ಗುಕೇಶ್ 13.5 ಲಕ್ಷ ಅಮೆರಿಕನ್ ಡಾಲರ್ ಅಂದರೆ 11.45 ಕೋಟಿ ರು. ಗಳಿಸಿದರೆ, ಡಿಂಗ್ ಲಿರೆನ್ 11.5 ಲಕ್ಷ ಅಮೆರಿಕನ್ ಡಾಲರ್ ಅಂದರೆ 9.75 ಕೋಟಿ ರು. ನಗದು ಬಹುಮಾನ ಪಡೆದರು. ಅದೇ ರೀತಿ ತಮಿಳುನಾಡು ಸೇರಿದಂತೆ ದೇಶದ ಕೆಲವು ರಾಜ್ಯಗಳೂ ಕೂಡಾ ಗುಕೇಶ್‌ಗೆ ಈಗಾಗಲೇ ನಗದು ಬಹುಮಾನವನ್ನು ಘೋಷಿಸಿವೆ.

ಅಭಿನಂದಿಸಿದ ಮಸ್ಕ್: ಅತಿ ಕಿರಿ ವಯಸ್ಸಿನಲ್ಲೇ ವಿಶ್ವ ಚಾಂಪಿಯನ್ ಆದ ಡಿ ಗುಕೇಶ್‌ಗೆ ವಿಶ್ವದ ನಂಬರ್ ಒನ್ ಶ್ರೀಮಂತ್ ಎಲಾನ್ ಮಸ್ಕ್ ಕೂಡ ಅಭಿನಂದನೆ ಸಲ್ಲಿಸಿದ್ದಾರೆ. 'ಎಕ್ಸ್'ನಲ್ಲಿ ಗುಕೇಶ್ ಪೋಸ್ಟ್‌ಗೆ ಮಸ್ಕ್ 'ಕಂಗ್ರಾಜುಲೇಷನ್ಸ್' ಎಂದು ಪ್ರತಿಕ್ರಿಯಿಸಿದ್ದಾರೆ.

ಯುಐ ಮೆಚ್ಚಿದ ಅಲ್ಲು

ರಿಯಲ್ ಸ್ಟಾರ್ ಉಪೇಂದ್ರ ನಿರ್ದೇಶಿಸಿ, ನಟಿಸಿರುವ ಯುಐ ಇದೇ ವಾರ ವಿಶ್ವಾದ್ಯಂತ ತೆರೆಗೆ ಬರಲಿದೆ. ಯುಐ ತಂಡ ಎಲ್ಲೆಡೆ ಭರ್ಜರಿ ಪ್ರಚಾರ ನಡೆಸುತ್ತಿದೆ. ಈಗಾಗಲೇ ಬಾಲಿವುಡ್ ದಿಗ್ಗಜ ಅಮೀರ್ ಖಾನ್, ಯುಐ ಟ್ರೇಲರ್ ನೋಡಿ ಮೆಚ್ಚಿಕೊಂಡಾಡಿದ್ದಾರೆ. ಈಗ ಟಾಲಿವುಡ್ ಪುಷ್ಪ, ಅಲ್ಲು ಅರ್ಜುನ್ ಕೂಡ ಯುಐ ಟ್ರೇಲರ್ ಮೆಚ್ಚಿದ್ದು ಚಿತ್ರತಂಡಕ್ಕೆ ಶುಭಕೋರಿದ್ದಾರೆ. ಹೈದರಾಬಾದ್‌ನಲ್ಲಿರುವ ಯುಐ ಚಿತ್ರತಂಡ ಅಲ್ಲು ಅರ್ಜುನ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿತು. ಆಂಧ್ರದಲ್ಲಿ ಯುಐ ಚಿತ್ರದ ವಿತರಣೆಯ ಹಕ್ಕನ್ನು ಅಲ್ಲು ಅರವಿಂದ್ ಮಾಲೀಕತ್ವದ ಗೀತಾ ಆರ್ಟ್ಸ್ ಪಡೆದುಕೊಂಡಿದೆ. ಇದು ಯುಐ ತಂಡಕ್ಕೆ ಶಕ್ತಿ ತುಂಬಿದೆ. ಮುಂದೆ ಹೈದರಾಬಾದ್‌ನಲ್ಲಿ ನಡೆಯುವ ಚಿತ್ರದ ಪ್ರೊಮೋಷನ್ಸ್‌ನಲ್ಲಿ ಅಲ್ಲು ಅರ್ಜುನ್ ಭಾಗಿಯಾಗಬಹುದು ಎಂಬ ನಿರೀಕ್ಷೆಯೂ ಇದೆ. ಸನ್ ಆಫ್ ಸತ್ಯ ಮೂರ್ತಿ ತೆಲುಗು ಚಿತ್ರದಲ್ಲಿ ಅಲ್ಲು ಅರ್ಜುನ್ ಅವರ ಜತೆಗೆ ಉಪೇಂದ್ರ ಕೂಡ ನಟಿಸಿದ್ದರು. ಹಾಗಾಗಿ ಅಲ್ಲು ಹಾಗೂ ಉಪ್ಪಿ ನಡುವೆ ಒಳ್ಳೆಯ ಬಾಂಧವ್ಯವಿದೆ. ಈ ಸಿನಿಮಾ ಮಾತ್ರವಲ್ಲ ಟಾಲಿವುಡ್‌ನ ಹಲವು ಸಿನಿಮಾಗಳಲ್ಲಿಯೂ ಉಪೇಂದ್ರ ನಟಿಸಿದ್ದಾರೆ. ಹಾಗಾಗಿ ಕನ್ನಡ ಚಿತ್ರರಂಗದಂತೆಯೇ ತೆಲುಗು ಚಿತ್ರರಂಗದಲ್ಲಿಯೂ ಕೂಡ ಉಪ್ಪಿಗೆ ದೊಡ್ಡ ಅಭಿಮಾನಿ ಬಳಗವೇ ಇದೆ. ಇದರಿಂದ ಯುಐ ಚಿತ್ರ ಟಾಲಿವುಡ್ ಅಂಗಳದಲ್ಲಿಯೂ ಭರ್ಜರಿ ಸದ್ದು ಮಾಡಲಿದೆ ಎಂಬ ನಿರೀಕ್ಷೆ ದುಪ್ಪಟ್ಟಾಗಿದೆ. ಪ್ಯಾನ್ ಇಂಡಿಯಾ ಸಿನಿಮಾವಾಗಿರುವ ಯುಐ ಅದ್ದೂರಿ ಬಜೆಟ್‌ನಲ್ಲಿ ನಿರ್ಮಾಣವಾಗಿದೆ. ಕೆ.ಪಿ.ಶ್ರೀಕಾಂತ್ ಹಾಗೂ ಜಿ.ಮನೋಹರನ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ರೀಷ್ಮಾ, ನಿಧಿ, ಅಚ್ಯುತ್ ಕುಮಾರ್, ರವಿಶಂಕರ್, ಸಾಧುಕೋಕಿಲ ಸೇರಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ.

ರುದ್ರಾಭಿಷೇಕಂಗೆ ಮುಹೂರ್ತ

> ರುದ್ರಾಭಿಷೇಕಂ ವೀರಗಾಸೆ ಕಲೆಯ ಕುರಿತು ಕಥೆಯನ್ನು ಒಳಗೊಂಡಿದೆ. ನಮ್ಮ ನಾಡಿನ ಸಾಂಸ್ಕೃತಿಕ ಇತಿಹಾಸದ ಜತೆಗೆ ಅದರ ವೈಭವವನ್ನು ತೆರೆದಿಡುವ ಪ್ರಯತ್ನ ಇಲ್ಲಿದೆ. ಕಮರ್ಷಿಯಲ್ ಎಲಿಮೆಂಟ್ ಒಳಗೊಂಡಿದ್ದರೂ ಕೂಡ ಸಾಕಷ್ಟು ಡಿವೈನಿಟಿ ಇರುವ ಚಿತ್ರ. ಇದೇ ಮೊದಲ ಬಾರಿಗೆ ನಾನು ವೀರಗಾಸೆ ಕಲಾವಿದನಾಗಿ ಕಾಣಿಸಿಕೊಳ್ಳುತ್ತಿದ್ದೇನೆ. ವಿವಿಧ ಶೇಡ್‌ನಲ್ಲಿ ಮಿಂಚಲಿದ್ದೇನೆ.
>
> -ವಿಜಯ್ ರಾಘವೇಂದ್ರ, ನಟ



> ಇಲ್ಲಿ ಸಾಂಪ್ರದಾಯಿಕ ಕಥೆ ಇದೆ, ನಮ್ಮ ನಾಡಿನ ಜನಪದ ಹಿನ್ನೆಲೆ ಇಟ್ಟುಕೊಂಡು, ನೂರಾರು ವರ್ಷಗಳ ಇತಿಹಾಸ ಇರುವ ಒಂದು ಕಲೆಯನ್ನು ಈ ಚಿತ್ರದ ಮೂಲಕ ಹೇಳಹೊಟದ್ದೇನೆ. ಒಂದೂವರೆ ವರ್ಷದಿಂದ ಸಾಕಷ್ಟು ರೀಸರ್ಚ್ ಮಾಡಿ ಈ ಕಥೆ ರೆಡಿ ಮಾಡಿಕೊಂಡಿದ್ದೇನೆ. ಈ ಕಥೆಯ ಮೂಲಹಂದರ ವೀರಭದ್ರ ದೇವರು. ಆತ ಹೇಗೆ ಬಂದ, ಆತ ಬರಲು ಕಾರಣವೇನು ಎಂಬುದನ್ನು ಇಲ್ಲಿ ಹೇಳುತ್ತಿದ್ದೇನೆ.
>
> -ವಸಂತ್ ಕುಮಾರ್ ನಿರ್ದೇಶಕ

ನಮ್ಮ ನಾಡಿನ ಸಾಂಸ್ಕೃತಿಕ ಕಲೆಯನ್ನು ಬಿಂಬಿಸುವ ವೀರಗಾಸೆ ಕಲೆಯ ಕುರಿತ ಸಿನಿಮಾ ರುದ್ರಾಭೀಷೇಕಂ ಶೀರ್ಷಿಕೆಯಲ್ಲಿ ಸೆಟ್ಟೇರಿದ್ದು, ಮುಹೂರ್ತವೂ ನೆರವೇರಿದೆ. ದೇವನಹಳ್ಳಿ ಬಳಿಯ ವಿಜಯಪುರದ ಫಾರಂ ಹೌಸ್‌ನಲ್ಲಿ ಮುಹೂರ್ತ ನೆರವೇರಿತು. ನಿರ್ದೇಶಕ ವಸಂತ್ ಕುಮಾರ್ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಫ್ಯಾನ್ ಇಂಡಿಯಾ ಕ್ರಿಯೇಶನ್ಸ್ ಬ್ಯಾನರ್‌ನಲ್ಲಿ ರುದ್ರಾಭಿಷೇಕಂ ನಿರ್ಮಾಣವಾಗುತ್ತಿದೆ. ರಂಗಭೂಮಿ ಪ್ರತಿಭೆ ಪ್ರೇರಣಾ ನಾಯಕಿಯಾಗಿ ನಟಿಸುತ್ತಿದ್ದು, ಬಲ ರಾಜವಾಡಿ ಊರ ಪ್ರಮುಖನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು, ಹಿರಿಯ ಸಂಗೀತ ನಿರ್ದೇಶಕ ವಿ.ಮನೋಹರ್ ಸಂಗೀತ ಸಂಯೋಜಿಸುತ್ತಿದ್ದಾರೆ. ಮುತ್ತುರಾಜ್ ಛಾಯಾಗ್ರಹಣ ಈ ಚಿತ್ರಕ್ಕಿದೆ. ಮೊದಲ ಹಂತದಲ್ಲಿ ಫಾರಂ ಹೌಸ್‌ನಲ್ಲಿ ಚಿತ್ರೀಕರಣ ನಡೆಯಲಿದ್ದು, ಬಳಿಕ ಚಿಕ್ಕತದಮಂಗಲದಲ್ಲಿ ಶೂಟಿಂಗ್ ನಡೆಸಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ.

ವಿಟಾಕೀಸ್

ಕನ್ನಡದಲ್ಲಿಯೂ ಬರೋಜ್

ಮಲೆಯಾಳಂ ಖ್ಯಾತ ನಟ ಮೋಹನಲಾಲ್ ಅದ್ಭುತ ಅಭಿನಯದ ಮೂಲಕ ಸಿನಿಮಾರಂಗದಲ್ಲಿ ತಮ್ಮದೇಯಾದ ಛಾಪು ಮೂಡಿಸಿದ್ದಾರೆ. ನಲವತ್ತೂ ವರ್ಷಗಳಿಂದಲೂ ಕಲಾ ಸೇವೆಯಲ್ಲಿ ತೊಡಗಿಸಿಕೊಂಡಿರುವ ಮೋಹನ್ ಲಾಲ್ ಮುನ್ನೂರ ಅರವತ್ತಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿ ಮನಸೂರೆಗೊಂಡಿದ್ದಾರೆ. ಮೋಹನ್ ಲಾಲ್ ಮಲೆಯಾಳಂ ಮಾತ್ರವಲ್ಲ ಕನ್ನಡ, ತಮಿಳು ಸೇರಿದಂತೆ ಹಲವು ಭಾಷೆಗಳಲ್ಲಿ ನಟಿಸಿದ್ದಾರೆ. ಈಗ ನಟನೆಯ ಜತೆಗೆ ನಿರ್ದೇಶನದತ್ತಲೂ ಒಲವು ತಾಳಿದ್ದು, ಬರೋಜ್ ಸಿನಿಮಾವನ್ನು ನಿರ್ದೇಶನ ಮಾಡಿದ್ದಾರೆ. ಮೇಕಿಂಗ್ ಮೂಲಕವೇ ಗಮನಸೆಳೆದಿದ್ದ ಬರೋಜ್ ಟ್ರೇಲರ್‌ನಲ್ಲಿಯೂ ಭರ್ಜರಿ ಸದ್ದು ಮಾಡುತ್ತಿದೆ. ವಾಸ್ಕೋಡಗಾಮಾ ಅರಮನೆಯೊಳಗೆ ಬರೋಜ್ ಎಂಬ ಭೂತವಿದೆ ಎಂದು ಟ್ರೇಲರ್ ಆರಂಭವಾಗುತ್ತದೆ. ಆ ಬರೋಜ್ ನೂರು ವರ್ಷಗಳಿಂದ ಅಲ್ಲಿನ ನಿಧಿಯನ್ನು ಕಾವಲು ಕಾಯುತ್ತಿದ್ದಾರೆ. ಹೀಗೆ ಹೊಸ ಕಾಲ್ಪನಿಕ ಲೋಕದ ಅನಾವರಣ ಮಾಡುತ್ತ, ಅಚ್ಚರಿಯ ಲೋಕವನ್ನು ಪ್ರೇಕ್ಷಕನ ಮುಂದೆ 3ಡಿಯಲ್ಲಿ ಕಟ್ಟಿಕೊಡಲಿದ್ದಾರೆ. ಭೂತ ಮತ್ತು ವರ್ತಮಾನದ ನಡುವೆ ಟೈಮ್ ಟ್ರಾವೆಲಿಂಗ್ ಜಾನರ್‌ನಲ್ಲಿ ಈ ಸಿನಿಮಾ ಸಿದ್ಧವಾಗಿದೆ. ಬಾಲಿವುಡ್ ನಟ ಅಕ್ಷಯ್ ಕುಮಾರ್, ಬರೋಜ್ ಚಿತ್ರದ ಹಿಂದಿ ಟ್ರೇಲರ್ ರಿಲೀಸ್ ಮಾಡಿದ್ದರು. ಈ ಚಿತ್ರವು ಕ್ರಿಸ್‌ಮಸ್ ಹಬ್ಬದಂದೇ ತೆರೆ ಕಾಣಲಿದೆ.

ಬರೋಜ್ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು ಕನ್ನಡದಲ್ಲಿಯೂ ತೆರೆಗೆ ಬರಲಿದೆ. ಮೋಹಲ್ ಲಾಲ್ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದು ಈ ಹಿಂದಿನ ಸಿನಿಮಾಗಳಿಗಿಂತ ವಿಭಿನ್ನ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಆಶೀರ್ವಾದ್ ಸಿನಿಮಾಸ್‌ನ ಆಂಟೋನಿ ಪೆರುಂಬವೂರ್ ಬರೋಜ್ ಸಿನಿಮಾವನ್ನು ನಿರ್ಮಿಸಿದ್ದಾರೆ. ಮೋಹನ್ ಲಾಲ್ ನಿರ್ದೇಶನದ ಚೊಚ್ಚಲ ಬರೋಜ್ ಚಿತ್ರಕ್ಕೆ ಸಂತೋಷ್ ಶಿವನ್ ಛಾಯಾಗ್ರಹಣ, ಅಜಿತ್ ಕುಮಾರ್ ಸಂಕಲನವಿದೆ.

ಚಂದನವನದಲ್ಲೊಂದು ಅಪರೂಪದ ಪ್ರೇಮಕಥೆ

ಗುರುಶಿಷ್ಯರು ಚಿತ್ರದ ಆಣೆ ಮಾಡಿ ಹೇಳುತೇನೆ... ಹಾಡು ಕೇಳುತ್ತಿದ್ದರೆ ಮನಕ್ಕೆ ಹಿತ ಅನ್ನಿಸುತ್ತದೆ. ಮನಸಿಗೆ ಮುದ ನೀಡುವ ಈ ಸಾಹಿತ್ಯ ಬರೆದ ಪುನೀತ್ ರಂಗಸ್ವಾಮಿ ಈಗ ನಿರ್ದೇಶನದತ್ತ ಒಲವು ತಾಳಿದ್ದಾರೆ. ಹಲವು ಸಿನಿಮಾಗಳಿಗೆ ಸಂಭಾಷಣೆ, ಸಾಹಿತ್ಯ ರಚಿಸಿರುವ ಪುನೀತ್ ಈಗ ತಾವೇ ಸ್ವತಃ ಕಥೆ ಬರೆದಿದ್ದು ನಿರ್ದೇಶನಕ್ಕೂ ಅಣಿಯಾಗಿದ್ದಾರೆ. ಈಗಾಗಲೇ ಚಿತ್ರದ ಪೋಸ್ಟರ್ ರಿಲೀಸ್ ಆಗಿದ್ದು, ಶೀಘ್ರದಲ್ಲಿಯೇ ಶೂಟಿಂಗ್ ಕೂಡ ಆರಂಭವಾಗಲಿದೆ.

ರಿಯಲ್ ಲವ್ ಸ್ಟೋರಿ: ಪ್ರೊಡಕ್ಷನ್ ನಂ2 ಶೀರ್ಷಿಕೆಯಲ್ಲಿ ಚಿತ್ರ ಸೆಟ್ಟೇರಿದೆ. ಇದು ತೊಂಬತ್ತರ ಕಾಲಘಟ್ಟದಲ್ಲಿ ನಡೆದ ನೈಜ ಘಟನೆಯಾದಾರಿತ ಚಿತ್ರವಾಗಿದ್ದು, ಥ್ರಿಲ್ಲರ್ ಲವ್ ಜಾನರ್‌ನಲ್ಲಿ ಚಿತ್ರ ಸಾಗಲಿದೆ. ತಮಿಳು, ಕರ್ನಾಟಕದ ಗಡಿ ಭಾಗದಲ್ಲಿ ನಡೆದ ಘಟನೆಯನ್ನು ಆಧರಿಸಿ ಚಿತ್ರದ ಕಥೆ ಹೆಣೆಯಲಾಗಿದೆ. ಹಾಗಂತ ಇದು ಅಲ್ಲಿಗೆ ಸೀಮಿತವಾದ ಕಥೆಯಲ್ಲ ಎಲ್ಲರಿಗೂ ಕನೆಕ್ಟ್ ಆಗುವ ಯೂನಿವರ್ಸಲ್ ಕಥೆಯಾಗಿದೆ.

ಆಗಲೇ ಹೊಳೆದ ಕಥೆ: ನಾನು ಕಾಟೇರ ಚಿತ್ರದ ಸಮಯದಲ್ಲಿ ತರುಣ್ ಸುಧೀರ್ ಅವರೊಂದಿಗೆ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದೆ. ಆಗಲೇ ಈ ಕಥೆ ಹೊಳೆದಿತ್ತು. ಆ ಬಳಿಕ ಹಲವು ದಿನಗಳ ಕಾಲ ರಿಸರ್ಚ್ ಮಾಡಿ, ಘಟನೆಗೆ ಸಂಬಂಧಿಸಿದ ಎಲ್ಲಾ ಅಂಶಗಳನ್ನು ಕಲೆ ಹಾಕಿ ಕಥೆ ಹೆಣೆದೆ. ತರುಣ್ ಸುಧೀರ್ ಅವರಿಗೆ ಈ ಕಥೆ ಹೇಳಿದಾಗ ಕೇಳಿ ಖುಷಿ ಪಟ್ಟರು. ಚಿತ್ರ ನಿರ್ಮಾಣಕ್ಕೆ ಸಮ್ಮತಿಸಿದರು. ಅಟ್ಲಾಂಟ ನಾಗೇಂದ್ರ ಅವರು ಕೂಡ ಚಿತ್ರ ನಿರ್ಮಾಣಕ್ಕೆ ಕೈ ಜೋಡಿಸಿದರು.

ವರ್ಷಾಂತ್ಯಕ್ಕೆ ಶೂಟಿಂಗ್: ಚಿತ್ರದ ಪ್ರೀಪ್ರೊಡಕ್ಷನ್ ಕೆಲಸಗಳು ಮುಕ್ತಾಯವಾಗಿವೆ. ಈ ತಿಂಗಳಾಂತ್ಯಕ್ಕೆ ಶೂಟಿಂಗ್ ನಡೆಸಲು ಯೋಜನೆ ಹಾಕಿಕೊಂಡಿದ್ದೇವೆ. ಕಾಡಂಚಿನ ಗ್ರಾಮಗಳಲ್ಲಿ ಚಿತ್ರೀಕರಣ ನಡೆಸುವ ಪ್ಲಾನ್ ಇದೆ. ನಮ್ಮ ರಾಜ್ಯದ ಜತೆಗೆ ಹೊರ ರಾಜ್ಯದಲ್ಲಿಯೂ ಚಿತ್ರದ ಸನ್ನಿವೇಶಗಳನ್ನು ಸೆರೆಹಿಡಿಯಲು ನಿರ್ಧರಿಸಲಾಗಿದೆ. ಸುಮಾರು ಎಪ್ಪತ್ತು ದಿನಗಳ ಕಾಲ ಶೂಟಿಂಗ್ ನಡೆಸುವ ಯೋಜನೆ ಇದೆ.

> ನಾನು ಹಲವು ಸಿನಿಮಾಗಳಿಗೆ ಸಂಭಾಷಣೆ, ಸಾಹಿತ್ಯ ಬರೆದಿದ್ದೇನೆ. ಸಹಾಯಕ ನಿರ್ದೇಶಕನಾಗಿಯೂ ಕಾರ್ಯನಿರ್ವಹಿಸಿದ್ದೇನೆ. ಮುಂದೊಂದು ದಿನ ಒಳ್ಳೆಯ ಸಿನಿಮಾ ನಿರ್ದೇಶನ ಮಾಡುವ ಕನಸಿತ್ತು. ಆ ಕನಸು ಈ ಚಿತ್ರದ ಮೂಲಕ ನನಸಾಗಿದೆ. ತರುಣ್ ಸುಧೀರ್ ಅವರ ಮಾರ್ಗದರ್ಶನದಿಂದ ನಿರ್ದೇಶಕನಾಗಿ ಗುರುತಿಸಿಕೊಳ್ಳುತ್ತಿದ್ದೇನೆ.
>
> -ಪುನೀತ್ ರಂಗಸ್ವಾಮಿ ನಿರ್ದೇಶಕ

ವಿರಾಮ
ವಿಶ್ವವಾಣಿ
15.12.2024
ಭಾನುವಾರ
ಓದುವ ಲೋಕಕ್ಕೆ ಒದುವ ನಿಲ್ದಾಣ

ಗುಕೇಶ್ ವಿಶ್ವ ಚೆಸ್ ಚಾಂಪಿಯನ್!

ಚದುರಂಗ ಲೋಕದಲ್ಲಿ ಬಿರುಗಾಳಿ!

• ಶಶಿಧರ ಹಾಲಾಡಿ

ಜಗತ್ತಿನ ಅತಿ ಕಿರಿಯ ಚೆಸ್ ಚಾಂಪಿಯನ್ ಎಂಬ ದಾಖಲೆಯನ್ನು, ತಮಿಳುನಾಡಿನ ಗುಕೇಶ್ ಬರೆದಿದ್ದಾರೆ. ವಿ. ಆನಂದ್ ಅವರ ನಂತರ, ನಮ್ಮ ದೇಶದಿಂದ ಎರಡನೆಯ ವಿಶ್ವ ಚಾಂಪಿಯನ್ ಆಗಿ ಹೊರಹೊಮ್ಮಿದ ಗುಕೇಶ್ ಅವರ ಈ ಗೆಲುವು ಅಸಾಧಾರಣ, ಅಪ್ರತಿಮ. ಚದುರಂಗದಾಟದಲ್ಲಿ ಮೊದಲಿನಿಂದಲೂ ಪಾರಮ್ಯ ಸಾಧಿಸಿದ್ದ ಯುರೋಪಿಯನ್ ಆಟಗಾರರಿಗೆ ಸವಾಲೆಸೆಯುವಂತೆ ದಾಖಲಾಗಿರುವ ಈ ಗೆಲುವು, ವಿಶ್ವ ಚದುರಂಗ ಲೋಕದಲ್ಲಿ ಹೊಸ ಅಲೆಗಳನ್ನು ಸೃಷ್ಟಿಸಿದೆ; ಜಗತ್ತಿನ ಎಲ್ಲರೂ ನಮ್ಮ ದೇಶದ ಈ ಸಾಧನೆಯನ್ನು ಕಂಡು ಬೆರಗಾಗುವಂತೆ ಮಾಡಿದೆ. ಜತೆಗೆ, ಗುಕೇಶ್ ಅವರ ಈ ಗೆಲುವು, ನಮ್ಮ ದೇಶದಲ್ಲಿ ಇನ್ನಷ್ಟು ಚೆಸ್ ಆಟಗಾರರನ್ನು ಹುಟ್ಟುಹಾಕುವುದರಲ್ಲಿ ಸಂಶಯವಿಲ್ಲ. 2000ದಲ್ಲಿ ವಿ. ಆನಂದ್ ಅವರು ವಿಶ್ವ ಚಾಂಪಿಯನ್ ಆದ ನಂತರ, ನಮ್ಮ ದೇಶದಲ್ಲಿ ನೂರಾರು ಪ್ರಮುಖ ಆಟಗಾರರು ಸಿದ್ಧವಾದರು; ಅದೇ ರೀತಿ ಗುಕೇಶ್ ಅವರ ಗೆಲುವು, ಭಾರತದ ಚದುರಂಗಲೋಕದಲ್ಲಿ ಹೊಸ ಗಾಳಿಯನ್ನೇ ಬೀಸಲಿದೆ!

> “ವಿಶ್ವ ಚಾಂಪಿಯನ್ ಸ್ಪರ್ಧೆಯಲ್ಲಿ ಒಂದೊಮ್ಮೆ, ಮ್ಯಾಗ್ನಸ್ ಕಾರ್ಲಸನ್ ವಿರುದ್ಧ ಆಡಿದರೆ, ಅದೊಂದು ಅದ್ಭುತ ಅನುಭವವಾದೀತು. ನಾನೀಗ ವಿಶ್ವ ಚಾಂಪಿಯನ್ ಎಂದಾಕ್ಷಣ, ಇಡೀ ಜಗತ್ತಿನ ಅತ್ಯುತ್ತಮ ಆಟಗಾರ ನಾನು ಎಂಬ ಅರ್ಥವಲ್ಲ. ಆ ಸ್ಥಾನದಲ್ಲಿ ಕಾರ್ಲಸನ್ ಇದ್ದಾರೆ. ನಾನು ಇನ್ನಷ್ಟು ಶ್ರಮಹಾಕಿ ಮೇಲೇರಲು ಪ್ರಯತ್ನಿಸುವಂತೆ ಮಾಡಲು ಪ್ರೇರಣೆಯೆಂದರೆ, ಅದ್ಭುತ ಆಟಗಾರನಾದ ಮ್ಯಾಗ್ನಸ್ ಕಾರ್ಲಸನ್ ಅವರ ಮಟ್ಟವನ್ನು ತಲುಪುವುದು!
>
> **– ಗುಕೇಶ್ ಡಿ.**

ನಮ್ಮ ದೇಶದ ಹೆಮ್ಮೆಯ ಚೆಸ್ ಆಟಗಾರ, ತಮ್ಮ 18ನೆಯ ವಯಸ್ಸಿಗೇ, ವಿಶ್ವ ಚಾಂಪಿಯನ್ ಆಗಿ, ಅತಿ ಕಿರಿಯ ಚಾಂಪಿಯನ್ ಎಂಬ ದಾಖಲೆ ಬರೆದಾಗ, ಮಾಜಿ ಚೆಸ್ ಚಾಂಪಿಯನ್ ಮ್ಯಾಗ್ನಸ್ ಕಾರ್ಲಸನ್ (ನಾರ್ವೆ) ಅವರು, ಒಂದು ಕಮೆಂಟ್ ಮಾಡಿದರು 'ಗುಕೇಶ್ ಗೆದ್ದುದ್ದು ತನ್ನ ಗುಣ ಮತ್ತು ದೃಢ ನಿಶ್ಚಯದಿಂದ'. ಅಂದರೆ, ಅತ್ಯುತ್ತಮ ಆಟವಾಡಿ ಗೆದ್ದಿದ್ದಲ್ಲ ಎಂಬರ್ಥವೂ ಬರುವಂತಿತ್ತು, ಅವರ ಆ ಮಾತು. ಅದಕ್ಕೂ ಮುನ್ನ, ಗುಕೇಶ್ ಮತ್ತು ಚೀನಾದ ಡಿಂಗ್ ಲಿರೆಂಗ್ ಅವರು ಆಟ ಆರಂಭಿಸಿದ್ದಾಗ, 14 ಪಂದ್ಯಗಳ ಆ ಸರಣಿ ಆಟದ ನಡುವೆಯೇ, 'ಇದು ವಿಶ್ವ ಚೆಸ್ ಚಾಂಪಿಯನ್ ಮಟ್ಟದ ಆಟದಂತೆ ಕಾಣುತ್ತಿಲ್ಲ' ಎಂದೂ ಕಾರ್ಲಸನ್ ಟೀಕಿಸಿದ್ದರು. 18 ವರ್ಷದ ಗುಕೇಶ್ ಅವರ ಆಟವು ಪ್ರಬುದ್ಧವಾಗಿಲ್ಲ ಎಂಬರ್ಥವನ್ನೂ ಕೊಡುವಂತಿತ್ತು ಅವರ ಟೀಕೆ.

ನಮ್ಮ ದೇಶದ ಗುಕೇಶ್, ವಿಶ್ವ ಚಾಂಪಿಯನ್ ಆದಾಗ, ಅವರನ್ನು ಅಭಿನಂದಿಸುವ ಬದಲು, ಇನ್ನೊಬ್ಬ ಮಾಜಿ ಚೆಸ್ ಚಾಂಪಿಯನ್ ವ್ಲಾದಿಮಿರ್ ಕ್ರಾಮ್ನಿಕ್ (ರಷ್ಯಾ) ಅವರು ಬೇಸರದಿಂದ 'ನಾವು ಕಂಡ ಚದುರಂಗದ ಆಟ ಅವಸಾನ ಹೊಂದಿದೆ!' ಎಂದು, ನೇರವಾಗಿ, ಮುಖಕ್ಕೆ ಹೊಡೆದಂತೆ ಟೀಕಿಸಿದರು. ಯುರೋಪಿಯನ್ ಮೂಲದ ಇವರೆಲ್ಲರಿಗೂ, ನಮ್ಮ ದೇಶದ 18 ವರ್ಷದ ಕಿರಿಯನೊಬ್ಬನು ಗೆದ್ದಿದ್ದು ಬೇಸರ ತಂದಿರಬಹುದೇ! ಅದುವರೆಗೆ ಚಾಂಪಿಯನ್ ಆಗಿದ್ದ ಚೀನಾ ದೇಶದ ಡಿಂಗ್ ಲಿರೆಂಗ್ ಸೋತಿದ್ದರಿಂದಲೂ ಬೇಸರವಾಗಿರಬಹುದೆ? ತೃತೀಯ ಜಗತ್ತಿನ, ತುಸು ಸಾಧಾರಣ ಎಂದು ಅವರು ತಿಳಿದುಕೊಂಡಂತಹ ಭಾರತರ ದೇಶದಿಂದ ಮತ್ತೊಬ್ಬ ವಿಶ್ವ ಚಾಂಪಿಯನ್ ಉದಿಸುವುದು ಎಂದರೇನು ಎಂಬ ನಿರ್ಲಕ್ಷ್ಯವೂ ಅವರ ಈ ಕೊಂಕು ನುಡಿಗಳಿಗೆ ಕಾರಣ ಇರಬಹುದೇ?

ಕಾರ್ಲಸನ್, ವ್ಲಾದಿಮಿರ್ ಮೊದಲಾದವರು, ಭಾರತೀಯ ಚೆಸ್ ಆಟಗಾರರ ಪ್ರಾಬಲ್ಯವನ್ನು, ಉನ್ನತಿಯನ್ನು, ಗೆಲುವನ್ನು ಮುಕ್ತವಾಗಿ ಸಂಭ್ರಮಿಸಿದೇ ಇದ್ದರೆ, ಅದಕ್ಕೆ ಕಾರಣಗಳನ್ನು ಹುಡುಕುವುದು ಕಷ್ಟವೇನಲ್ಲ. ಪುರಾತನ ಕಾಲದಲ್ಲಿ ಚದುರಂಗದ ಮೂಲ ಎನಿಸುವ ಆಟವು ಆವಿಷ್ಕಾರಗೊಂಡಿದ್ದೇ ನಮ್ಮ ದೇಶದಲ್ಲಾದರೂ, ಆಧುನಿಕ ಚದುರಂಗದಾಟವು, ಅವಶ್ಯವಾಗಿ ಮುಂದುವರಿದ ದೇಶಗಳ 'ಸ್ವತ್ತಾಗಿತ್ತು'. ಈಗ ಪ್ರಚಲಿತದಲ್ಲಿರುವ ಆಟದ ನಿಯಮಗಳು, ಪಂದ್ಯಾವಳಿಗೂ, ಫಿಡೆ ಎಲ್ಲವನ್ನೂ ರೂಪಿಸಿದವರು ಮುಂದುವರಿದ ದೇಶಗಳು. ಪೋಲೆಂಡ್, ರಷ್ಯಾ, ಜರ್ಮನಿ, ಇಂಗ್ಲೆಂಡ್, ನಾರ್ವೆ,ಉಕ್ರೇನ್ ಮೊದಲಾದ ಐರೋಪ್ಯ ದೇಶಗಳೇ 20ನೆಯ ಶತಮಾನದಲ್ಲಿ ಚದುರಂಗದಲ್ಲಿ ಮಿಂಚಿದವು; ಅಸಾಧಾರಣ ಎನಿಸುವ ಹಲವು ಆಟಗಾರರು ಐರೋಪ್ಯ ದೇಶಗಳಲ್ಲಿದ್ದರು, ಈಗಲೂ ಇದ್ದಾರೆ. ಅವರ ಪ್ರಾಬಲ್ಯ ಎಷ್ಟರ ಮಟ್ಟಿಗೆ ವ್ಯಾಪಿಸಿತ್ತು ಎಂದರೆ, ಅಮೆರಿಕದ ಅಪ್ರತಿಮ ಆಟಗಾರ, ವಿಶ್ವ ಚಾಂಪಿಯನ್ ಆಗಿದ್ದ ಬಾಬಿ ಫಿಷರ್‌ನಂತಹ ಆಟಗಾರರನ್ನು ಐರೋಪ್ಯ ಆಟಗಾರರು (ಮುಖ್ಯವಾಗಿ ಯುಎಸ್‌ಎಸ್‌ಆರ್, ರಷ್ಯಾದವರು) ಮೂಲೆಗುಂಪು ಮಾಡುವಷ್ಟು ಪ್ರಬಲರಾಗಿದ್ದರು. ಪ್ರಮುಖ ಚೆಸ್ ಪಂದ್ಯಾವಳಿಗಳಲ್ಲಿ, ರಷ್ಯಾ ಮೂಲದ ಆಟಗಾರರು, ಪರಸ್ಪರ ಒಪ್ಪಂದ ಮಾಡಿಕೊಂಡ ರೀತಿ, ತಮ್ಮ ದೇಶದ ಆಟಗಾರನೇ ಅತಿ ಹೆಚ್ಚು ಅಂಕ ಗಳಿಸುವಂತೆ ಡ್ರಾ, ಅಥವಾ ಸೋಲು ಅನುಭವಿಸಿ, ಬಾಬಿ ಫಿಷರ್ ನಂತಹ ಅಪ್ರತಿಮ ಆಟಗಾರರನ್ನು ನಾಲ್ಕು ಅಥವಾ ಅದಕ್ಕಿಂತ ಕೆಳಗಿನ ಸ್ಥಾನಕ್ಕೆ (ಅಂಕಪಟ್ಟಿಯಲ್ಲಿ) ತಳ್ಳುತ್ತಿದ್ದರು! ಅವರ ಈ ತಂತ್ರವನ್ನು ಗಮನಿಸಿದ ಬಾಬಿ ಫಿಷರ್, ಅದನ್ನು ಬಹಿರಂಗವಾಗಿಯೇ ಟೀಕಿಸಿ, ರಷ್ಯಾದ ಆಟಗಾರರಿದ್ದ ಪಂದ್ಯಾವಳಿಗಳಿಂದಲೇ ದೂರ ಉಳಿಯುತ್ತಿದ್ದ; ಅಷ್ಟೊಂದು ಸಂಖ್ಯೆಯ ಆಟಗಾರರು ಯುಎಸ್‌ಎಸ್‌ಆರ್ ಮತ್ತು ರಷ್ಯಾದಲ್ಲಿದ್ದರು! ರಷ್ಯಾದ ಪಕ್ಕದ ದೇಶ ಪೋಲೆಂಡ್‌ನಿಂದಲೂ ಹಲವು ಪ್ರಮುಖ ಆಟಗಾರರು ಜಾಗತಿಕ ಪಂದ್ಯಗಳಲ್ಲಿ ಮಿಂಚಿದ್ದಾರೆ. ಹೀಗಿದ್ದಾಗ, ತಮ್ಮ ಪ್ರದೇಶದ ಯಾರಾದರೊಬ್ಬರು ವಿಶ್ವ ಚಾಂಪಿಯನ್ ಆಗಲಿ, ಭಾರತದಂತಹ ದೂರ ದೇಶದವರೇಕೆ ಮುಂದೆ ಬರಬೇಕು ಎಂಬ ರಹಸ್ಯ ಆಶಯ ಅಲ್ಲಿನ ಅಟಗಾರರಲ್ಲಿದ್ದರು ಇದ್ದಿರಬಹುದೆ?

ಇಲ್ಲವಾದರೆ, ಮೊನ್ನೆ ಗುಕೇಶ್ ಗೆಲುವು ಸಾಧಿಸಿ, ಈ ಸ್ಥಾನಕ್ಕೇರಿದ ಅತಿ ಕಿರಿಯ ಆಟಗಾರ ಎಂಬ ವಿಶ್ವದಾಖಲೆ ಬರೆದಾಗ, ಶುಭ ಹಾರೈಸುವುದನ್ನು ಬಿಟ್ಟು 'ಚೆಸ್ ಆಟದ ಅವನತಿ' ಎಂಬ ಟೀಕೆಯನ್ನು, ಅಲ್ಲಿನ ಮಾಜಿ ಚಾಂಪಿಯನ್ ಒಬ್ಬರು, ಏಕೆ ಮಾಡುತ್ತಿದ್ದರು? ಈಗಿನ್ನೂ 18 ವರ್ಷದ, ತಮಿಳುನಾಡಿನ ಗುಕೇಶ್, ಇನ್ನೂ ಬೆಳೆಯುವ ಅವಕಾಶವಿದೆ, ಇನ್ನೂ ಹೊಸ ಆಟದ ಶೈಲಿಯನ್ನು ರೂಢಿಸಿಕೊಳ್ಳುವ ಅವಕಶಾವಿದೆ, ಅಂತಹ ಪ್ರತಿಭಾವಂತನನ್ನು ಗುರುತಿಸಿ, ಮುಕ್ತಕಂಠದಿಂದ ಹೊಗಳಿದ್ದರೆ, ಅವರು ಸಜ್ಜನಿಕೆಯನ್ನು ತೋರಿದಂತಾಗುತ್ತಿತ್ತು; ಈಗ ಟೀಕೆಯ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸಿ, ತಮ್ಮ ಮನಸ್ಸಿನಲ್ಲಿ ಹುದುಗಿದ್ದ ಅಸಹನೆಯನ್ನು ತೋರಿದಂತಾಗಿದೆಯಲ್ಲವೆ? ಟೀಕಿಸಿದವರ ಸಂಖ್ಯೆ ಕಡಿಮೆಯಿದ್ದರೂ, ನಮ್ಮ ದೇಶದ ಚದುರಂಗ ಅಭಿಮಾನಿಗಳ ಮನ ನೋಯಿಸಿದ್ದಂತೂ ನಿಜ; ಮತ್ತು ಗುಕೇಶ್‌ನ ಸಾಧನೆಯ ಪ್ರಭಾವವನ್ನು ಕಡಿಮೆ ಮಾಡಲು ಯತ್ನಿಸಿದ್ದಂತೂ ನಿಜ.

ಅಸಾಧಾರಣ ಸಾಧನೆ

ತಮಿಳುನಾಡಿನಲ್ಲಿರುವ, ತೆಲುಗು ಭಾಷೆಯನ್ನಾಡುವ ಗುಕೇಶ್ ದೊಮ್ಮರಾಜು ಅವರು, ಸಿಂಗಪುರದಲ್ಲಿ ನಡೆದ 14 ಸುತ್ತುಗಳ ಪಂದ್ಯಾವಳಿಯಲ್ಲಿ ಚೀನಾದ ಡಿಂಗ್ ಲೆರಿಂಗ್ ಅವರನ್ನು ಸೋಲಿಸಿದ್ದು ನಿಜಕ್ಕೂ ಒಂದು ಅಸಾಧಾರಣ ಸಾಧನೆ ಎನಿಸಿದೆ. ಸಾಂಪ್ರದಾಯಿಕ ಚದುರಂಗದಲ್ಲಿ ಗುಕೇಶ್ ಪರಿಣಿತರು; ಎರಡರಿಂದ ಐದಾರು ಗಂಟೆಗಳ ತನಕ ನಡೆಯಬ್ಲಿ ಈ ರೀತಿಯ ಆಟದಲ್ಲಿ, ಆಳವಾಗಿ ಯೋಚಿಸಿ, ಕಾಯಿಗಳನ್ನು ನಡೆಸಿ, ಎದುರಾಳಿಯನ್ನು ಮಣಿಸಿ, ಕುಗ್ಗಿಸಿ, ಆತ ಮಾನಸಿಕವಾಗಿ ದಣಿದಾಗ ಮಾಡಬಹುದಾದ ಅತಿ ಚಿಕ್ಕ ತಪ್ಪುಗಳನ್ನೇ ಹಿಡಿದು, ಅದಕ್ಕೆ ತಕ್ಕಂತೆ ಕಾಯಿಗಳನ್ನು ಮುಂದಿಟ್ಟು ಸೋಲಿಸುವುದು ಈ ರೀತಿಯ ಆಟದ ವಿಶೇಷ. ಈ ರೀತಿಯ ದೀರ್ಘ ಅವಧಿಯ ಆಟದಲ್ಲಿ ಗುಕೇಶ್ ಪರಿಣಿತರು ಎಂದು ಡಿಂಗ್‌ಗೆ ಗೊತ್ತಿತ್ತು; ಆದ್ದರಿಂದ, ಸಿಂಗಪುರದಲ್ಲಿ ನಡೆದ ಪಂದ್ಯಾವಳಿಯಲ್ಲಿ, ನಿರಂತರವಾಗಿ ಡ್ರಾ ಮಾಡಿಕೊಳ್ಳುವಲ್ಲೇ ಡಿಂಗ್ ತಮ್ಮ ಗಮನವನ್ನು ಕೇಂದ್ರೀಕರಿಸಿದ್ದರು. ಕೊನೆಯಲ್ಲಿ ಇಬ್ಬರೂ ಸಮಬಲ (7 ಅಂಕ) ಪಡೆದರೆ, ನಂತರ ನಡೆಯುವ ಕಿರು ಅವಧಿಯ ಟೈ ಬ್ರೇಕರ್ ಪಂದ್ಯವನ್ನು ಡಿಂಗ್ ಬಯಸಿದ್ದರು.

ಏಕೆಂದರೆ, ಕಡಿಮೆ ಅವಧಿಯ ಆಟದಲ್ಲಿ, ರ್‍ಯಾಪಿಡ್ ಚೆಸ್‌ನಲ್ಲಿ ಡಿಂಗ್ ಭಾರೀ ಪರಿಣಿತ; ಟೈ ಬ್ರೇಕರ್ ಪಂದ್ಯಗಳು ಆ ರೀತಿಯೇ ನಡೆಯುವುದರಿಂದ, ತನ್ನ ಗೆಲುವು ಸುಲಭ ಎಂದು ಡಿಂಗ್ ಸಕಾರಣವಾಗಿಯೇ ಲೆಕ್ಕಹಾಕಿದ್ದರು. ಗುಕೇಶ್ ಗೆಲುವು ಸಾಧಿಸಿದ ನಿರ್ಣಾಯಕ ಕೊನೆಯ ಪಂದ್ಯದಲ್ಲೂ, ಡಿಂಗ್ ಅವರ ನಡೆಗಳನ್ನು ಗಮನಿಸಿದರೆ ಇದು ಸ್ಪಷ್ಟವಾಗುತ್ತದೆ : ಪದೇಪದೇ ಒಂದೇ ಕಾಯಿಯನ್ನು ನಡೆಸುವುದು, ಬೇಗ ಬೇಗನೆ ಕಾಯಿಗಳನ್ನು ಪರಸ್ಪರ ಹೊಡೆದು ಬದಲಾಯಿಸಿಕೊಳ್ಳುವುದು, ಇಂತಹ 'ಆಟ'ವನ್ನೇ ಡಿಂಗ್, ಆ ಕೊನೆಯ ಪಂದ್ಯದಲ್ಲೂ ಆಡಿದರು.

ಆದರೆ, ಗುಕೇಶ್ ಅವರಿಗೆ ಇದು ಗೊತ್ತಿತ್ತು; ದೀರ್ಘ ಅವಧಿಯು, ಸಾಂಪ್ರದಾಯಿಕ ಶೈಲಿಯ ಪಂದ್ಯದಲ್ಲೇ ಡಿಂಗ್ ಅವರನ್ನು ಸೆರೆಹಿಡಿಯಬೇಕೆಂದು ತಾಳ್ಮೆಯಿಂದ ಆಡಿದರು; ಚೀನಾದ ಹಾಲಿ ಚಾಂಪಿಯುನ್ ಮಾನಸಿಕವಾಗಿ ಸುಸ್ತಾಗುವಂತೆ ಮಾಡಿದರು. ಕೊನೆಗೊಮ್ಮೆ ಆತ ನಡೆಸಿದ ಆನೆಯನ್ನು ಬಡಿದರು, ಗೆದ್ದರು; 7.5 ಅಂಕ ಗಳಿಸಿ, ವಿಶ್ವದ ಅತಿ ಕಿರಿಯ ಚೆಸ್ ಚಾಂಪಿಯನ್ ಎಂಬ ದಾಖಲೆ ಬರೆದರು.

ಕೊನೆಯ ಆ ನಿರ್ಣಾಯಕ ಪಂದ್ಯದಲ್ಲಿ, ಡಿಂಗ್ ಅವರು 'ಬ್ಲಂಡರ್' (ದೊಡ್ಡ ತಪ್ಪು) ಮಾಡಿದರು, ಆದ್ದರಿಂದ ಗುಕೇಶ್ ಗೆಲ್ಲಲು ಸಾಧ್ಯವಾಯಿತು ಎಂದು, ಕೆಲವು ವಿಶ್ಲೇಷಕರು ಹೇಳಿದ್ದು, ಅದಕ್ಕೆ ಕೆಲವು ವಿದೇಶೀ ಪತ್ರಿಕೆಗಳು ಅತಿ ಪ್ರಚಾರ ನೀಡಿವೆ. ನಿಜ, ಡಿಂಗ್ ಬ್ಲಂಡರ್ ಆಟ ಆಡಿದ್ದು ನಿಜ; ಆದರೆ, ಅಂತಹ ಬುದ್ಧಿವಂತ ಆಟಗಾರ, ಹಾಲಿ ಚಾಂಪಿಯನ್ ಆ ರೀತಿ ತಪ್ಪು ನಡೆಯನ್ನು ಇಡುವಂತೆ ಮಾಡಿದ್ದು ಯಾರು? ನಮ್ಮ ದೇಶದ ಗುಕೇಶ್! ಆದ್ದರಿಂದಲೇ ಗುಕೇಶ್ ಗೆದ್ದರು, ವಿಶ್ವ ಚಾಂಪಿಯನ್ ಆದರು.

ಕಿರಿಯ ವಯಸ್ಸಿನ ಗುಕೇಶ್, ಇನ್ನಷ್ಟು ಸಾಧಿಸಬಲ್ಲರು, ಆ ತಾಕತ್ತು, ವಯಸ್ಸು ಅವರಲ್ಲಿದೆ. ಜತೆಗೆ, ಇವರ ಈ ವಿಜಯವು, ಇನ್ನಷ್ಟು ಭಾರತೀಯ ಆಟಗಾರರಿಗೆ ಸ್ಫೂರ್ತಿ ನೀಡುತ್ತದೆ, ನಮ್ಮ ದೇಶದಲ್ಲಿ ಚದುರಂಗದಾಟ ಇನ್ನಷ್ಟು ಎತ್ತರಕ್ಕೆ ಏರುವಂತೆ ಮಾಡುತ್ತದೆ. ಗುಕೇಶ್ ಅವರ ಗುರು, ಮಾಜಿ ವಿಶ್ವ ಚಾಂಪಿಯನ್ ವಿಶ್ವನಾಥನ್ ಆನಂದ್ ಸಹ ಇದನ್ನೇ ಮಾಡಿದ್ದರು. ಗುಕೇಶ್ ಅವರ ಗೆಲುವಿನಲ್ಲಿ ಆನಂದ್ ಅವರ ಪಾತ್ರ, ಮಾರ್ಗದರ್ಶನ ಎಲ್ಲವೂ ಇದೆ. ಗುಕೇಶ್‌ಗೆ ಶುಭವಾಗಲಿ!

ಬಾಲ್ಯದ ಕನಸು ನನಸು

ಬಾಲಕನಾಗಿದ್ದಾಗಲೇ ಗುಕೇಶ್ ಅವರಿಗೆ ಒಂದು ಕನಸಿತ್ತು : ಅದೇನೆಂದರೆ, ಆನಂದ್ ಅವರ ರೀತಿ, ತಾನೂ ವಿಶ್ವ ಚಾಂಪಿಯನ್ ಆಗಬೇಕು, ಜತೆಗೆ, ಅತಿ ಕಿರಿಯ ವಯಸ್ಸಿನಲ್ಲೇ ಆ ಸಾಧನೆ ಮಾಡಬೇಕು ಎಂದು. ಆನಂದ್ ಅವರು ನಡೆಸುವ ಚೆಸ್ ಅಕಾಡೆಮಿಯಲ್ಲಿ ಅವರಿಗೆ ಸೂಕ್ತ ತರಬೇತಿಯೂ ದೊರಕಿತು. ಜತೆಗೆ, ವೈದ್ಯರಾಗಿದ್ದ ತಂದೆ ಡಾ.ರಜನೀಕಾಂತ್ ಅವರು, ವೃತ್ತಿಗೆ ವಿರಾಮ ನೀಡಿ, ಗುಕೇಶ್ ಅವರ ತರಬೇತಿಯಲ್ಲಿ ತಾವೂ ತೊಡಗಿಕೊಂಡರು; ತಾಯಿ ಡಾ.ಪದ್ಮಾ ಅವರು ವೃತ್ತಿನಿರತರಾಗಿ, ಸೂಕ್ತ ಬೆಂಬಲ ನೀಡಿದರು. ತಮಿಳುನಾಡಿನಲ್ಲಿ ಚದುರಂಗದಾಟಕ್ಕೆ ಸೂಕ್ತ ವಾತಾವರಣವೂ ಇದೆ. ಎಲ್ಲವೂ ಸೇರಿ, ನಮ್ಮ ದೇಶದ ಎರಡನೆಯ ವಿಶ್ವ ಚಾಂಪಿಯನ್ ಪಟ್ಟ ಗುಕೇಶ್ ಪಾಲಾಯಿತು.



ಬಲಿಷ್ಠ ಆಟಗಾರನಾರು?

ಜಗತ್ತಿನಲ್ಲಿ ಇಂದು ಅತ್ಯುತ್ತಮ ಆಟಗಾರನಾರು ಎಂದು ಕೇಳಿದರೆ, ಸ್ಪಷ್ಟ ಉತ್ತರ ಮ್ಯಾಗ್ನಸ್ ಕಾರ್ಲಸನ್. ನಾರ್ವೆ ದೇಶದ ಈ ಆಟಗಾರನು, ಫಿಡೆ ಪಟ್ಟಿಯಲ್ಲಿ 2011ರಿಂದಲೂ ನಿರಂತರವಾಗಿ ಮೊದಲ ಸ್ಥಾನದಲ್ಲಿದ್ದಾನೆ; ಜತೆಗೆ, ಈಗಲೂ ಅತ್ಯುತ್ತಮವಾಗಿ ಆಡುತ್ತಲಿದ್ದಾನೆ. ಐದುಬಾರಿ ವಿಶ್ವ ಚಾಂಪಿಯನ್, ಐದು ಬಾರಿ ವಿಶ್ವ ರ್‍ಯಾಪಿಡ್ ಚೆಸ್ ಚಾಂಪಿಯನ್, ಏಳು ಬಾರಿ ವಿಶ್ವ ಬ್ಲಿಟ್ಸ್ ಚೆಸ್ ಚಾಂಪಿಯನ್ ಆಗಿರುವ ಈತ, ಚೆಸ್ ಇತಿಹಾಸದಲ್ಲೇ 2882ರಷ್ಟು ಹೆಚ್ಚಿನ ರೇಟಿಂಗ್ ಹೊಂದಿರುವ ಏಕೈಕ ಆಟಗಾರ. ಸಿಂಗಪುರದಲ್ಲಿ ಗುಕೇಶ್ ಗೆದ್ದ ನಂತರ, ತಾನು ಕಾರ್ಲಸನ್ ಜತೆ ಆಟವಾಡಲು ಇಷ್ಟಪಡುತ್ತೇನೆ ಎಂದು ಗುಕೇಶ್ ಗೌರವದಿಂದ ಹೇಳಿದ್ದುಂಟು!

ಪುಸ್ತಕ ವಿಮಾನ

ಕಾದಂಬರಿ ಹಿಂಬಾಲಿಸಿದ ರೀತಿ

» ಕೆ. ಸತ್ಯನಾರಾಯಣ

ಅರ್ಧ ಶತಮಾನದಿಂದ ಈ ಕಾದಂಬರಿ ನನ್ನನ್ನು ಹಿಂಬಾಲಿಸಿದೆ.

ಸುಮಾರು 52 ವರ್ಷಗಳ ಹಿಂದೆ ಮಂಡ್ಯದ ಸಮೀಪದಲ್ಲಿರುವ ಹಳ್ಳಿಯೊಂದಕ್ಕೆ ಗೆಳೆಯರೊಬ್ಬರನ್ನು ನೋಡಲು ಹೋಗಿದ್ದೆ. ಭೇಟಿಯ ನಂತರ ಇಬ್ಬರೂ ವಾಪಸ್ ಬರುತ್ತಿದ್ದಾಗ, ಗ್ರಾಮದ ಪ್ರವೇಶ ಭಾಗದಲ್ಲಿ ನಡುವಯಸ್ಸನ್ನು ಮೀರಿದ ಹೆಂಗಸರೊಬ್ಬರು ಎದುರಾದರು. ಗೆಳೆಯ ಅವರನ್ನು ಪರಿಚಯಿಸಿದ. ಆಕೆ ದಣಿದಿದ್ದರು. ಮುಖದಲ್ಲಿ ಆಯಾಸವಿತ್ತು, ವ್ಯಗ್ರತೆಯಿತ್ತು. ಅವರಿಗೇ ಅವರ ಬಗ್ಗೆ ಯಾವ ರೀತಿಯ ಆಸಕ್ತಿಯೂ ಇರಲಿಲ್ಲವೆಂದು ಅವರ ವೇಶಭೂಷಣ, ಕೇಶವಿನ್ಯಾಸ, ಉಸಿರಾಟಕ್ಕಿಂತ ನಿಟ್ಟುಸಿರೇ ಮುಖ್ಯವಾದ ಆಂಗಿಕಭಾಷೆಯಿಂದ ವ್ಯಕ್ತವಾಗುತ್ತಿತ್ತು. ಬೆಂಗಳೂರಿನ ಪ್ರಸಿದ್ಧ ಕುಟುಂಬವೊಂದಕ್ಕೆ ಸೇರಿದ್ದ ಆಕೆ ತುಂಬಾ ಆಯಾಸದ ಧ್ವನಿಯಲ್ಲಿ ಎರಡು ಮೂರು ವಾಕ್ಯಗಳಲ್ಲಿ ತಮ್ಮ ಒಂಟಿತನದ ಬದುಕನ್ನು ಕುರಿತು ಹೇಳಿಕೊಂಡರು. ಏಕೆ ಅವರು ನನಗೆ ಆವತ್ತು ಸಿಕ್ಕಿದರು? ಏಕೆ ಎರಡು ಮೂರು ವಾಕ್ಯಗಳಲ್ಲೇ ತಮ್ಮ ಬದುಕನ್ನು ಕುರಿತು ಹೇಳಿಕೊಂಡರು?

ಎಂಟು ಹತ್ತು ವರ್ಷಗಳ ನಂತರ ಬೆಂಗಳೂರಿನಲ್ಲಿ ಆಕೆಯ ಕುಟುಂಬದ, ಸಮಾಜದ ಬೇರೆ ಬೇರೆ ವಲಯಗಳೊಡನೆ ನನಗೆ ಹಲವು ಸ್ತರಗಳ ಒಡನಾಟ ಬಂತು. ನನ್ನ ತಂಗಿ ಮತ್ತು ತಮ್ಮನ ಕುಟುಂಬ ಕೂಡ ಇವರೆಲ್ಲ ವಾಸಿಸಿದ, ವಾಸಿಸುತ್ತಿದ್ದ (ಕ್ರಮೇಣ ಕಣ್ಮರೆಯಾದ) ನಗರದ ಭಾಗದಲ್ಲೇ ವಾಸಿಸುತ್ತಿದ್ದರು. ಈ ಬಡಾವಣೆಗಳ ಸುತ್ತ ಬದುಕು ಕಟ್ಟಿಕೊಂಡಿದ್ದ, ಕಟ್ಟಿಕೊಳ್ಳಲಾಗದೇ ಹೋದ ಬೇರೆ ಸಮುದಾಯಗಳ ಜನ ಕೂಡ ಒಡನಾಟಕ್ಕೆ ಸಿಕ್ಕಿದರು. ಇವರೆಲ್ಲರ ಬದುಕಿಗೂ, ನನ್ನ ಬದುಕಿಗೂ ಪರಸ್ಪರ ಸಂಬಂಧ ಇದೆ, ಇವರೆಲ್ಲ ಅಸಾಮಾಜಿಕವಾಗಿ ಆದರೆ ಸಾಂಸ್ಕೃತಿಕವಾಗಿ ಮತ್ತು ಮಾನವೀಯವಾಗಿ ನನ್ನ ಜ್ಞಾತಿಗಳು ಎಂಬುದು ಕಾದಂಬರಿಯನ್ನು ಬರೆಯುವಾಗ ತಿಳಿದು, ಮನಸ್ಸು ತುಂಬಿ ಬಂತು.

ಹನ್ನೆರಡು ಹದಿನೈದು ವರ್ಷಗಳ ನಂತರ ತಮಿಳುನಾಡಿನಲ್ಲಿ ಕೆಲಸ ಮಾಡುತ್ತಿದ್ದಾಗ, ಎರಡು ಮೂರು ನಿಮಿಷದಲ್ಲಿ ತನ್ನ ಬದುಕಿನ ಬಗ್ಗೆ ಹೇಳಿಕೊಂಡಾಕೆಯ ಸಮುದಾಯದವರ ಒಡನಾಟ ಮತ್ತೆ ಸಿಕ್ಕಿತು. ಇವರೆಲ್ಲ ಬೆಂಗಳೂರಿಗೆ, ಕರ್ನಾಟಕಕ್ಕೆ, ಮೈಸೂರಿಗೆ ಆಗಾಗ್ಗೆ ಬಂದು ಹೋಗಿದ್ದರು. ಈ ಕಾದಂಬರಿಯಲ್ಲಿ ಬರುವ ಎಲ್ಲರನ್ನೂ ಭೇಟಿ ಮಾಡಿದ್ದರು.

ವಿವಾಹ, ಕುಟುಂಬ ವ್ಯವಸ್ಥೆಯಿಂದ ಹೊರಬಂದು, ಕಲಾವಿದೆಯಾಗಿ ತನ್ನ ಬದುಕನ್ನು, ತನ್ನ ಮಗಳ, ಮೊಮ್ಮಗಳ ಬದುಕನ್ನು ಕಟ್ಟಿಕೊಳ್ಳಲು ಹೋಗಿ ಹೈರಾಣಾಗಿದ್ದ, ಆದರೆ ಗೆಲ್ಲುತ್ತಿದ್ದ ಹಿರಿಯಾಕೆಯೊಬ್ಬರು ಇವರೆಲ್ಲರ ಬದುಕಿನಲ್ಲಿ ಪ್ರವೇಶಿಸಿಯೂ ಪ್ರವೇಶಿಸದ ಹಾಗೆ ನಿರ್ದೇಶಿಸುತ್ತಿದ್ದರು. 'ನೋಡಿ ನನ್ನ ಮಗಳನ್ನು. ಮದುವೆ, ಮಕ್ಕಳು, ಫ್ಯಾಮಿಲಿ ಅಂತ ಅಡ್ಡದಾರಿ ಹಿಡಿಯಲು ಹೊರಟಿದ್ದಾಳಲ್ಲ' ಎಂದು ನನ್ನ ಬಳಿ ಒಮ್ಮೆ ಅಲವತ್ತುಕೊಂಡಾಗ, ಆ ಧೀಮಂತ ಮಹಿಳೆ, ನಾವೆಲ್ಲ ಬದುಕುತ್ತಿರುವ ರೀತಿಯನ್ನು ವ್ಯಾಖ್ಯಾನಿಸುತ್ತಿರುವಂತೆಯೂ, ಈ ಬರವಣಿಗೆಗೂ ಮುಂದಿನ ಬರವಣಿಗೆಗೂ ಬೇಕಾದ ದೃಷ್ಟಿಕೋನ, ಪ್ರಬುದ್ಧತೆಯನ್ನು ದಾನ ಮಾಡುತ್ತಿರುವಂತೆಯೂ ಕಂಡಿತು. ಸುಂದರಮ್ಮ ಎಂಬ ಕಲ್ಪಿತ ಹೆಸರಿರುವ ಆಕೆಗೂ, ಆಕೆ ಸೇರಿದ ನರಸೀಪುರ, ಮೂಗೂರು ಸೀಮೆಗೂ, ಅವರೆಲ್ಲರ ಕಳೆದು ಹೋದ ಬದುಕಿನ ವಿನ್ಯಾಸಕ್ಕೂ ಈ ಬರವಣಿಗೆ ನಾನಾ ರೀತಿಯಲ್ಲಿ ಋಣಿಯಾಗಿದೆ.



ಅಂಪೈರ್ ಮೇಡಂ
ಕಾದಂಬರಿ
ಲೇ: ಕೆ. ಸತ್ಯನಾರಾಯಣ
ಪ್ರ: ಕ್ರಿಯೇಟಿವ್ ಪುಸ್ತಕಮನೆ

ಇದೆಲ್ಲ ಸೇರಿ ಒಂದು ಕಾದಂಬರಿಯಾಗುತ್ತದೆ ಎಂದು ಹಲವು ವರ್ಷಗಳಿಂದ ನನಗೆ ನಾನೇ ಹೇಳಿಕೊಂಡಿದ್ದರೂ, ಬರೆಯಲು ಧೈರ್ಯ ಬಂದಿರಲಿಲ್ಲ. ಈ ವರ್ಷದ (2024) ಮೊದಲ ಆರೇಳು ತಿಂಗಳು ಸಿಯಾಟಲ್‌ನಲ್ಲಿ ಮಗನ ಮನೆಯಲ್ಲಿ ಇದ್ದಾಗ ಬರೆಯುವ ಹೆಣಗಾಟ ಶುರುವಾಯಿತು. ಮೊದಮೊದಲ ಪುಟಗಳೊಡನೆ ಹೋರಾಡುತ್ತಿದ್ದಾಗ ನನ್ನ ಮಗ ಚಂದನ್, ಕಾದಂಬರಿ ಯಾತರ ಬಗ್ಗೆ, ಯಾರ ಬಗ್ಗೆ ಎಂದು ಕೇಳಿದ. ಅರ್ಧ ಶತಮಾನದ ಹಿಂದಿನ ನೆನಪು ಹೇಳಿದೆ. ಅಷ್ಟು ಹಿಂದಿನ ನೆನಪು ಈಗ ಬರವಣಿಗೆಯಲ್ಲಿ ರೂಪಾಂತರಗೊಳ್ಳುವಾಗ, ನೆನಪಿನ ಹಿಂದೆಯೇ ಬರವಣಿಗೆಗೆ ಬೇಕಾದ ಒತ್ತಡ ಮತ್ತು ಜೀವಂತಿಕೆಯನ್ನು ಕೂಡ ತಾನೇ ತಾನಾಗಿ ಎಳೆದುಕೊಂಡುಬರುತ್ತದೆ, ಪಟ್ಟು ಹಿಡಿದು ಬರಿ ಎಂದು ಪ್ರೋತ್ಸಾಹಿಸಿದ. ಅವನು ಹೇಳಿದ ಹಾಗೆಯೇ ಆಯಿತು. ಪ್ರಾರಂಭದ ಪ್ರಸವ ವೇದನೆಯ ನಂತರ ಬರವಣಿಗೆ ಕೈ ಹಿಡಿಯಿತು.

ಕಾದಂಬರಿಯೊಂದು ಹೇಗೆ ಹುಟ್ಟುತ್ತದೆ? ಕಥನದ ಎಳೆಗಳು, ಮೂಲದ್ರವ್ಯ ಲೇಖಕನ ಮನದಲ್ಲಿ ಎಷ್ಟು ದಿನಗಳಿಂದ ಮಂಥನ ನಡೆಸುತ್ತಿರುತ್ತದೆ? ಅದು ಯಾವಾಗ ಕಾದಂಬರಿಯಾಗಿ ಅಕ್ಷರ ರೂಪ ಪಡೆಯುತ್ತದೆ? ಇಂತಹ ಪ್ರಶ್ನೆಗಳಿಗೆ, ಕೆ. ಸತ್ಯನಾರಾಯಣ ಈ ಮಾತುಗಳು, ಒಂದು ಉತ್ತರವೂ ಆಗಬಲ್ಲದು! 'ಅರ್ಧ ಶತಮಾನದಿಂದ ಈ ಕಾದಂಬರಿ ನನ್ನನ್ನು ಹಿಂಬಾಲಿಸಿದೆ' ಎಂದು, ಇದೀಗ ಪ್ರಕಟಗೊಂಡಿರುವ 'ಅಂಪೈರ್ ಮೇಡಂ' ಕಾದಂಬರಿಯ ಕುರಿತು ಅವರು ಹೇಳಿದ್ದಾರೆ!

ಕಲ್ಲಹಳ್ಳಿ ದಾಟಿ ಎಡಕ್ಕೆ ತಿರುಗಿದ ಮೇಲೆ ರಸ್ತೆ ಅಷ್ಟಕ್ಕಷ್ಟೆ. ರಿಕ್ಷಾ ಕುಲಕಾಡುತ್ತಾ ಕಿರಂಗೂರಿಗೆ ಹೋಗುತ್ತಿತ್ತು. ರಸ್ತೆ ನೇರವಾಗಿದ್ದರೂ ರಿಕ್ಷಾ ಅಡ್ಡಡ್ಡಲಾಗಿ ಚಲಿಸುತ್ತಿತ್ತು. ವಿಮಲಾಬಾಯಿಗೆ ಮಾತ್ರ ರಿಕ್ಷಾ ವೇಗವಾಗಿ ಹೋಗುತ್ತಿದೆ ಎನಿಸಿತು. ಹೀಗೇ ರಿಕ್ಷಾ ವೇಗವಾಗಿ ಹೋಗುತ್ತಿದ್ದರೆ, ರಸ್ತೆಯೆಲ್ಲ ಮೇಲಕ್ಕೆ ಎದ್ದು ಬಂದುಬಿಡಬಹುದು ಎನಿಸಿತು. ರಿಕ್ಷಾ ಕಿರಂಗೂರಿನ ಗೋವಿಂದರಾಜು ಮೇಷ್ಟರ ಮನೆ ಮುಂದೆ ನಿಂತಾಗ 50 ರೂಪಾಯಿ ನೋಟು ಕೊಟ್ಟಾಗ ಡ್ರೈವರ್ ಚಿಲ್ಲರೆ ಇಲ್ಲ ಎಂದಾಗ ಪರವಾಗಿಲ್ಲ ಅಂದದ್ದಕ್ಕೆ ಅವನಿಗೆ ಖುಷಿಯಾಗಿ ವಿಮಲಾಬಾಯಿ ಕಡೆ ನೋಡದೆ ರಿಕ್ಷಾವನ್ನು ವೇಗವಾಗಿ ಓಡಿಸುತ್ತಾ ಹೊರಟು ಹೋದ. ಬೀದಿ ಬದಿಯಲ್ಲಿದ್ದ ಪೆಟ್ಟಿ ಅಂಗಡಿ ಮುಂದೆ ಒಂದೆರಡು ನಿಮಿಷ ನಿಂತಾಗಲೂ ಎಂಜಿನ್ ಆಫ್ ಮಾಡಲಿಲ್ಲ.

ವಿಮಲಾಬಾಯಿ ಶಾಲೆಯ ಜವಾನ ಶ್ರೀಕಂಠನಿಗೆ ಕಾಗದ ಬರೆದು ತಿಳಿಸಿದ್ದಳು. ಇಂಥ ದಿನ ಇಷ್ಟು ಹೊತ್ತಿಗೆ ಬರುತ್ತೇನೆ ಎಂದು. ಮನೆ ಬಾಗಿಲು ತೆಗೆದು, ಕಸ ಗುಡಿಸಿ, ನೀರು ಹಿಡಿದು, ಹಾಲು-ಮೊಸರು-ತರಕಾರಿ ಎಲ್ಲ ತಂದಿಟ್ಟಿರಬೇಕು ಅಂತಾ. ಆದರೆ ಆಸಾಮಿ ಶ್ರೀಕಂಠ ಪತ್ತೆಯೇ ಇಲ್ಲ. ಗೋವಿಂದರಾಜ್ ಸಾರ್ ಮನೆ ಮುಂದೆ ಕೂಡ ಕಸ ಕಡ್ಡಿ ಹಾಗೇ ಇದೆ. ಗುಡಿಸಿಲ್ಲ, ನೀರು ಹಾಕಿಲ್ಲ, ರಂಗೋಲಿ ಬಿಡಿಸಿಲ್ಲ. ಅಂದರೆ ಅವರಿನ್ನೂ ಮೈಸೂರಿನಿಂದ ಬಂದಿಲ್ಲ. ರಂಗನಾಯಕಮ್ಮನಿಗೆ ಆರೋಗ್ಯ ಇನ್ನೂ ಸರಿಯಿಲ್ಲವೇನೋ? ಆಸ್ಪತ್ರೆಯಲ್ಲೇ ಇದ್ದಾಳೋ ಏನೋ? ವಿಮಲಾಬಾಯಿ ಉಷ್ ಅಪ್ಪ ಎಂದು ಒಂದೆರಡು ಸಲ ಅಂದುಕೊಂಡು, ಮನೆ ಮುಂದಿನ ಪುಟ್ಟ ಜಗುಲಿಯ ಮೇಲೆ ಕುಳಿತಳು. ಜಗುಲಿಯ ಮೂಲೆಯಲ್ಲಿ ಎರಡು ಗೂಡೆಗಳಿದ್ದವು. ಒಂದು ಚಿಕ್ಕದು, ಇನ್ನೊಂದು ದೊಡ್ಡದು. ಚಿಕ್ಕ ಗೂಡೆಯಲ್ಲಿದ್ದ ತರಕಾರಿ ಸಿಪ್ಪೆ ಒಣಗಿ ಹೋಗಿತ್ತು. ದೊಡ್ಡ ಗೂಡೆಯ ತಳಭಾಗವೆಲ್ಲ ಬಿಟ್ಟು ಹೋಗಿತ್ತು. ಎಷ್ಟು ವರ್ಷಗಳಿಂದ ನಾನು ಈ ಗೂಡೆಗಳನ್ನು ನೋಡ್ತಾನೇ ಇದೀನಿ. ಮೇಷ್ಟರ ಮನೆಯವರು ಬದಲಾಯಿಸೇ ಇಲ್ಲ. ಯಾವುದರಲ್ಲೂ ಆಸ್ಥೆಯಿಲ್ಲದ ಜನ.

ಬೀದಿಯಲ್ಲಿ ಹೋಗಿ ಬರುವವರೆಲ್ಲ ಒಂದು ಕ್ಷಣ ನಿಂತು ಇವಳ ಕಡೆ ಕುಚೋದ್ಯದ ನೋಟ ಬೀರಿ 'ಏನು ಮೇಡಂ, ಇನ್ಮುಂದೆ ನಮ್ಮೂರಲ್ಲೇ ಇರ್ತೀರಂತಲ್ಲ, ಸೆಟಲ್ ಆಗ್ತೀರಂತಲ್ಲ, ಹೌದಾ' ಎಂದು ಕೇಳುತ್ತಿದ್ದರು. ಒಬ್ಬರು ಹಾಗೆ ಕೇಳುತ್ತಿರಬೇಕಾದರೆ, ಪಕ್ಕದಲ್ಲಿದ್ದವರ ಮುಖದಲ್ಲಿ ಕುಹಕ, ಚೇಷ್ಟೆ ಬುದ್ಧಿ ಇನ್ನೊಂದಿಷ್ಟು ವಿಶಾಲವಾಗೋದು. ವಿಮಲಾಬಾಯಿ ಒಂದಿಬ್ಬರಿಗೆ ಚುಟುಕಾಗಿ ಉತ್ತರ ಕೊಟ್ಟು ಆಕಡೆ ಮುಖ ತಿರುಗಿಸಿದಳು. ಹಾಳು ಶ್ರೀಕಂಠ! ಮನೆ ಬಾಗಿಲು ತೆಗೆದು ರೆಡಿ ಮಾಡದೆ ಹೋದರೂ, ನಾನು ಬರೋದರ ಬಗ್ಗೆ ಊರಿಗೆಲ್ಲ ಹೇಳಿಬಿಟ್ಟಿದ್ದಾನೆ. ನಾನೇನೂ ಅವನಿಗೆ ಇದನ್ನೆಲ್ಲ ಹೇಳಿರಲಿಲ್ಲವಲ್ಲ. ಬರ್ತಾ ಇದೀನಿ, ಇಂತಿಂತ ಸಾಮಾನು ಬೇಕು ಅಂತ ಬರೆದಿದ್ದೆ. ಇಲ್ಲೇ ಇರ್ತೀನಿ ಅಂತ ಬರೆದಿರಲಿಲ್ಲವಲ್ಲ ಅಂದುಕೊಂಡು ಕಾಗದದಲ್ಲಿ ಏನು ಬರೆದಿದ್ದೆ ಎಂದು ನೆನಪಿಸಿಕೊಳ್ಳಲು ಪ್ರಯತ್ನಿಸಿದಳು. ಏನೂ ನೆನಪಿಗೆ ಬರಲಿಲ್ಲ. ಆತುರಾತುರದಲ್ಲಿ ಕಾಗದ ಬರೆದದ್ದು, ಧಾವಂತದಲ್ಲಿ ಪೋಸ್ಟ್ ಆಫೀಸ್ ತನಕ ನಡೆದುಕೊಂಡು ಹೋಗಿ ಪೋಸ್ಟ್ ಡಬ್ಬಕ್ಕೆ ಹಾಕಿದ್ದು, ಕಾಗದವನ್ನು ಡಬ್ಬಕ್ಕೆ ಹಾಕಿದ ತಕ್ಷಣವೇ ಮನಸ್ಸಿಗೆ ಎಷ್ಟು ನಿರಾಳ ಎನಿಸಿತ್ತು. ಏನೋ ಸಾಧಿಸಿದವಳಂತೆ, ಯಾರಿಗೂ ಗೊತ್ತಿಲ್ಲದೆ ಒಂದು ಗುಟ್ಟು ತನ್ನೊಬ್ಬಳಲ್ಲೇ ಇರುವಂತೆ, ತನ್ನನ್ನು ತಾನೇ ಮೆಚ್ಚಿಕೊಳ್ಳುತ್ತ ಮನೆಗೆ ವಾಪಸ್ ಬಂದಿದ್ದಳು. ಬೀದಿಯಲ್ಲಿ ಹೋಗಿ ಬರುವವರೆಲ್ಲ ಮತ್ತೆ ಮತ್ತೆ ಅದೇ ಪ್ರಶ್ನೆ ಕೇಳುತ್ತಾ ಕೇಳುತ್ತಾ ಕೊನೆಗೆ ಒಬ್ಬರ ಮೇಲೆ ಸಿಡುಕಿದಳು. ಸಿಡುಕಿಸಿಕೊಂಡವರು ಮುಖ ಪೆಚ್ಚಗೆ ಮಾಡಿಕೊಂಡು ಕಾಲು ಎಳೆದುಕೊಂಡು ಹೋದರು. ಕಾಲು ಎಳೆದುಕೊಂಡು ಹೋಗುವಾಗ, ಹಿಂತಿರುಗಿ ಹಿಂತಿರುಗಿ ಇವಳನ್ನೇ ವಿಚಿತ್ರ ಪ್ರಾಣಿಯಂತೆ ನೋಡುತ್ತಿದ್ದರು. ವಿಮಲಾಬಾಯಿ ಕೂತಲ್ಲೇ ಬಲಪಾದದ ಮುಂಭಾಗದಿಂದ ಎಡಪಾದವನ್ನು ಬಲವಾಗಿ ಒತ್ತಿ ತೀಡಿಕೊಂಡಳು. ಕೂತಲ್ಲೇ ಕಾಲು ಬೆರಳುಗಳ ನೆಟಿಕೆ ತೆಗೆಯಲು ಪ್ರಯತ್ನಿಸಿದಳು. ಒಂದೆರಡು ಬೆರಳುಗಳಲ್ಲಿ ನೆಟಿಕೆ ಬರಲಿಲ್ಲ. ಕಿರಿಕಿರಿಯಾಯಿತು. ಮನಸ್ಸು ಮತ್ತಷ್ಟು ವ್ಯಗ್ರಗೊಂಡಿತು. ವಿಮಲಾಬಾಯಿ ಕಾಯುತ್ತಲೇ ಇದ್ದಳು.

(ಕೆ. ಸತ್ಯನಾರಾಯಣ ಅವರ 'ಅಂಪೈರ್ ಮೇಡಂ' ಕಾದಂಬರಿಯ ಆಯ್ದ ಭಾಗ)

ವಿಶ್ವವಾಣಿ ಅಂಕಿತ ಟಾಪ್ ಟೆನ್

1
ಮಾಗಧ
(ಅಶೋಕನ ಕಾಲದ ಚಿತ್ರಣ)
ಲೇ: ಸಹನಾ ವಿಜಯಕುಮಾರ್
ಪ್ರ: ಸಾಹಿತ್ಯ ಭಂಡಾರ, ಬೆಂಗಳೂರು
ಬೆಲೆ : ರೂ 915/-



2
ವಾತಾಪಿ
(ಇಮ್ಮಡಿ ಪುಲಕೇಶಿಯ ರೋಚಕ ಚರಿತ್ರೆ)
ಲೇ: ಸಂತೋಷಕುಮಾರ ಮೆಹೆಂದಳೆ
ಪ್ರ: ಸಾಹಿತ್ಯಲೋಕ ಪಬ್ಲಿಕೇಷನ್ಸ್, ಬೆಂಗಳೂರು
ಬೆಲೆ : ರೂ 449/-



3
ಅನ್ ಬಾಕ್ಸಿಂಗ್ ಬೆಂಗಳೂರು
(2000 ಇಸವಿಯ ನಂತರದ ಬೆಂಗಳೂರು)
ಲೇ: ಮಾಲಿನಿ ಗೋಯಲ್, ಪ್ರಶಾಂತ್ ಪ್ರಕಾಶ್
ಕನ್ನಡಕ್ಕೆ : ಪ್ರತಿಭಾ ನಂದಕುಮಾರ್
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ : ರೂ 695/-



4
ಹಿಮಾಲಯ ಋಷಿಗಳ ದಿವ್ಯ ಸಂದೇಶಗಳು
(ಸಕಾಲಿಕ ಮತ್ತು ಕಾಲಾತೀತ)
ಲೇ: ಗುರು ಸಕಲಮಾ
ಪ್ರ: ಸಕಲಮಾ ಪ್ರಕಾಶನ, ಬೆಂಗಳೂರು
ಬೆಲೆ : ರೂ 399/-



5
ನಾಡವರ್ಗಳ್
(ಸಂಪನ್ನರ ನಡೆನುಡಿ)
ಲೇ: ಅಗ್ರಹಾರ ಕೃಷ್ಣಮೂರ್ತಿ
ಪ್ರ: ಜೀರುಂಡೆ ಪುಸ್ತಕ, ಬೆಂಗಳೂರು
ಬೆಲೆ : 200/-

6
ಧಮ್ಮಯಾನ
(ಬುದ್ಧ ಮತ್ತು ಬೌದ್ಧಧರ್ಮವನ್ನು ಕುರಿತು)
ಲೇ:ಮೂಡ್ನಾಕೂಡು ಚಿನ್ನಸ್ವಾಮಿ
ಪ್ರ: ಲಡಾಯಿ ಪ್ರಕಾಶನ, ಗದಗ
ಬೆಲೆ : ರೂ 550/-



7
ಅಪರಾಧ ಮತ್ತು ಶಿಕ್ಷೆ
(ಪ್ರಸಿದ್ಧ ರಶಿಯನ್ ಕಾದಂಬರಿಯ ಕನ್ನಡಾನುವಾದ)
ಲೇ: ಫ್ಯೊದೋರ್ ದಾಸ್ತೋವ್ ಸ್ಕಿ
ಅನು: ಓ.ಎಲ್. ನಾಗಭೂಷಣಸ್ವಾಮಿ
ಪ್ರ: ಅಭಿರುಚಿ ಪ್ರಕಾಶನ, ಮೈಸೂರು
ಬೆಲೆ : ರೂ 700/-



8
ಕೋಟಿ ತೀರ್ಥ
(ದಕ್ಷಿಣ ಕನ್ನಡ ಜಿಲ್ಲೆಗೆ ಒಕ್ಕಲಿಗ ಗೌಡರ ವಲಸೆಯ ಕಾದಂಬರಿ)
ಲೇ: ಲಲಿತಾಜ ಮಲ್ಲಾರ
ಪ್ರ: ಸ್ನೇಹ ಬುಕ್ ಹೌಸ್, ಬೆಂಗಳೂರು
ಬೆಲೆ : ರೂ 495/-



9
ಇಳಂಗೋವನ್
(ಆಧ್ಯಾತ್ಮಿಕ ಪಯಣ)
ಲೇ: ಜೋಗಿ
ಪ್ರ: ಸಾವಣ್ಣ ಪ್ರಕಾಶನ, ಬೆಂಗಳೂರು
ಬೆಲೆ : ರೂ 360/-



10
ಪ್ರಾಚೀನ ಭಾರತದಲ್ಲಿ ರಾಜಕೀಯ ಹಿಂಸಾಚಾರ
ಲೇ: ಉಪಿಂದರ್ ಸಿಂಗ್
ಅನು : ಗೊ.ರು. ಚನ್ನಬಸಪ್ಪ
ಪ್ರ: ಕರ್ನಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು ಬೆಲೆ : ರೂ 750/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004. ದೂರವಾಣಿ: 26617100/26617755 ಮೊಬೈಲ್ ನಂ: 9019190502

ಆಲ್ಕೆರೆ ಜಡ್ಡು



ಆಲ್ಕೆರೆ ಜಡ್ಡು
ಲೇ: ಮಧುಕರ್ ಬಳ್ಕೂರು
ಪ್ರ: ಬೆನಕ ಬುಕ್ಸ್ ಬ್ಯಾಂಕ್, ಯಳಗಲ್ಲು
7338437666 ಬೆಲೆ ರು.160/-

» ಪ್ರೇಮಾನಂದ ಕಾಮತ್

''ಕ್ರಿಕೆಟ್ ಅಂದರೆ ಪರಿಶುದ್ಧ ಕನವರಿಕೆ, ನೆನಪುಗಳ ಕಂತೆ, ಸಂತೆ. ಅಂದಿನ, ಇಂದಿನ ಕ್ರಿಕೆಟ್ ಪ್ರೇಮಿಗಳ ಅಭಿರುಚಿ, ಇದನ್ನು ವೀಕ್ಷಿಸುವ, ಪ್ರತಿಕ್ರಿಯಿಸುವ, ಸಂಭ್ರಮಿಸುವ ರೀತಿಯೇ ಬೇರೆ. ಸಂಪೂರ್ಣ ಭಿನ್ನ. ಅಂದಿನದು ಟೆಸ್ಟ್ ಜಮಾನಾ, ರೇಡಿಯೋದಲ್ಲಿ ವೀಕ್ಷಕ ವಿವರಣೆ ಆಲಿಸಿ ಪ್ರತಿಯೊಂದು ದೃಶ್ಯವನ್ನು ಕಣ್ಮುಂದೆ ಕಲ್ಪಿಸಿಕೊಳ್ಳುವಲ್ಲಿ ಸಿಗುವ ಮಜಾ ಇಂದಿನ ಟಿವಿ ಯುಗದಲ್ಲಿ ಖಂಡಿತ ಸಿಗದು. ಹಳ್ಳಿಯ ಓರಗೆಯವರೆಲ್ಲ ಗದ್ದೆ ಬಯಲಲ್ಲಿ ಸಿಕ್ಕಿದ ಪರಿಕರಗಳನ್ನು ಹಿಡಿದು ಕ್ರಿಕೆಟ್ ಆಡುವ ಖುಷಿ ಸಾಟಿಯಿಲ್ಲದ್ದು. ಕಳೆದ ಶತಮಾನದ 90ರ ದಶಕದ ತನಕ ಕ್ರಿಕೆಟ್ ಅತ್ಯಂತ ಸ್ವಚ್ಛವಾಗಿತ್ತು, ಆಪ್ಯಾಯಮಾನವಾಗಿತ್ತು. ಅನಂತರ ಫಿಕ್ಸಿಂಗ್, ಬೆಟ್ಟಿಂಗ್ ದಂಧೆ ವ್ಯಾಪಿಸತೊಡಗಿದಾಗ ಕ್ರಿಕೆಟ್ ಕೆಡುತ್ತ ಹೋಯಿತು. ಗೆದ್ದರೂ ಅನುಮಾನ, ಸೋತರೂ ಅನುಮಾನ ಎನ್ನುವಂಥ ಕಾಲಘಟ್ಟಕ್ಕೆ ಕ್ರಿಕೆಟ್ ಬಂದು ನಿಂತಿದೆ. ಟಿ20 ಲೀಗ್‌ಗಳೇ ಕ್ರಿಕೆಟ್ ಎಂಬಂತಾಗಿದೆ. ದುಡ್ಡು ದಂಡಿಯಾಗಿ ಹರಿದು ಬರತೊಡಗಿದೆ. ಕ್ರಿಕೆಟಿಗರು ಕುರಿಗಳಂತೆ ಹರಾಜಾಗುತ್ತಿದ್ದಾರೆ. ಟೆಸ್ಟ್ ಬಿಡಿ, ಏಕದಿನ ಕ್ರಿಕೆಟ್ ಮೇಲಿನ ಆಸಕ್ತಿ ಕೂಡ ನಿಧಾನವಾಗಿ ಕರಗಿ ಹೋಗತೊಡಗಿದೆ.

ಇಂಥ ಸ್ಥಿತಿಯಲ್ಲಿ ಕಳೆದ ಶತಮಾನದ ನೈಜ ಕ್ರಿಕೆಟ್ ಅಭಿಮಾನಿಗಳ ಮುಂದಿರುವುದು ಒಂದೇ ಮಾರ್ಗ. ಅದು ಕ್ರಿಕೆಟ್ ಕನವರಿಕೆ, ನಾಸ್ಟಾಲ್ಜಿಯಾ. ನೆನಪಿನ ಭಿತ್ತಿಯಲ್ಲಿ ಇದಕ್ಕೆ ವಿಶಿಷ್ಟ ಜಾಗ ಸದಾ ಮೀಸಲು. ಅಂದಿನ ಚೆಂಡು-ದಾಂಡಿನ ರೋಚಕ ಕಥನವನ್ನು ಮೆಲುಕು ಹಾಕುವುದರಲ್ಲಿ ಅದೇನೋ ಸಂತೃಪ್ತ ಭಾವ. ಅದನ್ನಿಲ್ಲಿ ಅತ್ಯಂತ ಸುಂದರವಾಗಿ, ಅತ್ಯಂತ ಆಪ್ತವಾಗಿ ಕಟ್ಟಿಕೊಟ್ಟಿದ್ದಾರೆ ಮಧುಕರ್ ಬಳ್ಕೂರು ಅವರು.

ಇದು 'ಮೆಮೊರೀಸ್ ಆಫ್ ನೈಂಟೀಸ್'. 90ರ ದಶಕದ ಸವಿ ಸವಿ ನೆನಪುಗಳನ್ನು ಲೇಖಕರು ಇಲ್ಲಿ ಮೊಗೆದು ಕೊಟ್ಟಿದ್ದಾರೆ. ನೀವು ಅಂದಿನ ಕಾಲದ ಕ್ರಿಕೆಟ್ ಪ್ರೇಮಿಗಳಾದರೆ ಇಲ್ಲಿನ ಬರಹಗಳನ್ನು ಮೆಚ್ಚಿಕೊಳ್ಳದೆ ಇರಲಾರಿರಿ. ಅಂದಿನ ಕ್ರಿಕೆಟಿಗರ ಸಾಧನೆಗಳು, ದಾಖಲೆಗಳು, ಇವು ಮೂಡಿಸಿರುವ ರೋಮಾಂಚನ, ಜೊತೆಗೆ ಇವರ ಆದರ್ಶಗಳು ಹೇಗೆ ಒಂದು ಕಾಲಘಟ್ಟದ ಕ್ರಿಕೆಟ್ ಅಭಿಮಾನಿಗಳನ್ನು ಹಿಡಿದಿರಿಸಿಕೊಳ್ಳುವಲ್ಲಿ ಯಶಸ್ವಿಯಾಗಿತ್ತು ಎಂಬುದರ ಸುಂದರ ನಿರೂಪಣೆ ಈ ಪುಸ್ತಕದ ಹೆಚ್ಚುಗಾರಿಕೆ.

ಓದಿ ಮುಗಿಸಿದಾಗ ಕ್ರಿಕೆಟಿನ ಗತವೈಭವ ಮತ್ತೆ ಮೈತಳೆದು ನಿಲ್ಲಲಿ ಎಂಬ ಸದಾಶಯವೊಂದು ಖಂಡಿತ ಮೂಡದಿರದು. ಅಷ್ಟರ ಮಟ್ಟಿಗೆ ಲೇಖಕರ ಪ್ರಯತ್ನ ಸಾರ್ಥಕ. ಮಧುಕರ್ ಬಳ್ಕೂರು ಅವರ ಈ ಕ್ರೀಡಾ ಕೃತಿ, ಕನ್ನಡದ ಕ್ರೀಡಾ ಪುಸ್ತಕಗಳ ಕೊರತೆಯನ್ನು ನೀಗಿಸುವಲ್ಲಿ ಯಶಸ್ವಿಯಾಗಲಿ; ಇತರ ಕ್ರೀಡಾ ಲೇಖಕರ ಪುಸ್ತಕ ಪ್ರಕಟಣೆಗೂ ಸ್ಫೂರ್ತಿಯಾಗಲಿ ಎಂಬುದು ಪ್ರಾಮಾಣಿಕ ಹಾರೈಕೆ.'' (ಬೆನ್ನುಡಿಯಿಂದ ಆಯ್ದ ಸಾಲುಗಳು)

ತಾಂತ್ರಿಕ ಜಗತ್ತಿನಲ್ಲಿ..

ಮಂತ್ರ, ತಂತ್ರ, ದೈವಶಕ್ತಿ, ಪಿಶಾಚಿ ಇಂತಹ ಕಥಾ ಹಂದರ ಹೊಂದಿರುವ ಕಾದಂಬರಿಯೊಂದು ಕನ್ನಡಕ್ಕೆ ಅನುವಾದಗೊಂಡು, ಈಗ ಪ್ರಕಟವಾಗಿದೆ.

» ಅಜಯ್ ಅಂಚೆಪಾಳ್ಯ

ಕೆಲವು ದಶಕಗಳ ಹಿಂದೆ ಸುರೇಶ್ ಸೋಮಪುರ ಎಂಬ ಲೇಖಕರು, ರೋಚಕ ಸಾಹಿತ್ಯ ಪ್ರಕಾರದಲ್ಲಿ ಬಿರುಗಾಳಿಯನ್ನೇ ಎಬ್ಬಿಸಿದ್ದರು! ತಮ್ಮ 'ಅಘೋರಿಗಳ ನಡುವೆ' ಕಾದಂಬರಿಯ ಮೂಲಕ, ಓದುಗರಿಗೆ ವಿಭಿನ್ನ ಆಯಾಮದ, ಮಾಂತ್ರಿಕ ಪದ್ಧತಿಗಳ ಹಿನ್ನೆಲೆಯ ಕಥನವನ್ನು ಕಟ್ಟಿಕೊಟ್ಟರು. ಆ ಕಾದಂಬರಿಯು ಕನ್ನಡಕ್ಕೆ ಅನುವಾದಗೊಂಡು, ಜನಪ್ರಿಯ ವಾರಪತ್ರಿಕೆಯಲ್ಲಿ ಪ್ರಕಟಗೊಂಡು, ಜನರನ್ನುತಲುಪಿತು, ಜನರಿಗೆ ವಿಶಿಷ್ಟ ಓದಿನ ಅನುಭವ ನೀಡಿತು.

ಈಗ ಅದೇ ಲೇಖಕರು ಬರೆದ ಮತ್ತೊಂದು ಕಾದಂಬರಿಯು 'ಮಹಾ ಯೋಗಿನಿ' ಎಂಬ ಹೆಸರಿನಲ್ಲಿ ಅನುವಾದಗೊಂಡು ಹೊರಬಂದಿದೆ. ಸುರೇಶ್ ಸೋಮಪುರ ಅವರ ಹಿಂದಿ ಕೃತಿಯುನ್ನು ಕನ್ನಡಕ್ಕೆ ತಂದವರು, ಡಾ.ಎಂ.ವಿ.ನಾಗರಾಜರಾವ್ ಅವರು. 'ತಂತ್ರ, ಮಂತ್ರ ಕುರಿತ ರೋಚಕ ನೈಜ ಕಾದಂಬರಿ' ಎಂಬ ಟ್ಯಾಗ್ ಲೈನ್ ಹೊಂದಿರುವ ಈ ಕಾದಂಬರಿಯು, ನಮ್ಮ ದೇಶದಲ್ಲಿ ಇದೆ ಎನ್ನಲಾದ ತಾಂತ್ರಿಕ ಪದ್ಧತಿಯ ಹಂದರವನ್ನು ಹೊಂದಿದೆ. ಈ ಕಾದಂಬರಿಯ ಬೆನ್ನುಡಿಯು ನೀಡುವ ವಿವರಗಳು ಇನ್ನಷ್ಟು ಕುತೂಹಲಕಾರಿ ಎನಿಸಿವೆ.

''ಇಂದೊಂದು ರೋಚಕ ಕಥೆ. ಕೇವಲ ರೋಚಕ ಕಥೆ ಮಾತ್ರವಲ್ಲ ಸತ್ಯಕಥೆ. ಲೇಖಕ ಸುರೇಶ ಸೋಮಪುರ ಸ್ವತಃ ಕರ್ಣ-ಪಿಶಾಚಿನಿಯನ್ನು ಸಾಕ್ಷಾತ್ಕಾರ ಮಾಡಿಕೊಳ್ಳಲು ಮನೆ-ಮಠ, ಹೆಂಡತಿ-ಮಕ್ಕಳು, ಬಂಧುಗಳು ಎಲ್ಲರನ್ನೂ ಬಿಟ್ಟು ದೀದಿ ಅಂಬಿಕಾದೇವಿಯ ಸಹಾಯದಿಂದ ಶ್ರೀ ಚೈತನ್ಯಾನಂದರನ್ನು ಭೇಟಿಯಾಗುತ್ತಾರೆ. ಅವರ ಮಾರ್ಗದರ್ಶನದಲ್ಲಿ ತಂತ್ರ-ಮಂತ್ರ ಶವಸಾಧನೆ ಇತ್ಯಾದಿ ನಡೆಸುತ್ತಾರೆ. ಅಂತಿಮವಾಗಿ 'ಕರ್ಣ ಪಿಶಾಚಿನಿ' ಅವರ ವಶವಾಗುತ್ತದೆ. ಸುರೇಶ್ ಸೋಮಪುರ ತಮ್ಮ ಆಧ್ಯಾತ್ಮಿಕ ಶಕ್ತಿಯಿಂದ ಗಳಿಸಿದ ಚಮತ್ಕಾರಗಳನ್ನು ಮಾನವ ಕಲ್ಯಾಣಕ್ಕಾಗಿ ಪ್ರಯೋಗಿಸಲು ನಿರ್ಧರಿಸುತ್ತಾರೆ. ಮನುಷ್ಯ ತನ್ನ ಜೀವನವನ್ನು ಹೇಗೆ ಕಳೆಯಬೇಕೆಂದು ಪ್ರತಿಪಾದಿಸುತ್ತಾರೆ. ಆತ್ಮ-ಪರಮಾತ್ಮ, ಭೂತ-ಪ್ರೇತ, ಧರ್ಮ-ಅಧರ್ಮಗಳಿಗೆ ಹೆದರಿ ಬದುಕುವುದು ಸರಿಯಲ್ಲ, ಮನುಷ್ಯ, ಅಂಧಶ್ರದ್ಧೆಯಿಂದ ಹೊರ ಬರಬೇಕಿದೆ ಎನ್ನುತ್ತಾರೆ. ಬದುಕಲು ಹೊಸ ಮಾರ್ಗವನ್ನು ಕಂಡುಕೊಳ್ಳಲು ಇಲ್ಲಿಯ ಸತ್ಯಕತೆ ಪ್ರೇರಣೆ ನೀಡುತ್ತದೆ.'' ಈ ವಿವರಗಳ ಹಿನ್ನೆಲೆಯಲ್ಲಿ, ಓದುಗನಿಗೆ ಕುತೂಹಲಕಾರಿ ಓದಿನ ಅನುಭವ ನೀಡಬಲ್ಲ ಈ ಕಾದಂಬರಿಯು, ವಿಭಿನ್ನವಾಗಿ ಕಾಣುವುದಂತೂ ನಿಜ.



ಮಹಾ ಯೋಗಿನಿ
ಲೇ: ಸುರೇಶ್ ಸೋಮಪುರ
ಅನು: ಡಾ.ಎಂ.ವಿ.ನಾಗರಾಜ ರಾವ್
ಪ್ರ: ಅಂಕಿತ ಪುಸ್ತಕ ಬೆಂಗಳೂರು
ಬೆಲೆ ರು.180/-

ಇಳಂಗೋವನ್ ಎಂಬ ಅಧ್ಯಾತ್ಮ ಜೀವಿ

ಅಧ್ಯಾತ್ಮದ ಬೆನ್ನು ಹತ್ತಿದ್ದ ನಿರೂಪಕನನ್ನು ಇಳಂಗೋವನ್ ಎಂಬಾತ ಕೈ ಹಿಡಿದು ನಡೆಸಿದ ಕಥನವೇ, ಸಾಹಿತಿ ಜೋಗಿ ಅವರ ಹೊಸ ಕಾದಂಬರಿ.

» ದೀಕ್ಷಿತ್ ನಾಯರ್

ಇಳಂಗೋವನ್ ಎಂಬಾತನು ಗಾಳಿಗುಡ್ಡದ ಬಳಿ ಕಮ್ಮಾರಿಕೆ ಕೆಲಸ ಮಾಡಿಕೊಂಡು ಜೀವಿಸುತ್ತಿದ್ದವನು. ಲೌಕಿಕ ಬದುಕಿನಿಂದ ಕಳಚಿಕೊಂಡು ಅಲೌಕಿಕ ಬದುಕಿಗೆ ತನ್ನನ್ನು ತಾನು ತೆರೆದುಕೊಂಡಿದ್ದವನು. ಅವನು ದೇವರು, ದೈವತ್ವ ಮತ್ತು ಆಧ್ಯಾತ್ಮಗಳ ಕುರಿತು ಮಾತನಾಡಬಲ್ಲವನಾಗಿದ್ದ. ನಶ್ವರ ಬದುಕಿನ ಪರಮಾರ್ಥವನ್ನು ನೀಡಬಲ್ಲವನಾಗಿದ್ದ. ತನ್ನ ನಿಜ ಸ್ವರೂಪವನ್ನು ಅರಿಯುವ ಪ್ರಯತ್ನದಲ್ಲಿದ್ದ. ಪ್ರತಿ ಕ್ಷಣವೂ ಆತ್ಮ ಸಾಕ್ಷಾತ್ಕಾರದ ಕಡೆಗೆ ಹೆಜ್ಜೆ ಹಾಕುತ್ತಿದ್ದ. ಸಾವನ್ನು ಗೆಲ್ಲಲು ಹೆಣಗಾಡುತ್ತಿದ್ದ. ಆಗಾಗ್ಗೆ ಹುಚ್ಚು ಹುಚ್ಚಾಗಿ ವರ್ತಿಸುತ್ತಿದ್ದ. ನೂರಾರು ಪ್ರಶ್ನೆಗಳಿಗೆ ಒಂದೆರಡು ಬಾರಿ ಅಷ್ಟೇ ಉತ್ತರಿಸುತ್ತಿದ್ದ. ಅವನು ವಿಚಿತ್ರ ಜೀವಿ.ಈ ಲೋಕದ ಪರಿವೆ ಇಲ್ಲದವನು. ಎಲ್ಲಾ ಜಂಜಾಟಗಳಿಂದಲೂ ಮುಕ್ತಿ ಪಡೆದವನು. ವೈರಾಗ್ಯ ತಾಳಿದವನು.

ಅಂಥವನ ಕಣ್ಣಲ್ಲೂ ಹೊಳಪಿತ್ತು. ಭರವಸೆಯ ಮಾತುಗಳನ್ನಾಡುತ್ತಿದ್ದ. ಜಗತ್ತಿನ ಪರಮ ಸತ್ಯಗಳನ್ನು ತಿಳಿಸಿಕೊಡುತ್ತಿದ್ದ. ಎಲ್ಲೆಲ್ಲಿಗೋ ಕೈ ಹಿಡಿದು ನಡೆಸಿಕೊಂಡು ಹೋಗುತ್ತಿದ್ದ. ದಣಿವರಿಯದೆ ನಡೆದು ಮತ್ತೆಲ್ಲೋ ಕೂತು ಬಿಡುತ್ತಿದ್ದ. ಶತಮಾನದ ಕತೆಗಳನ್ನು ಒಂದೇ ಸಮನ ಒದರಿ ಬಿಡುತ್ತಿದ್ದ.ಇಳಂಗೋವನ್ ಒಂದು ರೀತಿಯ ಚಿತ್ರವಿಚಿತ್ರ ಮನುಷ; ಅವನನ್ನೇ ಅವಧೂತ ಎನ್ನಬಹುದೇ!

ಅಧ್ಯಾತ್ಮದ ಸುಳಿಯಲ್ಲಿದ್ದ ನಿರೂಪಕರನ್ನು ಅವರ ಅಣ್ಣ ಗಾಳಿಗುಡ್ಡದ ಬಳಿ ಕರೆದುಕೊಂಡು ಹೋದರು. ಇಳಂಗೋವನ್‌ಗೆ ಒಪ್ಪಿಸಿದರು. ಪ್ರಾರಂಭದಲ್ಲಿ ಇಳಂಗೋವನ್ ಮೋಹಕ್ಕೆ ಸಿಲುಕಿದ್ದ ಅವರ ಅಣ್ಣ ಕಾಲಕ್ರಮೇಣ ಅವನನ್ನು ಮರೆತೇಬಿಟ್ಟರು. ಲೇಖಕ ಮಾತ್ರ ಇಳಂಗೋವನ್ ಸಹವಾಸಕ್ಕೆ ಬಿದ್ದರು. ತಮ್ಮೊಳಗಿದ್ದ ಎಲ್ಲವನ್ನು ಅವನಲ್ಲಿ ಕಂಡುಕೊಂಡರು. ಅವನನ್ನು ಗುರು ಎಂದು ಭಾವಿಸಿದರು. ಇಳಂಗೋವನ್ ತನಗೇ ಗೊತ್ತಿಲ್ಲದಂತೆ ಸಾಕಷ್ಟು ಕಲಿಸಿದ. ಹೆಗಲು ಸವರಿದ. ಸಾಂತ್ವನ ಹೇಳಿದ. ಬದುಕು ಮುಗಿದೇ ಹೋಯಿತು ಅಂದುಕೊಂಡಾಗ ಕಾಣೆಯಾಗಿದ್ದ ಅವನು ಮತ್ತೆ ದಾರಿ ಮಧ್ಯೆ ಸಿಕ್ಕಿದ.

ಆ ಇಳಂಗೋವನ್ ಕಳೆದ 40 ವರ್ಷಗಳಿಂದ ನಿರೂಪಕರಲ್ಲಿದ್ದಾನೆ. ಏನೂ ತೋಚದೆ ಇದ್ದಾಗ ಅವನ ಎದುರು ಮಗುವಿನಂತೆ ಕೂತುಬಿಡುತ್ತಾರೆ. ಎಲ್ಲದಕ್ಕೂ ಅವನೊಬ್ಬನಿದ್ದಾನೆ ಎಂಬ ನಂಬಿಕೆ. ಹೌದು, ಇಳಂಗೋವನ್ ಇದ್ದಾನೆ. ನಶ್ವರತೆಯ ನಡುವೆಯೇ ಶಾಶ್ವತ ಆನಂದ ಯಾವುದು ಎಂದು ತಡಕಾಡುತ್ತಿದ್ದ ನಿರೂಪಕರಿಗೆ ಸಿಕ್ಕವನು ಇಳಂಗೋವನ್. ಬಹುವಾಗಿ ಕಾಡಿದ ಇಳಂಗೋವನ್ ಒಮ್ಮೆ ಇದ್ದಕ್ಕಿದ್ದಂತೆ ಆಧ್ಯಾತ್ಮ,ಅಲೌಕಿಕತೆ ಒಂದು ಶಾಪ. ಅದು ತೀರದ ಮೋಹ ಎಂದು ಬಿಡುತ್ತಾನೆ. ನಿರೂಪಕರು ಈಗಲೂ ಆಧ್ಯಾತ್ಮದ ಹುಡುಕಾಟದಲ್ಲಿದ್ದಾರೆ.



ಇಳಂಗೋವನ್
ಲೇ: ಜೋಗಿ
ಪ್ರ: ಸಾವಣ್ಣ ಪ್ರಕಾಶನ ಬೆಂಗಳೂರು
ಬೆಲೆ ರು.360/-

ಇಳಂಗೋವನ್ - ಜೋಗಿ ಅವರ 100ನೇ ಕೃತಿ. ಆಧ್ಯಾತ್ಮ, ತತ್ವಜ್ಞಾನ, ಅಲೌಕಿಕತೆಯ ಹುಡುಕಾಟ ಮತ್ತು ಪಯಣದಲ್ಲಿ ಆಸಕ್ತಿ ಇರುವವರು ಒಂದು ಕಂತಿನಲ್ಲಿ ಓದಿ ಮುಗಿಸಬಹುದಾದ ಪುಸ್ತಕ. ಶುದ್ಧ ಫಿಲಾಸಫಿಯಂತೆ ಅಥವಾ ಕತೆಯಂತೆ ಓದಿಕೊಳ್ಳಬಹುದು. ಕೆಲವರಿಗೆ ಬೋರಿಂಗ್ ಅನ್ನಿಸುವ ಆಧ್ಯಾತ್ಮದ ವಿಷಯ ಇಲ್ಲಿ ಕುತೂಹಲ ಮೂಡಿಸುತ್ತದೆ. ಹಾಕುತ್ತಾ ಹೋದಂತೆ ನಮ್ಮ ನಿಜ ಸ್ವರೂಪ ನಮ್ಮ ಅರಿವಿಗೆ ಬರುತ್ತದೆ.ಅಧ್ಯಾತ್ಮವೂ ರುಚಿಸುತ್ತದೆ. ಅಧ್ಯಾತ್ಮ ಮತ್ತು ಅಲೌಕಿಕತೆಗೆ ತೆರೆದುಕೊಳ್ಳಲು ಪ್ರಯತ್ನಿಸಿದ ಲೇಖಕರ ಅನುಭವದ ತಳಹದಿ ಇಲ್ಲಿದೆ. ಇಲ್ಲಿ ಮಹಾನ್ ತತ್ವಜ್ಞಾನಿಗಳಾದ ಓಶೋ, ಜಿಡ್ಡು ಕೃಷ್ಣಮೂರ್ತಿ, ಯುಜಿ ಕೃಷ್ಣಮೂರ್ತಿ ಮುಂತಾದವರು ಸಿಗುತ್ತಾರೆ. ಅವರು ಹೇಳಿದ ಅಧ್ಯಾತ್ಮದ ಪಾಠ ಎದೆಗೆ ಇಳಿಯುತ್ತದೆ. ಆದರೂ ಅವನೊಬ್ಬ ತೀರಾ ಇಷ್ಟವಾಗುತ್ತಾನೆ. ಅವನು ಇಳಂಗೋವನ್.

ಅವನು ನಮಗೂ ಸಿಗಬಹುದು. ಹೆಜ್ಜೆ ಸೋಲುವ ತನಕ ಅವನೊಂದಿಗೆ ನಡೆಯಲು ನಾವು ಸಿದ್ಧರಿರಬೇಕು.

ಯಾವುದೋ ಸಂದರ್ಭದಲ್ಲಿ ದಾರಿ ಮುಗಿಯಿತು ಅಂತ ಅಂಚಿಗೆ ಬಂದು ನಿಂತಾಗ ಕೈ ಹಿಡಿದು ನಡೆಸುತ್ತಾನೆ. ಗಾಜಿನ ಮುಂದೆ ಕೂತಿದ್ದ ನಾವು ಇಳಂಗೋವನ್ ಓದಿ ಮುಗಿಸುವಷ್ಟರಲ್ಲಿ ಕನ್ನಡಿ ಮುಂದೆ ಕೂರುತ್ತೇವೆ.

'ಚೆನ್ನಾಗಿ ಬದುಕ್ತಾ ಹೋಗೋದೇ ಬದುಕಿಗೆ ನಾವು ಕೊಡುವ ಗೌರವ. ಆದರೆ ಸಂತೋಷವಾಗಿದ್ದಾಗ ಬದುಕನ್ನು ಪ್ರೀತಿಸದೇ ಹೋದರೆ, ಕಾಯಿಲೆ ಬಿದ್ದಾಗ, ಕಷ್ಟ ಬಂದಾಗ ಬದುಕು ನಿನ್ನನ್ನು ಪ್ರೀತಿಸುವುದಿಲ್ಲ' -ಇಳಂಗೋವನ್

ಲೇಖಕರನ್ನು ಹುಡುಕಿ ಬೆಳೆಸಿದರು!

ಒಡನಾಟ

» ಶ್ರೀಧರಮೂರ್ತಿ ಎನ್.ಎಸ್.

ಎಂ. ಬಿ.ಸಿಂಗ್ ಅವರ ಹೆಸರನ್ನು ನಾನು ಬಹಳ ಜನರ ಬಾಯಲ್ಲಿ ಕೇಳಿದ್ದೆ. ಅವರ ಜೊತೆಗೆ ಕೆಲಸ ಮಾಡುವ ಅವಕಾಶ ಸಿಕ್ಕಿದ್ದು 'ಕನ್ನಡ ಚಲನಚಿತ್ರ ಇತಿಹಾಸ' ರೂಪುಗೊಳ್ಳುವ ಸಂದರ್ಭದಲ್ಲಿ, ಅದರ ಪ್ರಧಾನ ಸಂಪಾದಕರಲ್ಲಿ ಅವರೂ ಒಬ್ಬರು. ಸಂಪಾದಕೀಯ ಸಭೆಗಳಲ್ಲಿ ವಾದ-ಪ್ರತಿವಾದಗಳು ಏರು ಧ್ವನಿಯಲ್ಲಿ ನಡೆಯುತ್ತಿದ್ದಾಗಲೂ ಸಿಂಗ್ ತಾಳ್ಮೆಯಿಂದ ಕೇಳಿಸಿ ಕೊಳ್ಳುತ್ತಿದ್ದರು. ಅವರ ಶಕ್ತಿ ಇದ್ದಿದ್ದು ಪುಟ ವಿನ್ಯಾಸದಲ್ಲಿ, ಒಂದು ಪುಟವನ್ನು ಕಲಾತ್ಮಕವಾಗಿ ಹೇಗೆ ರೂಪಿಸಬೇಕು? ಫೋಟೋಗಳನ್ನು ಎಲ್ಲಿ ಕೂಡಿಸಬೇಕು, ಶೀರ್ಷಿಕೆ, ಉಪ ಶೀರ್ಷಿಕೆಗಳನ್ನು ಹೇಗೆ ನೀಡಬೇಕು ಮುಂತಾದ ಅನೇಕ ವಿಷಯಗಳನ್ನು ನಾನು ಅವರಿಂದ ಕಲಿತುಕೊಂಡೆ. ಅದು ನನ್ನ ವೃತ್ತಿಜೀವನದುದ್ದಕ್ಕೂ ಉಪಯುಕ್ತವಾಗಿ ನೆರವಿಗೆ ಬಂದಿತು ಎನ್ನುವುದನ್ನು ನಾನು ಇಲ್ಲಿ ಕೃತಜ್ಞತೆಯಿಂದ ದಾಖಲಿಸಲೇ ಬೇಕು.

ಚಲನಚಿತ್ರ ಇತಿಹಾಸದ ಅಧ್ಯಾಯ ಮುಗಿದು ಕೆಲವು ತಿಂಗಳುಗಳ ನಂತರ ಎಂ.ಬಿ.ಸಿಂಗ್ ನಾನು ಕೆಲಸ ಮಾಡುತ್ತಿದ್ದ 'ಮಲ್ಲಿಗೆ' ಮಾಸಪತ್ರಿಕೆಯ ಕಚೇರಿಗೆ ಹುಡುಕಿಕೊಂಡು ಬಂದರು. 'ನಾನು ಮೈಸೂರು ವಿಶ್ವವಿದ್ಯಾಲಯದ ವಿಶ್ವಕೋಶವನ್ನು ಪರಿಷ್ಕರಣೆ ಮಾಡುವ ಹೊಣೆ ಹೊತ್ತಿದ್ದೇನೆ. ಸಿನಿಮಾ ವಿಭಾಗವನ್ನು ನೀನು ನೋಡಿಕೊಳ್ಳಬೇಕು' ಎಂದರು. ಅವರು ಕೇಳಿದಾಗ ಇಲ್ಲ ಎನ್ನುವುದು ಯಾರಿಗೂ ಸಾಧ್ಯವಿಲ್ಲ. ಮುಂದಿನ ನಾಲ್ಕು ವರ್ಷ ಅವರ ಜೊತೆಗಿನ ನಿಕಟವಾಗಿ ಕೆಲಸ ಮಾಡುವ ಸೌಭಾಗ್ಯ ನನಗೆ ಒದಗಿ ಬಂದಿತು.

'ಚಲನಚಿತ್ರ ಇತಿಹಾಸ'ದ ಸಂದರ್ಭದಲ್ಲಿ ಅವರ ಮೌನ ನೋಡಿದ್ದ ನನಗೆ ಈಗ ಮಾತಿನ ಭಾಗ್ಯವೂ ಸಿಕ್ಕಿತು. ಚಲನಚಿತ್ರದ ಕುರಿತು ಎಂದರೆ ಕನ್ನಡ ಚಿತ್ರರಂಗದ ಕುರಿತು ಎಂದು ನಾನು ಮೊದಲಿಗೆ ಅಂದು ಕೊಂಡಿದ್ದು, ಆದರೆ ಅದು ಭಾರತೀಯ ಚಿತ್ರರಂಗದ ಕುರಿತು ಎಂದು ಕೆಲಸ ಮಾಡುತ್ತಾ ಗೊತ್ತಾಯಿತು. ವಿವಿಧ ಭಾಷೆಗಳಲ್ಲಿನ ಚಿತ್ರರಂಗದ ಸ್ವರೂಪ ಬೆಳವಣಿಗೆ ಇದನ್ನು ಅಧ್ಯಯನ ಮಾಡಲು ಅಗತ್ಯ ಕೃತಿಗಳನ್ನು ಅವರು ಒದಗಿಸಿದರು. ಅಷ್ಟೇ ಅಲ್ಲ ಸ್ವತಃ ಅವರಿಗೇ ಈ ಕುರಿತು ಸಾಕಷ್ಟು ಅಧ್ಯಯನ ಮತ್ತು ಒಳನೋಟಗಳಿದ್ದವು. ಇದು ನನ್ನ ಜಗತ್ತನ್ನು ವಿಶಾಲಗೊಳಿಸಿತು.

ಎಂ. ಬಿ. ಸಿಂಗ್ ಪೂರ್ಣ ಹೆಸರು ಭುವನ್ ಸಿಂಗ್. 1925ರ ಮೇ 24 ರಂದು ಮೈಸೂರಿನಲ್ಲಿ ಜನಿಸಿದರು. ತಂದೆ ಮದನ್ ಸಿಂಗ್. ತಾಯಿ ವಸಂತಾಬಾಯಿ. ಅವರ ಶಾಲಾ ಶಿಕ್ಷಣ ಮಂಡ್ಯದಲ್ಲಿ ಮತ್ತು ಕಾಲೇಜು ಶಿಕ್ಷಣ ಮೈಸೂರಿನಲ್ಲಿ ನಡೆಯಿತು. ಎಂ. ಬಿ. ಸಿಂಗ್ ಅವರು ವಿದ್ಯಾರ್ಥಿ ಚಳವಳಿಯಲ್ಲಿ ಸಕ್ರಿಯ ಪಾತ್ರವಹಿಸಿದ್ದರು. ಮೈಸೂರಿನ ಕಾಲೇಜಿನಲ್ಲಿ ಕಲಿಯುತ್ತಿದ್ದಾಗಲೇ ಬೆಂಗಳೂರಿನಿಂದ ಪ್ರಕಟವಾಗುತ್ತಿದ್ದ 'ಮಾತೃಭೂಮಿ' ಪತ್ರಿಕೆಯ ವರದಿಗಾರ ಹಾಗೂ ಏಜಂಟರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಬದುಕಿನ ಬವಣೆಗಾಗಿ ವಿಮಾನದಳಕ್ಕೆ ಆಯ್ಕೆಯಾಗಿ, ತರಬೇತಿ ಪಡೆಯಲು ಸಜ್ಜಾಗುತ್ತಿದ್ದಾಗ ಸಮಯ ದಲ್ಲಿ ವೀರಕೇಸರಿ ಸೀತಾರಾಮ ಶಾಸ್ತ್ರೀ ಅವರನ್ನು ಭೇಟಿ ಆಗುವ ಸಂದರ್ಭ ಒದಗಿಬಂತು. ಈ ಭೇಟಿ ಸಿಂಗ್ ಅವರ ಬದುಕಿನ ದಿಕ್ಕನ್ನೇ ಬದಲಾಯಿಸಿತು.

ವೀರಕೇಸರಿ ಸೀತಾರಾಮ ಶಾಸ್ತ್ರಿಗಳ ಜೊತೆಯಲ್ಲಿ ವಾರ್ತಾ, ಚಿತ್ರಗುಪ್ತ, ವಿಶ್ವಕರ್ನಾಟಕ ಪತ್ರಿಕೆಗಳಲ್ಲಿ ಕೆಲಸ ಮಾಡಿದ ಸಿಂಗ್, 1953ರಲ್ಲಿ 'ಪ್ರಜಾವಾಣಿ'ಯ ಉಪಸಂಪಾದಕ ವರದಿಗಾರರಾಗಿ ಸೇರಿದರು. ಅದು ಪತ್ರಿಕೋದ್ಯಮದಲ್ಲಿ ಹೊಸ ಬೆಳವಣಿಗೆಗಳು ನಡೆಯುತ್ತಿದ್ದ ಕಾಲ, ಸ್ವಾತಂತ್ರ್ಯ ನಂತರದ ಯುಗದಲ್ಲಿ ಕನ್ನಡ ಪತ್ರಿಕೋದ್ಯಮ ತನ್ನ ಬೆಳವಣಿಗೆಯನ್ನು ಕಂಡು ಕೊಳ್ಳಬೇಕಾದ ಸವಾಲು ಎದುರಾದ ಸಂದರ್ಭ, ಇದಕ್ಕೆ ಬೇಕಾದ ತಂಡ ಮತ್ತು ಬರಹಗಾರರನ್ನು ಸೃಷ್ಟಿ ಮಾಡುವ ಅಗತ್ಯವಿತ್ತು. ಅದನ್ನು ಎಂ.ಬಿ.ಸಿಂಗ್ ಏಕಾಂಗಿಯಾಗಿಯೇ ಮಾಡಿದರು. ಸೈನ್ಯವನ್ನು ಸೇರದಿದ್ದರೂ ಶಿಸ್ತನ್ನು ತಮ್ಮ ರಕ್ತದಲ್ಲಿಯೇ ಹೊಂದಿದ್ದ ಸಿಂಗ್ ಅದನ್ನು ಪತ್ರಿಕೋದ್ಯಮಕ್ಕೆ ಕಲಿಸಿದರು. ಒಂದೊಂದೇ ಮೆಟ್ಟಿಲನ್ನು ಏರುತ್ತಾ ಸೇನಾಧಿಪತಿಯಾದರು. ಅಷ್ಟೊರಳಗೆ ತಮಗೆ ಬೇಕಾದ ಸೈನ್ಯವನ್ನೂ ಕೂಡ ಕಟ್ಟಿದ್ದರು.

ಪ್ರಶಸ್ತಿ ಗೌರವದಿಂದ ದೂರ

ಪ್ರಜಾವಾಣಿ, ಸುಧಾ ಸಾಪ್ತಾಹಿಕ ಹಾಗೂ ಮಯೂರ ಮಾಸ ಪತ್ರಿಕೆಗಳಿಗೆ ಏಕಕಾಲದಲ್ಲಿ ಸಂಪಾದಕರಾಗಿದ್ದವರು ಸಿಂಗ್. ಅವುಗಳ ವಸ್ತು, ವಿನ್ಯಾಸ, ಸ್ವರೂಪಗಳಿಗೆ ಹೊಸದೇ ಆದ ಆಯಾಮವನ್ನು ದೊರಕಿಸಿಕೊಟ್ಟರು. ಅವರ ಕಾಲದಲ್ಲಿ ಬರಹಗಾರರ ದೊಡ್ಡ ಪಡೆಯೇ ಸಿದ್ದವಾಯಿತು. ಮುಂದೆ ಕನ್ನಡ

ಇವರ ಕಾಲದಲ್ಲಿ ಬರಹಗಾರರ ದೊಡ್ಡ ಪಡೆಯೇ ಸಿದ್ಧವಾಯಿತು. ಮುಂದೆ ಕನ್ನಡ ಸಾಹಿತ್ಯದ ನೇತಾರರು ಎನ್ನಿಸಿಕೊಂಡ ಹಲವು ಬರಹಗಾರರು, ಇವರ ಶೋಧ ಎನ್ನುವುದಕ್ಕೆ ಈಗ ಚಾರಿತ್ರಿಕ ಮಹತ್ವವಿದೆ.

ಸಾಹಿತ್ಯದ ನೇತಾರರು ಎನ್ನಿಸಿಕೊಂಡ ಬರಹಗಾರರೆಲ್ಲರೂ ಎಂ.ಬಿ.ಸಿಂಗ್ ಅವರ ಶೋಧ ಎನ್ನುವುದಕ್ಕೆ ಈಗ ಚಾರಿತ್ರಿಕ ಮಹತ್ವವಿದೆ. ತಾವು ಪತ್ರಿಕೋದ್ಯಮ ವೃತ್ತಿಯಲ್ಲಿದ್ದಷ್ಟು ಕಾಲ ಸಿಂಗ್ ಯಾವುದೇ ಪ್ರಶಸ್ತಿ, ಗೌರವ ಹುದ್ದೆ, ಸರ್ಕಾರ ಕೊಡ ಮಾಡುವ ಸೌಲಭ್ಯಗಳನ್ನು ಒಪ್ಪಿಕೊಳ್ಳಲಿಲ್ಲ ಎನ್ನುವುದು ಸಾರ್ವಕಾಲಿಕ ಅಪರೂಪದ ಗುಣ.

'ಪತ್ರಿಕಾ ಕಚೇರಿಗೆ ನಾನು ಬೆಳಿಗ್ಗೆ ಒಂಬತ್ತಕ್ಕೇ ಹೋಗುತ್ತಿದ್ದೆ. ಕಸ ಗುಡಿಸಿ, ಹಳೆಯ ಪೇಪರುಗಳನ್ನು ಯಾರೂ ಹೊರಗೆ ಹಾಕದೇ ಇದ್ದರೆ ನಾನೇ ಆ ಕೆಲಸವನ್ನು ಮಾಡುತ್ತಿದ್ದೆ. ಎಂದೂ ಗಡಿಯಾರ ನೋಡಿ ಕೆಲಸ ಮಾಡಲೇ ಇಲ್ಲ. ಲೇಖಕರನ್ನು ಖುದ್ದು ಹುಡುಕಿಕೊಂಡು ಹೋಗುತ್ತಿದ್ದೆ. ಬರೆಯುವಂತೆ ಓಲೈಸಲು ಸಾಕಷ್ಟು ಹೆಣಗಾಡಿದ್ದೂ ಇದೆ. ಇವನ್ನೆಲ್ಲಾ ನೋಡಿದ ಸಹೋದ್ಯೋಗಿಗಳು ತಂತಾನೇ ಪ್ರೀತಿಯಿಂದ ಕೆಲಸ ಮಾಡತೊಡಗಿದರು. ನಾನು ಒತ್ತಡ ಹೇರಿ ಕೆಲಸ ಮಾಡಿಸಲಿಲ್ಲ. ಕೆಲಸದ ಬಗ್ಗೆ ಪ್ರೀತಿ ಮೂಡಿಸಿದೆನಷ್ಟೆ.' ಎಂಬ ಎಂ.ಬಿ.ಸಿಂಗ್ ಅವರ ಮಾತುಗಳು ಅವರು ಪತ್ರಿಕೆಯನ್ನು ಹೇಗೆ ಕಟ್ಟಿದ್ದರು ಎನ್ನುವುದಕ್ಕೆ ನಿದರ್ಶನವಾಗಿದೆ. ಯಾವುದೇ ಕಥೆ ಆಯ್ಕೆಯಾಗದಿದ್ದರೂ, ಏಕೆ ಆಯ್ಕೆಯಾಗಲಿಲ್ಲ. ಏನು ಬದಲಾವಣೆಗಳು ಬೇಕು ಎಂದು ಕೂಡ ಕಥೆಗಾರರಿಗೆ ಬರೆಯುತ್ತಿದ್ದ ಬಹುಶಃ ಏಕೈಕ ಸಂಪಾದಕ ಎಂ.ಬಿ.ಸಿಂಗ್. ಅವರ ಇನ್ನೊಂದು ಬಹುದೊಡ್ಡ ಕೊಡುಗೆ ಎಂದರೆ ಪತ್ರಿಕೆಯ ಪುಟಗಳನ್ನು ಕಲಾತ್ಮಕವಾಗಿಸಿದ್ದು. ಸ್ವತ: ಛಾಯಾಗ್ರಾಹಕರೂ ಆಗಿದ್ದ ಅವರು ಪತ್ರಿಕೆಗೆ ಅಗತ್ಯವಾದ ಛಾಯಾಚಿತ್ರಗಳನ್ನು ಶ್ರಮಪಟ್ಟು ಸಂಪಾದಿಸುತ್ತಿದ್ದರು. ಅದೇ ರೀತಿಯಲ್ಲಿ ಚಿತ್ರಕಾರರ ದೊಡ್ಡ ತಂಡವನ್ನೇ ಸೃಷ್ಟಿಸಿದರು. ಮುಂದೆ ಚಿತ್ರಕಾರರು ಎಂದು ಹೆಸರು ಮಾಡಿದ ಬಹುತೇಕರು ಅವರ ಶೋಧವೇ!

ಗೋವಾ ವಿಮಾಚನಾ ಚಳವಳಿ

ಗೋವಾ ವಿಮೋಚನಾ ಚಳವಳಿಯನ್ನು ಛಾಯಾಗ್ರಾಹಕರಾಗಿ ಸೆರೆ ಹಿಡಿದ ಸಿಂಗ್ ಯೂರೋಪ್ ಮತ್ತು ಏಷ್ಯ ಖಂಡದ ಹಲವು ರಾಷ್ಟ್ರಗಳಲ್ಲಿ ಅಧ್ಯಯನ ಪ್ರವಾಸ ಮಾಡಿಬಂದಿದ್ದರು. ಸಣ್ಣ ಪತ್ರಿಕೆಗಳ ಕಷ್ಟ-ಸುಖ, ಅಳಿವು-ಉಳಿವು ಮತ್ತು ಅದರ ಏಳಿಗೆಗೆ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಲು, ಸಮಗ್ರ ಅಧ್ಯಯನ ನಡೆಸಿ ವರದಿಯೊಂದನ್ನು ತಯಾರಿಸಲು ಸರಕಾರ ಸಮಿತಿಯೊಂದನ್ನು ರಚಿಸಿತ್ತು. ಅದರ ನೇತೃತ್ವ ವಹಿಸಿದ್ದವರು ಎಂ.ಬಿ. ಸಿಂಗ್. ಆ ಸಮಿತಿಯ ವರದಿ ಈಗಲೂ 'ಸಿಂಗ್ ವರದಿ' ಎಂದೇ ಹೆಸರಾಗಿದೆ.

ಎಂ.ಬಿ.ಸಿಂಗ್ ತಮ್ಮದೇ ಆದ ಕಲಾ ಗ್ಯಾಲರಿ ಕೂಡ ಹೊಂದಿದ್ದರು. ಅಪರೂಪದ ಕಲಾಕೃತಿಗಳು ಅವರ ಸಂಗ್ರಹದಲ್ಲಿದ್ದವು. ನಾನು ಭಾರತೀಯ ವಿದ್ಯಾಭವನದಲ್ಲಿ ಇದರ ಪ್ರದರ್ಶನವನ್ನು ಕೂಡ ಒಮ್ಮೆ ಏರ್ಪಡಿಸಿದ್ದೆ. ಸಿಂಗ್ ಕೊನೆಯವರೆಗೂ ನನ್ನ ಜೊತೆಗೆ ನಿಕಟ ಸಂಪರ್ಕವನ್ನು ಇಟ್ಟು ಕೊಂಡಿದ್ದರು. ಇದಕ್ಕಿದ್ದ ಹಾಗೆ ಹುಡುಕಿ ಕೊಂಡು ಬರುತ್ತಿದ್ದರು. ಗಾಂಧಿಬಜಾರ್‌ನಲ್ಲಿನ ಎಸ್. ಎಲ್.ವಿ ಹೋಟಲ್‌ನಲ್ಲಿ ಊಟ ಮಾಡುವುದು ಅವರಿಗೆ ಬಹು ಪ್ರಿಯವಾದ ಸಂಗತಿ. ನಾನು ಬಹಳ ಸಲ ಈ ಸೌಭಾಗ್ಯವನ್ನು ಅನುಭವಿಸಿದ್ದೇನೆ. ಸಿಂಗ್ ಅವರಿಗೆ 90 ವರ್ಷ ತುಂಬಿದ ಸಂದರ್ಭದಲ್ಲಿ 'ಎಂ.ಬಿ.ಸಿಂಗ್: ಕನ್ನಡ ಪತ್ರಿಕೋದ್ಯಮದ ಕಟ್ಟಾಳು' ಎಂಬ ಅಭಿನಂದನಾ ಗ್ರಂಥ ಹೊರತರಲಾಯಿತು. ಎಂ. ಬಿ. ಸಿಂಗ್ 2016ರ ಅಕ್ಟೋಬರ್ 25 ರಂದು ತಮ್ಮ 91 ನೇ ವಯಸ್ಸಿನಲ್ಲಿ ನಮ್ಮನ್ನು ಅಗಲಿದರು. ಅವರ ಕಲಿಸಿಕೊಟ್ಟ ಪಾಠಗಳು ಇಂದಿಗೂ ನನ್ನ ಕೈ ಹಿಡಿದು ನಡೆಸುತ್ತಿವೆ.

ಅಣುಬಾಂಬ್ ಸ್ಮಾರಕದಲ್ಲಿ ಸಂಸ್ಕೃತ ಸಾಲುಗಳು!

» ಡಾ. ಜಯಂತಿ ಮನೋಹರ್

ಎರಡನೆ ಜಾಗತಿಕ ಯುದ್ಧದ ಕೊನೆಯಲ್ಲಿ (1945), ಹಿರೋಷಿಮಾ ಹಾಗೂ ನಾಗಾಸಾಕಿ ನಗರಗಳ ಮೇಲೆ ನಡೆದ ಬಾಂಬ್ ದಾಳಿಯ ಕರಾಳ ನೆನಪುಗಳು ಜಪಾನ್ ದೇಶಕ್ಕೆ ಭೇಟಿಕೊಡುವವರನ್ನು ಇಂದಿಗೂ ಕಾಡುತ್ತವೆ. ಜಪಾನಿನ ಸಾಂಸ್ಕೃತಿಕ ನಗರ ಕ್ಯೋಟೋದಿಂದ ಹಿರೋಷಿಮಾ 360 ಕಿ.ಮೀ. ದೂರದಲ್ಲಿದೆ. ಹಳೆಯ ನೆನಪುಗಳನ್ನು ಹೊತ್ತ ನಮಗೆ, ಅಲ್ಲಿ ನಮ್ಮ ಹಂಪೆಯಂತಹ ನೋಟವಿರಬಹುದು ಎನ್ನುವ ಭಾವನೆ ಇತ್ತು. ಆದರೆ, ಅಲ್ಲಿ ನಮಗೆ ಕಂಡದ್ದು ಆಧುನಿಕವಾಗಿ ಸುಸಜ್ಜಿತವಾದ ಜನನಿಬಿಡ ನಗರ. ಎಂತಹ ದುರಂತವನ್ನೂ ಎದುರಿಸುವ ಛಾತಿಯುಳ್ಳ ಜಪಾನೀಯರು ಹಿರೋಷಿಮಾ-ನಾಗಾಸಾಕಿಗಳಲ್ಲಿ ನಿರ್ಮಿಸಿರುವ ಬೃಹತ್ ಕೈಗಾರಿಕಾ ಘಟಕಗಳು, ಗಗನಚುಂಬಿ ಕಟ್ಟಡಗಳು, ಸುಂದರ ತೋಟಗಳು ಪ್ರವಾಸಿಗರನ್ನು ಅಚ್ಚರಿಗೊಳಿಸುತ್ತವೆ. ಪರಮಾಣುಬಾಂಬ್ ದಾಳಿಗೆ ತುತ್ತಾದಾಗ ಅಲ್ಲಿದ್ದ ಜನಸಂಖ್ಯೆಗಿಂತಲೂ ನಾಲಕ್ಕು ಪಟ್ಟು ಜನರು ಈಗ ಅಲ್ಲಿ ವಾಸಿಸುತ್ತಾರೆ. ಅಪಾರ ಶ್ರದ್ಧೆ ಹಾಗೂ ಪರಿಶ್ರಮಗಳಿಂದ ಬೆಳೆದ ತಂತ್ರಜ್ಞಾನದಿಂದಾಗಿ ಇಂದು ಜಪಾನಿನ ಸುಜುಕಿ, ಟೊಯೋಟಾ, ನಿಸ್ಸಾನ್, ಸೋನಿಗಳು ಅನೇಕ ದೇಶಗಳಲ್ಲಿ ಕಾಣುತ್ತವೆ.

1945 ಆಗಸ್ಟ್ 6 ಮತ್ತು 9, ಆಧುನಿಕ ವಿಜ್ಞಾನಸಾಧನೆಗಳಲ್ಲಿ ಬೀಗುತ್ತಿರುವ ಮನುಕುಲ ತಲೆತಗ್ಗಿಸಬೇಕಾದ ಕರಾಳ ದಿನಗಳು. ಅಂದಿನವರೆಗೂ ಕೇವಲ ಊಹೆಯಲ್ಲಿದ್ದ ಅಣುಬಾಂಬ್, ಜಪಾನಿನ ಹಿರೋಷಿಮಾ ಹಾಗೂ ನಾಗಾಸಾಕಿಗಳ ಮೇಲೆ ಎರಗಿ ರುದ್ರ ನರ್ತನ ಮಾಡಿತು. ಹಿಟ್ಲರ್‌ನ ಯುದ್ಧದಾಹ ಹಾಗೂ ಪೈಶಾಚಿಕ ಕೃತ್ಯಗಳಿಂದ ಕಳವಳಗೊಂಡಿದ್ದ ಅಮೆರಿಕ ಹಾಗೂ ಇಂಗ್ಲೆಂಡಿನ ವಿಜ್ಞಾನಿಗಳು, 1942 ರ ಸುಮಾರಿಗೆ ಜರ್ಮನಿಗಿಂತ ಮುಂಚಿತವಾಗಿ ಅಣುಬಾಂಬೊಂದನ್ನು ನಿರ್ಮಾಣ ಮಾಡಲು 'ಮನ್ ಹಾಟನ್ ಪ್ರಾಜೆಕ್ಟ್' ಪ್ರಾರಂಭಮಾಡಿದರು. ಮೂರು ವರ್ಷಗಳಲ್ಲಿಯೇ ಪೂರ್ಣಗೊಂಡ ಯೋಜನೆಯ ಫಲವಾಗಿ ವಿಶ್ವದ ಪ್ರಥಮ ಅಣುಬಾಂಬ್, ಪರೀಕ್ಷಾ ಸ್ಫೋಟವಾಗಿದ್ದು ಜುಲೈ 16, 1945ರಂದು, ನ್ಯೂ ಮೆಕ್ಸಿಕೋದ ಮರುಭೂಮಿಯಲ್ಲಿ. ದೂರದ ಕಾಂಕ್ರೀಟ್ ಬಂಕರಿನಲ್ಲಿ ಕುಳಿತು ಸ್ಫೋಟ ವೀಕ್ಷಿಸಿದ ಓಪೆನ್‌ಹೈಮರ್‌ಗೆ ಥಟ್ಟನೆ ನೆನಪಿಗೆ ಬಂದದ್ದು 'ಸಹಸ್ರ ಸೂರ್ಯರ ಪ್ರಚಂಡ ಪ್ರಕಾಶ ಒಮ್ಮೆಗೇ ಮೇಲೆದ್ದಿದೆ' ಎಂದು ಭಗವದ್ಗೀತೆಯಲ್ಲಿ ಕಾಣುವ ವರ್ಣನೆ (ದಿವಿಸೂರ್ಯಸಹಸ್ರಸ್ಯ ಭವೇದ್ಯುಗಪದುತ್ಥಿತಾ 11-12).

ಅಂದು ಆ ಪರೀಕ್ಷಾ ಸ್ಫೋಟದಿಂದ ಉಂಟಾದ ಕರಾಳ ಪರಿಣಾಮವನ್ನು ಕಂಡಿದ್ದ ಅನೇಕ ವಿಜ್ಞಾನಿಗಳು, ಅದರ ಪ್ರಯೋಗ ಬೇಡವೆಂದು ಹೇಳಿದರೂ ಅವರ ಮಾತನ್ನು ಕೇಳುವ ಸ್ಥಿತಿಯಲ್ಲಿ ಅಂದು ಅಮೆರಿಕದ ಅಧ್ಯಕ್ಷ ಟ್ರೂಮನ್ ಇರಲಿಲ್ಲ. ಓಪೆನ್‌ಹೈಮರ್ ಅನುಮಾನಿಸಿದಂತೆಯೇ, ಅವನ ಮೃತ್ಯುಯಂತ್ರ ಅಪಾರ ಸಂಖ್ಯೆಯಲ್ಲಿ ಮನುಕುಲದ ವಿನಾಶವನ್ನಷ್ಟೇ ಅಲ್ಲದೆ ಅಲ್ಲಿನ ನೆಲ ಜಲ - ವಾಯುಗಳಲ್ಲಿ ಅಣುವಿಕಿರಣ ತುಂಬಿ ಹಲವು ಪೀಳಿಗೆಗಳು ನರಳುವಂತೆ ಮಾಡಿತು.

ಹಿರೋಷಿಮಾದಲ್ಲಿ ಬೆಂಕಿಯ ನೃತ್ಯ: ಆಗಸ್ಟ್ 6, 1945 ರಂದು ನಡೆದ ಅಣುಬಾಂಬ್ ದಾಳಿಯಲ್ಲಿ, ಮೊದಲ ದಿನವೇ ಸುಮಾರು 80,000 ಮಂದಿ ಪ್ರಾಣ ಕಳೆದುಕೊಂಡರು. ಸುಮಾರು ಮೂರು ತಿಂಗಳ ಅವಧಿಯಲ್ಲಿ ಪ್ರಾಣ ತೆತ್ತವರ ಸಂಖ್ಯೆ ಹಿರೋಷಿಮಾದಲ್ಲಿ 1,60,000 ಹಾಗೂ ನಾಗಸಾಕಿಯಲ್ಲಿ 80,000 ವನ್ನು ಮೀರುತ್ತದೆ. ನಂತರದ ವರುಷಗಳಲ್ಲಿ ಸಾವಿರಾರು ಮಂದಿ ಸುಟ್ಟಗಾಯಗಳ ಪರಿಣಾಮವಾಗಿ ಹಾಗೂ ಅಣು ವಿಕಿರಣದಿಂದಾಗಿ ನಾನಾ ರೀತಿಯ ಖಾಯಿಲೆಗಳಿಗೆ ತುತ್ತಾಗಿ ಪ್ರಾಣ ತೆತ್ತರು. ಎರಡನೆಯ ಮಹಾಯುದ್ಧದಲ್ಲಿ ಹಿಟ್ಲರ್ ಸೇನೆಯು ಸೋತ ನಂತರವೂ, ಜಪಾನ್ ಮೇಲೆ ಅಣುಬಾಂಬ್ ಪ್ರಯೋಗ ಮಾಡಿದ್ದು ಭೀಕರ ಎನಿಸಿದೆ.

ಹಿರೋಷಿಮಾ ನಗರದಲ್ಲಿ ಪ್ರವಾಸಿಗರಿಗೆ ಇಂದು ಹಲವು ಸ್ಮಾರಕಗಳು ಕಾಣಸಿಗುತ್ತವೆ. ನಗರದ ಮಧ್ಯ ಭಾಗದಲ್ಲಿರುವ ಅಣು ಬಾಂಬ್ ಗುಮ್ಮಟವನ್ನು ಬಳಸಿಕೊಂಡು ಬರುವಾಗ ನಮ್ಮ ಪಕ್ಕದಲ್ಲಿಯೇ ಹರಿಯುವ ಮೊಟೊಯಾಸು ನದಿಯ ಆಚೆಯ ದಡದಲ್ಲಿರುವುದೇ 'ಹಿರೋಷಿಮಾ ಶಾಂತಿ ಸ್ಮಾರಕ ಉದ್ಯಾನ'. 1954 ರಲ್ಲಿ ನಿರ್ಮಿತವಾದ ಹಾಗೂ ವಿಶ್ವ ಪಾರಂಪರಿಕ ಸ್ಮಾರಕವಾಗಿ ರುವ ಈ ಉದ್ಯಾನದಲ್ಲಿರುವ ಅನೇಕ ಸ್ಮಾರಕಗಳು, ಮ್ಯೂಸಿಯಮ್‌ಗಳು ಹಾಗೂ ಬೋಧನಾ ಕೇಂದ್ರಗಳು ವಿಶ್ವದೆಲ್ಲೆಡೆಯಿಂದ ಬರುವ ಪ್ರವಾಸಿಗರಿಗೆ ಅಣುಬಾಂಬ್ ದಾಳಿಯ ವಿವಿಧ ಮುಖಗಳನ್ನು



ತೆರೆದು ತೋರುತ್ತವೆ.

ಶಾಂತಿ ಸಂಸ್ಮರಣಾ ದಿನಾಚರಣೆ : ಪ್ರತಿ ವರುಷ ಆಗಸ್ಟ್ 6 ರಂದು, ಹಿರೋಷಿಮಾದಲ್ಲಿ ಅಣುಬಾಂಬ್ ದಾಳಿಗೆ ತುತ್ತಾದ ಸುಮಾರು 1,60,000 ದುರ್ದೈವಿಗಳನ್ನು ನೆನೆಯುತ್ತಾ, ಈ ಉದ್ಯಾನದಲ್ಲಿ ಆಚರಿಸುವ ಶಾಂತಿ ಸಂಸ್ಮರಣಾ ದಿನಾಚರಣೆಯ ಉದ್ದೇಶಗಳಲ್ಲಿ ಅಣುಶಕ್ತಿಯ ಭೀಕರತೆಯ ಮನನ ಹಾಗೂ ವಿಶ್ವ ಶಾಂತಿ ಪ್ರತಿಪಾದನೆಗಳು ಸೇರಿವೆ.

ಅಂದು ಬೆಳಿಗ್ಗೆ 8 ಗಂಟೆಗೆ ಉದ್ಯಾನದ ಸ್ಮಾರಕ ಗೋಪುರದ ಮುಂಭಾಗದಲ್ಲಿ ಆರಂಭವಾಗುವ ಈ ಆಚರಣೆಯಲ್ಲಿ ದುರಂತದಲ್ಲಿ ಮಡಿದವರ ಕುಟುಂಬವರ್ಗದವರೂ ಪಾಲ್ಗೊಳ್ಳುತ್ತಾರೆ. ಅಣು ಬಾಂಬ್ ಅಲ್ಲಿ ಬಿದ್ದ ಸಮಯ, ಬೆಳಗಿನ ಜಾವ 8-15 ಕ್ಕೆ ಸರಿಯಾಗಿ ಒಂದು ನಿಮಿಷ ಅಲ್ಲಿರುವ ಬೃಹತ್ ಶಾಂತಿ ಗಂಟೆಯನ್ನು ಬಾರಿಸುತ್ತಾರೆ. ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ ಒಂದು ನಿಮಿಷದ ಮೌನ ಆಚರಿಸಿ, ನಗರದ ಮೇಯರ್ ಶಾಂತಿ ಪ್ರತಿಜ್ಞಾ ವಿಧಿಯನ್ನು ಬೋಧಿಸುತ್ತಾರೆ ಹಾಗೂ ಶಾಂತಿಯ ಪ್ರತೀಕವಾದ ನೂರಾರು ಪಾರಿವಾಳಗಳನ್ನು ಹಾರಿ ಬಿಡುತ್ತಾರೆ.

ಅಣುಬಾಂಬ್ ಗುಮ್ಮಟ: ಉದ್ಯಾನದ ಕಡೆಗೆ ಹೆಜ್ಜೆ ಹಾಕುತ್ತಿರುವಂತೆ ನಮಗೆ ಮೊದಲು ಎದುರಾಗುವುದೇ ಅಣು-ಬಾಂಬ್ ಗುಮ್ಮಟ. ಬಾಂಬ್ ದಾಳಿಗೆ ಸಿಕ್ಕಿ ಅಸ್ಥಿಪಂಜರದಂತಾಗಿರುವ ಅಂದಿನ ವೈಭವೋಪೇತ ಕೈಗಾರಿಕಾ ಅಭಿವೃದ್ಧಿ ಸಭಾಂಗಣದ ಈ ಕಟ್ಟಡವನ್ನು ಯುನೆಸ್ಕೋ ವಿಶ್ವ ಪಾರಂಪರಿಕ ಸ್ಮಾರಕವೆಂದು ಘೋಷಿಸಿದೆ. ಅಣುಬಾಂಬ್ ಗುಮ್ಮಟ ಎಂದು ಗೌರವಿಸುವ ಇದನ್ನು ತಮ್ಮ ದೇಶವಷ್ಟೇ ಅಲ್ಲದೆ, ಇಡೀ ಮಾನವ ಜನಾಂಗ ಅನುಭವಿಸಿದ ಅಣುದುರಂತದ ಪಾರಂಪರಿಕ ಕಟ್ಟಡ ಎಂದು ಪರಿಗಣಿಸುತ್ತಾರೆ.

ವಸ್ತು ಸಂಗ್ರಹಾಲಯ: 1955ರಲ್ಲಿ ಸ್ಥಾಪಿತವಾದ ಈ ಸಂಗ್ರಹಾಲಯದ ಮೂಲ ಉದ್ದೇಶ ಅಣು-ಬಾಂಬ್ ದಾಳಿಯ ಭೀಕರತೆಯನ್ನು ಪ್ರದರ್ಶಿಸುವುದಲ್ಲದೆ, ವಿಶ್ವದೆಲ್ಲೆಡೆ ಇರುವ ಅಣು-ಶಸ್ತ್ರಾಸ್ತ್ರಗಳ ನಾಶ ಹಾಗೂ ವಿಶ್ವಶಾಂತಿಯ ಪ್ರತಿಪಾದನೆ. ಇದರ ಪೂರ್ವ ಭಾಗದಲ್ಲಿ, ಹಿರೋಷಿಮಾ ನಗರದ ಚರಿತ್ರೆ, ಅಣು-ಬಾಂಬ್ ದಾಳಿಗೆ ಅಮೆರಿಕ ನಡೆಸಿದ ತಯಾರಿ, ದಾಳಿಯಾದಾಗ ಹಿರೋಷಿಮಾ ನಗರದ ಜನತೆ ಅನುಭವಿಸಿದ ನೋವು ಹಾಗೂ ಅದರ ವಿದ್ರಾವಕ ಪರಿಣಾಮಗಳು ಕಾಣುತ್ತವೆ. ಅದರೊಂದಿಗೆ, ಅಣು-ಶಸ್ತ್ರಾಸ್ತ್ರ ಮುಕ್ತ ವಿಶ್ವಶಾಂತಿಗಾಗಿ ಜಪಾನ್ ನಡೆಸುತ್ತಿರುವ ಆಂದೋಲನದ ಬಗ್ಗೆ ಸವಿವರ ಮಾಹಿತಿ ಸಿಗುತ್ತದೆ. ಅಲ್ಲಿನ ದಾಳಿಯ ಸಮಯ ಬೆಳಗಿನ 8-15ಕ್ಕೆ ತಟಸ್ಥಗೊಂಡ ಗೋಡೆ-ಗಡಿಯಾರಗಳು, ಕೈ-ಗಡಿಯಾರಗಳು ಮನಸ್ಸನ್ನು ತಲ್ಲಣಗೊಳಿಸುತ್ತವೆ. ದಾಳಿಗೆ ಸಂಬಂಧಪಟ್ಟ ಚಲನಚಿತ್ರಗಳ ಹಾಗೂ ಛಾಯಾಚಿತ್ರಗಳ ಪ್ರದರ್ಶನವೂ ಇದೆ. ಉತ್ತರ ಭಾಗದಲ್ಲಿ ಬಾಂಬ್ ದಾಳಿಯಿಂದ ಉಂಟಾದ ಹಾನಿಯ ದೃಶ್ಯಗಳಿದ್ದು, ದಾಳಿಗೆ ತುತ್ತಾದವರು ಧರಿಸಿದ್ದ ಬಟ್ಟೆ, ಗಡಿಯಾರಗಳು, ಬೂಟು, ಕೂದಲು ಮುಂತಾದವುಗಳನ್ನು ಸಂಗ್ರಹಿಸಿಡಲಾಗಿದೆ.

ಒಳ ಭಾಗದಲ್ಲಿ, ಒಂದೆಡೆ ಸಾಲಾಗಿ ಕಾಣುವ ಟೆಲಿವಿಷನ್ ಸೆಟ್‌ಗಳ ಮುಂದೆ ಕುಳಿತು, ದಾಳಿಯಲ್ಲಿ ಸಿಲುಕಿ ಬದುಕುಳಿದವರ ಹಾಗೂ ಅವರ ಕುಟುಂಬದವರೊಡನೆ ನಡೆಸಿದ ಸಂದರ್ಶನದ ವಿಡಿಯೋ ಚಿತ್ರಣವನ್ನು ಕಾಣಬಹುದು. ತಮ್ಮವರೆಲ್ಲರನ್ನೂ ಕಳೆದುಕೊಂಡ ಮಕ್ಕಳು, ತಮ್ಮ ಶಾಲಾ ಮಕ್ಕಳನ್ನು ರಕ್ಷಿಸಲಾಗದೆ ಪರಿತಪಿಸುವ ಉಪಾಧ್ಯಾಯರು, ಕಾಣದಾದ ತಮ್ಮ ಮಕ್ಕಳಿಗಾಗಿ ಹಪಹಪಿಸುವ ತಾಯಂದಿರ ಪ್ರತ್ಯಕ್ಷ ದರ್ಶನ ಕಂಡು ಭಾರವಾದ ಹೃದಯದಿಂದ ಹೊರಬರುವಾಗ, ಅಣುಬಾಂಬ್ ಮುಕ್ತ ಭೂಮಿಯನ್ನು ಕಾಣುವಂತಾಗಲೆಂಬ ಆಶಯಹೊತ್ತು ಅಲ್ಲಿ ನಿರಂತರವಾಗಿ ಉರಿಯುತ್ತಿರುವ ಶಾಂತಿಜ್ಯೋತಿ ಹಾಗೂ ಅದರ ಸಮೀಪದಲ್ಲಿಯೇ ಇರುವ ಅಣು-ಬಾಂಬ್ ಗುಮ್ಮಟದ ನೋಟಗಳು ಮುಂಬರುವ ದಿನಗಳ ಬಗ್ಗೆ ಗಂಭೀರವಾಗಿ ಚಿಂತಿಸುವಂತೆ ಮಾಡುತ್ತದೆ.

ನಿರಂತರ ಶಾಂತಿ ಜ್ಯೋತಿ; ಹಿರೋಷಿಮಾ ಶಾಂತಿ ಉದ್ಯಾನದ ಮಧ್ಯಭಾಗದಲ್ಲಿನ ನೀರಿನ ಬೃಹತ್ ತೊಟ್ಟಿಯಲ್ಲಿ, 1964 ರಿಂದ ನಿರಂತರವಾಗಿ ಬೆಳಗುತ್ತಿರುವ ಶಾಂತಿ ಜ್ಯೋತಿ ಇದೆ. ಇದನ್ನು ವಿಶ್ವದೆಲ್ಲೆಡೆ ಇರುವ ಎಲ್ಲಾ ಅಣು-ಬಾಂಬ್‌ಗಳನ್ನು ನಾಶಮಾಡುವವರೆಗೂ ಉರಿಸುತ್ತಿರಬೇಕೆಂಬ ಸಂಕಲ್ಪ ಮಾಡಿದ್ದಾರೆ. ಈ ಶಾಂತಿ ಜ್ಯೋತಿಯಿರುವ ತಾಣದಿಂದ ಸುಮಾರು 50 ಮೀ. ಗಳ ದೂರದಲ್ಲಿ, ತಲೆಕೆಳಗಾದ ಕಮಾನಿನ ಆಕಾರದಲ್ಲಿ ನಿರ್ಮಿಸಿರುವ ಸ್ಮಾರಕ ಗೋಪುರ ಎದುರಾಗುತ್ತದೆ. ಆ ಗೋಪುರದ ಕೆಳಗಡೆ ಅಣುಬಾಂಬ್ ದುರಂತದಲ್ಲಿ ಮಡಿದವರೆಲ್ಲರ ಹೆಸರುಗಳನ್ನು ದಾಖಲಿಸಿದ್ದಾರೆ. ಮೃತರ ಆತ್ಮಗಳನ್ನು ರಕ್ಷಿಸುತ್ತಿದೆ ಎಂದು ಹೇಳುವ ಈ ಸಮಾಧಿಯ ಮೇಲೆ ಆತ್ಮಕ್ಕೆ ಶಾಂತಿ ಸಿಗಲಿ, ಈ ತಪ್ಪು ಮತ್ತೆಂದೂ ಮರುಕಳಿಸದಿರಲಿ ಎಂಬ ಘೋಷವಾಕ್ಯ ಕಾಣುತ್ತದೆ. ಈ ಗೋಪುರದ ಮುಂದೆ ನಿಂತಾಗ, ಅದರ ಮೂಲಕ ಕಾಣುವ ಶಾಂತಿ ಜ್ಯೋತಿ ಹಾಗೂ ದೂರದಲ್ಲಿರುವ ಅಣು-ಬಾಂಬ್ ಡೋಮ್ ಕಟ್ಟಡಗಳು ಒಂದು ಸರಳ ರೇಖೆಯಲ್ಲಿ ಕಾಣಿಸುವ ಅದ್ಭುತ ನೋಟ ಕಾಣಸಿಗುತ್ತದೆ.

ಶಾಂತಿ ಗಂಟೆ: ಇಲ್ಲಿರುವ ದೊಡ್ಡ ಶಾಂತಿ ಗಂಟೆಯನ್ನು ಉದ್ಯಾನಕ್ಕೆ ಬರುವ ಪ್ರವಾಸಿಗರೆಲ್ಲರೂ ಶಾಂತಿಯ ಪ್ರತಿಪಾದನೆಯ ಸಂಕೇತವಾಗಿ ಬಾರಿಸುವ ಧ್ವನಿ ಅಲ್ಲಿ ಅನುರಣಿಸುತ್ತಿರುತ್ತದೆ. ಈ ಗಂಟೆಯ ಮೇಲ್ಮೈಯಲ್ಲಿ ವಿಶ್ವಭೂಪಟ ಕಾಣಿಸುತ್ತದೆ. ಇದರೊಂದಿಗೆ ಗ್ರೀಕ್, ಜಪನೀಸ್ ಹಾಗೂ ಸಂಸ್ಕೃತ ಭಾಷೆಗಳಲ್ಲಿ ಬರಹಗಳಿವೆ. ಇದು 1964 ರಲ್ಲಿ ಗ್ರೀಕ್ ದೂತಾವಾಸದಿಂದ ದೊರೆತ ಕೊಡುಗೆ. ಈ ಗಂಟೆಯ ಮೇಲಿರುವ ಕೆತ್ತನೆಯಲ್ಲಿ, ಗ್ರೀಕ್ ತತ್ತ್ವಜ್ಞಾನಿ ಸಾಕ್ರೆಟಿಸ್ ಹೇಳಿರುವ 'ನಿನ್ನನ್ನು ನೀನು ಅರಿತುಕೋ' ಎಂಬ ಬರಹ ಗ್ರೀಕ್ ಭಾಷೆಯಲ್ಲಿ, ಜಪಾನೀ ಭಾಷೆಯಲ್ಲಿರುವ ಅದರ ಅನುವಾದ ಹಾಗೂ ಸಂಸ್ಕೃತ ಭಾಷೆಯಲ್ಲಿರುವ ಸುಖಾವತೀವ್ಯೂಹ ಸೂತ್ರದ ಸಾಲುಗಳು ಕಾಣಿಸುತ್ತವೆ.

ವಿಪುಲಪ್ರಭ ಅತುಲ್ಯನಂತ ನಾಥ ದಿಶಿ ವಿದಿಶಿ ಸ್ಫುರಿ
ಸರ್ವಬುದ್ಧಕ್ಷೇತ್ರಾ ?
ರಾಗ ಪ್ರಶಮಿ ಸರ್ವದೋಷಮೋಹಾಂ ನರಕಗತಿಸ್ಮಿ
ಪ್ರಶಾಮಿ ಧೂಮಕೇತುಮ್ ??15??

ಗಮನವಿಟ್ಟು ನೋಡಿದಾಗ ಸ್ಪಷ್ಟವಾಗಿ ಕಾಣುವ ಈ ಸಾಲುಗಳು, ಜಪಾನಿನಲ್ಲಿ ನೆಲೆಯೂರಿರುವ ಸಂಸ್ಕೃತ ಭಾಷೆಯ ಪ್ರಾಮುಖ್ಯತೆಯನ್ನು ತೋರಿಸುತ್ತದೆ. ಸರ್ವದೋಷಮೋಹಗಳಿಂದ ಮುಕ್ತವಾಗಿ ಸುಖ - ಶಾಂತಿ ಪಡೆಯುವ ಭಗವಾನ್ ಬುದ್ಧನ ಉಪದೇಶವನ್ನು ಸುಖಾವತೀವ್ಯೂಹ ಸೂತ್ರ ಒಳಗೊಂಡಿದೆ.

ಹಿರೋಷಿಮಾ ರಾಷ್ಟ್ರೀಯ ಶಾಂತಿ ಸ್ಮಾರಕ ಕಟ್ಟಡ: ಅಣು-ಬಾಂಬ್ ದುರಂತದಲ್ಲಿ ಮಡಿದವರ ಸ್ಮರಣಾರ್ಥವಾಗಿ ಕಟ್ಟಿರುವ ಹಿರೋಷಿಮಾ ರಾಷ್ಟ್ರೀಯ ಶಾಂತಿ ಸ್ಮಾರಕದ ಕಟ್ಟಡ ನೆಲಮಟ್ಟದಲ್ಲಿದ್ದು ಅದರ ಕೆಳಗಡೆ ಎರಡು ಅಂತಸ್ತುಗಳಿವೆ. ಅಲ್ಲಿ ಗ್ರಂಥಾಲಯ ಹಾಗೂ 360 ಡಿಗ್ರಿ ವರ್ತುಲಾಕಾರದಲ್ಲಿ ನಿರ್ಮಿಸಿರುವ ಸಭಾಂಗಣಗಳಿವೆ. ಇದಕ್ಕೆ ಹಾಕಿರುವ ಹೆಂಚುಗಳ ಸಂಖ್ಯೆ, 1945 ರ ಅಂತ್ಯದವರೆಗೂ ಅಣು-ಬಾಂಬ್ ದಾಳಿಯಲ್ಲಿ ಮಡಿದವರ ಸಂಖ್ಯೆ, 1,40,000 ಕ್ಕೆ ಸಮನಾಗಿದೆ. ಮೇಲಿನ ಅಂತಸ್ತಿನಲ್ಲಿ ಒಂದು ಬೃಹದಾಕಾರದ ಗಡಿಯಾರ ಆಗಿನ ಸಮಯವನ್ನು ನೆನಪಿಸುತ್ತಾ, 8-15 ಕ್ಕೇ ನಿಂತಿದೆ. ಇದರ ಸನಿಹದಲ್ಲಿಯೇ ಇರುವ ಅಣು-ಬಾಂಬ್ ಸಮಾಧಿ ಸ್ಮಾರಕ, ಹುಲ್ಲುಹಾಸಿನ ದಿಣ್ಣೆಯಾಕಾರದಲ್ಲಿ ನಿರ್ಮಿತವಾಗಿದ್ದು ಅದರಡಿಯಲ್ಲಿ ದಾಳಿಗೆ ತುತ್ತಾದ 70,000 ಗುರುತು ಸಿಗದ ನತದೃಷ್ಟರ ಚಿತಾಭಸ್ಮದ ಸಂಗ್ರಹವಿದೆ.

ಸಡೊಕೋ ಸಸಾಕಿ ಎಂಬ ಹುಡುಗಿ

ಉದ್ಯಾನದ ಮಧ್ಯಭಾಗಕ್ಕೆ ಬಂದಾಗ ನಮಗೆದುರಾಗುವುದೇ ಮಕ್ಕಳ ಶಾಂತಿ ಸ್ಮಾರಕ. ಇಲ್ಲಿ ಅಣು-ಬಾಂಬ್ ದುರಂತದಲ್ಲಿ ಮಡಿದ ಮಕ್ಕಳ ಸ್ಮರಣಾರ್ಥವಾಗಿ ನಿರ್ಮಿಸಿರುವ ಗೋಪುರದ ಮೇಲೆ ಕೈಗಳೆರಡನ್ನೂ ಹೊರಚಾಚಿರುವ ಸಡೊಕೋ ಸಸಾಕಿ ಎಂಬ ಹುಡುಗಿಯ ಶಿಲಾಮೂರ್ತಿ ಇದೆ. ಅವಳ ತಲೆಯ ಮೇಲೆ, ಮಕ್ಕಳಿಗೆ ಪ್ರಿಯವಾದ ಪೇಪರ್ ಹಕ್ಕಿಯ ಕೆತ್ತನೆ ಮನ ಸೆಳೆಯುತ್ತದೆ. ಆ ಹುಡುಗಿ 1000 ಪೇಪರ್ ಹಕ್ಕಿಗಳನ್ನು ತಾನು ಮಾಡಿದಾಗ, ತನಗೆ ಬಂದಿರುವ ಅಣುವಿಕಿರಣ ಸಂಬಂಧಿ ಭೀಕರ ಖಾಯಿಲೆಯಿಂದ ಪಾರಾಗುವುದಾಗಿ ನಂಬಿದ್ದಳು. ಇಂದಿಗೂ ಅವಳ ನೆನಪಿನಲ್ಲಿ ಪ್ರಪಂಚದಾದ್ಯಂತ ಮಕ್ಕಳು ಈ ರಾಷ್ಟ್ರೀಯ ಶಾಂತಿ ಉದ್ಯಾನಕ್ಕೆ ಕಳುಹಿಸುವ ತಾವೇ ತಯಾರಿಸಿದ ಪೇಪರ್ ಹಕ್ಕಿಗಳ ಸಂಗ್ರಹವನ್ನು ಈ ಸ್ಮಾರಕದ ಬಳಿ ಕಾಣಬಹುದು.

ಅನ್ನ ಬ್ರಹ್ಮನ ದರ್ಶನ

» ಅನುಪಮಾ ಮಂಗಳವೇಢೆ, ಶಿಕಾಗೊ



ಕೊಯಮತ್ತೂರಿನಲ್ಲಿ ಈಶ ಸಂಸ್ಥೆಯ ಅಕ್ಷಯ ಅಡುಗೆಮನೆ ಪ್ರಾರಂಭವಾದ ಸುಮಾರು 25 ವರ್ಷಗಳಿಂದ ಇಲ್ಲಿಯವರೆಗೆ, ಪ್ರತಿ ದಿನ ನಿಗದಿತ ಸಮಯಕ್ಕೆ ಸರಿಯಾಗಿ ಪಂಕ್ತಿ ಪ್ರಾರಂಭಗೊಂಡಿದೆ. ಮೊದಲ ಪಂಕ್ತಿಗೆ ಮುನ್ನ ಬಹಳ ಕೆಲಸಗಳಿರುತ್ತವೆ. ಹಬ್ಬ ಹಾಗು ವಿಶೇಷ ದಿನಗಳಲ್ಲಿ ತಟ್ಟೆಗಳ ಬದಲು ಬಾಳೆ ಎಲೆಯಲ್ಲಿ ಊಟ. ಅಡುಗೆಗಳ ಬಕೆಟುಗಳನ್ನು ಬಡಿಸುವ ಕ್ರಮದಲ್ಲಿಯೇ ಇಡಬೇಕು. ಪಂಕ್ತಿ ಪ್ರಾರಂಭವಾಗುವ ಮುನ್ನ ಸ್ವಯಂಸೇವಕರೆಲ್ಲ ಒಂದೆಡೆ ಸೇರಬೇಕು. ಬಡಿಸುವವರೆಲ್ಲರೂ ಸ್ವಲ್ಪಕಾಲ ಕುಳಿತು ಧ್ಯಾನ ಮಾಡಬೇಕು. ಆಹಾರ ಬಡಿಸುವವರ ಮನಸ್ಸು ಉದ್ವೇಗದಿಂದಿರದೆ ಶಾಂತವಾಗಿದ್ದು, ತಿನ್ನುವ ಆಹಾರ ಸಕಾರಾತ್ಮಕವಾಗಿ ಪರಿಣಾಮಕಾರಿಯಾಗಲಿ ಎಂಬ ಉದ್ದೇಶದಿಂದ.

ಯಾವಾಗ ನಮ್ಮನ್ನು ನಾವು ಚಟುವಟಿಕೆಯಲ್ಲಿ ಸಂಪೂರ್ಣವಾಗಿ ಶ್ರದ್ಧಾಭಕ್ತಿಯಿಂದ ತೊಡಗಿಸಿಕೊಳ್ಳುತ್ತೇವೆಯೋ, ಆಗ ಮಾಡುವ ಕೆಲಸವನ್ನು ಅತ್ಯಂತ ಸಂತೋಷದಿಂದ ಮಾಡುತ್ತೇವೆ.

ಭಿಕ್ಷಾ ಹಾಲ್‌ನ ಮೂರು ಪ್ರವೇಶದ್ವಾರಗಳನ್ನು ಹತ್ತು ನಿಮಿಷಗಳ ಮುಂಚೆ ತೆರೆಯಬೇಕು. ಪ್ರತಿಯೊಬ್ಬರಿಗೂ ಕೈಜೋಡಿಸಿ ನಮಸ್ಕರಿಸಿ, ಸ್ವಾಗತಿಸಬೇಕು. ಜನರು ಕುಳಿತು ಸಾಲು ತುಂಬುತ್ತಿದ್ದಂತೆ, ಬಡಿಸುವ ಕೆಲಸ ಶುರು. ಆಹಾರವನ್ನು ಶ್ರದ್ಧಾಭಕ್ತಿಯಿಂದ ಸ್ವಯಂಸೇವಕರು ಬಡಿಸುತ್ತಾರೆ. ಚಳಿಗಾಲದಲ್ಲಿ ಕಷಾಯದಿಂದಲೇ ಬಡಿಸುವಿಕೆ ಪ್ರಾರಂಭ. ಸಾಮಾನ್ಯವಾಗಿ ಮಧ್ಯಾಹ್ನದೂಟಕ್ಕೆ ನೆನಸಿದ ಕಡ್ಲೆಕಾಯಿಬೀಜ ಇರುತ್ತದೆ. ಪರಂಗಿ, ಬಾಳೆ, ಕಲ್ಲಂಗಡಿ, ಕಿತ್ತಳೆಯಂತಹ ಯಾವುದಾದರೂ ಒಂದು ಹಣ್ಣಿರುತ್ತದೆ. ಸೀಸನ್‌ನಲ್ಲಿ ಮಾವು, ಸಪೋಟದಂತಹ ಹಣ್ಣುಗಳನ್ನೂ ನೀಡುತ್ತಾರೆ. ಊಟ ಪ್ರಾರಂಭಿಸುವ ಮುನ್ನ, ಸಾವಿರಾರು ಜನ ಒಂದೇ ಕಂಠದಲ್ಲಿ ಸಹನಾವವತು... ಪ್ರಾರ್ಥನಾ ಮಂತ್ರ ಹೇಳಿದಾಗ ಅದನ್ನು ಕೇಳುವುದೇ ರೋಮಾಂಚನವೆನಿಸುತ್ತದೆ.

ಸಿರಿಧಾನ್ಯದ ಬಳಕೆ

ಅಕ್ಕಿಯ ಅಥವಾ ಸಿರಿಧಾನ್ಯದಿಂದ ಮಾಡಿರುವ ಅನ್ನವಿರುತ್ತದೆ. ಇನ್ನೊಂದು ಮುಖ್ಯ ಆಹಾರವಾಗಿ ಉಪ್ಪಿಟ್ಟು, ಚಿತ್ರಾನ್ನ, ಕಲಸಿದ ರಸಂ ಅನ್ನ, ಪೊಂಗಲ್ ಇವುಗಳ ಪೈಕಿ ಒಂದು. ಕೆಲವೊಮ್ಮೆ ರಾಗಿಯ ಗಂಜಿ, ಅನ್ನಬೇಳೆಗಳ ಗಂಜಿ, ಅಥವಾ ಪಾಯಸ. ವಿಶೇಷ ದಿನಗಳಲ್ಲಿ ಸಿಹಿ ಅಡುಗೆ ಇದ್ದೇ ಇರುತ್ತದೆ. ಆಶ್ರಮದಲ್ಲಿ ತುಪ್ಪದ ಬಳಕೆಯಿದೆ, ಆದರೆ ಮೊಸರಿನ ಬಳಕೆಯಿಲ್ಲ. ನೀರಾದ ಮಜ್ಜಿಗೆ ಬಡಿಸುವುದಿದೆ ಕೆಲವೊಮ್ಮೆ.

ಊಟವಾಗಿ ಜನರು ಎದ್ದಂತೆ, ಆ ಸ್ಥಳವನ್ನು ಸ್ವಚ್ಛಗೊಳಿಸುವುದು ನಮ್ಮ ಜವಾಬ್ದಾರಿ. ಮೊದಲೆರಡು ಪಂಕ್ತಿಗಳಲ್ಲಿ ಕೂರಿಸಿ ಬಡಿಸಿದರೆ, ಮೂರನೆಯದು ಮುಕ್ತ ಪಂಕ್ತಿ. ಮೂರೂ ಪಂಕ್ತಿಗಳಾದಮೇಲೆ ಆ ಸ್ಥಳವನ್ನು ಶುಚಿಗೊಳಿಸಬೇಕು.

ಭಕ್ತಿಯಿಂದ ಕೆಲಸ

ಪ್ರಾಣದಾನಮ್ ಕಾರ್ಯಕ್ರಮದ ಒಂಬತ್ತು ದಿನಗಳಲ್ಲಿ ಪ್ರತಿದಿನವೂ, ಸುಮಾರು 1:30ರಿಂದ ಸಂಜೆ 5ರ ತನಕ ವಿವಿಧ ರೀತಿಯ ಕಾರ್ಯಕ್ರಮಗಳಿರುತ್ತವೆ. ಒಂದು ದಿನ ಮಿನಿಬಸ್‌ನಲ್ಲಿ ಆಶ್ರಮದ ಹೊರಗಿರುವ ಗೋಶಾಲೆಗೆ ಹೋದರೆ, ಇನ್ನೊಂದು ದಿನ ಕೃಷಿ ಭೂಮಿಗೆ ಭೇಟಿ. ಮತ್ತೊಂದು ದಿನ ನಳಂದ ಮೈದಾನದಲ್ಲಿ ಆಟ-ಓಟ. ಸಂಜೆ



ಸುಮಾರು ಒಂದು ಘಂಟೆ ವಿರಮಿಸಿದರೆ, ಪುನಃ ರಾತ್ರಿ 6:30ರಿಂದ ರಾತ್ರಿ 10ರ ತನಕ ರಾತ್ರಿಯೂಟದ ಮೂರು ಪಂಕ್ತಿಗಳು. ರಾತ್ರಿಯ ಹೊತ್ತಿಗೆ, ದೈಹಿಕವಾಗಿ ಬಹಳಷ್ಟು ಸವಾಲೆನಿಸಿದರೂ, ಮಾನಸಿಕವಾಗಿ ನಾವೆಲ್ಲರೂ ಬಹಳ ಸಂತೋಷದಿಂದಿದ್ದೆವು. ಬಕೆಟ್ ತೊಳೆಯುವಾಗ, ಸಿಂಕ್ ಸ್ವಚ್ಛಗೊಳಿಸುವಾಗ, ತಮಾಷೆ ಮಾಡುತ್ತಲೋ, ಹಾಡು ಗುನುಗುನಿಸುತ್ತಲೋ, ನಗುಮೊಗದೊಂದಿಗೇ ಮಾಡುತ್ತಿದ್ದೆವು.

ಮತ್ತು ನಾವೇ ಹಾಕಿಕೊಳ್ಳುವ ಅನೇಕ ದೈಹಿಕ ಹಾಗು ಮಾನಸಿಕ ಮಿತಿಗಳನ್ನು ಮೀರಿ ನಿಲ್ಲುತ್ತೇವೆ. ದಿನದ 3 ಅಥವಾ 4 ಪಂಕ್ತಿಯಲ್ಲಿ, ಒಬ್ಬೊಬ್ಬರೂ ಸುಮಾರು ಇನ್ನೂರು ಜನರಿಗೆ, ಭಾರವಾದ ಬಕೆಟ್‌ಗಳನ್ನು ಹಿಡಿದು, ಸೊಂಟ ಬಗ್ಗಿಸಿ ಬಡಿಸುವುದು ಸುಲಭವಲ್ಲ. ಬಡಿಸುವವರ ಸೊಂಟ ಗಟ್ಟಿಯಾಗಿರಬೇಕು. ಏಕೆಂದರೆ ಇಂತಹ ಕೆಲಸಗಳನ್ನು ಮಾಡಲಿಕ್ಕೆ ಒಂದೋ ಅಭ್ಯಾಸವಿರಬೇಕು ಅಥವಾ ಯೋಗಸಾಧನವಿರಬೇಕು. ದಿನವೂ ಹಠಯೋಗ ಮಾಡುವುದರಿಂದ ಸ್ವಯಂಸೇವಕರಿಗೆ ಇದು ಸುಲಭಸಾಧ್ಯ.

ಈಗಿನ ದಿನಗಳಲ್ಲಿ ಟೀವಿ ಅಥವಾ ಸ್ಮಾರ್ಟ್‌ಫೋನ್ ನೋಡುತ್ತಲೋ ಅಥವಾ ಮಾತನಾಡುತ್ತಲೋ ಊಟ ಮಾಡುವ ಅಭ್ಯಾಸ ಹಲವರಿಗಿದೆ. ಏನು ತಿನ್ನುತ್ತಿದ್ದೇನೆ, ಎಷ್ಟು ತಿನ್ನುತ್ತಿದ್ದೇನೆ ಎಂಬ ಪರಿವೆಯೂ ಇರುವುದಿಲ್ಲ. ಆಹಾರ ಚೆಲ್ಲುವುದು ಒಂದು ಶೋಕಿ ಕೆಲವರಿಗೆ. ಆಶ್ರಮದಲ್ಲಿ ಸಾವಿರಾರು ಜನ ಒಂದೇ ಹಾಲ್‌ನೊಳಗೆ ಇದ್ದರೂ, ಎಷ್ಟು ನಿಃಶಬ್ದವಾಗಿರುತ್ತದೆ ಎಂದರೆ ಊಹಿಸಲಿಕ್ಕೆ ಅಸಾಧ್ಯ. ಬೇಕುಬೇಡಗಳನ್ನು ಸಹ ಸನ್ನೆ ಮಾಡಿ ತೋರಿಸುತ್ತಾರೆಯೇ ವಿನಾ ಮಾತನಾಡುವುದಿಲ್ಲ. ಬಡಿಸುವವರೂ ಕೂಡ ಮಾತನಾಡುವುದಿಲ್ಲ. ಬಡಿಸುವವರಿಗೆ ಹಸಿವಾಗುತ್ತಿದ್ದರೂ, ಮೊದಲು ಬಡಿಸಿ ನಂತರ ಊಟ ಮಾಡುವುದಿದೆಯಲ್ಲ, ಅದೇ ಒಂದು ಸಾಧನೆ. ಒಬ್ಬರಿಗೆ ಅನ್ನ ನೀಡುವಾಗ, ದೇವರೇ ಆ ಸ್ವರೂಪದಲ್ಲಿ ಬಂದು ಭಿಕ್ಷೆ ಸ್ವೀಕರಿಸುತ್ತಿರುವನು ಎಂಬ ಭಾವವಿರಬೇಕಂತೆ. ಒಮ್ಮೆ ಸದ್ಗುರುಗಳು ಊಟಕ್ಕೆಂದು ಭಿಕ್ಷಾ ಹಾಲ್‌ಗೆ ಬಂದಿದ್ದರು! ಆ ಸಮಯದಲ್ಲಿ ನಾನು ಸಹ ಅಲ್ಲಿ ಬಡಿಸುವಿಕೆಯಲ್ಲಿ ನಿರತಳಾಗಿದ್ದು ನನ್ನ ಅದೃಷ್ಟವೆನಿಸಿತ್ತು. ಆಹಾರವನ್ನು ಪರರಿಗೆ ನೀಡುವ ತೃಪ್ತಿ, ನಮ್ಮನ್ನೇ ನಾವು ಇದರಲ್ಲಿ ತೊಗಡಿಸಿಕೊಳ್ಳುವ ರೀತಿ, ಜೀವಪೋಷಿಸುವ ಆಹಾರದ ಮೇಲಿನ ಭಕ್ತಿ, ನಮ್ಮಲ್ಲಿರುವ ಇತಿಮಿತಿಗಳನ್ನು ಮೀರುವ ಸ್ವಾತಂತ್ರ್ಯ - ಈ ಎಲ್ಲವನ್ನು ಅನುಭವಿಸಲಿಕ್ಕೆ ಅವಕಾಶವಾಯಿತು.

ಆಹಾರ ತಟ್ಟೆಯ ಮೇಲಿದ್ದರೆ, ಅದು ಆಹಾರ. ಆದರೆ, ಒಮ್ಮೆ ಅದು ನಮ್ಮ ಹೊಟ್ಟೆಯೊಳಗೆ ಹೋದಮೇಲೆ ಅದು ನಾನು ಆಗುತ್ತದೆಯಲ್ಲವೆ? ಅಂತಹ ಆಹಾರವನ್ನು ಸೇವಿಸುವಾಗ ಅದರ ಮೇಲೆ ಗಮನವಿರಬೇಕಲ್ಲವೆ? ಆಹಾರವು ಕೇವಲ ಪೋಷಣೆಯಲ್ಲ - ಅದು ಜೀವ ಕೊಡುವಂತಹದ್ದು. ನಾವು ಅದನ್ನು ಪ್ರೀತಿ ಮತ್ತು ಪೂಜ್ಯಭಾವದಿಂದ ನೋಡಬೇಕು ಎನ್ನುವ ಸದ್ಗುರುಗಳ ಮಾತು ಸದಾ ನೆನಪಲ್ಲಿರುವಂತೆ ಮಾಡಿತ್ತು ಈ ಪ್ರಾಣದಾನಮ್ ಕಾರ್ಯಕ್ರಮ.

anu2nitin@gmail.com (ಮುಂದುವರೆಯುವುದು)

ಈ ವಾರ ಕನ್ನಡ ಸಾಹಿತ್ಯ ಸಮ್ಮೇಳನದ ಸಂಭ್ರಮವು ಗರಿಗೆದರುತ್ತಿದೆ. ಇದೇ ಸಂದರ್ಭಕ್ಕೆಂಬಂತೆ, ಕನ್ನಡ ಸಾಹಿತ್ಯ: ಪರಂಪರೆ ವರ್ತಮಾನ ಪುಸ್ತಕವು 19.12.2024ರಂದು ಮೈಸೂರಿನಲ್ಲಿ ಬಿಡುಗಡೆಯಾಗಲಿದ್ದು, ಅದರ ಆಯ್ದ ಭಾಗ ಇಲ್ಲಿದೆ.

ಕನ್ನಡ ಪರಂಪರೆ ಕಟ್ಟಿ ಕೊಟ್ಟ ಪ್ರಾತಃಸ್ಮರಣೀಯರು



» ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ

ನಮ್ಮ ಪ್ರಾಚೀನ ಸಾಹಿತ್ಯಕೃತಿಗಳನ್ನು ಅಧ್ಯಯನ ಮಾಡುವಾಗ ಅವುಗಳನ್ನು ಸಂಪಾದಿಸಿ, ಪರಿಷ್ಕರಿಸಿ, ಪ್ರಕಟಿಸಿದ ಪೂರ್ವ ಸೂರಿಗಳನ್ನು ನೆನೆದು ಮನಸ್ಸು ಕೃತಜ್ಞತೆಯಿಂದ ತುಂಬುತ್ತದೆ.

ಕನ್ನಡ ಪರಂಪರೆಯನ್ನು ರೂಪಿಸುವಲ್ಲಿ, ಕನ್ನಡ ಸಂಸ್ಕೃತಿ ಕಟ್ಟುವಲ್ಲಿ ಅತ್ಯಂತ ಮಹತ್ವದ ಹಂತವೆಂದರೆ ಪ್ರಾಚೀನ ಗ್ರಂಥಗಳ ಸಂಪಾದನೆ. ಇದು ಎಂತಹ ವಿದ್ವತ್ತು, ತಾಳ್ಮೆಯನ್ನು ಬೇಡುವಂಥದು, ಎಷ್ಟು ಕಷ್ಟದ ಕೆಲಸ ಎಂಬುದನ್ನು ಆ ಕ್ಷೇತ್ರದಲ್ಲಿ ಕೆಲಸ ಮಾಡಿದವರಷ್ಟೇ ಬಲ್ಲರು. ಈಗ ಆಧುನಿಕ ತಂತ್ರಜ್ಞಾನ ಅನೇಕ ಸವಲತ್ತುಗಳನ್ನು ನಮಗೆ ಒದಗಿಸಿಕೊಟ್ಟಿದೆ.ಆದರೆ ಆಗ ಹೆಚ್ಚು ಅನುಕೂಲಗಳಿರಲಿಲ್ಲ. ಹಳೆಯ ತಾಳೆಯೋಲೆಗಳು ಮುಟ್ಟಿದರೆ ಮುರಿದುಹೋಗುವ ಹಾಗಿರುತ್ತಿದ್ದವು.ಅವು ಗಳನ್ನು ಕಡತವನ್ನು ನಾಜೂಕಿನಿಂದ ಬಿಡಿಸಿ ಪ್ರತ್ಯೇಕ ಪಡಿಸಿಕೊಳ್ಳಬೇಕಿತ್ತು. ಆಮೇಲೆ ಅವುಗಳಿಗೆ ಸೊಪ್ಪಿನ ರಸ ಸವರಿದರೆ ಅಕ್ಷರಗಳು ಕಪ್ಪಾಗಿ ಎದ್ದು ಕಾಣುತ್ತಿದ್ದವು. ಆ ಹಳೆಯ ಕಾಲದ ಮೋಡಿ ಅಕ್ಷರ ಗಳನ್ನು ಅರ್ಥಮಾಡಿಕೊಳ್ಳಬೇಕು. ಅಭ್ಯಾಸವಿಲ್ಲದಿ ದ್ದರೆ ಅರ್ಥವಾಗುವುದು ಅಸಾಧ್ಯವೇ ಸರಿ. ಜೊತೆಗೆ ತಾಳೆಯೋಲೆಯ ಪ್ರತಿಗಳಲ್ಲಿ ಕಾವ್ಯದ ಪದ್ಯಗಳನ್ನು ಪಾದಗಳಾಗಿ ವಿಂಗಡಿಸಿ ಬರೆದಿರು ವುದಿಲ್ಲ. ಇಡೀ ಗ್ರಂಥ ಒಂದೇ ವಾಕ್ಯ ಎನ್ನುವಂತೆ ಮೊದಲಿನಿಂದ ಕಡೆಯವರೆಗೂ ಒಂದೇ ಸರಪಳಿಯ ರೀತಿಯಲ್ಲಿ ಬರೆದಿರುತ್ತಾರೆ. ಅದನ್ನೆಲ್ಲಾ ಅಧ್ಯಯನ ಮಾಡಿ ಶುದ್ಧ ಪ್ರತಿ ಸಿದ್ಧಪಡಿಸಿಕೊಳ್ಳಬೇಕು.

ತಾಳೆಯೋಲೆ ಸಂಗ್ರಹ

ಹೀಗೆ ಹಸ್ತಪ್ರತಿ ಸಿದ್ಧಪಡಿಸುವ ಮೊದಲು ತಾಳೆ ಯೋಲೆಯನ್ನು ಪಡೆಯುವುದೇ ಒಂದು ಸಾಹಸದ ಕೆಲಸವಾಗಿದ್ದಿತು.ಹಸ್ತಪ್ರತಿ ಸಂಗ್ರಹಿಸುವ ಮದ್ರಾಸಿನ ಓರಿಯಂಟಲ್ ಮ್ಯಾನುಸ್ಕ್ರಿಪ್ಟ್ ಲೈಬ್ರರಿ, ಮೈಸೂರಿನ ಓರಿಯಂಟಲ್ ಲೈಬ್ರರಿ, ಅರಮನೆಯ ಸರಸ್ವತೀ ಭಂಡಾರ, ಪುರಾತತ್ತ್ವ ಇಲಾಖೆ – ಮೊದಲಾದ ಸಂಸ್ಥೆಗಳಿ ದ್ದವು ನಿಜ. ಆದರೆ ಅನೇಕ ವೇಳೆ ವ್ಯಕ್ತಿಗಳ ಬಳಿಯೇ ಅವರ ಮನೆಯ ಅಟ್ಟದ ಮೇಲೆಯೋ, ಪೂಜಾಗೃಹ ದಲ್ಲಿಯೋ ಉಳಿದುಬಿಡುತ್ತಿದ್ದವು. ಅಂಥವರಿಂದ ಕಾಡಿ ಬೇಡಿ ದಾನವಾಗಿಯೋ, ಎರವಲಾಗಿಯೋ ಅಥವಾ ಹಣ ನೀಡಿಯೋ ತಾಳೆಯೋಲೆಗಳನ್ನು ಪಡೆಯ ಬೇಕಾ ಗುತ್ತಿತ್ತು. ಕೆಲವು ಮಹನೀಯರು ಈ ಯಾವ ರೀತಿಯಲ್ಲಿಯೂ ನೀಡದಿದ್ದಾಗ ಅವರಲ್ಲಿಗೇ ಹೋಗಿ ನಕಲು ಮಾಡಿಕೊಳ್ಳಬೇಕಿತ್ತು.

ಹಸ್ತಪ್ರತಿಗಳನ್ನು ಸಂಪಾದನೆಗೆ ಬಳಸುವ ಮೊದಲು ಅವು ಎಷ್ಟರಮಟ್ಟಿಗೆ ಶುದ್ಧ, ಒಂದು ಇನ್ನೊಂದರ ನಕಲೇ, ಅಥವಾ ಬೇರೆ ಬೇರೆಯೇ, ಬೇರೆಯಾಗಿದ್ದರೆ ಎರಡಕ್ಕೂ ಬೇರೊಂದು ಮಾತೃಕೆಯಿದೆಯೇ, ಪ್ರಕ್ಷೇಪಗಳಿವೆಯೇ ಮೊದಲಾದ ಸಂಗತಿಗಳನ್ನು ಪರಿಶೀಲಿಸಬೇಕಿತ್ತು. ನಂತರ ಆಧಾರ ಪ್ರತಿಯೊಂದನ್ನು ಇಟ್ಟುಕೊಂಡು ಉಳಿದ ಪ್ರತಿಗಳ ಜೊತೆ ಹೋಲಿಸಿ ನೋಡಿ

ಕನ್ನಡ ಸಾಹಿತ್ಯ : ಪರಂಪರೆ ವರ್ತಮಾನ
ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ
ಪ್ರ: ಅಭಿನವ ಬೆಂಗಳೂರು
9448804905
ಬೆಲೆ ರು.200 / -

ಪಾಠಭೇದಗಳನ್ನು ಅಡಿಟಿಪ್ಪಣಿಗಳಲ್ಲಿ ಸೂಚಿಸಿ, ಲಿಪಿಕಾರ ಸ್ಖಾಲಿತ್ಯಗಳನ್ನು ಸರಿಪಡಿಸಿ, ಕ್ಲಿಷ್ಟಪದಗಳಿಗೆ ಅರ್ಥನೀಡಿ, ವಿಶೇಷ ಅಂಶ ಗಳಿದ್ದರೆ ಅವುಗಳಿಗೆ ಕಿರುಟಿಪ್ಪಣಿ ಬರೆದು ಮುದ್ರಿತ ಪ್ರತಿ ತಯಾರಿಸಬೇಕಿತ್ತು.

ಮುದ್ರಣದ ಸಾಹಸ

ನಂತರ ಅದರ ಮುದ್ರಣ ಮತ್ತೊಂದು ಸಾಹಸದ ಅಧ್ಯಾಯ. ಕೆಲವೊಮ್ಮೆ ತಾವೇ ಹಣ ಹಾಕಿ ಮುದ್ರಿಸಿರು ವುದೂ ಉಂಟು. ಎಸ್. ಜಿ. ಗೋವಿಂದರಾಜ ಅಯ್ಯಂಗಾರರ 'ಶ್ರೀ ರಾಮಾನುಜ ಸೂರಿ ಚರಿತ' ಎಂಬ ಕೃತಿಯಲ್ಲಿ ಗ್ರಂಥ ಸಂಪಾದನೆಯ ಸ್ವರೂಪ ಕುರಿತಂತೆ ಒಂದು ಪದ್ಯವಿದೆ:

ಪುಳುಗಳ ಬೋನಮಾಗಿ ಇಲಿಗಳ್ ಕಡಿದುಂ ಪುಡಿ
ಯಾಗಿ ಮುಗ್ಗಿ ಕೆಟ್ಟಳಿದುಳಿದಿರ್ದ ಕನ್ನಡದ
ಕಬ್ಬಿಗರಗ್ಗದ ಕಾವ್ಯಮಾಲೆಯಂ



ಗಳಿಸಿಯವಂ ಪರಿಷ್ಕರಿಸಿ ಮುದ್ರಿಸಿ ಕನ್ನಡದ
ಬಾಸೆವೆಣ್ಣನು
ಜ್ವಳಿಸಿದ ಕೀರ್ತಿಗಿಂತವರ
ಮಾಳ್ಕೆಯೊಳಾವನೊ ನೋಂತನುರ್ವಿಯೊಳ್ ।

ಇದೊಂದು ರೀತಿ ಗ್ರಂಥಸಂಪಾದನೆ ಕುರಿತಂತಹ ಪ್ರಾತಿನಿಧಿಕ ಪದ್ಯ. ಹುಳುಗಳಿಗೆ ಆಹಾರವಾಗಿ, ಇಲಿಗಳು ಕಡಿದುಹಾಕಿ, ಹುಡಿಯಾಗಿ, ಮುಗ್ಗಲು ಹಿಡಿದು ಕೆಟ್ಟು ಹಾಳಾಗಿದ್ದರೂ ಸಹ, ಅವುಗಳನ್ನೇ ಸರಿಪಡಿಸಿ ಕನ್ನಡ ಕವಿಗಳ ಶ್ರೇಷ್ಠವಾದ ಕಾವ್ಯಮಾಲೆಯನ್ನು ಸಂಗ್ರಹಿಸಿ ತಂದು, ಪರಿಷ್ಕರಿಸಿ, ಮುದ್ರಿಸಿ ಕನ್ನಡ ಭಾಷಾ ವನಿತೆಯ ಮಹತ್ತನ್ನು ಉಜ್ವಲಗೊಳಿಸಿದ ಕೀರ್ತಿಗೆ ನಿನ್ನಂತೆ ಬೇರೆ ಯಾರು ತಾನೇ ಭಾಜನರಾದಾರು? ನಾವೂ ಇದಕ್ಕೆ ದನಿಗೂಡಿಸಬಹುದು.

ಹೀಗೆ ತಮ್ಮ ಜೀವಿತವನ್ನೇ ಮುಡುಪಾಗಿರಿಸಿ, ನಮಗೆ ಕನ್ನಡ ಪರಂಪರೆಯ ಮಹತ್ ಕೃತಿಗಳನ್ನು ಸಂಪಾದಿಸಿ, ಪರಿಷ್ಕರಿಸಿ, ಕವಿ ಕೃತಿಯ ಬಗ್ಗೆ ಅಧ್ಯಯನಪೂರ್ಣ ಮಾಹಿತಿ ಒದಗಿಸಿ ಮಹದುಪಕಾರ ಮಾಡಿರುವ ವಿದ್ವತ್ ಸಾಹಸಿಗಳ ಪರಂಪರೆಯೇ ಇದೆ. ಕನ್ನಡ ಭಾಷೆ ಸಾಹಿತ್ಯಕ್ಕೆ ತಕ್ಕ ಪ್ರೋತ್ಸಾಹ ಇಲ್ಲದಿದ್ದ ಕಾಲದಲ್ಲಿ ಹೀಗೆ ಗ್ರಂಥಗಳನ್ನು ಸಂಪಾದಿಸಿ, ಪ್ರಕಟಿಸಿ, ಕನ್ನಡ ಪರಂಪರೆಗೆ ಪ್ರವೇಶ ಒದಗಿಸಿದ ಮಹನೀಯರನ್ನು ನಾವಿಂದು ಸ್ಮರಿಸಬೇಕಿದೆ.

ಬಿಎಂಶ್ರೀಯವರ 'ಇಂಗ್ಲಿಷ್ ಗೀತಗಳು' 1921ರಲ್ಲಿ ಪ್ರಕಟವಾಯಿತು. ನಂತರ 1924ರಲ್ಲಿ ಅದರ ಪರಿಷ್ಕೃತ ರೂಪ ಪ್ರಕಟಗೊಂಡಿತು. ಆಧುನಿಕ ಕನ್ನಡ ಸಾಹಿತ್ಯದ ಇತಿಹಾಸವನ್ನು ಇಲ್ಲಿಂದಲೇ ಗುರ್ತಿಸುವುದು ರೂಢಿಯಲ್ಲಿದೆ. ಆದರೆ ಹೊಸಗನ್ನಡ ಸಾಹಿತ್ಯದ ಚರಿತ್ರೆ ಇದಕ್ಕೆ ಮುಂಚಿನಿಂದಲೇ ಆರಂಭವಾಗುತ್ತದೆ. ಎಲ್.ಎಸ್. ಶೇಷಗಿರಿರಾಯರು 1870ರಿಂದ 1920ರ ಅವಧಿಯನ್ನು ಹೊಸಗನ್ನಡ ಸಾಹಿತ್ಯದ ಮೊದಲ ಹಂತ ಎಂದು ಗುರ್ತಿಸುತ್ತಾರೆ. ಈ ಹಂತದಲ್ಲಿ ಕನ್ನಡ ಸಾಹಿತ್ಯ ಪಡೆದು ಕೊಂಡ ಸ್ವರೂಪದ ಬಗ್ಗೆ ಹೆಚ್ಚು ಚರ್ಚೆ ಆಗಿಲ್ಲ. ವಸಾಹತೋತ್ತರ ಚಿಂತನೆಯ ಹಿನ್ನೆಲೆಯಲ್ಲಿ ಈ ಹಂತದ ಬಗೆಗಿನ ಮರುಪರಿಶೀಲನೆ ಅತ್ಯಗತ್ಯ.

ವಸಾಹತುಶಾಹಿಯ ಗಾಢ ಪ್ರಭಾವ

ಈ ಹಂತದಲ್ಲಿ ಕನ್ನಡದ ಕೆಲಸ ಮೂರು ನೆಲೆಗಳಲ್ಲಿ ನಡೆಯಿತು. ಮೊದಲನೆಯದು ಸಂಸ್ಕೃತ ಹಾಗೂ ಇತರ ದೇಸೀ ಭಾಷೆಗಳಿಂದ ಕನ್ನಡಕ್ಕೆ ಅನುವಾದ ಮಾಡಿದ್ದು; ಎರಡನೆಯದು ವಸಾಹತುಶಾಹಿಯ ಪರಿಣಾಮವಾಗಿ ಭಾರತೀಯ ಪರಿಸರದಲ್ಲಿ ನೆಲೆಯೂರಲು ಪ್ರಯತ್ನಿಸು ತ್ತಿದ್ದ ಸಾಮ್ರಾಜ್ಯಶಾಹಿ ಸಂಸ್ಕೃತಿ ಕನ್ನಡ ಜಗತ್ತನ್ನು ಪ್ರವೇಶ ಮಾಡಿದ್ದು. ಇವುಗಳಲ್ಲಿ ಎರಡನೆಯ ಧಾರೆಯೇ ಮುಂದೆ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ಸ್ವರೂಪ ವನ್ನು ರೂಪಿಸಿದ್ದು. ಇವೆರಡು ಧಾರೆಗಳ ಜೊತೆಗೆ ಆ ಕಾಲಕ್ಕೆ ಮತ್ತೊಂದು ಧಾರೆಯೂ ಕ್ರಿಯಾಶೀಲವಾಗಿತ್ತು. ಅದು ಕನ್ನಡದ ಪ್ರಾಚೀನ ಕೃತಿಗಳನ್ನು ಸಂಪಾದಿಸಿ, ಪ್ರಕಟಿಸಿ ಕನ್ನಡ ಪರಂಪರೆಯನ್ನು ಕಟ್ಟುವ ಪ್ರಯತ್ನ. ವಸಾಹತುಶಾಹಿಯ ಗಾಢ ಪ್ರಭಾವದಿಂದಾಗಿ ಮುಂದೆ ಈ ಪರಂಪರೆ ಪ್ರಭಾವಿಯಾಗಿ ಬೆಳೆಯಲಿಲ್ಲ; ಸ್ಥಗಿತ ಗೊಂಡಿತು.

ವಾಸ್ತವವಾಗಿ ಆಧುನಿಕ ಕನ್ನಡ ಸಾಹಿತ್ಯಕ್ಕೆ ಪ್ರೇರಕ ಶಕ್ತಿಯಾಗಬೇಕಿದ್ದ ಈ ಪರಂಪರೆಯ ಜೊತೆ ಸಂಬಂಧ ಕಡಿದುಬಿದ್ದದ್ದು ವಸಾಹತುಶಾಹಿ ಸಂಸ್ಕೃತಿಯ ಫಲ. ಈ ಬಗ್ಗೆ 1927ರ ವೇಳೆಗೇ ಸೇಡಿಯಾಪು ಕೃಷ್ಣಭಟ್ಟರು ಹೀಗೆ ಹೇಳಿದ್ದಾರೆ: 'ಕನ್ನಡ ಸಾಹಿತ್ಯದ ನವೋದಯಕ್ಕೆ ಅದರ ಸರ್ವಾವಯವಗಳ ಸಮ್ಮುನ್ನತಿಗೆ ಆಂಗ್ಲಸಾಹಿತ್ಯವೇ ಪ್ರತ್ಯಕ್ಷವಾಗಿ, ನೇರಾಗಿ ಪ್ರೇರಕವಾಯಿತೆಂದು ಈಗ ಸಾಧಾರಣವಾಗಿ ತಿಳಿಯಲಾಗುತ್ತದೆ. ಆದರೆ ಇದು ಪೂರ್ಣಸತ್ಯವಲ್ಲ. ನವಕವಿತೋದ್ಗಮದ ಮೂಲಗಳು ಕೇವಲ ಆಂಗ್ಲಸಾಹಿತ್ಯದಲ್ಲಿಲ್ಲ. ಅವು ನಮ್ಮ ದೇಶೀಯ ಪರಿಸರದಲ್ಲೂ ಇವೆ.' ಸೇಡಿಯಾಪುರವರ ಈ ಚಿಂತನೆ ಅತ್ಯಂತ ಮಹತ್ವದ್ದು.

ಆ ಕಾಲದ ಕನ್ನಡ ಸಂಸ್ಕೃತಿಯ ಸ್ಥಿತಿಯನ್ನು ಎಂ. ಎ. ರಾಮಾನುಜ ಅಯ್ಯಂಗಾರ್ ಹೀಗೆ ಗುರ್ತಿಸುತ್ತಾರೆ: 'ಆ ಕಾಲದಲ್ಲಿ ಕನ್ನಡ ಭಾಷೆಯ ಉನ್ನತಿ ವೈಶಿಷ್ಟ್ಯಗಳನ್ನೂ, ವಾಙ್ಮಯದ ಸಮೃದ್ಧಿಯನ್ನೂ ತಿಳಿಸಲು ಯಾವ ಸೂಚನೆಯೂ ಇರಲಿಲ್ಲ, ತೇಜಸ್ವಿಗಳಾದ ನಕ್ಷತ್ರಗಳು ಪ್ರಕಾಶಿಸದೆ ಇರುವ ಅಂಧಕಾರದಲ್ಲಿ ಎಲ್ಲವೂ ಅಂಧಕಾರವೇ ಎಂದು ತಿಳಿಯುವುದು ಸಹಜ. ಕನ್ನಡ ಭಾಷೆಯ ಮೆಯ್ಸಿರಿಯೂ, ಆಭರಣ ಕಾಂತಿಯೂ ಜನಗಳ ವಿಸ್ಮೃತಿಯೆಂಬ ಆವರಣದಲ್ಲಿ ಮುಚ್ಚಲ್ಪಟ್ಟಿರಲು ಹೇಗೆ ತಾನೇ ಅವಳು ಪ್ರಾಜ್ಞರ ಕಣ್ಣನ್ನು ತೆರೆಯಿಸಿ, ತನ್ನ ಕಡೆ ಅವರನ್ನು ತಿರುಗಿಸಿ, ತನ್ನನ್ನು ಆಶ್ರಯಿಸುವಂತೆ ಮಾಡಿಯಾಳು?' (ಪ್ರಭುತ್ವ ಕರ್ನಾಟಕ 7–2, 1925)

ವಸಾಹತೋತ್ತರ ಚಿಂತನೆಯ ಸಂದರ್ಭದಲ್ಲಿ ಪ್ರಮುಖವಾಗಿ ಚರ್ಚಿತವಾಗುತ್ತಿರುವ ವಿಸ್ಮೃತಿಯ ಪರಿಕಲ್ಪನೆಯನ್ನು ರಾಮಾನುಜ ಅಯ್ಯಂಗಾರ್ 1925ರ ವೇಳೆಗೆ ಪ್ರಸ್ತಾಪಿಸಿದ್ದರು.

ವಿಸ್ಮೃತಿಗೆ ಪ್ರತಿಯಾಗಿ ಕನ್ನಡ ಸಾಹಿತ್ಯ ಪರಂಪರೆಯನ್ನು ಉಜ್ಜೀವಿಸುವ, ವರ್ತಮಾನದಲ್ಲಿ ಎಲ್ಲರೆದುರು ಅದನ್ನು ಪ್ರಕಾಶಿಸುವ ಧ್ಯೇಯದಿಂದ ಅನೇಕ ಮಹನೀಯರು ಶ್ರಮಿಸಿದರು.

ಎಸ್. ಜಿ. ನರಸಿಂಹಾಚಾರ್ ಹಾಗೂ ಎಂ.ಎ. ರಾಮಾನುಜ ಅಯ್ಯಂಗಾರ್ ಅವರು ಸಹಭಾಗಿತ್ವದಲ್ಲಿ ಕರ್ನಾಟಕ ಕಾವ್ಯಮಂಜರಿ ಹಾಗೂ ಕರ್ನಾಟಕ ಕಾವ್ಯ ಕಲಾನಿಧಿ ವಿದ್ವತ್ ಪತ್ರಿಕೆಗಳ ಮೂಲಕ ಸುಮಾರು ನಲವತ್ತಕ್ಕಿಂತ ಹೆಚ್ಚು ಪ್ರಾಚೀನ ಕೃತಿಗಳನ್ನು ಸಂಪಾದಿಸಿ, ಪರಿಷ್ಕರಿಸಿ ಪ್ರಕಟಿಸಿದರು. ಆಂಡಯ್ಯನ 'ಕಬ್ಬಿಗರ ಕಾವಂ', ನೇಮಿಚಂದ್ರನ 'ಲೀಲಾವತಿ ಪ್ರಬಂಧಂ', ದುರ್ಗಸಿಂಹನ 'ಪಂಚತಂತ್ರ', ರನ್ನನ 'ಗದಾಯುದ್ಧ', ನಾಗಚಂದ್ರನ 'ಮಲ್ಲಿನಾಥಪುರಾಣ', ಹರಿಹರನ 'ಗಿರಿಜಾಕಲ್ಯಾಣ, ಕನಕದಾಸನ 'ನಳಚರಿತ್ರೆ, ಅಗ್ಗಳನ 'ಚಂದ್ರಪ್ರಭ ಪುರಾಣ, ಕವಿಕಾಮನ 'ಶೃಂಗಾರ ರತ್ನಾಕರ' – ಹೀಗೆ ಅನೇಕ ಪ್ರಮುಖ ಕೃತಿಗಳನ್ನು ಕನ್ನಡ ಜಗತ್ತಿಗೆ ಪರಿಚಯಿಸಿದರು.

ಕನ್ನಡದಲ್ಲಿ ಗ್ರಂಥ ಸಂಪಾದನೆಯ ಕಾರ್ಯವನ್ನು ಆರಂಭಿಸಿದವರಲ್ಲಿ ಬೆಂಜಮಿನ್ ಲೂಯಿ ರೈಸ್ ಅವರೂ ಪ್ರಮುಖರು. ಆರ್.ನರಸಿಂಹಾಚಾರ್ ಅವರಂತೂ 'ಕರ್ನಾಟಕ ಕವಿ ಚರಿತೆ'ಯನ್ನು ಮೂರು ಸಂಪುಟಗಳಲ್ಲಿ ಪ್ರಕಟಿಸಿ ಕನ್ನಡ ಪರಂಪರೆಯನ್ನು ಅಧಿಕೃತವಾಗಿ ಸ್ಥಾಪಿಸಿದರು. ಫ.ಗು.ಹಳಕಟ್ಟಿಯವರು ವಚನ ಸಾಹಿತ್ಯ ಹಾಗೂ ಹರಿಹರನ ರಗಳೆಗಳನ್ನು ಅಪಾರ ಶ್ರಮವಹಿಸಿ ಸಂಪಾದಿಸಿ ಪ್ರಕಟಿಸಿದರು. ಉತ್ತಂಗಿ ಚನ್ನಪ್ಪನವರು ಸರ್ವಜ್ಞನ ಸುಮಾರು ಎರಡು ಸಾವಿರ ವಚನಗಳನ್ನು, ಇಪ್ಪತ್ತಕ್ಕೂ ಹೆಚ್ಚು ಹಸ್ತಪ್ರತಿಗಳನ್ನು ಪರಿಶೀಲಿಸಿ, ಸ್ಖಾಲಿತ್ಯಗಳನ್ನು ಸರಿಪಡಿಸಿ, ಸಂಪಾದಿಸಿ ಪ್ರಕಟಿಸಿದರು.

ಟಿ. ಎಸ್. ವೆಂಕಣ್ಣಯ್ಯ, ಎ. ಆರ್. ಕೃಷ್ಣಶಾಸ್ತ್ರಿ, ಕೆ. ಜಿ. ಕುಂದಣಗಾರ, ಕ. ವೆಂ.ರಾಘವಾಚಾರ್, ಶಿ. ಶಿ. ಬಸವನಾಳ, ಎಲ್. ಗುಂಡಪ್ಪ, ಸಂ. ಶ್ರೀ. ಭೂಸನೂರ ಮಠ, ಡಿ. ಎಲ್. ನರಸಿಂಹಾಚಾರ್, ತೀ.ನಂ.ಶ್ರೀಕಂಠಯ್ಯ, ಆರ್.ಸಿ. ಹಿರೇಮಠ, ಎಲ್. ಬಸವರಾಜು, ತ.ಸು.ಶಾಮರಾಯ, ಎಂ. ವಿ. ಸೀತಾರಾಮಯ್ಯ – ಹೀಗೆ ಅನೇಕರು ಈ ಕ್ಷೇತ್ರದಲ್ಲಿ ಶ್ರಮಿಸಿದ್ದಾರೆ. ಕನ್ನಡ ನಿಧಿಯನ್ನು ಹುಡುಕಿ ತೆಗೆದು ಸಂಸ್ಕರಿಸಿ ನೀಡಿದ್ದಾರೆ. ನಿಜವಾದ ಕನ್ನಡ ವಿಮರ್ಶಾ ವಿವೇಕವನ್ನು ನಾವು ಇಲ್ಲಿಂದಲೇ ಗುರ್ತಿಸಬೇಕಾಗಿದೆ. ಹೊಸ ತಿಳಿವಿನ ಬೆಳಕಿನಲ್ಲಿ ಕನ್ನಡ ಸಂಸ್ಕೃತಿ ಚರಿತ್ರೆಯನ್ನು ರೂಪಿಸಬೇಕಿದೆ.

ನಡುವಯಸ್ಸಿನ ಬಿಕ್ಕಟ್ಟುಗಳು

ಕೂದಲು ಬೆಳ್ಳಗಾಗುವ ವಯಸ್ಸಿನಲ್ಲಿ, ಪರಸ್ಪರ ದೂರವಾಗುವ ದಂಪತಿಗಳ ಸಂಖ್ಯೆ ಹೆಚ್ಚಳಗೊಳ್ಳುತ್ತಿದೆ!

» ಡಾ. ಕೆ.ಎಸ್.ಚೈತ್ರಾ

ಮದುವೆ ಎನ್ನುವಂಥದ್ದು ಬದುಕಿನ ಪ್ರಮುಖ ಸಂಸ್ಕಾರ. ಆದರೆ ಸಂಗಾತಿಯ ಆಯ್ಕೆ, ಮದುವೆ ನಡೆಯುವ ರೀತಿ ಇವೆಲ್ಲದರ ಬಗ್ಗೆ ಸಿದ್ಧ ಮಾದರಿಗಳು ಪಲ್ಲಟವಾಗಿ ಸಾಕಷ್ಟು ಕಾಲವೇ ಕಳೆದಿದೆ. ತಮ್ಮಿಷ್ಟದಂತೇ ಮದುವೆಯಾದರೂ ಯುವಜನರಲ್ಲಿ ವಿಚ್ಛೇದನಗಳ ಸಂಖ್ಯೆ ಹೆಚ್ಚುವುದಕ್ಕೆ ಕಾರಣವೇನು ಎಂದು ಯೋಚಿಸಲಾಗುತ್ತಿತ್ತು. ಈಗ ವಿಚ್ಛೇದನದ ಸ್ವರೂಪವೂ ಬದಲಾಗಿದೆ. ಸಾಮಾನ್ಯವಾಗಿ, ಮದುವೆಯಾಗಿ ಮೊದಲ ಮೂರರಿಂದ ನಾಲ್ಕು ವರ್ಷಗಳಲ್ಲಿ ವಿಚ್ಛೇದನ ಸಾಮಾನ್ಯವಾಗಿತ್ತು. ಆದರೆ, ಈಚಿನ ದಿನಗಳಲ್ಲಿ ಐವತ್ತು ವರ್ಷಮೀರಿದ ಎರಡು ಮೂರು ದಶಕ ಒಟ್ಟಿಗೆ ವಾಸಿಸಿ ಮಕ್ಕಳನ್ನು ಪಾಲಿಸಿ ಪೋಷಿಸಿ ಮಧ್ಯ ವಯಸ್ಸಿನ ದಂಪತಿಗಳಲ್ಲೂ, ವಿಚ್ಛೇದನದ ಸಂಖ್ಯೆ ಹೆಚ್ಚುತ್ತಿದೆ. ಭಾರತದಲ್ಲಿ ಈ ರೀತಿ ವಿಚ್ಛೇದನಗಳ ಸಂಖ್ಯೆ ಕಳೆದ ಐದು ವರ್ಷದಲ್ಲಿ ಶೇಕಡ ನಲವತ್ತರಷ್ಟು ಹೆಚ್ಚಿದೆ!

ಇದು ಗ್ರೇ ಡೈವೋರ್ಸ್! ಗ್ರೇ ಎಂದರೆ ಬೂದು ಬಣ್ಣ. ಮಧ್ಯವಯಸ್ಸು ಸಮೀಪಿಸುತ್ತಿದ್ದಂತೆ ಕೂದಲಿನ ಬಣ್ಣ ಬದಲಾಗಿ ನರೆಗೂದಲು ಸಹಜ. ಹಾಗಾಗಿ ಈ ಹೆಸರು. ಬೆಳ್ಳಿಗೂದಲ ದಂಪತಿ ವಿಚ್ಛೇದನ ಪಡೆಯುವುದರಿಂದ ಇವರಿಗೆ 'ಸಿಲ್ವರ್ ಸ್ಪ್ಲಿಟ್ಟರ್ಸ್' ಎಂದು ಕರೆಯಲಾಗುತ್ತದೆ

ಇಷ್ಟು ವರ್ಷ ಒಟ್ಟಿಗೆ ಬಾಳಿ ಬದುಕಿದ ನಂತರ ಬೇರೆಯಾಗುವುದು ಎಂಬ ಪ್ರಶ್ನೆ ಮೂಡುವುದು ಸಹಜ. ಏನೇ ಸಮಸ್ಯೆಗಳಿದ್ದರೂ ಮೌನವಾಗಿ ಅದನ್ನು ಸಹಿಸುತ್ತಾ, ಮುಖವಾಡ ಹಾಕಿ ಬದುಕಿದವರು ಹಲವರು. ಈಗ ಪರಿಸ್ಥಿತಿ ಬದಲಾಗಿದೆ. ಐವತ್ತೆಂದರೆ ಬದುಕನ್ನು ಹೊಸದಾಗಿ ಆರಂಭಿಸುವ ಸಮಯ. ಹಲವು ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯ ಸಿಕ್ಕಿದೆ. ಇನ್ನಾದರೂ ತಮ್ಮಿಷ್ಟದಂತೆ ಬದುಕೋಣ ಎನ್ನುವ ಮನೋಭಾವ ಜನರಲ್ಲಿದೆ.

ವಯಸ್ಸು ಹೆಚ್ಚಿದಂತೆ ನಿತ್ಯದ ಬದುಕು ಯಾಂತ್ರಿಕ ಅನಿಸಿ ಪರಸ್ಪರರಲ್ಲಿ ಆಕರ್ಷಣೆ ಕಡಿಮೆಯಾಗುವುದು ಸಾಮಾನ್ಯ. ಹೊರಗಿನ ಸ್ನೇಹದ ಸಾಧ್ಯತೆ ಇದೆ. ಇಷ್ಟು ವರ್ಷ ಒಟ್ಟಿಗೆ ಇದ್ದ ವ್ಯಕ್ತಿ ಹೀಗೆ ಮಾಡಿದಾಗ ಆಘಾತವಾಗುವುದು ಸಹಜ. ಇಂಥ ಮದುವೆಯಲ್ಲಿ ಇದ್ದೇನು ಪ್ರಯೋಜನ ಎನ್ನುವುದು ವಿಚ್ಛೇದನಕ್ಕೆ ಕಾರಣ.

ಆರೋಗ್ಯ ಸಮಸ್ಯೆಗಳು ವಯಸ್ಸಾದ ಮೇಲೆ ಇದ್ದದ್ದೇ. ಮದುವೆಯಲ್ಲಿ ಕೇವಲ ದೈಹಿಕ ಸುಖ ಮಾತ್ರವಲ್ಲ ಮಾನಸಿಕ–ಭಾವನಾತ್ಮಕ ಸಾಂಗತ್ಯವೂ ಮುಖ್ಯ. ದೈಹಿಕ ಆಕರ್ಷಣೆ ಕಡಿಮೆಯಾದಂತೆ ಇವು ಪ್ರಮುಖ ಪಾತ್ರ ವಹಿಸುತ್ತವೆ. ಈ ಸಾಂಗತ್ಯ ಸಿಗದೇ ಇದ್ದಾಗ ತಮ್ಮ ನೆಮ್ಮದಿಯನ್ನು ಅರಸಿ ಪರಸ್ಪರರಿಂದ ದೂರಾಗುವ ನಿರ್ಧಾರಕ್ಕೆ ಬರುವುದುಂಟು.

ಹಾಗೆ ನೋಡಿದರೆ ಪರಸ್ಪರರಿಂದ ಬೇರ್ಪಡುವುದು ಒಂದು ಕ್ಷಣದಲ್ಲಿ ತೆಗೆದುಕೊಳ್ಳುವ ದುಡುಕಿನ ನಿರ್ಣಯವಲ್ಲ. ಪೋಷಕರಾಗಿ ತಮ್ಮ ಕರ್ತವ್ಯ ಮುಗಿಸಿ ತಮಗೆ ಬೇಕಾದಂತೆ ಅರ್ಥಪೂರ್ಣವಾದ ಬದುಕನ್ನು ಬಾಳಲು ಯತ್ನಿಸುತ್ತಾರೆ. ಅದರಲ್ಲೇ ಇದ್ದು ಸರಿಪಡಿಸಲು ಸಾಕಷ್ಟು ಪ್ರಯತ್ನವನ್ನು ಕೈಗೊಳ್ಳುತ್ತಾರೆ. ಅದೆಲ್ಲವೂ ವಿಫಲವಾದಾಗ ಕಡೆಯ ನಿರ್ಧಾರ ವಿಚ್ಛೇದನ!

ಮಕ್ಕಳ ಬೆಂಬಲ

ವಿಶೇಷವೆಂದರೆ, ಅಂಕಿಅಂಶಗಳ ಪ್ರಕಾರ, ಇಂತಹ ಶೇಕಡಾ 75ರಷ್ಟು ವಿಚ್ಛೇದನಗಳನ್ನು ಪಡೆಯಲು ಮಹಿಳೆಯರೇ ಮುಂದಾಗುತ್ತಾರೆ. ಕೆಲವು ಸಂದರ್ಭಗಳಲ್ಲಿ ಮಕ್ಕಳೇ ತಾವು ಸ್ವತಂತ್ರವಾಗಿ ದುಡಿಯಲು ಆರಂಭಿಸಿದ ಮೇಲೆ ತಾಯಂದಿರನ್ನು ಪ್ರೋತ್ಸಾಹಿಸಿ ತಂದೆಯಿಂದ ಬೇರಾಗುವಂತೆ ವಿಚ್ಛೇದನ ಕೊಡಿಸಿದ ಉದಾಹರಣೆಗಳಿವೆ. ಹಿಂದೆ ಮಹಿಳೆಯರು ಆರ್ಥಿಕ ಸ್ವಾತಂತ್ರ್ಯವಿಲ್ಲದ ಕಾರಣ ಪತಿಯ ಮೇಲೆ ಅವಲಂಬಿತರಾಗಿ ವಿಚ್ಛೇದನಕ್ಕೆ ಹೆದರುತ್ತಿದ್ದರು. ಈಗ ಮಹಿಳೆಯರು ಆರ್ಥಿಕವಾಗಿ ಸಬಲರು, ಕಾನೂನು ಕಾಯಿದೆಗಳ ಅರಿವಿದೆ. ಕೆಲವುಬಾರಿ, ಮಕ್ಕಳು ತಾಯಿಗೆ ಭಾವನಾತ್ಮಕ ಮತ್ತು ಆರ್ಥಿಕ ಬೆಂಬಲವನ್ನು ನೀಡುತ್ತಿದ್ದಾರೆ.

ಕಷ್ಟದ ಹಾದಿ

ಗ್ರೇ ಡೈವೋರ್ಸ್ ನ ನಂತರ ಬದುಕು ಸುಲಭದ್ದಲ್ಲ. ಮುಂದಿನ ಬದುಕನ್ನು ಎದುರಿಸುವ ಬಗ್ಗೆ ಆತಂಕ, ಏಕಾಂಗಿ ಎನ್ನುವ ಅಭದ್ರತೆ, ಸರಿಯೇ ಎನ್ನುವ ಅನಿಶ್ಚಿತತೆ ಇದ್ದರೂ ಬಿಡುಗಡೆ ಸಿಕ್ಕ ನೆಮ್ಮದಿಯು ಇರಬಹುದು. ಈ ಎಲ್ಲಾ ಸಮ್ಮಿಶ್ರ ಭಾವನೆಗಳನ್ನು ನಿಭಾಯಿಸುವುದು ಈ ಹಂತದಲ್ಲಿ ಮುಖ್ಯವಾಗುತ್ತದೆ. ಮಹಿಳೆಯರಿಗಿಂತ ಪುರುಷರಿಗೆ ಇದನ್ನು ನಿರ್ವಹಿಸುವುದು ಕಷ್ಟ ಎಂದು ಸಂಶೋಧನೆಗಳು ತಿಳಿಸಿವೆ.

ದಂಪತಿಯಲ್ಲಿ ಭಿನ್ನಾಭಿಪ್ರಾಯಗಳು ಸಹಜ, ಹೊಂದಾಣಿಕೆ ಅಗತ್ಯ. ಪ್ರೀತಿ, ಗೌರವ, ಸಹನೆ ಎಂಬ ಮೂರು ಮಂತ್ರಗಳಿಂದ ಬಹಳಷ್ಟನ್ನು ಉಳಿಸಲು ಸಾಧ್ಯ. ವಿಚ್ಛೇದನ ಎನ್ನುವುದು ಖಂಡಿತವಾಗಿಯೂ ಸೋಲಲ್ಲ; ಅದು ಸಕಾರಾತ್ಮಕ ಬದಲಾವಣೆಗಾಗಿ ತೆಗೆದುಕೊಳ್ಳುವ ತೀರ್ಮಾನ ಎನ್ನುವುದು ಸರಿ. ಆದರೆ ಮದುವೆಯಂತೆ ವಿಚ್ಛೇದನವೂ ಮಾನಸಿಕ–ಕೌಟುಂಬಿಕ–ಸಾಮಾಜಿಕ ಪರಿಣಾಮಗಳನ್ನು ಹೊಂದಿರುತ್ತದೆ. ವೈಯಕ್ತಿಕ ಹಿತ ಮುಖ್ಯವಾದರೂ, ಅದರೊಂದಿಗೆ ಈ ಎಲ್ಲ ಪರಿಣಾಮಗಳನ್ನು ಗಮನದಲ್ಲಿಟ್ಟು ಸರಿಯಾಗಿ ಯೋಚಿಸಿ, ಮಧ್ಯ ವಯಸ್ಕರು ನಿರ್ಧರಿಸಬೇಕಾದುದು ಅಗತ್ಯ.

ಕೈಯಲ್ಲಿ ಮೊಬೈಲ್ ಇದ್ದಾಗ ಸುಳ್ಳು ಹೇಳುವುದು ಜಾಸ್ತಿಯೇ?

Ask the Editor

» ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ
ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ
asktheeditorvv@gmail.com

ಬಿ.ಕೆ.ರಾವ್, ಸಾಗರ

- **ಭಟ್ರೇ, ಮೊಬೈಲ್ ಫೋನ್ ಹಿಡಿದವರು ಬಹಳ ಸುಳ್ಳು ಹೇಳುತ್ತಾರೆ. ಕಾರಣ ಏನು?**

– ನಿಜ, ಮೊಬೈಲ್ ಫೋನ್ ಹಿಡಿದವರು ಎಲ್ಲಿದ್ದಾರೆಂಬುದು ಗೊತ್ತಾಗುವುದಿಲ್ಲ. ಹೀಗಾಗಿ ಫೋನ್ ಮಾಡಿದವರು ಮತ್ತು ಕರೆ ಸ್ವೀಕರಿಸಿದವರುತಾವಿರುವ ಜಾಗದ ಬಗ್ಗೆ ಸುಳ್ಳು ಹೇಳಲು ಆಯ್ಕೆಗಳಿರುತ್ತವೆ. ನೀವು ಬೆಂಗಳೂರಿನಲ್ಲಿದ್ದರೆ, ದುಬೈಯಲ್ಲಿದ್ದೇನೆ ಎಂದು ಹೇಳಬಹುದು. ಕರೆಸ್ವೀಕರಿಸಿದವನು ತಾನು ಸಿಂಗಾಪುರದಲ್ಲಿದ್ದೇನೆ ಎಂದು ಹೇಳಬಹುದು. ಅಂದರೆ ಇಬ್ಬರಿಗೂ ಸುಳ್ಳು ಹೇಳುವ ಅವಕಾಶವಿದೆ. ಆದರೆ ಆ ಪೈಕಿಯಾವುದಾದರೂ ಒಬ್ಬ ಅಥವಾ ಪರಸ್ಪರರು ನೀನಿರುವ ಲೊಕೇಷನ್ ಕಳಿಸು ಎಂದರೆ ಬಂಡವಾಳ ಬಯಲು. ಒಮ್ಮೆ ನಾನು ಬೆಂಗಳೂರಿನ ಯುಬಿ ಸಿಟಿಯಿಂದ ನನ್ನ ಸ್ನೇಹಿತನೊಬ್ಬನಿಗೆ ಫೋನ್ ಮಾಡಿದೆ. ಆತ ತಾನು ದಿಲ್ಲಿಯಲ್ಲಿರುವುದಾಗಿ ಹೇಳಿದ. ಅದಾಗಿ ಹತ್ತು ನಿಮಿಷಗಳ ಬಳಿಕ ಯುಬಿ ಸಿಟಿಯಲ್ಲೇ ನನಗೆ ಎದುರಾದ. ಆಗ ಅವನ ಮುಖ ಬಿಳುಚಿಕೊಂಡಿದ್ದನ್ನು ನನಗೆ ನೋಡಲಾಗಲಿಲ್ಲ. ಈಗಲೂ ಆತನಿಗೆ ನನಗೆಮುಖಕ್ಕೆ ಮುಖ ಕೊಟ್ಟು ನೋಡಲು ಆಗುತ್ತಿಲ್ಲ. ಇಂಥವರು ಬಹಳ ಬೇಗ expose ಆಗುತ್ತಾರೆ. ಜೀವ ಹೋಗುವ ಸಂದರ್ಭದಲ್ಲಿ ಒಮ್ಮೆ ಸುಳ್ಳು ಹೇಳಬಹುದು. ಆದರೆ ಅದನ್ನೇ ಕಾಯಕ ಅಥವಾ ಅಭ್ಯಾಸ ಮಾಡಿಕೊಳ್ಳ ಬಾರದು. ಆಗ ನಿಜ ಹೇಳಿದರೂ ನಂಬುವುದಿಲ್ಲ.

ದೇವನಾಥ ಕೆ.ಆರ್., ಬೆಂಗಳೂರು

- **ಸಂಪಾದಕರೇ, ನನ್ನ ಕಾರಿನ ಮೇಲೆ ಏನಾದರೂ ಸೊಗಸಾದ ಸ್ಲೋಗನ್ ಬರೆಯಿಸಿಬೇಕೆಂದು ನಿರ್ಧರಿಸಿದ್ದೇನೆ. ಏನು ಬರೆಯಿಸಲಿ?**

– ದೇವನಾಥ ಅವರೇ, ನಾನು ಹಲವಾರು ದೇಶಗಳನ್ನು ಸುತ್ತುದ್ದೇನೆ. ಆದರೆ ಯಾವ ದೇಶದಲ್ಲೂ ವಾಹನಗಳ ಮೇಲೆ ಮನೆ–ಮಂದಿಯ ಹೆಸರು ಬರೆಯಿಸಿರುವುದನ್ನು ನೋಡಿಲ್ಲ. ಹಾಗೆಯೇ, 'ಮಾತಾಡಿಸಿ ಮರೆಯಬೇಡ, ಮನಸು ಕೊಟ್ಟು ನೋಯಿಸಬೇಡ ಅಥವಾ ಯಾಕೆಬುಲ್ ಬುಲ್ ಮಾತಾಡಕಿಲ್ವಾ ? ಅಥವಾ ಲವ್ ಪಾಸಾದ್ರೆ ಲವರನ್ನು ಸೇಫ್ ಆಗಿಟ್ಕೋ, ಲವ್ ಫೇಲ್ ಆದ್ರೆ ಲಿವರ್ ನ ಸೇಫ್ ಆಗಿಟ್ಕೋ ಅಥವಾ ಮುತ್ತು ಕೊಡುವವಳು ಬಂದಾಗ, ತುತ್ತು ಕೊಟ್ಟವಳನ್ನು ಮರೆಯಬೇಡ' ಮಾದರಿಯ ಬರಹಗಳನ್ನು ನೋಡಿಲ್ಲ. ವಾಹನಗಳ ಮೇಲೆ ಇಂಥ ಸ್ಲೋಗನ್‌ಗಳು ಇರುವುದು ಭಾರತದಲಿ ಮಾತ್ರ. ಕೆಲವರ ವಾಹನಗಳ ಹಿಂಬಾಗವನ್ನು ನೋಡಿದರೆ, ಅವರ ಕುಲದೇವರು ಯಾರು, ಹೆಂಡತಿ–ಮಕ್ಕಳ ಹೆಸರುಗಳೇನು, ತಂದೆ–ತಾಯಿ ಯಾರು.. ಸೇರಿದಂತೆ ವೈಯಕ್ತಿಕ ವಿವರಗಳನ್ನೆಲ್ಲಾ ಹೇಳಬಹುದು. ಇನ್ನು ಕೆಲವರ ವಾಹನಗಳನ್ನು ನೋಡಿದರೆ, ಅದರ ಮಾಲೀಕ ಲವ್ ಫೇಲ್ಯೂರ್ ಕೇಸಾ ಎಂಬುದನ್ನೂ ಹೇಳಬಹುದು. ಅದೇ ರೀತಿ ತಂದೆ–ತಾಯಿ ಆಶೀರ್ವಾದ, ಅಣ್ಣ–ಅತ್ತಿಗೆ ಆಶೀರ್ವಾದ, ಹಿತಶತ್ರುಗಳ ಆಶೀರ್ವಾದ ಮಾದರಿಯ ಬರಹಗಳನ್ನು ನೋಡಿದರೆ, ವಾಹನ ಖರೀದಿಗೆ ಯಾರು ಹಣಕಾಸು ನೀಡಿದ್ದಾರೆ ಎಂಬುದನ್ನೂ ಹೇಳಬಹುದು.

ಇನ್ನು ಪತ್ರಕರ್ತರ ವಾಹನಗಳ ಮೇಲೆ ಕೆಂಪು ಅಕ್ಷರಗಳಲ್ಲಿ 'ಪ್ರೆಸ್'ಹಣೆಪಟ್ಟಿ! ಈ ವಿಷಯದಲ್ಲಿ ಪೊಲೀಸರು ಮತ್ತು ಮಿಲಿಟರಿಯವರೂ ಕಮ್ಮಿಯಿಲ್ಲ. ಏನೂ ಬರೆಯದೇ ಇರುವ ವಾಹನಗಳನ್ನು ನೋಡುವುದು ದುರ್ಲಭ. ನಿಮಗೆ ಎಷ್ಟು ಮಕ್ಕಳು, ಅವರ ಹೆಸರುಗಳೇನು, ನಿಮ್ಮ ಅಭಿರುಚಿಯೇನು, ನಿಮ್ಮ ಕುಲದೇವತೆ ಯಾರು ಮುಂತಾದ ವಿವರಗಳನ್ನು ನಿಮ್ಮ ವಾಹನದ ಮೇಲೆ ಜಾಹೀರು ಮಾಡುತ್ತೀರಿ? ಆ ವಿವರಗಳನ್ನು ದಾರಿ ಮೇಲೆ ಹೋಗುವವರೆಲ್ಲರೂ ತಿಳಿಯಬೇಕೆಂದು ಯಾಕೆ ಬಯಸುತ್ತೀರಿ? ಅಷ್ಟಕ್ಕೂ ನಿಮ್ಮ ಕಾರಿನ ಗಾಜುಗಳೆಂದರೆ ಗೋಡೆಗಳಲ್ಲ, ಪೋಸ್ಟರ್ ಅಂಟಿಸಿಕೊಳ್ಳಲು ಮತ್ತು ಗೋಡೆ ಬರಹಗಳಿಂದ ಅಲಂಕರಿಸಿಕೊಳ್ಳಲು.

ಕರುಣೇಶ್ ಸಂತೇಬೀಡು, ಚಿಕ್ಕಮಗಳೂರು

- **ಭಟ್ರೇ, ಕಿಚ್ಚ ಸುದೀಪ್, ಲೂಸ್ ಮಾದ, ಹುಚ್ಚ ವೆಂಕಟ್ ಥರ ಹೆಸರುಗಳ ರೀತಿ, ಯಾರಾದರೂ ಥಟ್ಟನೆ ಗುರುತಿಸುವಂತಹ ಯಾವುದಾದರೂ ವಿಚಿತ್ರ ನಿಕ್ ನೇಮ್ ಇಟ್ಟುಕೊಳ್ಳುವ ಆಸೆಯಾಗಿದೆ. ನಾನು ಯಾವ ಹೆಸರನ್ನು ಇಟ್ಟುಕೊಳ್ಳಲಿ? ಒಂದು ಹೆಸರನ್ನು ಸೂಚಿಸಿ. ಮತ್ತು ಹಾಗೆ ಹೆಸರನ್ನು ಇಟ್ಟುಕೊಂಡರೆ ಜನ ರೇಗಿಸುವ ಸಾಧ್ಯತೆ ಇದೆಯೆ?**

– ಕರುಣೇಶ್, ನಿಮ್ಮ ಹೆಸರು ಬಹಳ ಅರ್ಥಗರ್ಭಿತವಾಗಿ, ಸುಂದರವಾಗಿದೆ. ಈಗಿರುವ ಹೆಸರಿನ ಬಗ್ಗೆ ನಿಮಗೆ ತಕರಾರು, ಅತೃಪ್ತಿ ಯಾಕೋ ನಾ ಅರಿಯೆ. ನೀವು ಯಾವುದಾದರೂ ಸಿನಿಮಾದಲ್ಲಿ ನಟಿಸಿದ್ದರೆ, ಆ ಶೀರ್ಷಿಕೆಯನ್ನೇ ಬಾಲಂಗೋಚಿಯಂತೆ ಇಟ್ಟುಕೊಳ್ಳಬಹುದಿತ್ತು. ನಾಟಕದಲ್ಲಿ ನಟಿಸಿದ್ದರೆ, ಮುಖ್ಯಮಂತ್ರಿ ಚಂದ್ರು ಅವರಂತೆ ನಾಟಕದ ಹೆಸರನ್ನೇ ತಗುಲಿಸಿಕೊಳ್ಳಬಹುದಿತ್ತು. ಇನ್ನು ನಿಮ್ಮ ಹವ್ಯಾಸ, ಅಭಿರುಚಿ ತಿಳಿಸಿದ್ದರೆ ಕುರಿ ಪ್ರತಾಪ, ಡ್ರೋಣ್ ಪ್ರತಾಪ ಥರಾ ಯಾವುದಾದರೂ ಸಫಿಕ್ಸ್ ಸೂಚಿಸಬಹುದಿತ್ತು.

ಒಂದು ಸಲಹೆ ಕೊಡಬಹುದು; ನೀವು ತಿಕ್ಕಲು ಸ್ವಭಾವದವರು ಎಂಬುದು ನಿಮಗೇ ಖಾತ್ರಿಯಾದರೆ, ಅದನ್ನೇ ಹೈ ಲೈಟ್ ಮಾಡಬೇಕೆಂದು ಬಯಸಿದರೆ, 'ಕ್ರ್ಯಾಕ್ ಕರುಣೇಶ್' ಎಂಬ ನಿಕ್ ನೇಮ್ ನೀವು ಇಟ್ಟುಕೊಳ್ಳಬಹುದು. ಯಾರಿಗೆ ಗೊತ್ತು ಆ ಹೆಸರಿನಿಂದಲೇ ನೀವು ಮುನ್ನೆಲೆಗೆ ಬಂದರೂ ಬರಬಹುದು!

ಒಂದಂತೂ ಸತ್ಯ.ಇಂತಹ ಸಾಹಸವನ್ನು ನೀವು ಮಾಡಿದರೆ, ನಿಮ್ಮ ಹೆಸರಿನಿಂದಾಗಿಯೇ ಬಹು ಬೇಗ ಪ್ರಸಿದ್ಧರಂತೂ ಆಗುತ್ತೀರಿ, ಡಿಫರೆಂಟ್ ಡ್ಯಾನಿ, ಸಾಫ್ಟ್ ಸೋಮಣ್ಣ, ಓನ್ಲಿ ಅಮರೇಶ್ ಥರ. ನೀವು ಭಿನ್ನವಾಗಿ ಕಾಣಬೇಕೆಂದರೆ, ಭಿನ್ನವಾಗಿ ಯೋಚಿಸಬೇಕಾಗುತ್ತದೆ. ಜನ ರೇಗಿಸ್ತಾರಾ, ಇಲ್ಲವಾ ಎಂಬ ಬಗ್ಗೆ ತಲೆ ಕೆಡಿಸಿಕೊಳ್ಳಬಾರದು. ಮೈತುಂಬಾ ಬಂಗಾರ ಹಾಕಿಕೊಳ್ಳಬೇಕೆಂಬ ಆಸೆ ಇದ್ದರೆ ಬಪ್ಪಿ ಲಹರಿ ಥರ ಹಾಕಿಕೊಳ್ಳಬೇಕು. ಹಿಂದಾಗಡೆಯಿಂದ ಜನ ವ್ಯಂಗ್ಯ ಮಾಡಬಹುದು. ಅದರ ಬಗ್ಗೆ ತಲೆಕೆಡಿಸಿಕೊಳ್ಳಬಾರದು.

ವೇಣುಗೋಪಾಲ ಕೆ., (ಇಮೇಲ್ ಮೂಲಕ)

- **ಭಟ್ರೇ, ನನ್ನ ಸ್ನೇಹಿತರೆಲ್ಲ ಒಳ್ಳೆಯ ಇಂಗ್ಲಿಷ್ ಮಾತಾಡ್ತಾರೆ. ನಾನು ಎಂ.ಎ. ಓದಿದರೂ ನನ್ನ ಇಂಗ್ಲಿಷ್ ಅಷ್ಟಕ್ಕಷ್ಟೇ. ಇದರಿಂದ ನನಗೆ ನನ್ನ ಸ್ನೇಹಿತರು ಸೇರಿದಂತೆ ಆಫೀಸಿನಲ್ಲಿ ಇಂಗ್ಲೀಷಿನಲ್ಲಿ ಮಾತಾಡಲು ಆತ್ಮವಿಶ್ವಾಸವೇ ಇಲ್ಲದಂತಾಗಿದೆ. ಶಾಲಾ ಮಕ್ಕಳು ಇದಕ್ಕಿಂತ ಒಳ್ಳೆಯ ಇಂಗ್ಲಿಷ್ ಮಾತಾಡ್ತಾರೆ ಅಂತ ಮೊನ್ನೆ ಒಬ್ಬ ಸ್ನೇಹಿತ ಅಂದುಬಿಟ್ಟ. ಬಹಳ ಅವಮಾನ ಆಯ್ತು. ನಾನು ನನ್ನ ಇಂಗ್ಲಿಷ್ ಸುಧಾರಿಸಿಕೊಳ್ಳುವುದು ಹೇಗೆ ?**

– ವೇಣುಗೋಪಾಲ ಅವರೇ, ಎಲ್ಲಾ ಭಾಷೆಗಳಂತೆ ಇಂಗ್ಲಿಷ್ ಕೂಡ ಒಂದು ಭಾಷೆ ಎಂಬುದು ಗೊತ್ತಿರಲಿ. ಯಾವ ಭಾಷೆಯನ್ನಾದರೂ ಕಲಿಯಬಹುದು. ಆರಂಭದಿಂದ ನಿಮ್ಮ ಮನೆ ನಾಯಿ ಜತೆ ಇಂಗ್ಲಿಷಿನಲ್ಲಿ ಮಾತಾಡಿದರೆ ಅದೂ ಸಹ ಆ ಭಾಷೆಯನ್ನೂ ಕಲಿಯುತ್ತದೆ. ಅದರಲ್ಲಿ ಹೆಚ್ಚುಗಾರಿಕೆ ಯೇನೂ ಇಲ್ಲ. ನೀವು ಸಹ ಸುಲಭವಾಗಿ ಇಂಗ್ಲಿಷ್ ಕಲಿಯಬಹುದು. ಮನಸ್ಸು ಮಾಡಿದ್ದೇ ಆದರೆ, ಆರು ತಿಂಗಳಲ್ಲಿ ಕಲಿಯ ಬಹುದು. ಸುಮಾರು ನಾಲ್ಕು ನೂರು ಪದಗಳ ಅರ್ಥ ಮತ್ತು ಬಳಕೆಯನ್ನು ತಿಳಿದುಕೊಂಡಿದ್ದೇ ಆದಲ್ಲಿ, ಸುಲಭವಾಗಿ, ನಿರರ್ಗಳವಾಗಿ ಮಾತಾಡಬಹುದು. ಸಾಮಾನ್ಯ ವ್ಯಾಕರಣ ವನ್ನು ಅರ್ಥ ಮಾಡಿಕೊಂಡರೆ, ಬರೆಯಲೂ ಬಹುದು.

ನಾನು ಇಂಗ್ಲಿಷಿನಲ್ಲಿ ಮಾತಾಡಿದರೆ ತಪ್ಪಾಗಬಹುದು, ಅಷ್ಟಕ್ಕೇ ಜನ ನಗಬಹುದು ಎಂಬ ಯೋಚನೆಯನ್ನು ಮೊದಲು ತಲೆಯಿಂದ ತೆಗೆದು ಬಿಡಿ. ತಪ್ಪೋ, ಒಪ್ಪೋ, ಇಂಗ್ಲಿಷಿನಲ್ಲಿ ಮಾತಾಡುತ್ತೇನೆ ಎಂದು ನಿರ್ಧರಿಸಿ. ಮೊದಲು ಈ ಮೈಚಳಿ ಬಿಟ್ಟು ಬಿಡಿ. ನೀವು ಎಲ್ಲಿ ತಪ್ಪು ಮಾಡುತ್ತಿದ್ದೀರಿ, ಭಾಷೆ ಕಲಿಕೆಗೆ ಯಾವ ಹಂತದಲ್ಲಿ ಕಷ್ಟವಾಗುತ್ತಿದೆ ಎಂಬುದನ್ನು ತಿಳಿದುಕೊಳ್ಳಿ. ಇಂಗ್ಲಿಷನ್ನು ಚೆನ್ನಾಗಿ ಬಲ್ಲವರಿಂದ ತಿಳಿದುಕೊಳ್ಳಿ. ಇಲ್ಲವೇ ಇಂಗ್ಲಿಷ್ ಕಲಿಸುವ ಮೇಷ್ಟ್ರು ಅಥವಾ ವೆಬ್‌ಸೈಟ್‌ಗಳಿಂದ ತಿಳಿದುಕೊಳ್ಳಬಹುದು. ಕೈಗೆ ಸಿಕ್ಕ ಇಂಗ್ಲಿಷ್ ಪತ್ರಿಕೆ, ಕಥೆ ಪುಸ್ತಕ, ಹಳೆ ಇಂಗ್ಲಿಷ್ ಚಂದಮಾಮ, ಅಮರ ಚಿತ್ರ ಕಥೆಗಳನ್ನು ಓದಿ. ಎಂಥವರಿಗೂ ಅರ್ಥವಾಗುವ ಸುಲಭ ಭಾಷೆಯಲ್ಲಿ ಅವನು ಬರೆದಿರುತ್ತಾರೆ. ಸಾಧ್ಯವಾದರೆ ಇಂಗ್ಲಿಷ್ ಪಾಡ್‌ಕಾಸ್ಟ್, ನ್ಯೂಸ್ ಬುಲೆಟಿನ್‌ಗಳನ್ನು ಕೇಳಿ. ಉತ್ತಮ ಭಾಷಣಕಾರರ ಯೂ ಟ್ಯೂಬ್ ಕೇಳಿ.

ನಿಮಗೆ ಗೊತ್ತಿರಲಿ, ಯಡಿಯೂರಪ್ಪನವರಿಗೆ ಇಂಗ್ಲಿಷ್ ಗೊತ್ತಿರಲಿಲ್ಲ. ಇಂಗ್ಲಿಷ್ ನ್ಯೂಸ್ ಚಾನೆಲ್ಲಿನವರು ಮೈಕ್ ಹಿಡಿದರೆ, ತೊದಲುತ್ತಿದ್ದರು. 'ಬರೆದುಕೊಂಡು ಓದುತ್ತೇನೆ' ಅಂತ ಹೇಳಿ ತಮ್ಮ ಸಹಾಯಕರಿಗೆ ತಾವು ಹೇಳುವ ಮಾತುಗಳನ್ನು ಬರೆದುಕೊಡುವಂತೆ ಹೇಳುತ್ತಿದ್ದರು. ಅದಾದ ಬಳಿಕ ಆತ್ಮ ವಿಶ್ವಾಸದಿಂದ ಮಾತಾಡಲು ಆರಂಭಿಸಿದರು. ಈಗ ಅವರ ಮುಂದೆ ಮೈಕ್ ಹಿಡಿದರೆ, ನಿರರ್ಗಳವಾಗಿ ಮಾತಾಡುತ್ತಾರೆ.

ಈ ಮಾತು ಮಾಜಿ ಪ್ರಧಾನಿ ದೇವೇಗೌಡರಿಗೂ ಅನ್ವಯ. ಕುಮಾರಸ್ವಾಮಿ, ರಾಮಲಿಂಗಾರೆಡ್ಡಿ, ಡಿ.ಕೆ.ಸುರೇಶ, ರೇವಣ್ಣ, ರೇಣುಕಾಚಾರ್ಯ, ವರ್ತೂರು ಪ್ರಕಾಶ್, ಶೋಭಾ ಕರಂದ್ಲಾಜೆ, ಶಿವಲಿಂಗೇಗೌಡರೇ ಇಂಗ್ಲಿಷ್ ಮಾತಾಡ್ತಾರಂತೆ, ಹೀಗಿರುವಾಗ ನಿಮಗೇಕೆ ಆಗೊಲ್ಲ ? ಆಸ್ಥೆಯಿಂದ ಏನನ್ನು ಬೇಕಾದರೂ ಕಲಿಯಬಹುದು. ಭೋಜಪುರಿ, ಅರೇಬಿಕ್, ಮ್ಯಾಂಡರಿನ್, ನವಜೋ, ಐಸ್‌ಲ್ಯಾಂಡಿಕ್ ಭಾಷೆಗಳನ್ನೂ ಕಲಿಯಬಹುದು. ಭಾಷೆಯೂ ಈಜು ಕಲಿತಂತೆ, ನೀರಿಗೆ ಬೀಳುವ ತನಕ ಚಳಿ. ಬಿದ್ದ ನಂತರ ಕೈಕಾಲು ಬಡಿದರೆ, ಮುಂದೆ ಸಲೀಸು.

ಪ್ರಕಾಶ ನಾಯಕ, ಮೈಸೂರು

- **ಭಟ್ರೇ, 'ನಿನಗೆ ಪುಸ್ತಕ ಓದಲು ಬರೊಲ್ಲ, ಹಾಳೆಗಳೆಲ್ಲ ಕೊಳೆ ಮಾಡಿದ್ದೀಯಾ, ಪುಸ್ತಕ ಓದೋದನ್ನು ಮೊದಲು ಕಲಿತುಕೋ' ಎಂದು ನನ್ನ ಸ್ನೇಹಿತನ ಅಕ್ಕ ಇತ್ತೀಚೆಗೆ ಸ್ವಲ್ಪ ಅಸಹನೆಯಿಂದ ಹೇಳಿದಳು. ಸ್ವಲ್ಪ ತಿಳಿಸಿ.**

– ಪ್ರಕಾಶ ಅವರೇ, ಕೆಲವರು ತಮ್ಮ ಯಾವ ವಸ್ತುಗಳನ್ನಾದರೂ ಎರವಲು ಕೊಡಬಹುದು, ಆದರೆ ಪುಸ್ತಕವನ್ನು ಕೊಡಲಾರರು. ಕಾರಣ ಬೇರೆಯವರಿಗೆ ಓದಲು ಕೊಟ್ಟ ಪುಸ್ತಕ (ಎಂದೂ ವಾಪಸ್ ಬರುವುದಿಲ್ಲ. ಒಮ್ಮೆ ಬಂದರೂ,) ಅದೇ ಸ್ಥಿತಿಯಲ್ಲಿ ವಾಪಸ್ ಬರುವುದಿಲ್ಲ. ಅನೇಕರಿಗೆ ಪುಸ್ತಕ ಓದುವುದು ಒಂದು ಕಲೆ, ಶಿಸ್ತು ಎಂಬುದು ಗೊತ್ತಿರುವುದಿಲ್ಲ. ಪುಸ್ತಕವನ್ನು ತೆರೆದು, ಅದನ್ನು ಅಗಲಿಸಿ ಓದುತ್ತಾರೆ. ಅಗಲಿಸುವಾಗ ಕೈಯಿಂದ ಹಿಡಿದು ಉಜ್ಜುತ್ತಾರೆ. ಆಗ ಪುಸ್ತಕದ ಬೆನ್ನುಹುರಿ (Spine)ಗೆ ಧಕ್ಕೆಯಾಗುತ್ತದೆ. ಇದರಿಂದ ಕ್ರಮೇಣ ಹಾಳೆಗಳು ಕಿತ್ತು ಬರುವ ಸಾಧ್ಯತೆ ಇರುತ್ತದೆ.

ಇನ್ನು ಕೆಲವರು ಪುಟವನ್ನು ತೆರೆಯುವಾಗ ಎಂಜಲು ಹಚ್ಚುತ್ತಾರೆ. ಬೇರೆಯವರಿಗೆ ಇದರಿಂದ ಅಸಹ್ಯವೆನಿಸಬಹುದು ಎಂದೂ ಯೋಚಿಸುವುದಿಲ್ಲ. ಇನ್ನು ಕೆಲವರು, ಪುಸ್ತಕ ಓದಿ ಪಕ್ಕಕ್ಕಿಡುವಾಗ ಹಾಳೆಯ ಒಂದು ಮೂಲೆ ಅಥವಾ ಅಂಚನ್ನು ಮಡಚುತ್ತಾರೆ. ಇಲ್ಲವೇ ಅರ್ಧ ಪುಟವನ್ನು ಮಡಚುತ್ತಾರೆ. ಇದರಿಂದ ಪುಟ ಶಾಶ್ವತವಾಗಿ ಘಾಸಿಯಾಗುತ್ತದೆ. ಇನ್ನು ಕೆಲವರು ಪುಸ್ತಕ ಓದುವಾಗ, ತಮಗೆ ಇಷ್ಟವಾದ ಸಾಲುಗಳನ್ನು ಗೀಟು ಹಾಕುತ್ತಾರೆ. ತಮಗೆ ಇಷ್ಟವಾಗಿದ್ದು ಬೇರೆಯವರಿಗೆ ಇಷ್ಟವಾಗಬೇಕಿಲ್ಲ ಎಂದು ಸಹ ಯೋಚಿಸುವುದಿಲ್ಲ. ಅಲ್ಲದೇ ಇದರಿಂದ ಬೇರೆಯವರಿಗೆ ಕಿರಿಕಿರಿಯಾಗಬಹುದು ಎಂದೂ ಭಾವಿಸುವುದಿಲ್ಲ.

ಪುಸ್ತಕ ಓದುವಾಗ ಒಂದು ಪರಿಸರವನ್ನು ರೂಢಿಸಿಕೊಳ್ಳಬೇಕು. ಪುಸ್ತಕ ಖರೀದಿಸಿದ ತಕ್ಷಣ ಅದಕ್ಕೆ ಬೈಂಡ್ ಹಾಕುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು. ಆಗ ಪುಸ್ತಕದ ರಕ್ಷಾಪುಟ ಶಾಶ್ವತವಾಗಿ ಶುಭ್ರವಾಗಿರುತ್ತದೆ, ಎಂದೂ ಕೊಳೆಯಾಗುವುದಿಲ್ಲ. ಪುಸ್ತಕ ಓದುವಾಗ, ಬುಕ್ ಮಾರ್ಕ್ ಇಟ್ಟುಕೊಳ್ಳಬೇಕು. ಆಗ ಗುರುತಿಗಾಗಿ ಪುಟಗಳನ್ನು ಮಡಚುವ ಪ್ರಮೇಯ ಬರುವುದಿಲ್ಲ. ಹಾಗೆ ಟಿಪ್ಪಣಿ ಮಾಡಿಕೊಳ್ಳಲು ಅನುಕೂಲವಾಗಲು ಪಕ್ಕದಲ್ಲಿ ಒಂದು ಸಣ್ಣ ನೋಟ್ ಬುಕ್ ಇಟ್ಟುಕೊಳ್ಳಬೇಕು. ತಕ್ಷಣ ನೀವು ಬೇರೆ ಕೆಲಸಕ್ಕೆ ಮುಂದಾದಾಗಲೂ ಆಗ ಪುಸ್ತಕವನ್ನು ತೆರೆದು, ಅಗಲಿಸಿ ಇಡುವುದಿಲ್ಲ. ಆಗ ಪುಸ್ತಕವನ್ನು ಎಲ್ಲಿಟ್ಟರೂ ಕೊಳೆಯೂ ಆಗುವುದಿಲ್ಲ. ಇವೆಲ್ಲ ಸಣ್ಣ ಸಣ್ಣ ಸಂಗತಿಗಳು. ಇದಕ್ಕೆ ಹೆಚ್ಚು ಶ್ರಮ ಪಡಬೇಕಿಲ್ಲ. ಪುಸ್ತಕಗಳನ್ನು ವಕೀಲರ ಕೋಣೆಯಲ್ಲಿ ಇಟ್ಟಿರುತ್ತಾರಲ್ಲ, ಹಾಗೆ ಇಟ್ಟುಕೊಳ್ಳಬೇಕು. (ಕೆಲವು ವಕೀಲರು ಜೀವಿತ ಅವಧಿಯಲ್ಲಿ ಅವನ್ನು ತೆರೆದು ನೋಡುವುದಿಲ್ಲ. ಆ ರೀತಿ ಅಲ್ಲ.) ಒಂದೆರಡು ಪುಸ್ತಕಗಳನ್ನು ಹೀಗೆ ಓದಿ, ಕ್ರಮೇಣ ಅದೇ ಅಭ್ಯಾಸ ಆಗುತ್ತದೆ.